ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಭ್ಯಾಸ ಪಂದ್ಯದಲ್ಲಿ ಕೊಹ್ಲಿ ಮಿಂಚು

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯುತ್ತಿರುವ ಐಪಿಎಲ್ ಅಭ್ಯಾಸ ಪಂದ್ಯದ ವಿಡಿಯೋವನ್ನು ಆರ್‌ಸಿಬಿ ಸೋಮವಾರ ಹಂಚಿಕೊಂಡಿದೆ. ಕೃಣಾಲ್ ಪಾಂಡ್ಯ ನೇತೃತ್ವದ ತಂಡದಲ್ಲಿದ್ದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಕೇವಲ 12 ಎಸೆತಗಳನ್ನು ಎದುರಿಸಿ 29 ರನ್ ಗಳಿಸಿ ಅಭ್ಯಾಸ ಪಂದ್ಯದಲ್ಲಿ ಮಿಂಚಿದ್ದಾರೆ.

ಸೊಂಪಾದ ಪುಟಗಳು

ನುಂಗಲಾರದ ತುತ್ತಾಗುವುದೇ ದೋಸ್ತಿ ಪಕ್ಷ!

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
6

ಬದುಕನ್ನು ಬದಲಿಸುವ ಶಕ್ತಿಯಿರುವುದು ಕಲಿಕೆಗೆ ಮಾತ್ರ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
7

ದಾರಿದೀಪೋಕ್ತಿ



ಬೇರೆಯವರು ಮಾತಾಡುವಾಗ ಗಮನವಿಟ್ಟು ಕೇಳಬೇಕು, ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಪ್ರಶ್ನೆ ಕೇಳುವುದಕ್ಕಾಗಿ ಕೇಳಬಾರದು. ಉತ್ತರ ನೀಡುವುದಕ್ಕಾಗಿಯೂ ಕೇಳಬಾರದು. ಕೇಳುತ್ತಿದ್ದೇನೆ ಎಂದು ತೋರಿಸಿಕೊಳ್ಳಲೂ ಕೇಳಬಾರದು. ಕೇಳುವುದೆಂದರೆ ಕಿವಿಗಳ ಮೂಲಕ ಓದಿದಂತೆ.

ವಕ್ರತುಂಡೋಕ್ತಿ

ನಾವು ದೇವರಿಗೆ ಸಲ್ಲಿಸುವ ಎಲ್ಲ ಪ್ರಾರ್ಥನೆಯೂ ಅವನಿಗೆ ತಲುಪಲಿಲ್ಲ ಅಂದ್ರೆ, ಅವು ಅವನ ಸ್ಪ್ಯಾಮ್ ಫೋಲ್ಡರ್‌ಗೆ ಹೋಗಿ ಕುಳಿತಿರುತ್ತವೆ ಎಂದರ್ಥ.

ತಂದೆಯ ಕಣ್ಣೆದುರೇ ನೀರಲ್ಲಿ ಮುಳುಗಿ ಮಕ್ಕಳು ಸಾವು

ದಾವಣಗೆರೆ: ತುಂಗಭದ್ರಾ ನದಿಯಲ್ಲಿ ಈಜಲು ತೆರಳಿದ್ದ ಇಬ್ಬರು ಸಹೋದರರು ತಂದೆಯ ಕಣ್ಣೆದುರೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ದಾರುಣ ಘಟನೆ ಸೋಮ ವಾರ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಹಲವಾಗಲು ಗ್ರಾಮದಲ್ಲಿ ಘಟನೆ ನಡೆ ದಿದೆ.

ಮನು (19) ಹಾಗೂ ಪ್ರಜ್ವಲ್ (18) ಮೃತ ಸಹೋದ ರರು. ತಂದೆಯೊಂದಿಗೆ ತುಂಗಭದ್ರಾ ನದಿಗೆ ಮೂವರು ಸಹೋದರರು ಈಜಲು ತೆರಳಿ ದ್ದರು. ಇಬ್ಬರು ಸಹೋದರರು ಆಯತಪ್ಪಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ತಂದೆ ಮಂಜಪ್ಪ ಅವರ ಸಮಯ ಪ್ರಜ್ಞೆಯಿಂದ ಕೊನೆಯ ಮಗ ಚಿರಂಜೀವಿ ಸಾವಿನಿಂದ ಪಾರಾದರು.

ಮರ್ಯಾದಾ ಹತ್ಯೆ ತಡೆ ಮಸೂದೆ ಅಸ್ತು

ಬೆಂಗಳೂರು: ಕರ್ನಾಟಕ ವಿಧಾನ ಸಭೆಯು ಸೋಮವಾರ ಮರ್ಯಾದಾ ಹತ್ಯೆ ತಡೆ ಮಸೂದೆ, ಜ್ಞಾನ ಭಂಡಾರ ಮಸೂದೆಗಳನ್ನು ಅಂಗೀಕರಿಸಿದೆ. ಈ ಮಸೂದೆಗಳಲ್ಲಿ ಮದುವೆಯಲ್ಲಿ ಏಕತೆ, ಸ್ವಾತಂತ್ರ್ಯ, ಘನತೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ನಿಷೇಧ ಎಂಬ ಅಂಶಗಳು ಸೇರಿವೆ. ಮಸೂದೆ ಸಾಮಾಜಿಕ ಸುಧಾರಣೆ, ಪರಂಪರೆಯ ಸಂರಕ್ಷಣೆ ಗುರಿ ಹೊಂದಿವೆ ಎಂದು ಸರಕಾರ ಪ್ರತಿಪಾದಿಸಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಬಾಟಲ್, ಉಪ್ಪಿನಕಾಯಿ ಇಟ್ಕೊಂಡು ಹಾಡು ಬರೆದೆ - ಸಿನಿಮಾ ನಿರ್ದೇಶಕ
ಸುದ್ದಿ



ಹೊರ್ಮುಜ್‌ನಲ್ಲಿ ವಾಣಿಜ್ಯ ಹಡಗು ಸಂಚಾರಕ್ಕೆ 18 ಕೋಟಿ ರು. ಶುಲ್ಕ ಸುಳ್ಳು: ಇರಾನ್

ಮೋದಿ ಪಡೆ ಸಮರ ಸನ್ನದ್ಧ

ಬಿಕ್ಕಟ್ಟಿನ ಸ್ಥಿತಿ ಎದುರಿಸಲು ಪ್ರಲ್ಹಾದ ಜೋಶಿ ಸೇರಿ ಹಿರಿಯ ಸಚಿವರ ತಂಡ ರಚನೆ

ಪವರ್ ವಾರ್‌ಗೆ 5 ದಿನ ಬ್ರೇಕ್ ಎಂದ ಅಮೆರಿಕ | ಟ್ರಂಪ್ ಜೋಕರ್ ಎಂದ ಇರಾನ್

ದೆಹಲಿ: ಇರಾನ್ ಮೇಲೆ ಅಮೆರಿಕ, ಇಸ್ರೇಲ್‌ಗಳು ಮುಗಿಬಿದ್ದಿರುವುದರಿಂದ ಭಾರತ ಸೇರಿ ವಿಶ್ವದ ಇತರೆ ದೇಶಗಳು ಭಾರೀ ತೊಂದರೆಗೊಳಗಾಗಿವೆ. ಆರಂಭದಲ್ಲಿ ಬರೀ ತೈಲದ ಕೊರತೆ ಎದುರಾಗಬಹುದೆನ್ನುವ ಆತಂಕವಿತ್ತು. ಈಗ ಊಟತಿಂಡಿಗೇ ಸಮಸ್ಯೆ ಎದುರಾಗಿದೆ. ಎಲ್‌ಪಿಜಿ ಸಿಲಿಂಡರ್ ಸೇರಿ ಹಲವು ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಸರಕಾರ ಆಹಾರ ಸಚಿವ ಪ್ರಲ್ಹಾದ್ ಜೋಶಿಯೂ ಇರುವ ಸಚಿವರ ಸಮಿತಿಯೊಂದನ್ನು ರಚಿಸಿದೆ.

ಇದರ ನಡುವೆ ಇರಾನ್ ಮತ್ತು ಅಮೆರಿಕ ನಡುವೆ ನಡೆದ ಮಾತುಕತೆ ಯಶಸ್ವಿಯಾಗಿದ್ದು, ಇರಾನ್ ವಿದ್ಯುತ್ ಸ್ಥಾವರಗಳು, ಮೂಲಸೌಕರ್ಯಗಳ ಮೇಲಿನ ದಾಳಿಯನ್ನು 5 ದಿನ ಮುಂದೂಡಲಾಗಿದೆ ಎಂದು ಟ್ರಂಪ್ ಹೇಳಿದ್ದಾರೆ. ಇದನ್ನು ವ್ಯಂಗ್ಯವಾಡಿರುವ ಇರಾನ್ ಅಂತಹ ಮಾತುಕತೆಯೇ ನಡೆದಿಲ್ಲ, ಟ್ರಂಪ್ ಒಬ್ಬ ಜೋಕರ್ ಎಂದಿದೆ. ಹೊರ್ಮುಜ್‌ನಲ್ಲಿ ಮಿತ್ರ ರಾಷ್ಟ್ರಗಳ ವಾಣಿಜ್ಯ ಹಡಗುಗಳು ಸಂಚರಿಸಲು ಇರಾನ್ 18 ಕೋಟಿ ರು. ಶುಲ್ಕ ವಿಧಿಸಿದೆ ಎಂಬ ಸುದ್ದಿ ಹರಡಿತ್ತು. ಈ ಬಗ್ಗೆ ತಡವಾಗಿ ಪ್ರತಿಕ್ರಿಯಿಸಿದ ಇರಾನ್ ಅವೆಲ್ಲ ಶುದ್ಧ ಸುಳ್ಳು ಸುದ್ದಿ ಎಂದು ಸ್ಪಷ್ಟನೆ ನೀಡಿದೆ.

ಪ್ರಧಾನಿ ಸಭೆ: ಪ್ರಧಾನಿ ನರೇಂದ್ರ ಮೋದಿ ಅವರು ಹಿರಿಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ, ಮಹತ್ವದ ಚರ್ಚೆ ನಡೆಸಿದ್ದಾರೆ. ದೇಶದ ಸದ್ಯದ ಪರಿಸ್ಥಿತಿ ಅವಲೋಕಿಸಿದ ಪ್ರಧಾನಿ, ಭವಿಷ್ಯದಲ್ಲಿ ಭಾರತದ ಮೇಲಾಗುವ ಪರಿಣಾಮ ಹಾಗೂ ಸರಕಾರ ಜನಹಿತಕ್ಕಾಗಿ ಕೈಗೊಳ್ಳಬಹುದಾದ ಪರಿಹಾರ, ಪರ್ಯಾಯ ಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಇಂದು ಇಡೀ ಜಗತ್ತೇ ಒಂದಿಲ್ಲೊಂದು ರೂಪದಲ್ಲಿ ಸಂಕಷ್ಟದಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದ ಪ್ರಧಾನಿ, ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾಗರಿಕರ ರಕ್ಷಣೆಗೆ ಸರ್ವಪ್ರಯತ್ನ ನಡೆಸುವಂತೆ ಸಚಿವ ಸಂಪುಟ ಸಮಿತಿಗೆ ನಿರ್ದೇಶನ ನೀಡಿದರು.

ಜೋಶಿಗೆ ಪ್ರಧಾನಿ ಮೆಚ್ಚುಗೆ: ದೇಶದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಆಹಾರ ಧಾನ್ಯ, ಪದಾರ್ಥಗಳ ಸಕಾಲಿಕ ಲಭ್ಯತೆ ಬಗ್ಗೆ ಪ್ರಧಾನಿ ಮೋದಿ ಅವರು ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಮಹತ್ತರ ಚರ್ಚೆ ನಡೆಸಿದರು. ಭವಿಷ್ಯದಲ್ಲಿ ನಿರಂತರ ಆಹಾರ ಲಭ್ಯತೆ ಹಾಗೂ ಜನಸಾಮಾನ್ಯರ, ಗ್ರಾಹಕರ ಹಿತರಕ್ಷಣೆಗೆ ಬದ್ಧವಾಗಿ ತ್ವರಿತ ಕ್ರಮ ಕೈಗೊಂಡ ಸಚಿವ ಜೋಶಿ ಅವರ ಕಾರ್ಯ ವೈಖರಿಗೆ ಪ್ರಧಾನಿ ಸಂತಸ ವ್ಯಕ್ತಪಡಿಸಿದರು.

ವಿದ್ಯುತ್ ಕೊರತೆಯಾಗದು: ವಿದ್ಯುತ್ ಸ್ಥಾವರಗಳಲ್ಲಿ ಇರುವ ಕಲ್ಲಿದ್ದಲು ದಾಸ್ತಾನು ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಹ ಹೆಚ್ಚಳವಾಗಿದೆ. ಹಾಗಾಗಿ ದೇಶದಲ್ಲಿ ವಿದ್ಯುತ್ ಕೊರತೆಯಾಗುವುದಿಲ್ಲ ಎಂದು ಹೇಳಿದ ಪ್ರಧಾನಿ ಸೌರಕ್ರಾಂತಿ, ಪವನ ವಿದ್ಯುತ್, ಹಸಿರು ಇಂಧನದಲ್ಲಾದ ಗಮನಾರ್ಹ ಸಾಧನೆ ಭಾರತದ ವಿದ್ಯುತ್ ವಲಯವನ್ನು ಬಲಪಡಿಸಿದೆ ಎಂದಿದ್ದಾರೆ.

18 ಕೋಟಿ ರು. ಶುಲ್ಕ ಸುಳ್ಳು: ಇರಾನ್ ಸಂಸದ, ಸಂಸತ್ ಭದ್ರತಾ ಮಂಡಳಿ ಸದಸ್ಯ ಅಲಾಯಿದ್ದೀನ್ ಬೊರೊಜೆರ್ದಿ, ಯುದ್ಧದಿಂದಾಗಿ ಇರಾನ್‌ಗೆ ಬಹಳ ಖರ್ಚುಗಳಾಗುತ್ತಿವೆ. ಅದನ್ನು ನಿಭಾಯಿಸಲು ಹೊರ್ಮುಜ್‌ನಲ್ಲಿ ಸಂಚರಿಸುವ ಹಡಗುಗಳಿಂದ ನಾವು ಶುಲ್ಕ ಸಂಗ್ರಹಿಸಬೇಕಾಗುತ್ತದೆ ಎಂದಿದ್ದರು. ವಾಣಿಜ್ಯ ಹಡಗು ಸಂಚಾರಕ್ಕೆ 18 ಕೋಟಿ ರು. ತೆಗೆದುಕೊಳ್ಳುತ್ತಾರೆ ಎಂದು ಎಲ್ಲೆಡೆ ಭಾರೀ ಸುದ್ದಿಯಾಗಿತ್ತು. ಇದನ್ನು ಇರಾನ್ ಅಧಿಕಾರಿಗಳು ನಿರಾಕರಿಸಿದ್ದು, ಅಂತಹ ಯಾವುದೇ ಪ್ರಸ್ತಾಪವಿಲ್ಲ, ಅವಕ್ಕೆ ಆಧಾರವೂ ಇಲ್ಲ ಎಂದು ಹೇಳಿದೆ. →10

3.75 ಲಕ್ಷ ಮಂದಿ ವಾಪಸ್

ಯುದ್ಧ ಪ್ರಾರಂಭವಾದಾಗಿನಿಂದ 3.75 ಲಕ್ಷಕ್ಕೂ ಹೆಚ್ಚು ಭಾರತೀಯರು ಭಾರತಕ್ಕೆ ಸುರಕ್ಷಿತವಾಗಿ ಮರಳಿದ್ದಾರೆ. ಇರಾನ್‌ನಿಂದ 700ಕ್ಕೂ ಹೆಚ್ಚು ಜನರು ವೈದ್ಯಕೀಯ ವಿದ್ಯಾರ್ಥಿಗಳು ಸೇರಿದಂತೆ 1 ಸಾವಿರ ಭಾರತೀಯರು ಇಲ್ಲಿಯವರೆಗೆ ಸುರಕ್ಷಿತವಾಗಿ ಮರಳಿದ್ದಾರೆ. ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಗಲ್ಫ್ ರಾಷ್ಟ್ರಗಳ ಸಿಬಿಎಸ್‌ಇ 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಲಾಗಿದೆ ಎಂದು ಮೋದಿ ಹೇಳಿದ್ದಾರೆ.

ಯುಎಇ ಮೇಲೆ ಮತ್ತೆ ದಾಳಿ

ಇರಾನ್‌ನಿಂದ ಯುಎಇ ಮೇಲೆ 7 ಖಂಡಾಂತರ ಕ್ಷಿಪಣಿಗಳು, 16 ಡ್ರೋನ್‌ಗಳನ್ನು ಮಾ.23ರಂದು ಹಾರಿಸಲಾಗಿದೆ. ಅದನ್ನು ನಮ್ಮ ರಕ್ಷಣಾ ವ್ಯವಸ್ಥೆ ಬಲವಾಗಿ ತಡೆದಿದೆ ಎಂದು ಯುಎಇ ರಕ್ಷಣಾ ಸಚಿವಾಲಯ ಹೇಳಿಕೊಂಡಿದೆ. ಇಡೀ ಯುಎಇಯಲ್ಲಿ ಆಕಾಶದಲ್ಲಿ ಭಾರೀ ಸ್ಫೋಟದ ಸದ್ದುಗಳು ಕೇಳಿವೆ. ಇದಕ್ಕೆ ಕಾರಣ ಆಗಸದಲ್ಲೇ ಕ್ಷಿಪಣಿಗಳನ್ನು ಧ್ವಂಸ ಮಾಡಿದ್ದು ಎಂದು ಯುಎಇ ಹೇಳಿದೆ.

ಟ್ರಂಪ್ ಬೆದರಿ ಹಿಂದೆ ಸರಿದಿದ್ದಾರೆ: ಇರಾನ್

ಹೊರ್ಮುಜ್ ಅನ್ನು 48 ಗಂಟೆಗಳ ಒಳಗೆ ಹಡಗು ಸಂಚಾರಕ್ಕೆ ತೆರೆಯದಿದ್ದರೆ ಇರಾನ್ ವಿದ್ಯುತ್ ಸ್ಥಾವರಗಳು, ಇಂಧನ ಸೌಕರ್ಯಗಳ ಮೇಲೆ ಭಾರೀ ದಾಳಿ ಮಾಡಲಾಗುವುದು ಎಂದು ಅಮೆರಿಕ ಹೇಳಿತ್ತು. ಸೋಮವಾರ ಈ ಸಂಬಂಧ ಪ್ರತಿಕ್ರಿಯಿಸಿದ ಟ್ರಂಪ್, ಇರಾನ್ ಜೊತೆಗಿನ ಮಾತುಕತೆ ಯಶಸ್ವಿಯಾಗಿದೆ. ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಗೆ 5 ದಿನ ಬಿಡುವು ನೀಡಲಾಗಿದೆ ಎಂದಿದ್ದಾರೆ. ಇದನ್ನು ಅಪಹಾಸ್ಯ ಮಾಡಿದ ಇರಾನ್, ಅಮೆರಿಕದೊಂದಿಗೆ ಯಾವುದೇ ಮಾತುಕತೆ ನಡೆದಿಲ್ಲ. ನಮಗೆ ಬೆದರಿ ಟ್ರಂಪ್ ಹಿಂದೆ ಸರಿದಿದ್ದಾರೆ ಎಂದಿದೆ.

ವಾರದೊಳಗೆ ನೋಂದಣಿ ಮುಗಿಸಬೇಕು: ಸೂಚನೆ
ಹೋಟೆಲ್‌ಗಳಿಗೆ ನಿತ್ಯ 10 ಸಾವಿರ ಸಿಲಿಂಡರ್ ಪೂರೈಕೆ

ವಾಣಿಜ್ಯ ಬಳಕೆದಾರರಿಗೆ ಗೇಲ್ ನೋಂದಣಿ ಕಡ್ಡಾಯ: ಮುನಿಯಪ್ಪ

ಬೆಂಗಳೂರು: ವಾಣಿಜ್ಯ ಸಿಲಿಂಡರ್ ಸಿಗದೇ ಕಂಗಾಲಾಗಿದ್ದ ಹೋಟೆಲ್ ಉದ್ಯಮಕ್ಕೆ ರಾಜ್ಯ ಸರಕಾರ ಕೊಂಚ ರಿಲೀಫ್ ನೀಡಿದ್ದು, ಹೋಟೆಲ್ ಸೇರಿದಂತೆ ಆಹಾರೋದ್ಯಮ ಕ್ಷೇತ್ರಕ್ಕೆ ನಿತ್ಯ 10 ಸಾವಿರ ವಾಣಿಜ್ಯ ಬಳಕೆಯ ಸಿಲಿಂಡರ್ ನೀಡುವುದಾಗಿ ಆಹಾರ ಮತ್ತು ನಾಗರಿಕ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಘೋಷಿಸಿದ್ದಾರೆ. ಆದರೆ ವಾಣಿಜ್ಯ ಬಳಕೆಯ ಸಿಲಿಂಡರ್ ಖರೀದಿಸಲು ಇನ್ನೊಂದು ವಾರದೊಳಗೆ ಗೇಲ್ (ಕೇಂದ್ರ ಮಾಲೀಕತ್ವದ ಜೈವಿಕ ಅನಿಲ ಪೂರೈಕೆದಾರ) ಕಂಪನಿಯೊಂದಿಗೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತೀಯ ತೈಲ ನಿಗಮ, ಎಚ್‌ಪಿ, ಗೇಲ್ ಹಾಗೂ ಭಾರತ್ ಪೆಟ್ರೋಲಿಯಂ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ವಾಣಿಜ್ಯ ಬಳಕೆಯ ಸಿಲಿಂಡರ್ ಬಳಸುವ ಮಂದಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ವಾಣಿಜ್ಯ ಸಿಲಿಂಡರ್‌ನ ಸಮಸ್ಯೆಗೆ ಬಗ್ಗೆ ಕೇಂದ್ರದ ಗಮನಕ್ಕೆ ತರಲಾಗಿದೆ. ಆದ್ದರಿಂದ ತಾತ್ಕಾಲಿಕವಾಗಿ ಶೇ.20ರಷ್ಟು ಪೂರೈಕೆಗೆ ಅವಕಾಶ ನೀಡಲಾಗಿದೆ. ಇದರೊಂದಿಗೆ ಹೋಟೆಲ್ ಹಾಗೂ ಸಂಬಂಧಿತ ಉದ್ಯಮಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕನಿಷ್ಠ ಶೇ.50 ಪೂರೈಕೆ ಅಗತ್ಯವಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

10 ಕೆಜಿ ಎಲ್‌ಪಿಜಿ ಸಿಲಿಂಡರ್: ಚಿಂತನೆ

ಹೊರ್ಮುಜ್ ಜಲಸಂಧಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಭಾರತ 14.2 ಕೆಜಿ ಎಲ್‌ಪಿಜಿ ಸಿಲಿಂಡರ್‌ಗಳಲ್ಲಿ 10 ಕೆಜಿಯನ್ನು ಮಾತ್ರ ತುಂಬಲು ಕೇಂದ್ರ ಸರಕಾರ ಮುಂದಾಗಿದೆ. ಭಾರತದ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು, ಮನೆಗಳಿಗೆ ಎಲ್‌ಪಿಜಿ ಮರುಪೂರಣ ಪ್ರಮಾಣವನ್ನು ಕಡಿಮೆ ಮಾಡುವ ಯೋಜನೆಯನ್ನು ಅನ್ವೇಷಿಸುತ್ತಿವೆ ಎಂದು ವರದಿಯಾಗಿದೆ. ಎಲ್‌ಪಿಜಿ ಸಂಗ್ರಹವನ್ನು ಹೆಚ್ಚಿಸಲು, ಹೆಚ್ಚಿನ ವಿತರಣೆ ಮಾಡಲು 14.2-ಕೆಜಿ ಸಿಲಿಂಡರ್‌ಗಳಲ್ಲಿ ಸುಮಾರು 10 ಕೆಜಿ ಎಲ್‌ಪಿಜಿಯನ್ನು ಪೂರೈಸುವ ಕುರಿತು ಪ್ರಸ್ತಾವನೆಯಾಗಿದೆ.

ಚನ್ನಪಟ್ಟಣ ಬಳಿ ಕೇರಳ ಬಸ್ ಅಪಘಾತ: ನಾಲ್ವರು ಸಾವು

ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಡಿವೈಡರ್‌ಗೆ ಡಿಕ್ಕಿ

ರಾಮನಗರ: ಖಾಸಗಿ ಬಸ್ ಅಪಘಾತಕ್ಕೀಡಾಗಿ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಪುಟ್ಟಪ್ಪನದೊಡ್ಡಿ ಬಳಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಸೋಮವಾರ ಮುಂಜಾನೆ ಸಂಭವಿಸಿದೆ. ಮೃತರನ್ನು ಕೇರಳದ ಮಹಮ್ಮದ್ ಪರಾನ್ (22) ಮತ್ತು ರಫೀಜ್ (45) ಹಾಗೂ ಮತ್ತಿಬ್ಬರಾದ ಬೆಂಗಳೂರಿನ ರಶೀದ್ (45) ಮತ್ತು ಸಕೀರ್ (27) ಎಂದು ಗುರುತಿಸಲಾಗಿದೆ.

ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡ ಕೇರಳದ ಅಬ್ದುಲ್ ಹಾಗೂ ಅಲೇಸ್‌ಗೆ ಎಂಬವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಕೇರಳದ ಪಿಕೆ ಟ್ರಾವೆಲ್ಸ್‌ಗೆ ಸೇರಿದ ಬಸ್ ಇದಾಗಿದ್ದು, ಕೇರಳದಿಂದ ಬೆಂಗಳೂರು ಕಡೆ ಹೋಗುತ್ತಿದ್ದಾಗ ಅವಘಡ ಸಂಭವಿಸಿದೆ. ವೇಗವಾಗಿ ಚಲಿಸುತ್ತಿದ್ದ ಬಸ್, ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದು ದುರಂತ ಸಂಭವಿಸಿದೆ ಎಂದು ತಿಳಿದು ಬಂದಿದೆ. ಮೃತದೇಹಗಳನ್ನು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೂಡುಬಿದಿರೆ ಲೈಂಗಿಕ ದೌರ್ಜನ್ಯ ಸಿಐಡಿಗೆ: ಪರಂ

ಬೆಂಗಳೂರು: ಮಹಿಳೆಯರ ಮೇಲೆ ಮೂಡುಬಿದಿರೆ ಪೊಲೀಸ್ ಇನ್‌ಸ್ಪೆಕ್ಟರ್ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಗೃಹಸಚಿವ ಜಿ. ಪರಮೇಶ್ವರ ಸೂಚನೆ ನೀಡಿದ್ದಾರೆ. ಮೂಡುಬಿದಿರೆಯ ಘಟನೆಗೆ ಸಂಬಂಧಿಸಿ ದಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅವರು ಸಂತ್ರಸ್ತೆಯನ್ನು ಭೇಟಿ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ದಂತೆ ಅನೇಕ ವಿಚಾರಗಳ ಬಗ್ಗೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಡಿಜಿಪಿಗೆ ಸೂಚಿಸಿದ್ದೇನೆ, ಪೊಲೀಸ್ ಇನ್ಸ್‌ಪೆಕ್ಟರ್ ಮೇಲೆ ಆರೋಪ ಬಂದ ಬಳಿಕ ಅವರನ್ನು ಅಮಾನತು ಮಾಡುವ ಮೂಲಕ ತಕ್ಷಣದ ಕ್ರಮ ಕೈಗೊಳ್ಳಲಾಗಿದೆ ಎಂದರು.

ಯುದ್ಧವಿಮಾನ ಪತನ: ನೂರು ಯೋಧರ ಸಾವು?

ದೆಹಲಿ: ಯುದ್ಧವಿಮಾನ ಪತನಗೊಂಡಿದ್ದರಿಂದ ಕೊಲಂಬಿಯಾದ 100ಕ್ಕೂ ಅಧಿಕ ಯೋಧರು ಮೃತಪಟ್ಟಿರುವ ಭೀತಿ ಎದುರಾಗಿದೆ. ಪೆರು ಮತ್ತು ಈಕ್ವೆಡಾರ್‌ಗಳ ಗಡಿಭಾಗದಲ್ಲಿರುವ ಪ್ಯುಯೆರ್ಟೊ ಲೆಗ್ವಿಝಾಮೋ ಎಂಬ ಪ್ರದೇಶದಿಂದ ಹೊರಟ ಲಾಕ್‌ಹೀಡ್ ಮಾರ್ಟಿನ್ ಯುದ್ಧವಿಮಾನ ಕೆಲವೇ ಸಮಯದಲ್ಲಿ ಪತನಗೊಂಡಿತು. ಪರಿಣಾಮ 100ಕ್ಕೂ ಅಧಿಕ ವ್ಯಕ್ತಿಗಳು ದುರ್ಮರಣಗೊಂಡಿರುವ ನಿರೀಕ್ಷೆಯಿದೆ. ಎಷ್ಟು ಮಂದಿ ಸತ್ತಿದ್ದಾರೆ ಎಂಬ ನಿಖರ ಸಂಖ್ಯೆ ದೊರೆತಿಲ್ಲ. ಯಾವ ಕಾರಣಕ್ಕೆ ಘಟನೆ ಸಂಭವಿಸಿದೆ ಎಂದೂ ಗೊತ್ತಾಗಿಲ್ಲ. ಸದ್ಯಕ್ಕೆ ರಕ್ಷಣಾ ಕಾರ್ಯಾಚರಣೆಗೆ ಆದ್ಯತೆ ನೀಡಲಾಗಿದೆ.

ಸೌಜನ್ಯ ಕೊಲೆ ಪ್ರಕರಣ: ರಾಜ್ಯ, ಸಿಬಿಐಗೆ ಸುಪ್ರೀಂ ನೋಟಿಸ್

ಮರು ತನಿಖೆ ವಿಚಾರಣೆ ಅರ್ಜಿ ಹಿನ್ನೆಲೆಯಲ್ಲಿ ಆದೇಶ

ದೆಹಲಿ: ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ರಾಜ್ಯ ಸರ್ಕಾರ ಮತ್ತು ಸಿಬಿಐಗೆ ನೋಟಿಸ್ ನೀಡಿದೆ. ಈ ಪ್ರಕರಣದ ಮರು ತನಿಖೆ ನಡೆಸುವಂತೆ ಕೋರಿ ಸೌಜನ್ಯ ತಾಯಿ ಕುಸುಮಾವತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠ, ಏಪ್ರಿಲ್ 28ಕ್ಕೆ ವಿಚಾರಣೆಯನ್ನು ಮುಂದೂಡಿಕೆ ಮಾಡಿದೆ.

ಈ ಹಿಂದೆ ಹೈಕೋರ್ಟ್ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ಪುರಾವೆ ಇಲ್ಲ ಎಂದು ಹೇಳಿ ಮರು ತನಿಖೆಗೆ ಆದೇಶಿಸಲು ನಿರಾಕರಿಸಿತ್ತು. ಆದರೆ ಇದೀಗ ಸುಪ್ರೀಂ ಕೋರ್ಟ್‌ಗೆ ವೈದ್ಯಕೀಯ ಪುರಾವೆ ಸಲ್ಲಿಸಲಾಗಿದೆ ಎಂದು ಹೇಳಲಾಗಿದೆ. 2012ರ ಅಕ್ಟೋಬರ್ 9ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಉಜಿರೆಯ ಧರ್ಮಸ್ಥಳದ ಬಳಿ 17 ವರ್ಷದ ಕಾಲೇಜು ವಿದ್ಯಾರ್ಥಿನಿ ಸೌಜನ್ಯಳನ್ನು ಅಪಹರಿಸಿ ಅತ್ಯಾಚಾರ ಮಾಡಲಾಗಿತ್ತು. ಮರುದಿನ ಆಕೆಯ ಮೃತದೇಹ ನೇತ್ರಾವತಿ ಸ್ನಾನಘಟ್ಟದ ಬಳಿಯ ಪೊದೆಯಲ್ಲಿ ಸಿಕ್ಕಿತ್ತು.

ಸೌಜನ್ಯ ಪ್ರಕರಣವನ್ನು 2013ರಲ್ಲಿ ಸಿಬಿಐಗೆ ವರ್ಗಾಯಿಸಲಾಗಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿ.ಬಿ.ಸಂತೋಷ್ 2023ರಲ್ಲಿ ಲೋಪದೋಷಗಳನ್ನು ಗುರುತಿಸಿ ಸಂತೋಷ್ ರಾವ್‌ನನ್ನು ಖುಲಾಸೆಗೊಳಿಸಿದ್ದರು. ಇಲ್ಲಿಯವರೆಗೆ ಸೌಜನ್ಯಳನ್ನು ಹಂತಕ ಯಾರೆಂದು ಗೊತ್ತಾಗಿಲ್ಲ.

ವಾರದಲ್ಲಿ 1 ಕೆಜಿ ಬೆಳ್ಳಿಗೆ 45000 ರು. ಇಳಿಕೆ
1 ಗ್ರಾಮ್ ಚಿನ್ನದ ಬೆಲೆ 1000 ರು. ಕುಸಿತ

ಚಿನ್ನ, ಬೆಳ್ಳಿ ಬೆಲೆ ದಾಖಲೆ ಕುಸಿತ

ದೆಹಲಿ: ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿಯ ಪರಿಣಾಮ ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಭಾರೀ ಇಳಿಕೆಯಾಗಿದೆ. ಯುದ್ಧದ ಮೊದಲು 1.70 ಲಕ್ಷದ ಆಸು ಪಾಸಿನಲ್ಲಿದ್ದ 10 ಗ್ರಾಮ್ ಚಿನ್ನದ ದರ ಸೋಮವಾರ 1.30 ಲಕ್ಷದ ಸಮೀಪಕ್ಕೆ ಕುಸಿದಿದೆ. ಬೆಂಗಳೂರಿನಲ್ಲಿ 24 ಕ್ಯಾರೆಟ್‌ನ 1 ಗ್ರಾಮ್ ಚಿನ್ನದ ಬೆಲೆ 1032 ರು. ಕುಸಿದು 13565 ರು.ಗೆ ಮುಟ್ಟಿದೆ. 22 ಕ್ಯಾರೆಟ್‌ನ 1 ಗ್ರಾಮ್ ಚಿನ್ನದ ಬೆಲೆ 945 ರು. ಇಳಿದು 12,435 ರು.ಗೆ ಮುಟ್ಟಿದೆ.

ಶುಕ್ರವಾರ ಮಾರುಕಟ್ಟೆ ಅಂತ್ಯದ ಹೊತ್ತಿಗೆ ಕೆಜಿಗೆ 2.45 ಲಕ್ಷ ರು. ಇದ್ದ ಬೆಳ್ಳಿ ಬೆಲೆ, ಸೋಮವಾರ ಒಂದೇ ದಿನ 15,000 ರು. ಇಳಿಕೆಯಾಗಿ 2.30 ಲಕ್ಷ ರು.ಗೆ ಮುಟ್ಟಿದೆ. ಒಟ್ಟಾರೆ ಒಂದು ವಾರದಲ್ಲೇ 45000 ರು. ಇಳಿಕೆಯಾಗಿದೆ. ಇದು ದಾಖಲೆ ಕುಸಿತವೆನಿಸಿದೆ. ಚಿನ್ನ, ಬೆಳ್ಳಿ ದರ ಇಳಿಕೆಯಾಗಿದ್ದರಿಂದ ಮಲ್ಟಿ ಕಮಾಡಿಟಿ ಎಕ್ಸ್‌ಚೇಂಜ್ ಆಫ್ ಇಂಡಿಯಾದ ಎಂಸಿಎಕ್ಸ್ ಷೇರು ಮೌಲ್ಯ ಸೋಮವಾರ 100.10 ರು.(4.15%) ಇಳಿಕೆಯಾಗಿದೆ. ಶುಕ್ರವಾರ (ಮಾ.20) 2414.50 ರಲ್ಲಿ ವ್ಯವಹಾರ ಮುಗಿಸಿದ ಎಂಸಿಎಕ್ಸ್ ಒಂದು ಷೇರು, ಸೋಮವಾರ 2,314.40 ರು.ನಲ್ಲಿ ವ್ಯವಹಾರ ಮುಗಿಸಿದೆ. ತೈಲ ಬಿಕ್ಕಟ್ಟಿನಿಂದ ಡಾಲರ್ ಮೌಲ್ಯ ಏರಿಕೆ ಕಂಡಿದ್ದು ಚಿನ್ನದ ಧಾರಣೆ ಕುಸಿಯಲು ಪ್ರಮುಖ ಕಾರಣವಾಗಿದೆ. →10

ಭಾರತೀಯ ಷೇರು ಪೇಟೆಯಲ್ಲಿ ರಕ್ತಪಾತ

ಸತತ 2 ವರ್ಷದಿಂದ ಬಹುತೇಕ ಕುಸಿತವನ್ನೇ ಕಂಡಿರುವ ಭಾರತೀಯ ಷೇರು ಮಾರುಕಟ್ಟೆಗೆ, ಇರಾನ್ ಮೇಲೆ ಅಮೆರಿಕ-ಇಸ್ರೇಲ್‌ಗಳ ಜಂಟಿ ದಾಳಿ ಭಾರೀ ಹೊಡೆತ ನೀಡಿದೆ. ಇದರ ಪರಿಣಾಮ ಸೋಮವಾರ ಮುಂಬೈನ ಬಾಂಬೇ ಸ್ಟಾಕ್ ಎಕ್ಸ್‌ಚೇಂಜ್ ಮತ್ತು ದೆಹಲಿಯ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ರಕ್ತಪಾತವಾಗಿದೆ. ಷೇರುದಾರರ ಆತಂಕ ಇನ್ನಷ್ಟು ಹೆಚ್ಚಾಗಿದೆ. ಬಿಎಸ್‌ಇ ಸೆನ್ಸೆಕ್ಸ್ 1,836 ಅಂಕ ಕುಸಿತ ಕಂಡು ದಿನಾಂತ್ಯಕ್ಕೆ 72,696.39ರಲ್ಲಿ ವ್ಯವಹಾರ ಮುಗಿಸಿತು. ನಿಫ್ಟಿ-ಫಿಫ್ಟಿ (ಎನ್‌ಎಸ್‌ಇ) 601.85 ಅಂಕ ಕುಸಿತ ಅನುಭವಿಸಿ 22,512.65ರಲ್ಲಿ ದಿನವನ್ನು ಮುಗಿಸಿದೆ.

ಕೈ ಅಭ್ಯರ್ಥಿಗಳಿಗೆ ಸಿದ್ದು, ಡಿಕೆಶಿ ಸಾಥ್, ದಾವಣಗೆರೆಯಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ
ಮಾಜಿ ಸಿಎಂ ಬಿಎಸ್‌ವೈ ಜತೆ ತೆರಳಿ ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿ ಉಮೇದುವಾರಿಕೆ

ರಂಗೇರಿದ ಅಖಾಡ: ಬಿಜೆಪಿ-ಕಾಂಗ್ರೆಸ್ ನಾಮಪತ್ರ

ದಾವಣಗೆರೆ/ಬಾಗಲಕೋಟೆ

ಸ್ಥಳೀಯ ಸಂಸ್ಥೆ ಚುನಾವಣೆಗೆ ಮೊದಲೇ ಎದುರಾಗಿರುವ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಆಡಳಿತ-ಪ್ರತಿಪಕ್ಷಗಳು ಅಖಾಡಕ್ಕೆ ಧುಮುಕಿದ್ದು, ಅಭ್ಯರ್ಥಿಗಳು ತಮ್ಮ ತಮ್ಮ ನಾಯಕರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಚಿವ ಮಲ್ಲಿಕಾರ್ಜುನ ಪುತ್ರ ಸಮರ್ಥ್, ಬಿಜೆಪಿಯಿಂದ ಶ್ರೀನಿವಾಸ.ಟಿ ದಾಸಕರಿಯಪ್ಪ, ಬಾಗಲಕೋಟೆಯಿಂದ ಕಾಂಗ್ರೆಸ್‌ನ ಉಮೇಶ್ ಮೇಟಿ ಮತ್ತು ಬಿಜೆಪಿಯಿಂದ ಮಾಜಿ ಶಾಸಕ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಕೆ ಮಾಡಿದ್ದಾರೆ.

ಸೋಮವಾರ ನಾಮಪತ್ರ ಸಲ್ಲಿಸಲು ಕಡೆಯ ದಿನವಾಗಿತ್ತು. ಗುರುವಾರ ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ನಾಮಪತ್ರ ಸಲ್ಲಿಕೆ ವೇಳೆ ಸಾಥ್ ನೀಡಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ದಾವಣಗೆರೆ ಅಭ್ಯರ್ಥಿ ಶ್ರೀನಿವಾಸ ಅವರ ನಾಮಪತ್ರ ಸಲ್ಲಿಕೆ ವೇಳೆ ಉಪಸ್ಥಿತರಿದ್ದರು. ಈ ಬಾರಿ ಬಿಜೆಪಿಯಲ್ಲಿ ಬಂಡಾಯವಿಲ್ಲವಾದರೂ, ಕಾಂಗ್ರೆಸ್‌ಗೆ ಬಂಡಾಯದ ಬಿಸಿ ತಟ್ಟಿದೆ. →10



ಕೈಗೆ ಸಡ್ಡು: ಸಾದಿಕ್ ಬಂಡಾಯ ಅಭ್ಯರ್ಥಿ

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎನ್ನುವ ಒತ್ತಡ ಮೀರಿ, ಶಾಮನೂರು ಮೊಮ್ಮಗ ಸಮರ್ಥ್‌ಗೆ ಕಾಂಗ್ರೆಸ್ ಮಣೆಹಾಕಿದೆ. ಪಕ್ಷದ ಈ ತೀರ್ಮಾನಕ್ಕೆ ಸ್ಥಳೀಯ ಮುಸ್ಲಿಂ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದು, ಬಂಡಾಯ ಅಭ್ಯರ್ಥಿಯನ್ನಾಗಿ ಖಾಲಿದ್ ಸಾದಿಕ್ ಅವರನ್ನು ನಿಲ್ಲಿಸಿದೆ. ಸೋಮವಾರ ಖಾಲಿದ್ ಸಹ ತಮ್ಮ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದರು. ಬಂಡಾಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಮುಸ್ಲಿಂ ನಾಯಕರೊಂದಿಗೆ ಚರ್ಚಿಸಿ ಎಲ್ಲವನ್ನೂ ಸರಿಪಡಿಸಲಾಗುವುದು ಎನ್ನುವ ಭರವಸೆ ನೀಡಿದ್ದಾರೆ. ಸೈಯದ್ ಉಸ್ತಾದ್ ಅವರನ್ನು ಮನವೊಲಿಸಿ ಕಣದಿಂದ ಹಿಂದಕ್ಕೆ ಸರಿಯುವಂತೆ ಮಾಡುವ ಹೊಣೆಗಾರಿಕೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ನಾಯಕರು ವಹಿಸಿದ್ದಾರೆ.

ಇಡೀ ಜಗತ್ತು ಪ್ರಧಾನಿ ಮೋದಿಯವರ ಕಾರ್ಯಕ್ಷಮತೆಯನ್ನು ಮೆಚ್ಚುತ್ತಿದೆ. ರಾಜ್ಯ ಕಾಂಗ್ರೆಸ್ ಸರಕಾರದ ದುರಾಡಳಿತ ದಿಂದ ಜನರು ಬೇಸತ್ತಿದ್ದಾರೆ. ಭ್ರಷ್ಟಾಚಾರ ಎಲ್ಲೆಡೆ ಹರಡಿದೆ ಎಂಬ ಭಾವನೆ ಇದೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಇದೆಲ್ಲದಕ್ಕೂ ಈ ಎರಡು ಕ್ಷೇತ್ರಗಳಲ್ಲಿ ಜನರಿಗೆ ಸೂಕ್ತ ಉತ್ತರ ನೀಡಲು ಅವಕಾಶವಿದೆ.
-ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ

ಕುಟುಂಬ ರಾಜಕಾರಣ ಇಲ್ಲ, ಗೆಲ್ಲೋರಿಗೆ ಟಿಕೆಟ್: ಸಿಎಂ

ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ನಾಮಪತ್ರ ಸಲ್ಲಿಕೆ ನಂತರ ಮಾತನಾಡಿದ ಸಿಎಂ ಸಿದ್ದರಾಮಯ್ಯ, ನಾವು ಆ ಜಾತಿ ಈ ಜಾತಿ ಅಂತ ನೋಡಿಲ್ಲ. ಯಾವ ಶಾಸಕರು ಮೃತರಾಗುತ್ತಾರೋ ಅವರ ಕುಟುಂಬಸ್ಥರಿಗೆ ಟಿಕೆಟ್ ಕೊಡುತ್ತೇವೆ. ನಾನು ಕುಟುಂಬ ರಾಜಕಾರಣವನ್ನು ಬೆಂಬಲಿಸೋದಿಲ್ಲ. ಯಾವ ಅಭ್ಯರ್ಥಿ ಗೆಲ್ಲುತ್ತಾರೋ ಅವರನ್ನು ನಿಲ್ಲಿಸುತ್ತೇವೆ ಎಂದು ಹೇಳಿದ್ದಾರೆ.

ಮತ್ತೆ ಕಸದ ಸಮಸ್ಯೆ ಉಲ್ಬಣ ಸಾಧ್ಯತೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಕಸದ ಆಟೋ ಚಾಲಕರು ಸಾಂಕೇತಿಕವಾಗಿ ಕಸ ವಿಲೇವಾರಿ ಕಾರ್ಯವನ್ನು ಸ್ಥಗಿತಗೊಳಿಸಿದ್ದಾರೆ. ಈ ಹಿನ್ನಲೆ ಮತ್ತೆ ಕಸ ವಿಲೇವಾರಿ ಸಮಸ್ಯೆ ತಲೆದೋರುವ ಸಾಧ್ಯತೆಯಿದೆ. ಕಸದ ವಿಂಗಡಣೆ ವಿಚಾರವೇ ಈ ಸಮಸ್ಯೆಗೆ ಮೂಲ ಕಾರಣವಾಗಿದ್ದು, ಮನೆಮನೆಗಳಲ್ಲಿ ಕಸವನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ನೀಡಬೇಕು ಎಂದು ಅಧಿಕಾರಿಗಳು ಒತ್ತಾಯಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ದಿನಕ್ಕೆ ಸುಮಾರು ಐದು ಗಂಟೆಗಳ ಕಾಲ ಈ ಕೆಲಸ ಮಾಡಬೇಕಾಗುತ್ತಿರುವುದು ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಚರ್ಮ ರೋಗಗಳು ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿರುವುದಾಗಿ ಆತಂಕ ವ್ಯಕ್ತಪಡಿಸಿದ್ದಾರೆ. ಜನರು ಕಸವನ್ನು ಸರಿಯಾಗಿ ವಿಂಗಡಣೆ ಮಾಡಿಕೊಡದೇ ಇರುವುದರಿಂದ ಸಮಸ್ಯೆ ಹೆಚ್ಚುತ್ತಿದೆ.

Form PAS-1

[Pursuant to section 27(1) and rule 7(2) of Companies (Prospectus and Allotment of Securities) Rules, 2014]

Advertisement giving details of notice of special resolution for varying the terms of any contract referred to in the prospectus or altering the objects for which the prospectus was issued

OLA ELECTRIC

OLA Electric Mobility Limited

CIN: L74999KA2017PLC099619

Registered Office: Wing C, Prestige RMZ Startech, Hosur Road, Municipal Ward No.67, Municipal No. 140, Koramangala VI Bk, Bangalore-560095, Karnataka, India.

Tel: 080-35440050, **Email Id:** companysecretary@olaelectric.com

PUBLIC NOTICE

Notice is hereby given that by a resolution dated March 18, 2026, the board of directors (**"Board"**) of Ola Electric Mobility Limited (**"Company"**) has proposed to vary the objects / terms of utilisation of the Initial Public Offering (**"IPO"**) proceeds (**"IPO Proceeds"**) and modification of time limit for utilisation of the IPO proceeds, as stated in the prospectus dated August 06, 2024, (**"Prospectus"**) and as amended by the special resolution passed at the 8th annual general meeting held by the Company on August 22, 2025 (**"First Variation"**), in connection with the IPO of the Company, which consisted of a fresh issue of 72,37,57,627 equity shares at an issue price of INR 76 aggregating to INR 5,500.00 Crores (where the net proceeds received by Company after deduction of issue related expenses was INR 5,275.06 Crores).

In pursuance of the said board resolution dated March 18, 2026, further notice is given that for approving the proposed variation of the objects / terms of utilisation of the IPO Proceeds and modification of the time limit for utilisation of the IPO Proceeds, a special resolution of the Company is proposed to be obtained through Postal Ballot. The detailed information of the aforesaid resolution (including the terms and conditions thereof along with the explanatory statement) and instructions for remote e-voting is given in Postal Ballot Notice dated March 18, 2026, available at the website of the Company at www.olaelectric.com

1) **Particulars of the terms of the contract to be varied (or objects to be altered):**

The Company had outlined the following items as the objects towards which the IPO Proceeds (excluding issue related expenses) would be utilised in the section "Objects of the Offer" in the Prospectus dated August 6, 2024 ("Prospectus"), in connection with the IPO:

Amount in Rs Cr

Sr. No.	Objects	Total money raised from IPO	Estimated Utilisation as per Prospectus		
			Fiscal Year 2025	Fiscal Year 2026	Fiscal Year 2027
1.	Capital expenditure to be incurred by our Subsidiary, Ola Cell Technologies Private Limited ("OCT") for expansion of the capacity of our cell manufacturing plant from 5 GWh to 6.4 GWh, classified as phase 2 under the expansion plan (as stated in the Prospectus)	1,227.64	859.30	368.34	-
2.	Repayment or pre-payment, in full or part, of the indebtedness incurred by our Subsidiary, Ola Electric Technologies Private Limited ("OET")	800.00	800.00	-	-
3.	Investment into research and product development	1,600.00	450.00	550.00	600.00
4.	Expenditure to be incurred for organic growth initiatives	350.00	150.00	200.00	-
5.	General corporate purposes*	1,297.42	1000.00	297.42	-
	Total (excluding issue related expenses)	**5,275.06**	**3,259.30**	**1,415.76**	**600.00**

**The total amount to be used for general corporate purposes will not exceed 25% of the gross proceeds of the IPO i.e. INR 5,500.00 Crores as per the Prospectus (which includes issue related expenses of INR 224.94 Crores).*

Further at its 8th Annual General Meeting (**"AGM"**) held on August 22, 2025, the Members of the Company had approved the alteration/ variation in the objects of the issue as stated in the IPO prospectus as undertaken in the First Variation in the following manner:

Amount in Rs Cr

Sr. No.	Original objects of the IPO as stated in the Prospectus	Total amount raised	Amount unutilised as on 30 June 2025	Details of variation	Revised amount after variation	Proposed Balance post variation
1.	**Object 1:** Capital Expenditure to be incurred by the subsidiary, OCT for expansion of the capacity of cell manufacturing plant from 5GWh to 6.4GWh, classified as phase 2 under the expansion plan	1,227.64	1,227.64	1,227.64 allocated out of Object 1 to Object 4 and 5 and 6 (as set out below)	0	0
2.	**Object 2:** Repayment or prepayment, in full or part, of the indebtedness incurred by Subsidiary, OET	800.00	-	No change	800.00	0
3.	**Object 3:** Investment into research and product development	1,600.00	1,144.47	95.00 allocated out of Object 3 to Object 6	1,505.00	1,049.47
4.	**Object 4:** Expenditure to be incurred for organic growth initiatives	350.00	50.75	850.64 allocated out of Object 1 to Object 4	1,200.64	901.39
5.	**Object 5:** General corporate purposes*	1,297.42	170.94	77.00 allocated out of Object 1 to Object 5	1,374.42	247.94
6.	**Object 6:** Repayment or prepayment, in full or part, of the indebtedness incurred the Company and/ or its subsidiaries	-	-	300.00 allocated out of Object 1 and 95 allocated out of Object 3, totalling to 395.00 allocated to Object 6	395.00	395.00
	Total (excluding issue related expenses)	**5,275.06**	**2,593.80**		**5,275.06**	**2,593.80**
	Issue related expenses	224.94	5.56	No change	224.94	5.56
	Total (including issue related expenses)	**5,500.00**	**2,599.36**		**5,500.00**	**2,599.36**

**The total amount to be utilised for general corporate purposes would not exceed 25% of the gross proceeds of the IPO i.e. INR 5,500.00 Crores*

Please refer to the 8th AGM notice dated July 25, 2025, for further details.

As on 11th March 2026, INR 1,295.63 Crores remains to be utilised, out of which, INR 695.10 Crores remains to be utilised towards Object 3 (*Investment into research and product development*). Therefore, the Company intends to vary the terms of the aforesaid objects, by way of deploying and/or utilising the unutilised amount of (i) INR 100.00 Crores from Object 3 towards Object 4 i.e., towards expenditure to be incurred for organic growth initiatives towards the sub-head of auto business and (ii) INR 475.00 Crores from Object 3 towards Object 6, i.e. the existing object of repayment or prepayment, in full or part, of the indebtedness incurred the Company and/or its subsidiaries.

The Board of Directors of the Company at their meeting held on March 18, 2026, had approved the aforesaid proposal to vary the terms of the objects / timelines for utilisation, subject to approval of the shareholders by way of a special resolution.

The details regarding such variation are as follows:

Amount in Rs Cr

Sr. No.	Original objects of the IPO as stated in the Prospectus (as amended by the First Variation)	Total amount raised (as amended by the First Variation)	Amount unutilised as on 11th March 2026	Details of variation	Revised amount after variation	Proposed Balance post variation	Revised timeline for utilisation
1.	Object 1: Capital Expenditure to be incurred by the subsidiary, OCT for expansion of the capacity of cell manufacturing plant from 5GWh to 6.4GWh, classified as phase 2 under the expansion plan	-	-	No change	-	-	No change
2.	Object 2: Repayment or prepayment, in full or part, of the indebtedness incurred by Subsidiary, OET	800.00	-	No change	800	-	No change
3.	Object 3: Investment into research and product development	1,505.00	695.10	575.00 allocated out of Object 3 as follows: i) INR 100 Crores to Object 4 ii) INR 475 Crores to Object 6	930.00	120.10	No change
4.	Object 4: Expenditure to be incurred for organic growth initiatives	1,200.64	272.46	100.00 allocated out of Object 3 to Object 4	1,300.64	372.46	Fiscal Year 2026-27
5.	Object 5: General corporate purposes*	1,374.42	232.24	No change	1,374.42	232.24	Fiscal Year 2026-27
6.	Object 6: Repayment or prepayment, in full or part, of the indebtedness incurred the Company and/ or its subsidiaries	395.00	93.06	475.00 allocated out of Object 3 to Object 6	870.00	568.06	Fiscal Year 2026-27
	Total (excluding issue related expenses)	**5,275.06**	**1,292.86**		**5,275.06**	**1,292.86**	
	Issue related expenses	224.94	2.77	No change	224.94	2.77	Fiscal Year 2026-27
	Total (including issue related expenses)	**5,500.00**	**1,295.63**		**5,500.00**	**1,295.63**	

**The total amount to be utilised for general corporate purposes would not exceed 25% of the gross proceeds of the IPO i.e. INR 5,500.00 Crores.*

2) **Particulars of the proposed variation / alteration:** Please refer to table given in Point 1 above for the details of the original objects as per the Prospectus, the details of the First Variation and the proposed reallocation of IPO Proceeds.

3) **Reasons / justification for the variation:**

Background

We are a pure-play electric mobility and energy technology company in India, focused on building vertically integrated technology and manufacturing capabilities across EVs, advanced battery cells, and next-generation energy solutions.

Since our 8th AGM, the Indian electric two-wheeler ("E2W") industry has experienced evolving market dynamics. While the long-term fundamentals of EV adoption remains strong, the pace of growth has moderated relative to earlier expectations. Industry growth, which had accelerated to approximately 26% year-on-year from F.Y. 2022-23 to F.Y. 2024-25, slowed to about 15% growth in the first three quarters of F.Y. 2025-26. Electric penetration within the overall two-wheeler market has also expanded at a more gradual pace, reaching around 6% in F.Y. 2024-25, growing by below 1% in F.Y. 2025-26 as compared to around 17% year-on-year growth from F.Y. 2022-23 to F.Y. 2024-25.

The moderation in growth reflects several structural and cyclical factors. The industry is moving beyond an early-adopter phase toward a broader mass-market customer base that places greater emphasis on affordability, reliability, service support, and total cost of ownership. At the same time, competitive intensity has increased, with incumbent internal combustion engine ("ICE") original equipment manufacturers ("OEMs") expanding their electric portfolios and leveraging established dealer and service networks.

Notwithstanding the near-term moderation, over the medium term, continued improvements in battery technology, declining cell costs, rising oil prices due to unstable geopolitical scenario and greater product choice are expected to support renewed acceleration in EV adoption across the two-wheeler segment. The long-term outlook for the sector remains bullish, supported by the Government of India's target of achieving 30% EV penetration in overall vehicle sales by F.Y. 2029-30. E2Ws are leading this transition, driven by favourable total cost of ownership, policy incentives, and the continued expansion of charging infrastructure.

Given this background, in view of the management, the proposed variation is strategic in nature and seeks to achieve the objectives of more efficient capital allocation and utilisation. To achieve its objectives, management is proposing to further deleverage the consolidated balance sheet of the Company by unlocking capital that the management forecasts will otherwise remain unutilised in the near to mid-term. The management is of the view that the proposed variation will generate value for shareholders by optimizing the Company's cost of capital and unlocking growth opportunities in the evolving EV and energy ecosystem.

Specifics of the proposed variation

The details of the proposed variation are set out below. We are proposing to reallocate INR 575.00 Crores out of Object 3 (*Investment into research and product development*) as follows:

(a) INR 100.00 Crores to Object 4 (*Expenditure to be incurred for organic growth initiatives*), towards the sub-head of auto business, and

(b) INR 475.00 Crores to Object 6 (*Repayment or prepayment, in full or part, of the indebtedness incurred the Company and / or its subsidiaries*).

Rationale to reallocate funds out of Object 3 (*Investment into research and product development*)

Since incorporation, the Company has invested about ₹2,000 Crores in research and development ("R&D") to build deep technology capabilities across the EV value chain. These investments have enabled the development of one of the largest E2W product portfolios in India and the establishment of state of the art battery cell manufacturing capabilities. The Company has successfully stabilised its Gen3 platform, which delivers improved product quality, stronger unit economics, and greater differentiation across the portfolio. Several future products based on this architecture are already in advanced stages of development and are expected to require limited incremental R&D investment. These products will be introduced in a sequenced manner as the business continues to stabilise.

In light of the significant progress achieved in the Company's technology roadmap, management believes that a substantial portion of the core R&D investments required to establish the Company's technology platforms has already been undertaken. Accordingly, part of the capital previously allocated toward R&D can now be redeployed more efficiently to support the Company's near-term priorities. While the Company will continue to invest in R&D in the long term to sustain innovation and product leadership, this calibrated reallocation of capital is expected to enhance liquidity in the near term. In this context, management proposes to reallocate INR 575.00 Crores of IPO Proceeds earmarked for Object 3 (Investment into research and product development).

Rationale to reallocate funds to Object 4 (*Expenditure to be incurred for organic growth initiatives*)

The Company has undertaken a strategic recalibration of its retail footprint, operating model and cost structure to align with a more sustainable steady-state of operations. As part of this exercise, the Company has optimised elements of its distribution network, strengthened service capabilities, and implemented structural cost efficiencies across manufacturing, retail, service and corporate functions. In parallel, continued focus on vertical integration, product platform efficiencies and supply chain optimisation has enabled the Company to deliver industry-leading gross margins while improving unit economics across its product portfolio. These initiatives have resulted in a materially leaner and more efficient operating cost structure while preserving the Company's core capabilities and growth platform.

Consequently, the Company's operations are moving towards achieving breakeven during the Fiscal Year 2027. Therefore, a limited amount of incremental capital is required under this object for the auto business to support targeted operations which will enhance operational efficiencies across.

Accordingly, the management proposes to allocate INR 100 Crores of additional funds towards Object 4 (*Expenditure to be incurred for organic growth initiatives*) for use in connection with the sub-head of auto business. Please refer to the 8th AGM notice and explanatory statement for further details relating to Object 4 (*Expenditure to be incurred for organic growth initiatives*) in relation to the sub-head of auto business.

Rationale to reallocate funds to Object 6 (*Repayment or prepayment, in full or part, of the indebtedness incurred the Company and / or its subsidiaries*)

The Company and/or its subsidiaries have entered into financing arrangements with banks and financial institutions, collectively amounting to approximately INR 2,602 Crores outstanding as at March 11, 2026.

The management proposes to utilise INR 475.00 Crores towards repayment/ prepayment, of the loans/ facilities/ non-convertible debentures (NCDs) (including interest and Debt Service Reserve Account (DSRA) requirements) obtained from banks and financial institutions by the Company and/ or its subsidiaries. The repayment/ prepayment will help reduce our outstanding indebtedness, assist us in maintaining a favourable debt-equity ratio and enable utilisation of some additional amount for further investment in business growth and expansion. In addition, we believe that since our debt-equity ratio will improve, it will enable us to raise further resources at competitive rates and additional funds/ capital in the future to fund potential business development opportunities and plans to grow and expand our business in the future.

The management believes that the proposed variation will enable optimal utilisation of the IPO Proceeds, strengthen the Company's balance sheet and improve earnings and cash flows, thereby contributing to long-term shareholder value creation.

4) **Effect of the proposed variation / alteration on the financial position of the company:**

With the proposed variation, the Company intends to reduce indebtedness and invest in organic growth opportunities, which will enable the Company to scale and consolidate its position in the market. Further, the overall consolidated earnings and cash flow of the Company is expected to improve in the long term. The management of the Company is of the view that the proposed variation will ensure optimum utilisation of IPO Proceeds and maximize shareholders' wealth.

5) **Major Risk factors pertaining to the new Objects:**

All statements contained in this explanatory statement that are not statements of historical fact, constitute "forward-looking statements". All statements regarding our expected financial condition and results of operations, business, plans and prospects are forward-looking statements. Similarly, statements that describe our strategies, objectives, plans or goals are also forward-looking statements. All such statements are based on our current plans, estimates, presumptions and expectations and are subject to risks, uncertainties and assumptions such as pace of EV adoption, competitive intensity and others, that could cause actual results to differ materially from those contemplated by the relevant statements, including, tax and regulatory changes, our ability to successfully implement our strategy, technological changes, our exposure to market risks and general economic and political conditions.

The proposed variation/ reallocation may also be subject to various risks and uncertainties and may require necessary approvals and consents under applicable law, such as from the board of directors of the Company and/ or its subsidiaries under Companies Act, 2013 or other applicable laws, and under applicable contracts such as financing arrangements, and will be subject to the terms thereof.

In case any such approvals or consents as outlined in the paragraph above are not obtained or are delayed, this may adversely impact or delay the implementation of the proposed variation/ reallocation, including the proposed timelines.

The actual benefits realised from such repayment/ prepayment may vary depending on a number of factors, including changes in interest rate environments, future borrowing requirements, refinancing arrangements and overall business performance of the Company. If the anticipated reduction in finance costs or improvement in financial metrics does not materialise to the extent expected, the Company may not realise the anticipated improvement in earnings or cash flows.

Following the proposed variation, the Company may need to rely on internal accruals, future borrowings or equity financing to support R&D initiatives. There can be no assurance that sufficient internal accruals will be generated or that external financing will be available on acceptable terms when required. Any constraints in funding may affect the scale or timing of investments in R&D initiatives as well as the timing of new product launches.

The proposed variation will ease the additional burden on finance plans and internal accruals of the Company. However, any unforeseen economic, market, business conditions or any other conditions beyond the control of the management may lead to escalation in costs, impact on the working capital position of the Company and this may affect the financial condition of the Company.

6) **Names of Directors who voted against the proposed variation/alteration:**

None of the Directors have voted against the proposed variation.

Any interested person may obtain the copy of the special resolution along with the explanatory statement free of charge at the Registered Office of the Company at Wing C, Prestige RMZ Startech, Hosur Road, Municipal Ward No.67, Municipal No. 140, Koramangala VI Bk, Bangalore-560095 Karnataka, India or visit the website of the Company at www.olaelectric.com for the same.

For Ola Electric Mobility Limited
Sd/-
Deepak Rastogi
Chief Financial Officer

Place: Bangalore
Date: March 24, 2026

CONCEPT



ಆಂಧ್ರಪ್ರದೇಶದ ರಾಜ್ಯಪಾಲರಾದ ಎಸ್.ಅಬ್ದುಲ್ ನಜೀರ್ ಅವರು ಚಿಕ್ಕಪೇಟೆ ಕ್ಷೇತ್ರದ ಕಾಂಗ್ರೆಸ್ ನಾಯಕ ಕೆಜಿಎಫ್ ಬಾಬು ಅವರ ನಿವಾಸಕ್ಕೆ ಭೇಟಿ ನೀಡಿ, ರಂಜಾನ್ ಹಬ್ಬದ ಪ್ರಯುಕ್ತ ಶುಭಾಶಯ ತಿಳಿಸಿದರು. ಅಬ್ದುಲ್ ನಜೀರ್ ಅವರು ಕರ್ನಾಟಕದವರಾಗಿದ್ದು, ಈ ಹಿಂದೆ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾಗಿ ಕಾರ್ಯನಿರ್ವಹಿಸಿದ್ದರು.

ಸಂಶೋಧಕರಿಗೆ 4.91 ಕೋಟಿ ರು. ವಂಚನೆ

ಬೆಂಗಳೂರು: ಹಿರಿಯ ಸಂಶೋಧಕನನ್ನು ಡಿಜಿಟಲ್ ಅರೆಸ್ಟ್ ಮಾಡಿದ ಸೈಬರ್ ವಂಚಕರು 4.91 ಕೋಟಿ ರು.ದೋಚಿರುವ ಪ್ರಕರಣ ಬೆಳಕಿಗೆ ಬಂದಿದೆ.

ಹಣ ಕಳೆದುಕೊಂಡಿರುವ 94 ವರ್ಷದ ಸಂಶೋಧಕ ಮಾರ್ಚ್ 8ರಂದು ದೂರು ನೀಡಿದ್ದು, ಕೇಂದ್ರ ವಿಭಾಗದ ಸೈಬರ್ ಕ್ರೈಮ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಗಳೂರಿನಲ್ಲಿ ಕಳೆದ ಎರಡು ತಿಂಗಳಲ್ಲಿ ಈ ರೀತಿ ಹಿರಿಯ ನಾಗರಿಕರನ್ನು ಗುರಿಯಾಗಿಸಿಕೊಂಡು ವಂಚಿಸಿರುವ 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಶೋಕ ನಗರ ಠಾಣಾ ವ್ಯಾಪ್ತಿಯ ವಿಕ್ಟೋರಿಯಾ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರಲ್ಲಿ ಪತ್ನಿಯೊಂದಿಗೆ ದೂರುದಾರರು ನೆಲೆಸಿದ್ದರು. ಕಳೆದ ಡಿಸೆಂಬರ್ 2ರಂದು ದೂರುದಾರರ ಮನೆಯ ಲ್ಯಾಂಡ್ ಲೈನ್ ಫೋನ್‌ಗೆ ಕರೆ ಮಾಡಿದ್ದ ವಂಚಕ, ನಿಮ್ಮ ವಿರುದ್ಧ ಬಳ್ಳಾರಿ ಪೊಲೀಸ್ ಠಾಣೆಯಲ್ಲಿ ಮಾನವ ಕಳ್ಳ ಸಾಗಣೆ ಸಂಬಂಧ ಪ್ರಕರಣ ದಾಖಲಾಗಿದ್ದು, ಇನ್‌ಸ್ಪೆಕ್ಟರ್ ಕರೆ ಮಾಡುತ್ತಾರೆ ಎಂದು ಹೇಳಿ ಕರೆ ಸ್ಥಗಿತಗೊಳಿಸಿದ್ದ. ನಂತರ, ಸಂದೀಪ್ ರಾವ್ ಹೆಸರಿನ ಮತ್ತೊಬ್ಬ ವ್ಯಕ್ತಿ, ದೂರುದಾರರಿಗೆ ಕರೆ ಮಾಡಿ, ನಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು ಆಧಾರ್ ಕಾರ್ಡ್ ಪ್ರತಿಯನ್ನು ವಾಟ್ಸಾಪ್‌ನಲ್ಲಿ ಕಳುಹಿಸುವಂತೆ ಸೂಚಿಸಿದ್ದ.ಇದಾದ ಬಳಿಕ ಪ್ರಕರಣ ದಾಖಲಾಗಿರುವಂತೆ ನಕಲಿ ಎಫ್ ಐಆರ್ ಪ್ರತಿ ಕಳುಹಿಸಿದ್ದ ವಂಚಕರು ಬೇರೆ ಬೇರೆ ಮೊಬೈಲ್ ಸಂಖ್ಯೆಗಳಿಂದ ವಿಡಿಯೋ ಕರೆ ಮಾಡಿದ್ದಾರೆ. ಬಳಿಕ 2025ರ ಡಿಸೆಂಬರ್ 17 ರಿಂದ 2026ರ ಫೆಬ್ರವರಿ 23ರ ನಡುವೆ ವಿಚಾರಣೆ ಸೋಗಿನಲ್ಲಿ ಹಂತ ಹಂತವಾಗಿ 4.91 ಕೋಟಿ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅದಾದ ಮೇಲೂ ವಂಚಕರು ಇನ್ನೂ ಹೆಚ್ಚಿನ ಹಣಕ್ಕೆ ಬೇಡಿಕೆಯಿಡಲಾರಂಭಿಸಿದಾಗ ಅನುಮಾನಗೊಂಡ ದೂರುದಾರರು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ. ದೂರುದಾರರು ಆರ್‌ಟಿಜಿಎಸ್ ಮೂಲಕ ಹಣ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ. ಹಣ ವರ್ಗಾವಣೆ ಆಗಿರುವ ಖಾತೆಗಳು ನಕಲಿ (ಮ್ಯೂಲ್ ಅಕೌಂಟ್) ಎಂಬುದು ಪತ್ತೆಯಾಗಿದೆ. ಖಾತೆಗಳ ವಾರಸುದಾರರನ್ನ ಪತ್ತೆ ಹಚ್ಚುವ ಕೆಲಸ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್‌ಪಿಜಿ: ಮಧ್ಯಪ್ರವೇಶಕ್ಕೆ ಹೈ ನಕಾರ

ಬೆಂಗಳೂರು: ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ಸರಿಪಡಿಸಲು ಕೇಂದ್ರ ಸರಕಾರಕ್ಕೆ ನಿರ್ದೇಶನ ಕೋರಿ ಬೆಂಗಳೂರು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಲು ಹೈಕೋರ್ಟ್ ಸೋಮವಾರ ನಿರಾಕರಿಸಿತು.

ಹಾಲಿ ವಿಚಾರವನ್ನು ಸರಕಾರಕ್ಕೆ ಬಿಡುವುದು ಒಳಿತು ಎಂಬ ಕೇಂದ್ರ ಸರಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದವನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿತು.ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ಸರಕಾರವು ಶಕ್ತಿಮೀರಿ ಕೆಲಸ ಮಾಡುತ್ತಿದೆ. ಇದನ್ನು ನ್ಯಾಯಾಂಗ ಪರಿಶೀಲನೆಗೆ ಒಳಪಡಿಸಲಾಗದು. ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯಗಳು ಈ ವಿಚಾರದಲ್ಲಿ ಭಾಗಿಯಾಗಬಾರದು. ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದಿತು.

ಇದಕ್ಕೂ ಮುನ್ನ, ತುಷಾರ್ ಮೆಹ್ತಾ ಅವರು ಪರಿಸ್ಥಿತಿ ಬದಲಾಗುತ್ತಿದ್ದು, ಭಾರತದಲ್ಲಿ ಎಲ್‌ಪಿಜಿ ಪೂರೈಕೆ ವ್ಯತ್ಯಯ ಕಡಿಮೆ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ನಮ್ಮ ನಿಯಂತ್ರಣದಲ್ಲಿಲ್ಲದ ಕೆಲವು ಬೆಳವಣಿಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗದ್ದು, ಎಲ್ಪಿಜಿ ಪೂರೈಕೆಯಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಭಾರತ ಸರಕಾರ ಕೆಲಸ ಮಾಡುತ್ತಿದೆ. ಈ ವಿಚಾರವನ್ನು ಕಾರ್ಯಾಂಗಕ್ಕೆ ಬಿಡಬೇಕು. ಪ್ರತಿದಿನ ಪರಿಸ್ಥಿತಿ ಬದಲಾಗುತ್ತಿದ್ದು, ಆದ್ಯತೆ ಬದಲಾಗಬೇಕಿದೆ. ಹೋಟೆಲ್‌ಗಳಿಗೆ ಎಲ್ಪಿಜಿ ಪೂರೈಸಬೇಕೋ ಅಥವಾ ಮನೆಗಳಿಗೋ ಎಂಬುದು ನಮಗೆ ತಿಳಿಯದಾಗಿದೆ. ಹಲವು ವಿಚಾರಗಳು ನಮ್ಮ ನಿಯಂತ್ರಣದಲ್ಲಿಲ್ಲ ಎಂದರು. ಆಗ ಪೀಠವು ಹೋಟೆಲ್‌ಗಳಿಗೆ ಶುಭ ಸುದ್ದಿ ಇದೆಯೇ? ಹೆಚ್ಚುವರಿ ಸೂಚನೆ ಏನಾದರೂ ಇದೆಯೇ ಎಂದು ಕೇಳಿತು. ಇದಕ್ಕೆ ಮೆಹ್ತಾ ಅವರು ಸದ್ಯಕ್ಕೆ ಇಲ್ಲ ಎಂದರು.

ಮಹಿಳೆಯ ಕೊಲೆ: ಕಸದ ರಾಶಿಗೆ ಶವ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯೊಬ್ಬರ ಬರ್ಬರ ಕೊಲೆ ಮಾಡಲಾಗಿದೆ. ಹಂತಕರು ಮಹಿಳೆಯನ್ನು ಅತ್ಯಂತ ಕ್ರೂರವಾಗಿ ಕೊಲೆ ಮಾಡಿ, ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಮೃತದೇಹವನ್ನು ರಸ್ತೆ ಪಕ್ಕದ ಕಸದ ರಾಶಿಯಲ್ಲಿ ಎಸೆದು ಹೋಗಿರುವ ಘಟನೆ ಸೋಮವಾರ ಮುಂಜಾನೆ ಬೆಳಕಿಗೆ ಬಂದಿದೆ.ಕೆಂಗೇರಿಯ ಮುಖ್ಯ ರಸ್ತೆಯಲ್ಲಿರುವ ಮೈಲಸಂದ್ರ ಬಸ್ ನಿಲ್ದಾಣದ ಹಿಂಭಾಗದಲ್ಲಿ ಈ ಭೀಕರ ಘಟನೆ ಸಂಭವಿಸಿದೆ. ಮಹದೇಶ್ವರ ಬಡಾವಣೆಯ ನಿವಾಸಿ ಕೆಂಪಮ್ಮ (45) ಎಂಬುವರೇ ಕೊಲೆಯಾದ ದುರ್ದೈವಿ. ಸೋಮವಾರ ಮುಂಜಾನೆ ರಸ್ತೆಯಲ್ಲಿ ಓಡಾಡುತ್ತಿದ್ದ ಸ್ಥಳೀಯರು ಕಸದ ರಾಶಿಯಲ್ಲಿ ಮೃತದೇಹ ಇರುವುದನ್ನು ಗಮನಿಸಿ ತಕ್ಷಣ 112 ಸಹಾಯವಾಣಿಗೆ ಮಾಹಿತಿ ನೀಡಿದರು. ಕೆಲವೇ ಕ್ಷಣಗಳಲ್ಲಿ ಪೊಲೀಸರು ಸ್ಥಳಕ್ಕೆ ಆಗಮಿಸಿ ತನಿಖೆ ಆರಂಭಿಸಿದರು.

ಪ್ರಾಥಮಿಕ ತನಿಖೆಯ ಪ್ರಕಾರ, ಮಹಿಳೆಯ ತಲೆಗೆ ಯಾವುದೋ ಭಾರವಾದ ವಸ್ತುವಿನಿಂದ ಬಲವಾಗಿ ಹೊಡೆದು ಕೊಲೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ

ಸಿ.ಮಿಸ್.ನಂ. 914/2025

ಅರ್ಜಿದಾರರು: ಶ್ರೀ. ಮುತ್ತಯ್ಯ ಬಿನ್ ಲೇಟ್ ಚಿಕ್ಕಲಿಂಗಯ್ಯ ವಯಸ್ಸು 75 ವರ್ಷ ವಾಸ: ಮುತ್ತರಾಯನಪುರ ಗ್ರಾಮ, ಹಾರೋಹಳ್ಳಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಮತ್ತೊಬ್ಬರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ಹಾರೋಹಳ್ಳಿ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಹಾರೋಹಳ್ಳಿ ವೃತ್ತ ಹಾರೋಹಳ್ಳಿ ತಾಲ್ಲೂಕು ರಾಮನಗರ ಜಿಲ್ಲೆ, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ. ಚಿಕ್ಕಲಿಂಗಯ್ಯ ಬಿನ್ ಲೇಟ್ ಗಿರಿದಾಸಯ್ಯ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಕಗ್ಗಲಹಳ್ಳಿ ಗ್ರಾಮದಲ್ಲಿ ದಿನಾಂಕ:20/02.2015 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ: 02/05/2026 ಬೆಳಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2026ರ ಮಾರ್ಚ್ 17ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಶ್ರೀಕಂಠ.ಎನ್ ಮತ್ತು ವಿದ್ಯಾಶ್ರೀ ಜೆ.
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 10/03/2026

IN THE COURT OF THE HON'BLE XXVII ADDITIONAL CITY CIVIL AND SESSIONS JUDGE, AT BENGALURU (CCH-9)

O. S. No. 8071 OF 2024

BETWEEN:State Bank of India Retail Assets Central Processing Centre (RACPC), Branch Code 18994 At Sy No.5/1, "Prestige Star" Next to Mother Dairy, Yelahanka, BENGALURU-560064 Rept., by its Chief Manager, Mr. Amrendra **...PLAINTIFF**

AND : Mr. ALLEN JOSEPH **...DEFENDANT**

Notice to the Defendant under Order V Rule 20(1-A) Of CPC:

To : Mr Allen Joseph, R/at No.001, First Floor, PVR Elegance, Chikkabanasawadi Main Road, OMBR Layout, Bangalore -560043.

The plaintiff has instituted the above suit against you for the recovery of a total Sum of Rs.9,71,363/- (Rupees Nine Lakh Seventy-One Thousand Three Hundred Sixty-Three Only) as on 16.12.2022 along with Court costs and interest at 8% P.A. thereon till its realization. Therefore, you are hereby summoned to appear before this Hon'ble Court either in person or through a duly instructed advocate on **10.04.2026 at 11.A.M.** to answer the claim of the plaintiff. On your failure to appear before the Hon'ble Court on the aforesaid date the case will be decided EXPARTE.

Given under my hand and seal of the court on 18-03-2026, Bengaluru.

By Order of the Court
Sd/- Senior Sheristedar
City Civil Court, Bangalore

Advocate for Plaintiff : Mr. G.M. RUDRASWAMY, Office at No.27, Akshya Complex, 2nd Cross, First Floor, Nagappa Street, Palace Guttahalli, BENGALURU -560003. Phone : 99868 33635

ಕೆಸಿ ವ್ಯಾಲಿ ಯೋಜನೆ ಅಡಿಯಲ್ಲಿ 143 ಕೆರೆಗಳು, ಎಚ್‌ಎನ್ ವ್ಯಾಲಿ ಅಡಿಯಲ್ಲಿ 65 ಕೆರೆಗಳಿಗೆ ಮರುಜೀವ

ಜಲ ಸುಸ್ಥಿರತೆಗೆ ಸರಕಾರ ಬದ್ಧ: ಬೋಸರಾಜು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆರೆಗಳ ಪುನರುಜ್ಜೀವನದ ಜತೆಯಲ್ಲೇ ಅಂತರ್ಜಲ ಹೆಚ್ಚಳಕ್ಕೆ ಹೆಚ್ಚಿನ ಒತ್ತು ನೀಡುವ ಮೂಲಕ ರಾಜ್ಯದ ಜಲ ಸುಸ್ಥಿರತೆಗೆ ಸರಕಾರ ಬದ್ಧವಾಗಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ತಿಳಿಸಿದರು.

ವಿಶ್ವ ಜಲ ದಿನದ ಅಂಗವಾಗಿ ಆಯೋಜಿಸಿದ್ದ ಎರಡು ದಿನದ ತಾಂತ್ರಿಕ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕರ್ನಾಟಕ ಸರಕಾರ ಕೆಸಿ ವ್ಯಾಲಿ, ಎಚ್‌ಎನ್ ವ್ಯಾಲಿ ಮತ್ತು ವೃಷಭಾವತಿ ವ್ಯಾಲಿ ಯೋಜನೆಗಳ ಮೂಲಕ ಜಲ ಸುಸ್ಥಿರತೆಯಲ್ಲಿ ವಿನೂತನ ಹೆಜ್ಜೆ ಇಡುತ್ತಿದೆ. ಈಗಾಗಲೇ ಕೆಸಿ ವ್ಯಾಲಿ ಯೋಜನೆ ಅಡಿಯಲ್ಲಿ 143 ಕೆರೆಗಳು ಹಾಗೂ ಎಚ್‌ಎನ್‌ವ್ಯಾಲಿ ಅಡಿಯಲ್ಲಿ 65 ಕೆರೆಗಳಿಗೆ ಮರುಜೀವ ನೀಡಲಾಗಿದ್ದು, ಬಯಲು ಸೀಮೆಯ ಒಟ್ಟು 700 ಕೆರೆಗಳನ್ನು ಪುನರುಜ್ಜೀವನಗೊಳಿಸುವ ಗುರಿ ಹೊಂದಲಾಗಿದೆ. ಈ ಯಶಸ್ಸಿನ ಪ್ರೇರಣೆಯಿಂದ, ಬರಪೀಡಿತ ಜಿಲ್ಲೆಗಳಲ್ಲಿ ಅಂತರ್ಜಲ ಹೆಚ್ಚಿಸಲು 1081 ಕೋಟಿ ರು.ವೆಚ್ಚದಲ್ಲಿ ಕೈಗೊಳ್ಳಲಾದ ವೃಷಭಾವತಿ ವ್ಯಾಲಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ 472 ಏತ ನೀರಾವರಿ ಯೋಜನೆಗಳ ಮೂಲಕ 1,318 ಕೆರೆಗಳನ್ನು ತುಂಬಿಸಲಾಗುತ್ತಿದೆ. ಜತೆಗೆ, 8000 ಕ್ಕೂ ಹೆಚ್ಚು ಚೆಕ್ ಡ್ಯಾಂಗಳು, ಬ್ರಿಡ್ಜ್-ಕಂ-ಬ್ಯಾರೇಜ್‌ಗಳು ಮತ್ತು ವೆಂಟೆಡ್ ಡ್ಯಾಂಗಳ ನಿರ್ಮಾಣದ ಮೂಲಕ ರಾಜ್ಯವು ಸುಸ್ಥಿರ ಜಲ ಸಂಗ್ರಹಣಾ ವ್ಯವಸ್ಥೆಗಳನ್ನು ಸೃಷ್ಟಿಸುತ್ತಿದೆ. ಈ ಎಲ್ಲಾ ಯೋಜನೆಗಳಿಂದಾಗಿ ನಮ್ಮ ರಾಜ್ಯದ ಅಂತರ್ಜಲ ಮಟ್ಟದಲ್ಲಿ ಏರಿಕೆ ಕಂಡಿದೆ. ನಮ್ಮ ದೇಶ ಹಾಗೂ ರಾಜ್ಯದ ಅಭಿವೃದ್ಧಿಯಲ್ಲಿ ಇಂಜಿನೀಯರ್‌ಗಳ ಪಾತ್ರ ಹಿರಿದಾಗಿದೆ. ಅವರ ತಾಂತ್ರಿಕ ಪರಿಣಿತಿಯಿಂದ ರಾಜ್ಯದಲ್ಲಿ ನೀರಿನ ಸದ್ಬಳಕೆ ಸಾಧ್ಯವಾಗುತ್ತಿದೆ ಎಂದರು. ಈ ವೇಳೆ ಉಪಮುಖ್ಯಮಂತ್ರಿ ತಾಂತ್ರಿಕ ಸಲಹೆಗಾರ ಕೆ. ಜಯಪ್ರಕಾಶ್, ಕೆಎಸ್‌ಸಿ ಅಧ್ಯಕ್ಷ ಡಾ. ಎಚ್.ಕೆ. ರಾಮರಾಜು, ಐಡಬ್ಲ್ಯೂಡಬ್ಲ್ಯೂಎ ಅಧ್ಯಕ್ಷ ಬಿ. ಶ್ರೀನಿವಾಸ ರೆಡ್ಡಿ, ಐಐಎಸ್‌ಸಿ ಪ್ರಾಧ್ಯಾಪಕ ಡಾ. ಲಕ್ಷ್ಮೀನಾರಾಯಣ ರಾವ್, ಡಿಎಸ್‌ಐ ಕಾರ್ಯದರ್ಶಿ ಗಾಳಿಸ್ವಾಮಿ, ಡಿಬಿಐಟಿ ಉಪಾಧ್ಯಕ್ಷ ಮಂಜುನಾಥ್, ಪ್ರಾಂಶು ಪಾಲ ಡಾ. ಬಿ.ಎಸ್.ನಾಗಭೂಷಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ಜಲ ದಿನದ ಅಂಗವಾಗಿ ಆಯೋಜಿಸಿದ್ದ ತಾಂತ್ರಿಕ ವಿಚಾರ ಸಂಕಿರಣದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಸಚಿವ ಭೋಸರಾಜು ಕರ್ನಾಟಕದ ನದಿಗಳು ಹಾಗೂ ವೈವಿಧ್ಯ ಎಂಬ ಪುಸ್ತಕ ಬಿಡುಗಡೆ ಮಾಡಿದರು.

> ಡೇಟಾ ಅನಾಲಿಟಿಕ್ಸ್, ರಿಯಲ್- ಟೈಮ್ ಮಾನಿಟರಿಂಗ್ ಮತ್ತು ಅತ್ಯಾಧುನಿಕ ಬಾಹ್ಯಾಕಾಶ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ, ರಾಜ್ಯವು ಅಂತರ್ಜಲ ನಿರ್ವಹಣೆಯಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಿದೆ. ಇದರಿಂದ ನಿಖರ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ. ಇದಲ್ಲದೆ, ಕೋಲಾರದ ಎಸ್. ಅಗ್ರಹಾರದಲ್ಲಿ 100 ಎಂಡಬ್ಲ್ಯೂ ಸಾಮರ್ಥ್ಯದ ತೇಲುವ ಸೌರ ಯೋಜನೆಯನ್ನು ಪ್ರಸ್ತಾಪಿಸಲಾಗಿದ್ದು, ನವೀಕರಿಸಬಹುದಾದ ವಿದ್ಯುತ್ ಶಕ್ತಿಯನ್ನು ಇಲ್ಲಿ ಉತ್ಪಾದಿಸಲಾಗುವುದು.
>
> -ಎನ್.ಎಸ್. ಭೋಸರಾಜು, ಸಣ್ಣ ನೀರಾವರಿ ಇಲಾಖೆ ಸಚಿವ

ತೆರಿಗೆ ಬಾಕಿಯಿರುವ ಆಸ್ತಿ ಸ್ವಾಧೀನ ಸಿದ್ಧತೆ

ಬೆಂಗಳೂರು: ದೀರ್ಘಕಾಲದ ಆಸ್ತಿ ತೆರಿಗೆ ಬಾಕಿಯಿರುವ ಆಸ್ತಿ ತೆರಿಗೆ ವಸೂಲಾತಿಗೆ ನಗರ ಪಾಲಿಕೆಗಳು ಮುಂದಾಗಿದ್ದು, ಕೊನೆಯ ಕ್ರಮವಾಗಿ ಆಸ್ತಿದಾರರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿವೆ.

ಬೇಡಿಕೆ ನೋಟಿಸ್ ಜಾರಿ, ಆಸ್ತಿ ಅಟಾಚ್‌ಮೆಂಟ್ ಹಾಗೂ ಸಾರ್ವಜನಿಕ ಹರಾಜು ಮೂಲಕ ವಸೂಲಾತಿ ಸೇರಿದಂತೆ ಕಾನೂನುಬದ್ಧ ಕ್ರಮಗಳನ್ನು ಹಲವು ಬಾರಿ ಕೈಗೊಂಡಿದ್ದರೂ, ಕೆಲವು ಪ್ರಕರಣಗಳಲ್ಲಿ ಬಾಕಿ ಪಾವತಿ ಆಗದೇ ಇರುವುದರಿಂದ ಹಾಗೂ ಹರಾಜು ಪ್ರಕ್ರಿಯೆಯಲ್ಲಿ ಯಾರೂ ಭಾಗವಹಿಸದಿರುವುದರಿಂದ ಸಮಸ್ಯೆಗಳು ಬಗೆಹರಿಯದೆ ಉಳಿದಿವೆ. ಇಂತಹ ಸಂದರ್ಭಗಳಲ್ಲಿ, ಕಾನೂನುಬದ್ಧ ಎಲ್ಲಾ ವಸೂಲಾತಿ ಕ್ರಮಗಳು ಪೂರ್ಣಗೊಂಡು ಹರಾಜು ಪ್ರಕ್ರಿಯೆಗಳು ವಿಫಲವಾದಲ್ಲಿ, ನಗರ ಪಾಲಿಕೆಗಳು ಈಗ ಸೂಚಿಸಲಾದ ಅಧಿಸೂಚಿತ ಬೆಲೆಗೆ ಆಸ್ತಿಗಳನ್ನು ಸ್ವತಃ ಖರೀದಿಸುವ ಕ್ರಮ ಕೈಗೊಳ್ಳಲಿವೆ.

ನಾಗರಿಕರು ತಮ್ಮ ಆಸ್ತಿ ತೆರಿಗೆ ಬಾಕಿಗಳನ್ನು ಸಮಯಕ್ಕೆ ಸರಿಯಾಗಿ ಪಾವತಿಸಿ, ಬಲವಂತದ ವಸೂಲಾತಿ ಕ್ರಮಗಳನ್ನು ತಪ್ಪಿಸಿಕೊಳ್ಳುವಂತೆ ಕೋರಲಾಗಿದೆ. ಈ ಕ್ರಮವು ಹಣಕಾಸಿನ ಶಿಸ್ತನ್ನು ಕಾಪಾಡಲು, ನಗರ ಪಾಲಿಕೆಯ ಆದಾಯವನ್ನು ಹೆಚ್ಚಿಸಲು ಹಾಗೂ ತೆರಿಗೆ ಪಾವತಿಸುವವರ ನಡುವೆ ಸಮಾನತೆಯನ್ನು ಸಾಧಿಸಲು ಉದ್ದೇಶಿತವಾಗಿದೆ. ನಗರ ಪಾಲಿಕೆಗಳು ಪಾರದರ್ಶಕ, ಕಾನೂನುಬದ್ಧ ಹಾಗೂ ನಾಗರಿಕ ಕೇಂದ್ರಿತ ಆಡಳಿತಕ್ಕೆ ಬದ್ಧವಾಗಿದ್ದು, ದೀರ್ಘಕಾಲದಿಂದ ಬಾಕಿಯಿರುವ ತೆರಿಗೆ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲು ಕ್ರಮ ಕೈಗೊಳ್ಳುತ್ತಿವೆ.

ಸಮಾಚಾರ ಸಣ್ಣದಲ್ಲ

ನೆಲಮಂಗಲದ ಐದು ಹಳ್ಳಿಗೆ ನೀರಿನ ಭದ್ರತೆ

ಬೆಂಗಳೂರು: ಹೈನೆಕೆನ್ ಸಮೂಹದ ಅಂಗಸಂಸ್ಥೆಯಾದ ಯುನೈಟೆಡ್ ಬ್ರೀವರೀಸ್ ಲಿಮಿಟೆಡ್ (ಯುಬಿಎಲ್) ಸಂಸ್ಥೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಮಲ್ಲರಬಾಣವಾಡಿ, ಹಂಚಿಪುರ, ಕೊಡಪ್ಪನಹಳ್ಳಿ, ಬೈರೇಗೌಡನಹಳ್ಳಿ ಮತ್ತು ವರದನಾಯಕನಹಳ್ಳಿ ಎಂಬ 5 ಗ್ರಾಮಗಳಲ್ಲಿ ಪ್ರಾಜೆಕ್ಟ್ ಜಲ ಸಂಚಯದ 3ನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಈ ಮೂಲಕ ಐದು ಗ್ರಾಮಗಳಿಗೆ ನೀರಿನ ಭದ್ರತೆ ಒದಗಿಸಿದೆ. ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಎಸ್ ಎಮ್ ಸೆಹಗಲ್ ಫೌಂಡೇಶನ್ ಸಹಯೋಗದೊಂದಿಗೆ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಯೋಜನೆಯ ಭಾಗವಾಗಿ ಗ್ರಾಮದ ಕೆರೆಯನ್ನು ಪುನಶ್ಚೇತನಗೊಳಿಸಲಾಗಿದ್ದು, ಮಳೆನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ವಿಶೇಷವೆಂದರೆ, ಹೂಳೆತ್ತುವ ಸಂದರ್ಭದಲ್ಲಿ ಸಂಗ್ರಹವಾದ ಮಣ್ಣನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಸ್ಥಳೀಯ ರೈತರಿಗೆ ಉಚಿತವಾಗಿ ನೀಡಲಾಗಿದೆ. ಇದು ಕೃಷಿ ಇಳುವರಿ ಹೆಚ್ಚಿಸಲು ಸಹಕಾರಿಯಾಗಲಿದೆ ರಂದು ಫೌಂಡೇಶನ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಂಜಲಿ ಮಖಿಜಾ ತಿಳಿಸಿದ್ದಾರೆ.

ಬೇರೆ ವಾರ್ಡ್‌ಗಳಲಿ ಹೆಸರು: ದೂರು ಸಲ್ಲಿಸಿ

ಬೆಂಗಳೂರು: ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ, ಜಿಬಿಎಯ 5 ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆ-2026ರ ಸಂಬಂಧ ವಾರ್ಡ್ ವಾರು ಪರಿಷ್ಕೃತ ಕರಡು ಮತದಾರರ ಪಟ್ಟಿಯನ್ನು ಮಾ.9ರಂದು ಪ್ರಕಟಿಸಲಾಗಿದೆ. ಕರಡು ಮತದಾರರ ಪಟ್ಟಿಯ ಪ್ರತಿಯನ್ನು ಎಲ್ಲಾ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಮತ್ತು ವಾರ್ಡ್ ಕಚೇರಿಯಲ್ಲೂ ಮತದಾರರ ವೀಕ್ಷಣೆಗೆ ಲಭ್ಯವಿದ್ದು, ದೂರು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯನ್ನು ಮಾ.30ರವರೆಗೆ ವಿಸ್ತರಿಸಲಾಗಿದೆ. ಅಂತಿಮ ಮತದಾರರ ಪಟ್ಟಿ ಪ್ರಕಟಣೆ ದಿನಾಂಕವನ್ನು ಸಹ ಏ.6ರಿಂದ 18ಕ್ಕೆ ಮುಂದೂಡಲಾಗಿದೆ. ಜಿಬಿಎ ವೆಬ್‌ಸೈಟ್‌ನಲ್ಲೂ ಪಟ್ಟಿ ಲಭ್ಯವಿರುತ್ತದೆ. (https://gba.karnataka.gov.in/electoral2026). ಮತದಾರರು ತಮ್ಮ ಮಾಹಿತಿಯನ್ನು ಸರ್ಚ್ ಟೂಲ್ ಬೈ ನೇಮ್ ಆಪ್ಷನ್, ಸರ್ಚ್ ಬೈ ಎಪಿಕ್ ಆಪ್ಷನ್ ನಡಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಒಂದು ವೇಳೆ ಮತದಾರರು ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದರೂ ಕೂಡ ಹೆಸರುಗಳು ಬೇರೆ ಬೇರೆ ವಾರ್ಡ್‌ಗಳಲ್ಲಿ ನಮೂದಾಗಿದ್ದರೆ, ಅಂತಹ ಪ್ರಕರಣಗಳ ಕುರಿತು ದೂರನ್ನು ಸಂಬಂಧಪಟ್ಟ ನಗರ ಪಾಲಿಕೆ / ಮತದಾರರ ನೋಂದಣಾಧಿಕಾರಿಗಳ ಕಚೇರಿ / ವಾರ್ಡ್ ಕಚೇರಿಗಳಲ್ಲಿ ಸಲ್ಲಿಸಬಹುದು ಎಂದು ಜಿಬಿಎ ತಿಳಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕೊತ್ತನೂರಿನ ಆರ್‌ಬಿಐ ಬಡಾವಣೆಯ ಸರಕಾರಿ ಜಾಗ ಕಬಳಿಕೆ ಆರೋಪ

ಒತ್ತುವರಿ ತೆರವಿಗೆ ನಿವಾಸಿಗಳ ಸಂಘ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೊತ್ತನೂರು ಗ್ರಾಮದ ಆರ್‌ಬಿಐ ಬಡಾವಣೆಯಲ್ಲಿ ಜಿಬಿಎಗೆ ಸೇರಿದ ಜಾಗವನ್ನು ಕೆಲವು ಕಿಡಿಗೇಡಿಗಳು ಸುಳ್ಳು ದಾಖಲೆ ಸೃಷ್ಟಿಸಿ ತಮ್ಮ ಕಬಳಿಕೆ ಮಾಡುತ್ತಿರುವುದನ್ನು ಸರಕಾರ ತಕ್ಷಣ ತಡೆಯಬೇಕು ಎಂದು ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಆಗ್ರಹಿಸಿದೆ.

ಪಾರ್ಕ್‌ಗೆ ಸೇರಿದ ಜಾಗವನ್ನು ಕೆಲವು ವ್ಯಕ್ತಿಗಳು ಆಕ್ರಮವಾಗಿ ಕಬಳಿಕೆ ಮಾಡಿ ಅನಧಿಕೃತವಾಗಿ ಶೆಡ್ ನಿರ್ಮಾಣ ಮಾಡಿಕೊಂಡಿದ್ದಾರೆ. ಇದಕ್ಕೆ ಅನಧಿಕೃತವಾಗಿ ಜಿಬಿಎಯಿಂದ ಖಾತೆಯನ್ನು ಸಹ ಸೃಷ್ಟಿಸಿದ್ದಾರೆ. ಇದು ಸಾರ್ವಜನಿಕ ಆಸ್ತಿ ಎಂಬುದು ಸಾರ್ವಜನಿಕರಿಗೆ ಚೆನ್ನಾಗಿ ತಿಳಿದಿದ್ದು, ಕೆಲವು ಪ್ರಭಾವಿ ರಾಜಕೀಯ ವ್ಯಕ್ತಿಗಳ ಹೆಸರು ದುರುಪಯೋಗ ಮಾಡಿಕೊಂಡು ಈ ರೀತಿಯಲ್ಲಿ ಕಬಳಿಕೆ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಮೇಲು ನೋಟಕ್ಕೆ ಸರಕಾರಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡು ಬಂದಿದ್ದು, ರಾಜ್ಯ ಸರಕಾರ ಪರೋಕ್ಷವಾಗಿ ಸಾಥ್ ನೀಡುತ್ತಿದೆ ಎಂದು ಸಂಘದ ಪದಾಧಿಕಾರಿಗಳು ಆರೋಪಿಸಿದ್ದಾರೆ.

ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಸದಸ್ಯ ಉಮೇಶ್ ಮಾತನಾಡಿ, ಸರಕಾರಕ್ಕೆ ಬೇಕಿರುವ ಜಾಗವನ್ನು ಅನಧಿಕೃತರ ಹೆಸರಿಗೆ ಖಾತೆಯನ್ನು ಮಾಡಿಕೊಡಲಾಗಿದೆ. ಕಬ್ಜ ಮಾಡಿರುವ ಸ್ಥಳವನ್ನು ಜಿಬಿಎ ಕಾರ್ಯನಿರ್ವಾಹಕ ಅಭಿಯಂತರು ಕೂಡಲೇ ಕ್ರಮವಹಿಸಿ ಸಾರ್ವಜನಿಕರ ಹಿತಾಸಕ್ತಿಯಿಂದ ಸ್ಥಳವನ್ನು ಬಿಡಿಸಿಕೊಡಬೇಕು. ಅಲ್ಲದೆ, ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ. 2012ರಲ್ಲಿ ರಾಜ್ಯಪತ್ರದಲ್ಲಿ ಈ ಜಾಗವನ್ನು ಪಾರ್ಕ್ ಆಗಿ ನೋಂದಣಿ ಸಹ ಆಗಿದೆ. ಇದಾದಮೇಲೆ ಖಾಸಗಿ ವ್ಯಕ್ತಿಗಳು ಅತಿಕ್ರಮ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

ಜಿಬಿಎ ಜಾಗ ಒತ್ತುವರಿ ತೆರವುಗೊಳಿಸಲು ಕೊತ್ತನೂರು ಆರ್‌ಬಿಐ ಬಡಾವಣೆ ನಿವಾಸಿಗಳು ಆಗ್ರಹಿಸಿದರು.

ಮಕ್ಕಳಿಗೆ ಡಿಜಿಟಲ್ ಬಳಕೆ ಮಾರ್ಗಸೂಚಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾರ್ಥಿಗಳಿಗೆ ಫೋನ್ ಬಳಕೆ ನಿರ್ಬಂಧದ ಬಗ್ಗೆ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ನಿಮ್ಹಾನ್ಸ್‌ನಿಂದ ಡಿಜಿಟಲ್ ಬಳಕೆಯ ಪರಿಣಾಮ ಅನುಷ್ಠಾನ ಮಾರ್ಗಸೂಚಿ ಬಿಡುಗಡೆಯಾಗಿದೆ.

16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ ಹೇರುವ ವಿಷಯ ಚರ್ಚೆ ಇರುವ ಬೆನ್ನಲ್ಲೇ ಮಕ್ಕಳು ಡಿಜಿಟಲ್ ಬಳಕೆ ಬಗ್ಗೆ ನಿಮಾನ್ಸ್ ತಜ್ಞರ ತಂಡ ಅಧ್ಯಯನ ನಡೆಸಿದೆ. ಮಕ್ಕಳು ಡಿಜಿಟಲ್ ಬಳಕೆ ಹೇಗಿರಬೇಕು? ಡಿಜಿಟಲ್ ಬಳಕೆಯಲ್ಲಿ ಪೋಷಕರು, ಶಿಕ್ಷಕರು, ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಆರೋಗ್ಯ ಇಲಾಖೆ ಪಾತ್ರ ಹೇಗಿರಬೇಕು ಎಂದು ಅಧ್ಯಯನ ನಡೆಸಿ ವರದಿ ಸಿದ್ಧಮಾಡಿದೆ. 27 ಪುಟಗಳ ಒಳಗೊಂಡ ಅಧ್ಯಯನದ ವರದಿಯನ್ನು ನಿಮ್ಹಾನ್ಸ್ ಆರೋಗ್ಯ ಇಲಾಖೆಗೆ ಶಿಫಾರಸು ಮಾಡಿದೆ. ವಿದ್ಯಾರ್ಥಿಗಳಲ್ಲಿ ಜಾಗೃತಿ ಹಾಗೂ ಇನ್ಮುಂದೆ ಶಾಲೆಗಳಲ್ಲಿ ಕಡ್ಡಾಯ ಡಿಜಿಟಲ್ ವೆಲ್ನೆಸ್ ಕಮಿಟಿ ಇರಬೇಕು. ಪ್ರತಿ ಶಾಲೆಯಲ್ಲಿಯೂ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಗತಿ, ಫೋನ್ ಅಡಿಕ್ಷನ್ ಬಗ್ಗೆ ಗಮನ ಹರಿಸಲು ಒಬ್ಬ ಶಿಕ್ಷಕರಿಗೆ ತರಬೇತಿ ನೀಡಬೇಕು. ವಿದ್ಯಾರ್ಥಿಗಳ ಫೋನ್‌ಗಳಲ್ಲಿ ಆಡಿಯೋ ಮಾತ್ರ ಇರಬೇಕು. ಸಂಜೆ 7 ಗಂಟೆಯ ನಂತರ ಸಂಪೂರ್ಣ ಡೇಟಾ ಬಂದ್ ಸೇರಿದಂತೆ ಹಲವು ವಿಷಯಗಳು ಮಾರ್ಗಸೂಚಿಯಲ್ಲಿದೆ.

ವಿದ್ಯಾರ್ಥಿಗಳ ಡಿಜಿಟಲ್ ಬಳಕೆ ಹೇಗೆ?: ಹೆಲ್ತಿ ಸ್ಕ್ರೀನ್ ಟೈಂ ಪ್ರಾಕ್ಟಿಸ್ ಮಾಡಿಕೊಳ್ಳಬೇಕು. ಆನ್‌ಲೈನ್ ಭದ್ರತೆ ತಿಳಿದುಕೊಳ್ಳಬೇಕು. ಬೌದ್ಧಿಕ ಬೆಳವಣಿಗೆಗೆ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಬೇಕು. ಡಿಜಿಟಲ್ ಬಳಕೆಗೆ ಮುನ್ನ ಆನ್‌ಲೈನ್ ರಿಸ್ಕ್ ಸೈಬರ್ ಫ್ರಾಡ್ ಬಗ್ಗೆ ತಿಳಿದುಕೊಳ್ಳಬೇಕು. ಆಫ್‌ಲೈನ್ ಆ್ಯಕ್ಟಿವಿಟಿ ಅಳವಡಿಸಿಕೊಳ್ಳಬೇಕು. ಡಿಜಿಟಲ್ ಬಳಕೆಯ ಕಾರ್ಯಾಗಾರಗಳಲ್ಲಿ ಭಾಗಿಯಾಗಬೇಕು.

ಪೋಷಕರ ಪಾತ್ರ ಏನು?

- ಮಕ್ಕಳ ಸ್ಕ್ರೀನ್ ಟೈಂಗೆ ಸಮಯ ನಿಗದಿ ಮಾಡಬೇಕು.
- ಮಕ್ಕಳ ಡಿಜಿಟಲ್ ಬಳಕೆ ಬಗ್ಗೆ ನಿಗಾ ವಹಿಸಬೇಕು.
- ಡಿಜಿಟಲ್ ಬಳಕೆ ಬಿಟ್ಟು, ಕುಟುಂಬದ ಜತೆ ಸಮಯ ಕಳೆಯುವ ವಾತಾವರಣ ಸೃಷ್ಟಿಸಬೇಕು.
- ಆನ್‌ಲೈನ್ ಬಿಟ್ಟು ಧನಾತ್ಮಕ ಆಫ್‌ಲೈನ್ ಆ್ಯಕ್ಟಿವಿಟಿಗಳನ್ನು ಮಾಡಿಸಬೇಕು.

ವಿದ್ಯಾರ್ಥಿಗಳಿಗೆ ಸೈಬರ್ ಬುಲ್ಲಿಂಗ್ ಬಗ್ಗೆ ಜಾಗೃತಿ, ಸೈಬರ್ ಸಂಬಂಧಿ ಕಿರುಕುಳ ಬೆದರಿಕೆ ಬಂದಾಗ ಅದನ್ನು ಶಿಕ್ಷಕರ ಗಮನಕ್ಕೆ ತರುವಂತೆ ಪ್ರೋತ್ಸಾಹಿಸಬೇಕು. ಶಾಲೆಗಳು ಸೈಬರ್ ಕ್ರೈಂ ಪೊಲೀಸ್ ಠಾಣಾ ಮೂಲಕ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಬೇಕು. ಮೊಬೈಲ್ ಬಳಕೆಯಿಂದ ಹೊರತರಲು ಹೊರಾಂಗಣ ಕ್ರೀಡೆಗೆ ಒತ್ತು ಕೊಡಬೇಕು. ಸಂಗೀತ, ಕಲೆ, ನೃತ್ಯ, ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸಬೇಕು.

ಕೋರ್ಟ್ ಉದ್ಯೋಗ ಕೊಡಿಸುವುದಾಗಿ ವಂಚನೆ: ದಂಪತಿ ಸೆರೆ

ಬೆಂಗಳೂರು: ಕೋರ್ಟ್‌ಗಳಲ್ಲಿ ಸರಕಾರಿ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿ ನೂರಾರು ಜನರನ್ನು ವಂಚಿಸಿದ್ದ ಖತರ್ನಾಕ್ ದಂಪತಿಯನ್ನು ಸೆಂಟ್ರಲ್ ಕ್ರೈಂ ಬ್ರಾಂಚ್ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ನಗರದ ಜೇಸನ್ ಡಿಸೋಜಾ ಮತ್ತು ಲವೀನಾ ದಂಪತಿ ಸುಮಾರು 25 ಕೋಟಿ ರು.ಗೂ ಹೆಚ್ಚು ಹಣ ವಂಚನೆ ಮಾಡಿದ್ದು, ಸದ್ಯ ಸಿಸಿಬಿ ಪೊಲೀಸರು ಅವರನ್ನು ವಿಚಾರಣೆಗೊಳಪಡಿಸಿದ್ದಾರೆ.ನಿರುದ್ಯೋಗಿಗಳು ಹಾಗೂ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಗುರಿಯಾಗಿಸಿಕೊಂಡು ಆರೋಪಿಗಳು ದೊಡ್ಡ ಮಟ್ಟದ ಮೋಸದ ಜಾಲವನ್ನು ನಿರ್ಮಿಸಿದ್ದ ದಂಪತಿ, ಕೋರ್ಟ್‌ಗಳಲ್ಲಿ ಡಿ ಗ್ರೂಪ್ ಉದ್ಯೋಗ ಕೊಡಿಸುವುದಾಗಿ ಹೇಳಿ ಒಬ್ಬೊಬ್ಬರಿಂದ 10ರಿಂದ 25 ಲಕ್ಷ ರು.ವರೆಗೆ ಹಣ ವಸೂಲಿ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ನಂಬಿಕೆ ಮೂಡಿಸಲು ನ್ಯಾಯಾಧೀಶರ ಸಹಿ ನಕಲಿ ಮಾಡಿ ನೇಮಕಾತಿ ಆದೇಶ ಪತ್ರಗಳನ್ನು ನೀಡುತ್ತಿದ್ದರು. ನಂತರ ಉದ್ಯೋಗದ ಬಗ್ಗೆ ವಿಚಾರಿಸಿದಾಗ ನಾಳೆ, ನಾಡಿದ್ದು ಎಂದು ಕಾಲಹರಣ ಮಾಡಿ, ಕೊನೆಗೆ ಕರೆಗಳಿಗೆ ಸ್ಪಂದಿಸದೇ ತಪ್ಪಿಸಿಕೊಳ್ಳುತ್ತಿದ್ದರು. ಏಜೆಂಟ್‌ಗಳ ಮೂಲಕ ಜನರನ್ನು ಬಲೆಗೆ ಬೀಳಿಸುತ್ತಿದ್ದ ಆರೋಪಿಗಳು ಕೆಲವರನ್ನು ಖಾಸಗಿ ಹೋಟೆಲ್‌ಗಳಿಗೆ ಕರೆಸಿ ದಾಖಲೆ ಪರಿಶೀಲನೆ ಹೆಸರಿನಲ್ಲಿ ನಕಲಿ ಆಫರ್ ಲೆಟರ್ ತೋರಿಸಿ ಮೋಸ ಮಾಡಿದ್ದಾರೆ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಈ ಕುರಿತು ಸಂತ್ರಸ್ತರು ದೂರು ನೀಡಿದ ಹಿನ್ನೆಲೆ ಪ್ರಕರಣ ಬೆಳಕಿಗೆ ಬಂದಿದೆ. ಮೊದಲೇ ಜೈಲಿಗೆ ಹೋಗಿದ್ದ ದಂಪತಿ: ಆರೋಪಿಗಳು ಈ ಹಿಂದೆಯೂ 2024ರಲ್ಲಿ ಇದೇ ರೀತಿಯ ಪ್ರಕರಣದಲ್ಲಿ ಬಂಧಿತರಾಗಿ, ಜಾಮೀನಿನ ಮೇಲೆ ಬಿಡುಗಡೆಯಾದ ಬಳಿಕ ಮತ್ತೆ ವಂಚನೆ ಮುಂದುವರಿಸಿದ್ದರು. ಸದ್ಯ ಪೊಲೀಸರು ಆರೋಪಿಗಳನ್ನು ವಿಚಾರಣೆಗೊಳಪಡಿಸಿದ್ದಾರೆ.

ರಕ್ಷಣಾ, ರೈಲ್ವೆ ವಲಯಕ್ಕೂ ತಟ್ಟಿದ ಎಲ್‌ಪಿಜಿ ಟ್ರಬಲ್

ಬೆಂಗಳೂರು: ಇರಾನ್-ಇಸ್ರೇಲ್ ಯುದ್ಧದಿಂದಾಗಿ ಕಚ್ಚಾ ತೈಲ ಬೆಲೆ ಗಗನಕ್ಕೇರಿದ್ದು, ಇದರಿಂದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಮೇಲೂ ನೇರ ಪರಿಣಾಮವುಂಟಾಗಿದೆ. ದೇಶದ ರಕ್ಷಣಾ ಕ್ಷೇತ್ರ ಮತ್ತು ರೈಲ್ವೆ ಇಲಾಖೆ ಮೇಲೂ ಯುದ್ಧ ಕರಿನೆರಳು ಬಿದ್ದಿದ್ದು, ರಕ್ಷಣಾ ಇಲಾಖೆಯ ವಾಹನಗಳ ತಯಾರಿಕೆಗೆ ಹಾಗೂ ರೈಲ್ವೆ ಇಲಾಖೆಗೆ ಟೂಲ್ಸ್ ಪ್ರೊಫೈಲ್ ಕಚ್ಚಾವಸ್ತು ಸರಬರಾಜು ಮಾಡುತ್ತಿದ್ದ ಪೀಣ್ಯಾದಲ್ಲಿರುವ ಶ್ರೀ ಲಕ್ಷ್ಮಿ ಪ್ರೊಫೈಲ್ ಆಟೋ ಮೊಬೈಲ್ ಇಂಡಸ್ಟ್ರಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ಬೆಂಗಳೂರು ನಗರದಲ್ಲಿರುವ ಪೀಣ್ಯ ಕೈಗಾರಿಕಾ ವಲಯದ ಸಣ್ಣ ಕೈಗಾರಿಕೆಗಳು ಈಗ ಗಂಭೀರ ಸಂಕಷ್ಟ ಎದುರಿಸುತ್ತಿದ್ದು, ವಿಶೇಷವಾಗಿ ಟೂಲ್ಸ್, ಪ್ರೊಫೈಲ್ ಮತ್ತು ಆಟೋಮೊಬೈಲ್ ಬಿಡಿಭಾಗ ತಯಾರಿಕಾ ಕಂಪನಿಗಳು ಕಚ್ಚಾ ವಸ್ತು ಹಾಗೂ ಇಂಧನ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ಪೀಣ್ಯಾದಲ್ಲಿರುವ ಶ್ರೀಲಕ್ಷ್ಮಿ ಪ್ರೊಫೈಲ್ ಆಟೋಮೊಬೈಲ್ ಇಂಡಸ್ಟ್ರಿ ತಾತ್ಕಾಲಿಕವಾಗಿ ಕಾರ್ಯಾಚರಣೆ ನಿಲ್ಲಿಸಿದ್ದು, ಈ ಸಂಸ್ಥೆ ಭಾರತೀಯ ರಕ್ಷಣಾ ವಲಯ ಮತ್ತು ರೈಲ್ವೆಗೆ ಅಗತ್ಯವಾದ ಬಿಡಿಭಾಗಗಳನ್ನು ಪೂರೈಸುತ್ತಿತ್ತು. ಜತೆಗೆ ವಿಪ್ರೊ ಸೇರಿದಂತೆ ಹಲವು ಕಂಪನಿಗಳಿಗೂ ಪೂರೈಕೆಗಳನ್ನು ಮಾಡುತ್ತಿತ್ತು. ಕಳೆದ ಒಂದು ವಾರದಿಂದ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಲಭ್ಯವಾಗದೆ ಉತ್ಪಾದನೆ ಸಂಪೂರ್ಣ ಸ್ಥಗಿತಗೊಂಡಿದ್ದು, ಪ್ರತಿಶಿಫ್ಟ್‌ಗೆ 8 ರಿಂದ 10 ಸಿಲಿಂಡರ್ ಅಗತ್ಯವಿದ್ದರೂ, ಸರಬರಾಜು ನಿಂತಿರುವುದರಿಂದ ಕಂಪನಿ ಕಾರ್ಯಾಚರಣೆ ಸಾಧ್ಯವಾಗುತ್ತಿಲ್ಲ. ಈ ಕಂಪನಿಯಲ್ಲಿ ಪ್ರತಿ ಶಿಫ್ಟ್‌ಗೆ ಸುಮಾರು 50 ಮಂದಿ ಕೆಲಸ ಮಾಡುತ್ತಿದ್ದರು. ಈಗ ಗ್ಯಾಸ್ ಕೊರತೆಯಿಂದ ನೂರಾರು ಉದ್ಯೋಗಿಗಳು ಕೆಲಸವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ವೇತನ ಕಡಿತ ಹಾಗೂ ಉದ್ಯೋಗ ಕಳೆದುಕೊಳ್ಳುವ ಭೀತಿ ಹೆಚ್ಚಾಗಿದೆ.

400ಕ್ಕೂ ಹೆಚ್ಚು ಕೈಗಾರಿಕೆಗಳಿಗೆ ಎಫೆಕ್ಟ್: ಪೀಣ್ಯಾದಲ್ಲಿ 12 ಸಾವಿರಕ್ಕೂ ಹೆಚ್ಚು ಕೈಗಾರಿಕೆಗಳಿದ್ದು, ಅವುಗಳಲ್ಲಿ ಸಾವಿರಾರು ಕಂಪನಿಗಳು ಎಲ್‌ಪಿಜಿ ಗ್ಯಾಸ್ ಮೇಲೆ ಅವಲಂಬಿತವಾಗಿವೆ. ಇತ್ತೀಚೆಗೆ ಇಂಡಸ್ಟ್ರಿಯಲ್ ಗ್ಯಾಸ್ ಸರಬರಾಜು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ 400ಕ್ಕೂ ಹೆಚ್ಚು ಕೈಗಾರಿಕೆಗಳು ತಾತ್ಕಾಲಿಕವಾಗಿ ಬಂದ್ ಮಾಡುವ ಪರಿಸ್ಥಿತಿ ಎದುರಾಗಿದೆ. ಈ ಕೈಗಾರಿಕೆಗಳಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಿದ್ದು, ನೂರಾರು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ತುತ್ತಾಗುವ ಸಾಧ್ಯತೆ ಇದೆ.

ಕನಿಷ್ಟ 500 ಸಿಲಿಂಡರ್ ಪೂರೈಕೆಗೆ ಮನವಿ

ನಗರದ ಪಿಜಿಗಳಿಗೆ ನಿತ್ಯ ಕನಿಷ್ಠ 500 ಸಿಲಿಂಡರ್‌ಗಳನ್ನು ಮೀಸಲಿಡಬೇಕು ಎಂದು ಸರಕಾರವನ್ನು ಒತ್ತಾಯಿಸಲು ಪಿಜಿ ಮಾಲೀಕರ ಕಲ್ಯಾಣ ಒಕ್ಕೂಟ ಮುಂದಾಗಿದೆ. ಸಿಲಿಂಡರ್‌ಗಳ ಕೊರತೆಯಿಂದಾಗಿ ಪಿಜಿಗಳು ಸಮಸ್ಯೆ ಅನುಭವಿಸುತ್ತಿರುವ ಬೆನ್ನಲ್ಲೇ ಒಕ್ಕೂಟ ಸರಕಾರದ ಬಳಿ ಪಿಜಿಗಳಿಗೆ ಸಂಬಂಧಿಸಿದಂತೆ ಕೆಲ ಬೇಡಿಕೆಗಳನ್ನಿಟ್ಟಿವೆ. ದಿನಕ್ಕೆ 500 ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಮಾಡುವ ಕುರಿತಂತೆ ಬೇಡಿಕೆಯೂ ಸೇರಿದೆ. ಸಂಘದ ಅಧ್ಯಕ್ಷ ಅರುಣ್ ಕುಮಾರ್ ಅವರು, ಬೆಂಗಳೂರಿನಲ್ಲಿ ಮಾತ್ರ ಕನಿಷ್ಠ 15,000 ಪಿಜಿಗಳಿವೆ, ಅಲ್ಲಿ ಲಕ್ಷಾಂತರ ಜನರು ವಾಸಿಸುತ್ತಿದ್ದಾರೆ. ರಾಜ್ಯ ಸರಕಾರವು ನಮಗೆ ಸಾಕಷ್ಟು ಎಲ್‌ಪಿಜಿ ಸಿಲಿಂಡರ್‌ಗಳನ್ನು ಒದಗಿಸುವುದಾಗಿ ಭರವಸೆ ನೀಡಿದೆ. ಈ ಸಿಲಿಂಡರ್‌ಗಳನ್ನು ತಕ್ಷಣವೇ ಸರಬರಾಜು ಮಾಡುವಂತೆ ಮನವಿಯೊಂದಿಗೆ ನಾವು ಸೋಮವಾರ ಅಧಿಕಾರಿಗಳನ್ನು ಭೇಟಿ ಮಾಡುತ್ತೇವೆ ಎಂದಿದ್ದಾರೆ.







ಸಮಾಚಾರ ಸಣ್ಣದಲ್ಲ

ಧರ್ಮ-ಅಧರ್ಮ ನಡುವಿನ ಸಮರ

ಬಾಗಲಕೋಟೆ: ಧರ್ಮ-ಅಧರ್ಮ ಮಧ್ಯೆ ಉಪಸಮರ ಶುರುವಾಗಿದೆ. ಇದು ಸತ್ಯ ಹಾಗೂ ಸುಳ್ಳಿನ ನಡುವಿನ ಚುನಾವಣೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.ಬಾಗಲಕೋಟೆ ಉಪಚು ನಾವಣೆ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಅವರ ನಾಮಪತ್ರ ಸಲ್ಲಿಕೆ ಬಳಿಕ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿ, ಬಿಜೆಪಿಯವರು ಬರೀ ಸುಳ್ಳು ಆಶ್ವಾಸನೆ ನೀಡುತ್ತಾರೆ. ನಾವು ಕೊಟ್ಟ ಮಾತಿನಂತೆ ನಡೆಯುತ್ತೇವೆ. ದಿ.ಮೇಟಿ ಅವರು ಈ ಭಾಗಕ್ಕೆ ಸರಕಾರಿ ಮೆಡಿಕಲ್ ಕಾಲೇಜು ಬೇಕು ಎಂದು ಕೇಳುತ್ತಿದ್ದರು. ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಸುಲಿಗೆ ನಡೆಯುತ್ತದೆಯೇ ಹೊರತು, ಬಡವರಿಗೆ ನೆರವಾಗು ವುದಿಲ್ಲ ಎಂಬ ಕಾರಣಕ್ಕೆ ಮೇಟಿ ಅವರು ಸಚಿವರು ಹಾಗೂ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ಈ ಮೆಡಿಕಲ್ ಕಾಲೇಜು ನಿರ್ಮಾ ಣಕ್ಕೆ ಅನುಮತಿ ಪಡೆದಿದ್ದರು. ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಈ ಮೆಡಿಕಲ್ ಕಾಲೇಜಿಗೆ ಜೀವ ನೀಡಿರಲಿಲ್ಲ. ಅವರು ತಮಗೆ ಬೇಕಾದ ಕಡೆ ಮಾಡಿದ್ದರು. ಇಲ್ಲಿ ಬಿಜೆಪಿ ಶಾಸಕರಿದ್ದರೂ ಮೆಡಿಕಲ್ ಕಾಲೇಜು ನೀಡಿರಲಿಲ್ಲ ಎಂದು ಆರೋಪಿಸಿದರು. ಎಲ್ಲರ ಅಭಿಪ್ರಾಯ ಪಡೆದು ದಿವಂಗತ ಎಚ್.ವೈ.ಮೇಟಿ ಅವರ ಮಗನಿಗೆ ಒಮ್ಮತದಿಂದ ಟಿಕೆಟ್ ನೀಡಲಾಗಿದೆ ಎಂದರು.



ಬಿಜೆಪಿ ಅಭ್ಯರ್ಥಿಗಳ ಗೆಲುವು ನಿಶ್ಚಿತ

ಮಸ್ಕಿ: ದಾವಣಗೆರೆ, ಬಾಗಲಕೋಟೆ ಉಪಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸುವುದು ನಿಶ್ಚಿತ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಿಶ್ವಾಸ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತ ನಾಡಿ, ಕಾಂಗ್ರೆಸ್ ಸರಕಾರ ಕುರ್ಚಿ ಕಾದಾಟದಲ್ಲಿ ತೊಡಗಿದ್ದು, ರಾಜ್ಯದ ಅಭಿವೃದ್ಧಿ ಕಡೆ ಗಮನ ಹರಿಸುತ್ತಿಲ್ಲ. ಸಿಎಂ ಸಿದ್ದರಾಮಯ್ಯ ಅವರು ಕುರ್ಚಿ ಉಳಿಸಿಕೊಳ್ಳಲು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕುರ್ಚಿ ಕಸಿದುಕೊಳ್ಳಲು ಪ್ರಯಾಸ ಪಡುತ್ತಿದ್ದಾರೆ ಎಂದರು. 'ಶ್ರೀರಾಮುಲು ಅವರು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಮಸ್ಕಿ ಕ್ಷೇತ್ರದಿಂದ ಸ್ಪರ್ಧಿಸುವ ಸುದ್ದಿಗಳು ಹರಡಿವೆ' ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಶ್ರೀರಾಮುಲು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಪಕ್ಷ ಗಟ್ಟಿಗೊಳಿಸಲು ಹೈಕಮಾಂಡ್ ನನಗೆ ಜವಾಬ್ದಾರಿ ನೀಡಿದೆ. ಮಸ್ಕಿ ಕ್ಷೇತ್ರದ ಟಿಕೆಟ್ ಕೊಡುವುದು, ಬಿಡುವುದು ಹೈಕಮಾಂಡ್‌ಗೆ ಬಿಟ್ಟ ನಿರ್ಧಾರ ಎಂದು ಹೇಳಿದರು.

ಮುಸ್ಲಿಮರ ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್

ಕಲಬುರಗಿ: ದಾವಣಗೆರೆ ದಕ್ಷಿಣ ಮತಕ್ಷೇತ್ರಕ್ಕೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಮುಸ್ಲಿಂ ಬಾಹುಳ್ಯವಿದ್ದರೂ ಕಾಂಗ್ರೆಸ್ ಪಕ್ಷ ಮುಸ್ಲಿಮರಿಗೆ ಟಿಕೆಟ್ ನೀಡುವ ಬದಲು ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗನಿಗೆ ಟಿಕೆಟ್ ನೀಡುವ ಮೂಲಕ ಆ ಪಕ್ಷವನ್ನು ದಶಕಗಳ ಕಾಲ ಬೆಂಬಲಿಸುತ್ತಾ ಬಂದಿರುವ ಮುಸ್ಲಿಮರ ಬೆನ್ನಿಗೆ ಚೂರಿ ಹಾಕಿದೆ ಎಂದು ಬಿಜೆಪಿ ಮುಖಂಡ, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಟೀಕಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷವು ಮುಸ್ಲಿಮರ ಬಗ್ಗೆ ಅನುಕಂಪದ ಮಾತನ್ನಾಡುತ್ತಾ ಅಧಿಕಾರ ಅಥವಾ ಚುನಾವಣಾ ಟಿಕೆಟ್ ಹಂಚುವ ವಿಷಯ ಬಂದಾಗ ಕುಟುಂಬ ರಾಜಕಾರಣಕ್ಕೇ ಜೋತು ಬೀಳುತ್ತಿದೆ. ಹೀಗಾಗಿ, ಮುಸ್ಲಿಂ ಸಮುದಾಯದವರು ಈಗಲಾದರೂ ಕಾಂಗ್ರೆಸ್ ಪಕ್ಷವನ್ನು ಬೇಷರತ್ತಾಗಿ ಬೆಂಬಲಿಸುವ ಬದಲು ಬಿಜೆಪಿ, ಜೆಡಿಎಸ್ ಪಕ್ಷಗಳನ್ನೂ ಬೆಂಬಲಿಸಬೇಕು. ಈ ಪಕ್ಷಗಳಲ್ಲಿಯೂ ಗುರುತಿಸಿಕೊಂಡರೆ ತಮ್ಮ ಸಮುದಾಯಕ್ಕೆ ಅನ್ಯಾಯವಾಗುವುದನ್ನು ತಡೆಯಬಹುದು ಎಂದರು.

ಮುಸ್ಲಿಂ ಮುಖಂಡರು ಬಿಜೆಪಿ ಸೇರ್ಪಡೆ

ದಾವಣಗೆರೆ: ದಕ್ಷಿಣ ಕ್ಷೇತ್ರದ ಉಪಸಮರಕ್ಕೂ ಮುನ್ನವೇ ರಾಜಕೀಯ ವಲಯದಲ್ಲಿ ಬಿರುಗಾಳಿ ಎದ್ದಿದೆ. ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಸಿಗದ ಹಿನ್ನೆಲೆ 20 ಕ್ಕೂ ಹೆಚ್ಚು ಅಲ್ಪಸಂಖ್ಯಾತ ಮುಖಂಡರು, ಯುವ ನಾಯಕರು ಬಿಜೆಪಿ ಸೇರ್ಪಡೆಯಾಗಿದ್ದಾರೆ.ದಾವಣಗೆರೆ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಶ್ರೀನಿವಾಸ್ ದಾಸ ಕರಿಯಪ್ಪನ ನೇತೃತ್ವದಲ್ಲಿ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಇದೇ ವೇಳೆ ಮುಖಂಡರು ಮುಂದಿನ ದಿನಗಳಲ್ಲಿ ಇನ್ನಷ್ಟು ಅಲ್ಪಸಂಖ್ಯಾತರನ್ನ ಬಿಜೆಪಿಗೆ ಸೇರಿಸುವುದಾಗಿ ವಾಗ್ದಾನ ಮಾಡಿದ್ದಾರೆ. ಜತೆಗೆ ಒಟ್ಟಾಗಿ ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವುದಾಗಿ ಪಣ ತೊಟ್ಟಿದ್ದಾರೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ನೀಡಬೇಕೆಂಬ ಬೇಡಿಕೆ ಕಡೆಗಣಿಸಿದ್ದಕ್ಕೆ ಮುಸ್ಲಿಂ ಮುಖಂಡರು ಕೆಂಡಾಮಂಡಲವಾಗಿದ್ದಾರೆ. ಈ ಬಾರಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಚರಂತಿಮಠ ನಾಮಪತ್ರ ಸಲ್ಲಿಕೆ | ಬಿಜೆಪಿಯಿಂದ ಭರ್ಜರಿ ರೋಡ್ ಶೋ

ಬಾಗಲಕೋಟೆ ಕೇಸರಿಮಯ

ಬಾಗಲಕೋಟೆ: ವಿಧಾನಸಭಾ ಉಪಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರು ಸೋಮವಾರ ಭಾರೀ ಮೆರವಣಿಗೆಯ ನಡುವೆ ನಾಮಪತ್ರ ಸಲ್ಲಿಸಿದರು. ನಗರದ ಕಣವಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಆರಂಭವಾದ ಮೆರವಣಿಗೆ ಟೆಂಕಿನಮಠ, ವಲ್ಲಭಾಯಿ ಚೌಕ್, ಜನತಾ ಬಜಾರ್ ಮಾರ್ಗವಾಗಿ ಬಸವೇಶ್ವರ ವೃತ್ತದವರೆಗೆ ಸಾಗಿತು. ಮಾರ್ಗಮಧ್ಯೆ ಸಾವಿರಾರು ಕಾರ್ಯಕರ್ತರು ಸೇರಿದರು. ನಗರವಿಡೀ ಕೇಸರಿಮಯಗೊಂಡಿತು. ಮೆರವಣಿಗೆಯ ನಂತರ ಬಸವೇಶ್ವರ ವೃತ್ತದಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ನಾಯಕರು ಕಾಂಗ್ರೆಸ್ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಈ ವೇಳೆ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯು ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಭವಿಷ್ಯದ ದಿಕ್ಸೂಚಿ ಅಷ್ಟೇ ಅಲ್ಲ, ಎಚ್ಚರಿಕೆ ಗಂಟೆ ಬಾರಿಸಲಿದೆ. ಬಿಜೆಪಿ ಆಡಳಿತದ ಅವಧಿಯಲ್ಲಿ ಬಾಗಲಕೋಟೆ ಭಾಗದಲ್ಲಿ ಪ್ರಮುಖ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಮುಂದಿನ ಅಭಿವೃದ್ಧಿಗಾಗಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರು ಅಭಿವೃದ್ಧಿ ಮತ್ತು ಹಿಂದುತ್ವದ ಆಧಾರದಲ್ಲಿ ಮತ ಕೇಳುತ್ತಿದ್ದೇವೆ. ಕಮಲ ಚಿಹ್ನೆಗೆ ಮತ ನೀಡಿ ಭರ್ಜರಿ ಬಹುಮತದಿಂದ ಗೆಲ್ಲಿಸಬೇಕು ಎಂದು ವಿನಂತಿಸಿದರು.

ಸಂಸದ ಜಗದೀಶ್ ಶೆಟ್ಟರ್ ಮಾತನಾಡಿ, ಇದು ನಾಮಪತ್ರ ಮೆರವಣಿಗೆ ಅಲ್ಲ, ವಿಜಯೋತ್ಸವದ ಮೆರವಣಿಗೆ. ಬಾಗಲಕೋಟೆಯಲ್ಲಿ ಬಿಜೆಪಿ ಶಕ್ತಿ ಏನು ಎಂಬುದನ್ನು ಕಾರ್ಯಕರ್ತರು ತೋರಿಸಿದ್ದಾರೆ. ರಾಜ್ಯದಲ್ಲಿ

ಕಾಂಗ್ರೆಸ್ ಆಡಳಿತದಿಂದ ಅಭಿವೃದ್ಧಿ ಕುಂಠಿತಗೊಂಡಿದ್ದು, ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಆರೋಪಿಸಿದರು.

ಮಾಜಿ ಸಚಿವ ಮುರುಗೇಶ್ ನಿರಾಣಿ ಮಾತನಾಡಿ, ಭಾರೀ ಬಿಸಿಲಿನಲ್ಲೂ ಸಾವಿರಾರು ಕಾರ್ಯಕರ್ತರು ಪಾದಯಾತ್ರೆ ಮೂಲಕ ಭಾಗವಹಿಸಿರುವುದು ಪಕ್ಷದ ಶಕ್ತಿ ತೋರಿಸುತ್ತದೆ. ಬಿಜೆಪಿ ಅಭಿವೃದ್ಧಿಗೆ ಹೆಸರುವಾಸಿಯಾಗಿದ್ದು, ಅಭ್ಯರ್ಥಿ ವೀರಣ್ಣ ಚರಂತಿಮಠ ಅವರನ್ನು ಕನಿಷ್ಠ 25 ಸಾವಿರ ಮತಗಳ ಅಂತರದಿಂದ ಗೆಲ್ಲಿಸಬೇಕು. ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಸಂಘಟಿತವಾಗಿ ಕೆಲಸ ಮಾಡಿ, ಹೆಚ್ಚಿನ ಮತಗಳನ್ನು ಸೆಳೆಯುವಂತೆ ಸೂಚಿಸಿದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರಿ ಮಾತನಾಡಿ, ಹಿಂದಿನ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಹಾಗೂ ಜಗದೀಶ್ ಶೆಟ್ಟರ್ ಅವರ ಸರಕಾರಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದರೆ ಪ್ರಸ್ತುತ ಕಾಂಗ್ರೆಸ್ ಸರಕಾರ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ. ರಾಜ್ಯದ ಜನರು ಈಗಿನ ಆಡಳಿತದಿಂದ ಬೇಸತ್ತಿದ್ದು, ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಮನೆಗೆ ಕಳುಹಿಸುವ ಸಮಯ ಬಂದಿದೆ. ಬಿಜೆಪಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಅವರ ಗೆಲುವು ಎಲ್ಲರಿಗೂ ಆದರ್ಶವಾಗಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ್, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕರಾದ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತನಗೌಡ ಪಾಟೀಲ, ಮಾಜಿ ಸಚಿವರಾದ ಅರವಿಂದ್ ಲಿಂಬಾವಳಿ, ಬಿ.ಶ್ರೀರಾಮುಲು ಸೇರಿದಂತೆ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಹಲವು ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಈ ಚುನಾವಣೆ ರಾಜಕೀಯ ದಿಕ್ಸೂಚಿ

ನಾಮಪತ್ರ ಸಲ್ಲಿಕೆಗೂ ಮುನ್ನ ನಡೆದ ಸಭೆಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಉಪಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ಸಂಪೂರ್ಣ ಸಜ್ಜಾಗಿದ್ದು, ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ವಿಜಯದ ದೃಢಸಂಕಲ್ಪ ಕೈಗೊಳ್ಳಲಾಗಿದೆ ಎಂದು ಹೇಳಿದರು. ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಜನರಲ್ಲಿ ಅಸಮಾಧಾನ ಹೆಚ್ಚಾಗಿದೆ. ಬಿಜೆಪಿಯ ಅಭಿವೃದ್ಧಿ ಪರ ರಾಜಕಾರಣ, ಸಂಘಟಿತ ಶಕ್ತಿ, ಕಾರ್ಯಕರ್ತರ ಉತ್ಸಾಹ ಹಾಗೂ ಮತದಾರರ ಆಶೀರ್ವಾದದಿಂದ ಈ ಬಾರಿ ಬಾಗಲಕೋಟೆಯಲ್ಲಿ ಕಮಲ ಅರಳಲಿದೆ. ಈ ಉಪಚುನಾವಣೆಯ ಫಲಿತಾಂಶ ರಾಜ್ಯದ ಮುಂದಿನ ರಾಜಕೀಯ ದಿಕ್ಕನ್ನು ನಿರ್ಧರಿಸುವಲ್ಲಿ ಪ್ರಮುಖವಾಗಲಿದೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ

ನೂರಕ್ಕೆ ನೂರು ಗೆಲುವು ನಮ್ಮದೇ

ದಾವಣಗೆರೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ನಾಮಪತ್ರ ಸಲ್ಲಿಸುವ ವೇಳೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಇದ್ದರು.

ದಾವಣಗೆರೆ: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರ ಬಿಜೆಪಿ ಅಭ್ಯರ್ಥಿ ಟಿ.ಶ್ರೀನಿವಾಸ ದಾಸಕರಿಯಪ್ಪ ನಾಮಪತ್ರ ಸಲ್ಲಿಕೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದಿನ ಪ್ರತಿಕ್ರಿಯೆ ತುಂಬಾ ಚೆನ್ನಾಗಿದೆ. ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಜನರು ಸೇರಿದ್ದಾರೆ. ನಾವು ದಾವಣಗೆರೆ ಮತ್ತು ಬಾಗಲಕೋಟೆಯನ್ನು ಗೆಲ್ಲಲಿದ್ದೇವೆ. ಎರಡೂ ಕ್ಷೇತ್ರಗಳಲ್ಲಿ ವಾತಾವರಣ ತುಂಬಾ ಚೆನ್ನಾಗಿದೆ. ನನಗೆ 100% ಗೆಲುವು ನಮ್ಮದೇ ಎಂಬ ವಿಶ್ವಾಸವಿದೆ ಎಂದರು.

ಇಡೀ ಜಗತ್ತು ಪ್ರಧಾನಿ ನರೇಂದ್ರ ಮೋದಿಯವರ ಕಾರ್ಯಕ್ಷಮತೆಯನ್ನು ಮೆಚ್ಚುತ್ತಿದೆ. ನರೇಂದ್ರ ಮೋದಿಯವರ ನಾಯಕತ್ವ ಮತ್ತು ರಾಜ್ಯ ಕಾಂಗ್ರೆಸ್ ಸರಕಾರದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ, ಕೋಪಗೊಂಡಿದ್ದಾರೆ. ಭ್ರಷ್ಟಾಚಾರ ಎಲ್ಲೆಡೆ ಹರಡಿದೆ ಎಂಬ ಭಾವನೆ ಇದೆ. ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಇದೆಲ್ಲದಕ್ಕೂ ಈ ಎರಡು ಕ್ಷೇತ್ರಗಳಲ್ಲಿ ಜನರಿಗೆ ಸೂಕ್ತ ಉತ್ತರ ನೀಡಲು ಅವಕಾಶವಿದೆ. ಜನರು ಈ ಅವಕಾಶವನ್ನು ಬಳಸಿಕೊಳ್ಳುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕ, ಜೆಡಿಎಸ್ ಮುಖಂಡ ಎಚ್.ಎಸ್.ಶಿವಶಂಕರ್ ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಉಮೇದುವಾರಿಕೆ ಸಲ್ಲಿಕೆ

ದಾವಣಗೆರೆ: ದಾವಣಗೆರೆಯಲ್ಲಿ ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಮಲ್ಲಿಕಾರ್ಜುನ್ ಅವರು ನಾಮಪತ್ರ ಸಲ್ಲಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದರು.

ನಾಮಪತ್ರ ಸಲ್ಲಿಕೆ ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ, ನಮ್ಮದು ನುಡಿದಂತೆ ನಡೆದ ಸರಕಾರವಾಗಿದ್ದು, ರಾಜ್ಯ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳೊಂದಿಗೆ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭರ್ಜರಿ ಜಯ ಸಾಧಿಸಲಿದೆ. ನಾನು ಕುಟುಂಬ ರಾಜಕಾರಣ ಎಂದಿಗೂ ಬೆಂಬಲಿಸುವುದಿಲ್ಲ, ಬದಲಾಗಿ ವಿರೋಧಿಸುತ್ತೇನೆ. ಆದರೆ, ಕ್ಷೇತ್ರದಲ್ಲಿ ಅಳೆದು ತೂಗಿ ಎಲ್ಲ ರೀತಿಯಿಂದ ಗೆಲ್ಲುವ ಅಭ್ಯರ್ಥಿಗೆ ಟಿಕೆಟ್ ನೀಡಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಉಪಚುನಾವಣೆ ಫಲಿತಾಂಶ ಮುಂದಿನ ಚುನಾವಣೆಗೆ ದಿಕ್ಸೂಚಿ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ತಿರುಗೇಟು ನೀಡಿದ ಸಿಎಂ, ಅವರು ಗೆಲ್ಲುವುದೇ ಇಲ್ಲ, ಇನ್ನು ದಿಕ್ಸೂಚಿ ಎಲ್ಲಿಂದ ಬಂತು? ಈಗಾಗಲೇ ಮೂರು ಉಪಚುನಾವಣೆ ಗೆದ್ದಿದ್ದೇವೆ, ಇದನ್ನೂ ಗೆದ್ದೇ ಗೆಲ್ಲುತ್ತೇವೆ. ಮತ್ತೆ ದಾವಣಗೆರೆಗೆ ಬಂದು ಸಮರ್ಥ್ ಪರ ಮತಯಾಚಿಸಲಿದ್ದೇನೆ. ಅಲ್ಪಸಂಖ್ಯಾತರಿಗೂ ಮುಂದಿನ ದಿನಮಾನಗಳಲ್ಲಿ ನ್ಯಾಯ ಒದಗಿಸುವ ಕಾರ್ಯ ಮಾಡುತ್ತೇನೆ ಎಂದು ಹೇಳಿದರು.ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಪಕ್ಷದ ಸಂಪ್ರದಾಯದಂತೆ ಮುಖಂಡರು, ಪಕ್ಷದ ವರಿಷ್ಠರು, ಕಾರ್ಯಕರ್ತರ ಸಮ್ಮುಖದಲ್ಲಿ ಚರ್ಚಿಸಿ ಸಮರ್ಥ್‌ಗೆ ಟಿಕೆಟ್ ನೀಡಲಾಗಿದೆ. ಟಿಕೆಟ್ ನೀಡಿಕೆ ಕುರಿತಂತೆ ಅಲ್ಪಸಂಖ್ಯಾತ ನಾಯಕರಲ್ಲಿ ಉಂಟಾಗಿರುವ ಅಸಮಾಧಾನ ತಕ್ಷಣ ಸರಿಪಡಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಭ್ಯರ್ಥಿ ಸಮರ್ಥ್ ಶಾಮನೂರು, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್.ಬಿ.ಮಂಜಪ್ಪ, ಅಯೂಬ್ ಪೈಲ್ವಾನ್, ಗೋಣೆಪ್ಪ ಇದ್ದರು.



ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಚುನಾವಣಾಧಿಕಾರಿಗೆ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಸಿದರು. ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತರರಿದ್ದರು.

ಬಂಡಾಯ ಶಮನ ಮಾಡುತ್ತೇವೆ: ಸಿಎಂ

ಆಕಾಂಕ್ಷಿಗಳಿಗೆ ಟಿಕೆಟ್ ಸಿಗದಿದ್ದರೆ ಅಸಮಾಧಾನ ಆಗುವುದು ಸಾಮಾನ್ಯ. ಅದೇ ರೀತಿ ದಾವಣಗೆರೆಯಲ್ಲಿ ಅಲ್ಪಸಂಖ್ಯಾತರು ಮತ್ತು ಬಾಗಲಕೋಟೆಯಲ್ಲಿ ಎಚ್.ಟಿ.ಮೇಟಿ ಮಕ್ಕಳಲ್ಲಿ ಟಿಕೆಟ್ ಸಿಗದಿರುವುದಕ್ಕೆ ಅಸಮಾಧಾನವಿದೆ. ಹೀಗಾಗಿ ನಾವು ಅಸಮಾಧಾನಗೊಂಡವರನ್ನು ಸಮಾಧಾನ ಮಾಡಿ ಅವರು ಕೂಡ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮತಯಾಚನೆ ಮಾಡಲು ತೊಡಗಿಕೊಳ್ಳುವಂತೆ ಮಾಡುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.ನಗರದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ನಾವು ಈಗಾಗಲೇ ಗೆಲುವು ಸಾಧಿಸಿದ್ದೇವೆ. ಕಳೆದ ರಾಮನಗರ ಉಪಚುನಾವಣೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಪುತ್ರ, ಶಿಗ್ಗಾಂವಿ ಉಪಚುನಾವಣೆಯಲ್ಲಿ ಬಸವರಾಜ ಬೊಮ್ಮಾಯಿ ಮಗ ಗೆದ್ದಿದ್ದಾರಾ? ಸುಮ್ಮನೆ ನಾವು ಗೆಲ್ಲುತ್ತೇವೆ ಎಂದು ಬಡಬಡಾಯಿಸುತ್ತಾರೆ. ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ನಾವೇ ಗೆಲ್ಲುತ್ತೇವೆ. ಅವರು ಗೆಲ್ಲುವುದೇ ಇಲ್ಲ ಎಂದರು.

ಶ್ರೀನಿವಾಸ್ ಶ್ರೀಮಂತ

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ ಶ್ರೀನಿವಾಸ್? ಅವರು ನಾಮಪತ್ರ ಸಲ್ಲಿಕೆ ಮಾಡಿದ್ದು, ನಾಮಪತ್ರದ ಜೊತೆ ತಮ್ಮ ಹೆಸರಿನಲ್ಲಿರೋ ಆಸ್ತಿಗಳ ಮೌಲ್ಯವನ್ನು ಘೋಷಣೆ ಮಾಡಿದ್ದಾರೆ.



ಪಿಯುಸಿ ಮುಗಿಸಿರುವ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ಅವರ ಒಟ್ಟು ಆಸ್ತಿ 5.76 ಕೋಟಿ ರು. ಎಂದು ವರದಿ ಆಗಿದೆ. ಶ್ರೀನಿವಾಸ ಅವರ ಒಟ್ಟು ಆಸ್ತಿ ಮೌಲ್ಯ 5.76 ಕೋಟಿ ರು. ಆಗಿದೆ. ಈ ಪೈಕಿ 34.79 ಲಕ್ಷ ರು. ಚರಾಸ್ತಿ, 5.41 ಕೋಟಿ ರು. ಸ್ಥಿರಾಸ್ತಿ ಹೊಂದಿದ್ದಾರೆ. ಪಿತ್ರಾರ್ಜಿತವಾಗಿ 1.13 ಕೋಟಿ ಬಂದಿದ್ದು, 4.27 ಕೋಟಿ ರು. ಸ್ವಯಾರ್ಜಿತವಾಗಿದೆ.

ಪ್ರಮುಖ ಆಸ್ತಿ ವಿವರ: ಬ್ಯಾಂಕ್‌ನಲ್ಲಿ ಠೇವಣಿ – 12.3 ಲಕ್ಷ ರು., ಚಿನ್ನಾಭರಣ – 15 ಲಕ್ಷ ರು., 15 ಲಕ್ಷ ರು. (ಪತ್ನಿ ಬಳಿ), ಜಮೀನು ಮೌಲ್ಯ – 1.13 ಕೋಟಿ ರು., ಸಾಲ – 2.96 ಲಕ್ಷ ರು., ಒಟ್ಟು ಚರಾಸ್ತಿ – 34.79 ಲಕ್ಷ ರು., ಒಟ್ಟು ಸ್ಥಿರಾಸ್ತಿ – 5.41 ಕೋಟಿ ರು., ಒಟ್ಟು ಆಸ್ತಿ ಮೌಲ್ಯ – 5.76 ಕೋಟಿ ರು. ಲಿಂಗಾಪುರ, ತುಂಬಿಗೆರೆ, ಐಗೂರಿನಲ್ಲಿ 20 ಎಕರೆ ಜಮೀನು ಹೊಂದಿದ್ದು, 1.13 ಕೋಟಿ ರು. ಮೌಲ್ಯವಿದೆ. ಹಲವೆಡೆ ಸೈಟ್, ವಸತಿ ಸಮುಚ್ಚಯ, ಕಟ್ಟಗಳು ಇವರ ಹೆಸರಿನಲ್ಲಿವೆ. ಒಟ್ಟಾರೆ 5,41,52,053 ರು. ಸ್ಥಿರಾಸ್ತಿ ಇದೆ. 2.96 ಲಕ್ಷ ರು. ಮಾತ್ರ ಸಾಲವಿದೆ. ಈ ಹಿಂದೆ ಯಾವುದೇ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿಲ್ಲ ಹಾಗೂ ಯಾವುದೇ ಶಿಕ್ಷೆಯಾಗಿಲ್ಲ ಎಂದು ಪ್ರಮಾಣೀಕರಿಸಿದ್ದಾರೆ.

ಸಮರ್ಥ್ ಕೋಟಿ ಕುಳ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಶಾಮನೂರು ಶಿವಶಂಕರಪ್ಪ ಮೊಮ್ಮಗ ಸಮರ್ಥ್ ನಾಮಪತ್ರ ಸಲ್ಲಿಕೆ ಮಾಡಿದ್ದು, ಸದ್ಯ ಅವರ ಆಸ್ತಿ ವಿವರವನ್ನು ಚುನಾವಣಾ ಆಯೋಗ ಬಹಿರಂಗಪಡಿಸಿದೆ.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್-ಪ್ರಭಾ ಮಲ್ಲಿಕರ್ಜುನ ದಂಪತಿಯ ಮೊದಲ ಪುತ್ರ ಸಮರ್ಥ್ ಬಳಿ 2.17 ಕೋಟಿ ರು. ಚರಾಸ್ತಿ, 2.08 ಕೋಟಿ ರು. ಸ್ಥಿರಾಸ್ತಿ ಸೇರಿ 4.25 ಕೋಟಿ ಆಸ್ತಿ ಘೋಷಣೆ ಮಾಡಿಕೊಂಡಿದ್ದಾರೆ.

ಹೊಣೆಗಾರಿಕೆ/ಸಾಲ ಒಟ್ಟು 3.52 ಕೋಟಿ ರು. ಇದೆ. ಇನ್ನು ಸ್ವಂತ ಕಾರು/ ವಾಹನಗಳನ್ನು ಹೊಂದಿಲ್ಲ. ಪಿತ್ರಾರ್ಜಿತ ಆಸ್ತಿ ಬಂದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ.

ಸಮರ್ಥ್ ಚರಾಸ್ತಿ: ಕೈಯಲ್ಲಿ ನಗದು-8.35 ಲಕ್ಷ ರು., ಬ್ಯಾಂಕ್‌ನಲ್ಲಿ ಠೇವಣಿ – 9,89,217 ರು., ಬಾಂಡ್, ಷೇರು, ಮ್ಯೂಚುವಲ್ ಫಂಡ್ ಸೇರಿ ಇತರೆ ಹೂಡಿಕೆ – 30,00,000 ರು., ಪೋಸ್ಟ್ ಆಫೀಸ್, ವಿವಿಧ ವಿಮೆ ಕಂಪನಿಗಳ ಹೂಡಿಕೆ – 1,04.66,756 ರು., ಸಾಲ ಕೊಟ್ಟಿರುವುದು – 14,77.412 ರು., ಆಭರಣ ಬೆಲೆ ಬಾಳುವ ವಸ್ತುಗಳು – 14,45,800 ರು., ಮೊಬೈಲ್ ಕಂಪ್ಯೂಟರ್‌ಗಳು – 34,97,066 ರು., ಒಟ್ಟು ಚರಾಸ್ತಿ – 2,17,11,792 ರು. (2.17 ಕೋಟಿ ರು.)

ಕೋಟಿ ಬೆಲೆ ಬಾಳುವ ಜಮೀನು: ಸಮರ್ಥ್ ಗೆ ಆನೇಕೊಂಡ, ಬೇತೂರು ಬಳಿ 6.1 ಎಕರೆ ಜಮೀನು ಇದೆ. ಇದರ ಮೌಲ್ಯ 2,08,06,818 ರು. ಇನ್ನೂ ಹೊಣೆಗಾರಿಕೆ/ಸಾಲ 3,52,79,114 ರು. ಇದೆ.

ವಿದೇಶದಲ್ಲಿ ವಿದ್ಯಾಭ್ಯಾಸ

ಸಮರ್ಥ್ ಅವರು ದೇಶದ ಪ್ರತಿಷ್ಠಿತ ಶಾಲೆಯಲ್ಲಿ ಓದಿದ್ದು ಮಾತ್ರವಲ್ಲದೇ ವಿದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಡಿಗ್ರಿ ಪಡೆದಿದ್ದಾರೆ. 2015 ರಲ್ಲಿ 10ನೇ ತರಗತಿ, 2017 ರಲ್ಲಿ ಪಿಯುಸಿಯನ್ನು ಕೊಡೈಕೆನಾಲ್‌ನ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಮುಗಿಸಿದ್ದಾರೆ. ಆ ಬಳಿಕ ಮೂರು ವರ್ಷ ಇಂಗ್ಲೆಂಡ್‌ನ ಎಕ್ಸೆಟರ್ ವಿಶ್ವವಿದ್ಯಾಲಯದಲ್ಲಿ ಬಿಸಿನೆಸ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದಿದ್ದಾರೆ.

ಕೈ ಬಂಡಾಯ ಅಭ್ಯರ್ಥಿ ಸಾದಿಕ್ ನಾಮಪತ್ರ ಸಲ್ಲಿಕೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿರುವುದರಿಂದ ಅಸಮಾಧಾನಗೊಂಡಿರುವ ಸಾದಿಕ್ ಪೈಲ್ವಾನ್, ಬಂಡಾಯ ಅಭ್ಯರ್ಥಿಯಾಗಿ ಸೋಮವಾರ ಉಮೇದುವಾರಿಕೆ ಸಲ್ಲಿಸಿದರು.

ಮಹಾನಗರ ಪಾಲಿಕೆಯಲ್ಲಿರುವ ಚುನಾವಣಾಧಿಕಾರಿ ಕಚೇರಿಯವರೆಗೂ ಮೆರವಣಿಗೆಯಲ್ಲಿ ಬಂದ ಅವರೊಂದಿಗೆ ಕ್ಷೇತ್ರ ವ್ಯಾಪ್ತಿಯ ಅಲ್ಪಸಂಖ್ಯಾತ ಸಮುದಾಯದ ಮುಖಂಡರಿದ್ದರು. ಸಾದಿಕ್ ಅವರನ್ನು ಮೇಲೆತ್ತಿ ಕುಣಿದ ಬೆಂಬಲಿಗರು ಅಭ್ಯರ್ಥಿ ಪರ ಘೋಷಣೆ ಮೊಳಗಿಸಿದರು.

ಟಿಕೆಟ್ ನೀಡುವುದಾಗಿ ಕಾಂಗ್ರೆಸ್ ಹೈಕಮಾಂಡ್ ಭರವಸೆ ಕೊಟ್ಟಿತ್ತು. ಈ ಆಶ್ವಾಸನೆ ಹುಸಿಯಾಗಿದ್ದರಿಂದ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದೇನೆ. ಬಂಡಾಯ ಅಭ್ಯರ್ಥಿಯಾಗಿ ಚುನಾವಣೆ ಎದುರಿಸಲು ಸಜ್ಜಾಗಿದ್ದೇನೆ. ಚುನಾವಣಾ ಕಣದಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ ಎಂದು ನಾಮಪತ್ರ ಸಲ್ಲಿಕೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ಶಾಮನೂರು ಶಿವಶಂಕರಪ್ಪ ಅವರ ಶಿಷ್ಯನಾಗಿ, ಮನೆ ಮಗನಾಗಿ 40 ವರ್ಷ ದುಡಿದಿದ್ದೇನೆ. ಆರು ಚುನಾವಣೆಯಲ್ಲಿ ಅವರು ಗೆಲ್ಲಲು ಶ್ರಮಿಸಿದ್ದೇನೆ. ಶಿವಶಂಕರಪ್ಪ ಅವರ ಅಗಲಿಕೆಯ ಬಳಿಕವಾದರೂ ಅಲ್ಪಸಂಖ್ಯಾತರ ಸ್ಪರ್ಧೆಗೆ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ಕಾಂಗ್ರೆಸ್ ನಾಯಕರು ಟಿಕೆಟ್ ಆಕಾಂಕ್ಷಿಗಳಿಂದ ಅರ್ಜಿ ಪಡೆದು ನಿರ್ಲಕ್ಷ್ಯ ತೋರಿದ್ದಾರೆ ಎಂದು ಕಿಡಿಕಾರಿದರು.

ಉಮೇದುವಾರಿಕೆ ಸಲ್ಲಿಸಿದ ಬಳಿಕ ಸಾದಿಕ್ ಅವರು ಹರ್ಷ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಒತ್ತಡಕ್ಕೆ ಮಣಿಯುವುದಿಲ್ಲ. ಇದು ಚರ್ಚೆ, ಮಾತುಕತೆಯ ಹಂತವನ್ನು ಮೀರಿದ ತೀರ್ಮಾನ. ಕ್ಷೇತ್ರದ ಅಲ್ಪಸಂಖ್ಯಾತರು, ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ, ಪಂಗಡದ ಸಮುದಾಯ ಬೆನ್ನಿಗೆ ನಿಂತಿದೆ. ಚುನಾವಣೆಯಲ್ಲಿ ಗೆಲ್ಲುವ ಸಂಪೂರ್ಣ ವಿಶ್ವಾಸವಿದೆ.

– ಸಾದಿಕ್ ಪೈಲ್ವಾನ್ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ

ಕೆಸರಲ್ಲಿ ಇರುವ ಕಮಲ ಕೆಸರಲ್ಲೇ ಇರಲು ಬಿಡಿ

ದಾವಣಗೆರೆ: ಅಲ್ಪಸಂಖ್ಯಾತ ಸಮುದಾಯದ ಹಿತವನ್ನು ಕಾಂಗ್ರೆಸ್ ಮಾತ್ರ ಕಾಪಾಡಲು ಸಾಧ್ಯ. ನಿಮ್ಮ ದೇಶಭಕ್ತಿ, ಕುಟುಂಬದ ಮಹಿಳೆಯರ ಬಗ್ಗೆ ಮಾತನಾಡಿದ್ದು ಬಿಜೆಪಿ. ಅಂತಹ ಅಯೋಗ್ಯರಿಗೆ ಮತ ಹಾಕಬೇಡಿ. ಹೊಸ ತಲೆಮಾರು ರಾಜಕಾರಣಕ್ಕೆ ಬರಬೇಕು. ಇದಕ್ಕೆ ಅವಕಾಶ ಮಾಡಿಕೊಡಲು ಕಾಂಗ್ರೆಸ್ ಬೆಂಬಲಿಸಿ ಎಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಮನವಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನನಗೆ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲ. ಆದರೂ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ನನಗೆ ಪಕ್ಷ ಅವಕಾಶ ಮಾಡಿಕೊಟ್ಟಿಲ್ಲವೇ? ಕುಟುಂಬ ರಾಜಕಾರಣ ಬಿಜೆಪಿಯಲ್ಲಿ ಕೂಡ ಇದೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಅವರ ತಂದೆ ಕೂಡ ರಾಜಕಾರಣದಲ್ಲಿದ್ದವರು. ಅವರು ಮಾಡಿದರೆ ಸರಿಯೇ? ಎಂದು ಪ್ರಶ್ನಿಸಿದರು.ನರೇಂದ್ರ ಮೋದಿ ಅವರ ಆಡಳಿತದಲ್ಲಿ ದೇಶದ ವ್ಯವಸ್ಥೆ ಹಾಳಾಗಿದೆ. ಪಾಕಿಸ್ತಾನದ ಜತೆಗಿನ ಯುದ್ಧವನ್ನು ಅಮೆರಿಕದ ಮಾತು ಕೇಳಿ ನಿಲ್ಲಿಸಿದ್ದಾರೆ. ಇರಾನ್-ಅಮೆರಿಕ ಯುದ್ಧದಿಂದಾಗಿ ದೇಶದಲ್ಲಿ ಇಂಧನ ಬಿಕ್ಕಟ್ಟು ಸೃಷ್ಟಿ ಆಗಿದೆ. ಇದಕ್ಕೆ 56 ಇಂಚಿನ ಎದೆಯ ನಾಯಕ ಪರಿಹಾರ ನೀಡಿಲ್ಲ. 11 ವರ್ಷಗಳಿಂದ ಏನೂ ಮಾಡಿಲ್ಲ. ಹಾಗಾಗಿ, ಕೆಸರಲ್ಲಿ ಇರುವ ಕಮಲ ಕೆಸರಲ್ಲೇ ಇರಲು ಬಿಡಿ ಎಂದರು.



ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರು ನಾಮಪತ್ರ ಸಲ್ಲಿಸುವ ಮುನ್ನ ಸಿಎಂ ಸಿದ್ದರಾಮಯ್ಯ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಪ್ರದೀಪ್ ಈಶ್ವರ್ ಚರ್ಚೆ ನಡೆಸಿದರು.

ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತ ಸಮುದಾಯಕ್ಕೆ ಸಾಕಷ್ಟು ಅವಕಾಶ ಮತ್ತು ಸವಲತ್ತು ನೀಡಿದೆ. ಸಚಿವ ಸಂಪುಟದಲ್ಲಿ ಸ್ಥಾನ, ವಿಧಾನಸಭೆಯ ಅಧ್ಯಕ್ಷ ಸ್ಥಾನವನ್ನು ಮುಸ್ಲಿಂ ಸಮುದಾಯಕ್ಕೆ ನೀಡಿದೆ. ಇದೇ ಕಾರಣಕ್ಕೆ ಓಲೈಕೆ ರಾಜಕಾರಣ ಮಾಡುತ್ತಿದ್ದೇವೆ ಎಂಬ ಟೀಕೆಗೆ ಗುರಿ ಆಗಿದ್ದೇವೆ. ಅಲ್ಪಸಂಖ್ಯಾತ ಸಮುದಾಯದ ಜನರು ಇದನ್ನು ಅರ್ಥ ಮಾಡಿಕೊಂಡು ಮತ ಚಲಾವಣೆ ಮಾಡಿ, ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಬೇಕು.

– ಪ್ರದೀಪ್ ಈಶ್ವರ್ ಶಾಸಕ

ಗ್ಯಾರಂಟಿ ಹಾಗೂ ಸಬ್ಸಿಡಿ ಹೀಯಾಳಿಸಿ ಖಳನಾಯಕನಂತೆ ಬಿಂಬಿಸುವ ಯತ್ನ ನಡೆಯುತ್ತಿದೆ: ಕೃಷ್ಣಬೈರೇಗೌಡ

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕವೇ ನಂಬರ್ 1

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕರ್ನಾಟಕವನ್ನು ಸಬ್ಸಿಡಿ ರಾಜ್ಯವನ್ನಾಗಿ ಮಾಡಬೇಡಿ. ಅಭಿವೃದ್ಧಿ ಮತ್ತು ಸಾಧನೆಯ ರಾಜ್ಯವನ್ನಾಗಿ ಮಾಡಿ ಎಂದು ಪ್ರತಿಪಕ್ಷಗಳು ಮಾಡಿದ ಟೀಕೆ, ವಿಧಾನಸಭೆಯಲ್ಲಿ ಗಂಭೀರ ಚರ್ಚೆಗೆ ಕಾರಣವಾಗಿ ಸಚಿವ ಕೃಷ್ಣ ಬೈರೇಗೌಡ ರಾಜ್ಯದ ಆರ್ಥಿಕ ಪರಿವರ್ತನೆಯ ಬಗ್ಗೆ ಸುದೀರ್ಘ ಉತ್ತರ ನೀಡಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಬಿಜೆಪಿಯ ಶಾಸಕ ವಿ ಸುನಿಲ್ ಕುಮಾರ್, ಕರ್ನಾಟಕದ ಬಜೆಟ್‌ನಲ್ಲಿ ಶೇ.14ರಷ್ಟನ್ನು ಸಬ್ಸಿಡಿಗಾಗಿ ಖರ್ಚು ಮಾಡಲಾಗುತ್ತಿದೆ. ಇದು ಭವಿಷ್ಯದಲ್ಲಿ ರಾಜ್ಯದ ಆರ್ಥಿಕ ಆರೋಗ್ಯ ಮತ್ತು ವಿತ್ತಿಯ ಹೊಣೆ ಗಾರಿಕೆ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಆಲೋಚಿಸುವ ಅಗತ್ಯ ಇದೆ ಎಂದು ಸಲಹೆ ನೀಡಿದರು.

ಇದಕ್ಕೆ ಬಿಜೆಪಿಯ ಸುರೇಶ್ ಕುಮಾರ್ ಧ್ವನಿಗೂಡಿಸಿ, ಸಬ್ಸಿಡಿ ಮತ್ತು ಗ್ಯಾರಂಟಿ ಗ್ಯಾರಂಟಿಗಳ ಹೊರೆಯಿಂದ ಹಿಮಾಚಲ ಪ್ರದೇಶದಲ್ಲಿ ಸರಕಾರಿ ನೌಕರರಿಗೆ ಶೇಕಡ 40ರಷ್ಟು ವೇತನ ಕಡಿತ ಮಾಡಲಾಗಿದೆ. ಸಚಿವರಿಗೆ ಶೇಕಡ 30ರಷ್ಟು, ಶಾಸಕರಿಗೆ ಶೇಕಡ 20ರಷ್ಟು ವೇತನ ಕಡಿತ ಮಾಡಿ ಪ್ರತಿ ತಿಂಗಳ ಸಂಬಳ ವಿಳಂಬವಾಗಿ ನೀಡುವ ಪರಿಸ್ಥಿತಿ ಇದೆ. ಇದರ ಬಗ್ಗೆಯೂ ನಾವು ಗಮನ ಹರಿಸಬೇಕು. ಪರಿಣಾಮದ ಬಗ್ಗೆ ಸರ್ವೆ ಮಾಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ಜಿಎಸ್‌ಟಿ ಸಂಗ್ರಹದ ಬೆಳವಣಿಗೆಯ ದರದಲ್ಲಿ ಕರ್ನಾಟಕ ದೇಶದಲ್ಲಿಯೇ

ಗ್ಯಾರಂಟಿ ಯೋಜನೆಗಳಿಂದ ಹಣ ಪಡೆಯುವವರು ಅದನ್ನು ಉಳಿತಾಯ ಮಾಡುವುದಿಲ್ಲ. ಬದಲಾಗಿ ಮಾರುಕಟ್ಟೆಯಲ್ಲಿ ಬಳಕೆ ಮಾಡುತ್ತಾರೆ ಇದರಿಂದಾಗಿಯೇ ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ ಹೆಚ್ಚಾಗಿದೆ. ತಲಾ ಆದಾಯವು ಸುಧಾರಣೆಯಾಗಿದೆ.

-**ಕೃಷ್ಣಬೈರೇಗೌಡ,** ಕಂದಾಯ ಸಚಿವ

ನಂಬರ್ ಒನ್ ಸ್ಥಾನದಲ್ಲಿದೆ. ಮಹಾರಾಷ್ಟ್ರ ಹಾಗೂ ಗುಜರಾತ್‌ಗಿಂತಲೂ ನಾವು ಮುಂದಿದ್ದೇವೆ. ನಮ್ಮ ಜಿಎಸ್‌ಟಿ ಸಂಗ್ರಹದ ಬೆಳವಣಿಗೆಯ ದರ ಶೇಕಡ 11ರಷ್ಟಿದೆ ತಲಾ ಆದಾಯದಲ್ಲೂ ನಂಬರ್ ಒನ್

ಅಧಿವೇಶನ ಮೊಟಕು ಬೇಡ: ಪ್ರತಿಪಕ್ಷ ಆಗ್ರಹ

ವಿಧಾನಸಭೆಯ ಅಧಿವೇಶನ ಮೊಟಕುಗೊಳಿಸಬೇಡಿ. ನಿಗದಿತ ವೇಳಾಪಟ್ಟಿಯಂತೆ ಕಲಾಪ ನಡೆಯಲಿ ಎಂದು ಪ್ರತಿಪಕ್ಷದವರು ಆಗ್ರಹಿಸಿದರು. ವಿಧಾನಸಭೆಯ ಕಲಾಪದ ಆರಂಭದಲ್ಲಿ ಸಭಾಧ್ಯಕ್ಷ ಯು.ಟಿ ಖಾದರ್ ಅವರು ಸೋಮವಾರದ ಪ್ರಶ್ನೋತ್ತರವನ್ನು ಬದಿಗಿರಿಸಿ ವಿತ್ತಿಯ ಕಾರ್ಯ ಕಲಾಪಗಳ ಮುಂದುವರಿಕೆಗೆ ಅವಕಾಶ ಮಾಡಿಕೊಟ್ಟರು. ಆಗ ಮಧ್ಯ ಪ್ರವೇಶಿಸಿದ ಪ್ರತಿಪಕ್ಷದ ನಾಯಕ ಆರ್.ಅಶೋಕ, ಬಜೆಟ್ ಮೇಲೆ ಮಹತ್ವದ ಚರ್ಚೆ ನಡೆಯುತ್ತಿದೆ. ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಇಬ್ಬರು ಸದನದಲ್ಲಿ ಇಲ್ಲ. ಕಳೆದ ವಾರ ಬೆಂಗಳೂರಿನ ಅಭಿವೃದ್ಧಿಯ ಬಗ್ಗೆ ಚರ್ಚೆ ಮಾಡಿದ್ದೇವೆ ಅದಕ್ಕೆ ಉತ್ತರ ನೀಡಿಲ್ಲ. ಸದನಕ್ಕೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು ಬರುತ್ತಾರೆಯೇ ಅಥವಾ ಇಲ್ಲವೇ ಎಂದು ಸ್ಪಷ್ಟನೆ ನೀಡಿ. ಕಲಾಪ ಮೊಟ್ಟಕುಗೊಳಿಸಬೇಡಿ. ಪೂರ್ಣಾವಧಿ ಅಧಿವೇಶನ ನಡೆಸಿ ಎಂದು ಆಗ್ರಹಿಸಿದರು. ಸ್ಪಷ್ಟನೆ ನೀಡಿದ ಸಭಾಧ್ಯಕ್ಷರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರು ಅಧಿವೇಶನಕ್ಕೆ ಬರುತ್ತಾರೆ. ಅಲ್ಲಿಯವರೆಗೂ ಚರ್ಚೆಗಳು ಮುಂದುವರೆಯಲಿ ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಜೆಟ್‌ನಲ್ಲಿ ಆರೋಗ್ಯಕ್ಕೆ ಶೇಕಡ 30ರಷ್ಟು, ಶಿಕ್ಷಣಕ್ಕೆ ಶೇಕಡ 20ರಷ್ಟು ಅನುದಾನ ಕಡಿತ ಮಾಡಲಾಗಿದೆ. ಅರ್ಹರಿಗೆ ಸೌಲಭ್ಯ ಕೊಡುವುದು ಸೂಕ್ತ ಆದರೆ ಅದು ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರುವಂತಹ ಆಗಬಾರದು.

– **ಆರ್.ಅಶೋಕ,** ಪ್ರತಿಪಕ್ಷ ನಾಯಕ

ಸ್ಥಾನದಲ್ಲಿದ್ದೇವೆ. ಆರ್ಥಿಕವಾಗಿ ಮುಂದಿನ ದಿನಗಳಲ್ಲಿ ಬೀರಬಹುದಾದ ಪರಿಣಾಮಗಳ ಬಗ್ಗೆ ಕೂಡ ಚರ್ಚೆಯಾಗುತ್ತಿದೆ. ಕೇಂದ್ರ ಸರಕಾರ ಜಿಎಸ್‌ಟಿ ಪರಿಷ್ಕರಣೆ ಮಾಡಿದ ಬಳಿಕ ಎಲ್ಲಾ ರಾಜ್ಯಗಳಿಗೂ ಸಂಗ್ರಹದಲ್ಲಿ ನಷ್ಟವಾಗಿದೆ. ಆದರೂ ನಮ್ಮಲ್ಲಿ ಪರಿಸ್ಥಿತಿ ಸುಧಾರಣೆಯಲ್ಲಿದೆ. ನಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಹಣಕಾಸಿನ ಆರೋಗ್ಯ ಸಮತೋಲಿತವಾಗಿದೆ ಎಂದು ಸಮರ್ಥಿಸಿಕೊಂಡರು.

ರಿಯಾಯಿತಿ ನೀಡುವುದು ಹಲವು ದಿನಗಳಿಂದ ನಡೆದಿದೆ: 150 ವರ್ಷಗಳ ಆರ್ಥಿಕ ಸ್ಥಿತ್ಯಂತರ ನೋಡಿದಾಗ, ಉತ್ಪಾದಕರ ಬೆಂಬಲಕ್ಕೆ ಅನುಗುಣವಾದ ಪೂರೈಕೆ ಮಾದರಿ ಹಾಗೂ ಎರಡನೇಯದಾಗಿ ಬೇಡಿಕೆ ಆಧಾರಿತ ಖರೀದಿದಾರರಿಗೆ ಬೆಂಬಲಿಸುವ ಮಾದರಿಗಳನ್ನು ಕಾಣಬಹುದು. ಉತ್ಪಾದಕರಿಗೆ ಉತ್ತೇಜನ ನೀಡುವ ಸಲುವಾಗಿ ವಿವಿಧ ರಿಯಾಯಿತಿ ನೀಡುವ ಪೂರೈಕೆ ಮಾದರಿ ಬಹಳಷ್ಟು ದಿನದಿಂದಲೂ ನಡೆದಿದೆ. ಆದರೆ ಬೇಡಿಕೆಗೆ ಇಲ್ಲದೆ ಇದ್ದ ಮೇಲೆ ಉತ್ಪಾದಕರಲ್ಲೂ ನಿರಾಶಕ್ತಿ ಸಹಜವಾಗಿಯೇ ಇರುತ್ತದೆ. ಇದರಿಂದ ಆರ್ಥಿಕತೆ ಕುಸಿಯುತ್ತದೆ. ಖರೀದಿದಾರರಿಗೆ ಬೆಂಬಲಿಸುವ ಮಾದರಿ ವಿಶ್ವದಲ್ಲಿ ಯಶಸ್ವಿಯಾಗಿದೆ. ಬಹಳಷ್ಟು ದೇಶಗಳು ಆರ್ಥಿಕ ಒತ್ತಡಕ್ಕೆ ಸಿಲುಕಿದಾಗ ಖರೀದಿದಾರರಿಗೆ ಆರ್ಥಿಕ ನೆರವು ನೀಡುವ ಮೂಲಕ ಚೇತರಿಕೆ ಕಂಡಿರುವ ಸಾಕಷ್ಟು ಉದಾಹರಣೆಗಳಿವೆ. ಖರೀದಿದಾರರಿಗೆ ಒಂದು ರೂಪಾಯಿ ಕೊಟ್ಟರೆ ಅದು ಐದು ಪಟ್ಟು ಮಾರುಕಟ್ಟೆಯಲ್ಲಿ ಬಳಕೆಯಾಗುತ್ತದೆ. ಇದರಿಂದ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುತ್ತವೆ. ಬೇಡಿಕೆಯು ವೃದ್ಧಿಯಾಗುತ್ತದೆ. ಸಹಜವಾಗಿಯೇ ಉತ್ಪಾದಕರಿಗೆ ಬೇಡಿಕೆ ಹೆಚ್ಚಾಗಿ ಉತ್ಪಾದನೆಗೆ ಉತ್ತೇಜನ ದೊರೆಯುತ್ತದೆ. ಇದು ಕೆನ್ಸಿಯನ್ ಎಕಾನಮಿ ಎಂದು ಕರೆಯಲಾಗುತ್ತದೆ ಎಂದು ವಿವರಿಸಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ, ನಾವು ಗ್ಯಾರಂಟಿ ಯೋಜನೆಗಳಿಗೆ ವಿರೋಧ ಇಲ್ಲ, ಆದರೆ ಸರಕಾರದ ಆದ್ಯತಾ ವಲಯಗಳಿಗೆ ಹೆಚ್ಚಿನ ಒತ್ತು ನೀಡಬೇಕು. ರೈತರಿಗೆ ಸಬ್ಸಿಡಿ ನೀಡುವುದರಿಂದ ಆಹಾರ ಉತ್ಪಾದನೆ ಹೆಚ್ಚಾಗುತ್ತದೆ. ಕೃಷಿ ಕೈಗಾರಿಕೆಗಳು ಬೆಳವಣಿಗೆ ಆಗುತ್ತವೆ . ದಿನಾ ಒಂದು ಮೀನನ್ನು ಉಚಿತವಾಗಿ ನೀಡುವ ಬದಲಾಗಿ ಜನರಿಗೆ ಮೀನು ಹಿಡಿಯುವುದನ್ನು ಕಲಿಸಿಕೊಡುವುದು ಒಳ್ಳೆಯದು ಎಂದು ಹಿರಿಯರು ಹೇಳಿದ್ದಾರೆ. ಎರಡು ಸಾವಿರ ರೂಪಾಯಿಗಳನ್ನು ಕೊಟ್ಟು ಜನ ದಿನಾ ನಿಮ್ಮ ಮನೆ ಬಾಗಿಲು ಕಾಯುವಂತೆ ಮಾಡುವ ಬದಲಾಗಿ, ಶಿಕ್ಷಣ ಆರೋಗ್ಯ ಕೈಗಾರಿಕಾ ಚಟುವಟಿಕೆಗಳಿಗೆ ಒತ್ತು ನೀಡಿ. ಜನರನ್ನು ಸಬಲೀಕರಣ ಗೊಳಿಸಿ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಇನ್ನೂ 2 ವರ್ಷ ಸಿಎಂ ಬಜೆಟ್ ಮಂಡಿಸುವರು

ವಿಧಾನಸಭೆ: ನಾಯಕತ್ವ ಬದಲಾವಣೆ ಎಂಬ ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಸಚಿವ ಜಮೀರ್ ಅಹಮದ್ ಖಾನ್ ಮುಂದಿನ ಎರಡು ವರ್ಷಗಳ ಕಾಲ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸುತ್ತಾರೆ ಎಂದು ಹೇಳಿದ್ದಾರೆ. ಬಿಜೆಪಿಯ ಶಾಸಕ ವಿ.ಸುನೀಲ್ ಕುಮಾರ್ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಸಿದ್ದರಾಮಯ್ಯ ವಿತ್ತ ತಜ್ಞ ಅಷ್ಟೆ ಅಲ್ಲ. ಆರ್ಥಿಕ ತಜ್ಞ ಕೂಡ ಆಗಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಹೊಸ ಹೊಸ ಪದಗಳನ್ನು ಬಳಸಿದ್ದಾರೆ. ಅವುಗಳನ್ನು ನಮಗೆ ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತಿದೆ. ಟ್ರೊಟಿಂಗ್ ಎಕನಾಮಿ, 11ಜಿ, ಫಲಧಾರೆ, ಭೀಷ್ಮತತ್ವ, ಬೆಂಕಿಯನ್ನು ಬೆಳಕಾಗಿಸುವುದು ಸೇರಿದಂತೆ ಹಲವಾರು ಪದ ಬಳಕೆಯಾಗಿದೆ. ಇವುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಮುಂದಿನ ಬಜೆಟ್ ವೇಳೆ ಶಬ್ದಕೋಶವನ್ನು ಕೊಟ್ಟುಬಿಡಿ ಎಂದರು. ಸಭಾಧ್ಯಕ್ಷರು ಈಗ ಶಬ್ದಕೋಶದ ಅಗತ್ಯವಿದೆ ಎಂದು ಕೇಳಿದರು. ನಿಮ್ಮ ಕಚೇರಿಯ ಸಹಾಯದಿಂದ ಈ ಬಜೆಟ್‌ನಲ್ಲಿರುವ ಹೊಸ ಪದಗಳನ್ನು ಅರ್ಥಮಾಡಿಕೊಂಡಿದ್ದೇನೆ ಎಂದ ಸುನೀಲ್ ಕುಮಾರ್, ಮುಂದಿನ ಬಾರಿಯೂ ಸಿದ್ದರಾಮಯ್ಯ ಅವರೇ ಬಜೆಟ್ ಮಂಡಿಸಿದರೆ ಆಗ ಶಬ್ದಕೋಶ ಬೇಕಾಗಬಹುದು ಎಂದರು.

ಅನುದಾನ ಹಂಚಿಕೆ: ಕರಾವಳಿಗೆ ಶೂನ್ಯ

ಬೆಂಗಳೂರು: ಪ್ರಸಕ್ತ ಬಜೆಟ್‌ನಲ್ಲಿ ಕರಾವಳಿ ಭಾಗಕ್ಕೆ ಅತ್ಯಲ್ಪ ಅನುದಾನ ಹಂಚಿಕೆ ಮಾಡಿರುವುದನ್ನು ಬಿಜೆಪಿ ಸದಸ್ಯ ಕಿಶೋರ ಕುಮಾರ ಪುತ್ತೂರ ತೀವ್ರವಾಗಿ ಖಂಡಿಸಿದರು. ತಮ್ಮ ಸ್ವರಚಿತ ಕವನ ಸಾಲುಗಳನ್ನು ಉಲ್ಲೇಖಿಸಿ 'ತೆರಿಗೆಯಲ್ಲಿ ನಮ್ಮದು ಅಗ್ರಪಾಲು – ಅನುದಾನದ ಹಂಚಿಕೆಯಲ್ಲಿ ಶೂನ್ಯದ ಹಾಲು, ನಮ್ಮ ನಗುವೇ ನಿಮಗೆ ಅಗ್ಗವಾಯಿತೇ? ಎಂದು ಸರಕಾರವನ್ನು ಪ್ರಶ್ನಿಸಿದರು. ಅತೀ ಹೆಚ್ಚು ತೆರಿಗೆ ನೀಡುವ ಕರಾವಳಿ ಭಾಗದ ಅಭಿವೃದ್ಧಿಗೆ ಕೋಟಿ ರು. ಮೀಸಲಿಟ್ಟರೆ ಸಾಕೇ? ಅತ್ತ ಸುಕ್ಷೇತ್ರಗಳಾದ ಕಟೀಲು ದುರ್ಗಾಪರಮೇಶ್ವರಿ ಮೊದಲಾದ ಪ್ರಸಿದ್ಧ ದೇವಾಲಯಗಳ ಅಭಿವೃದ್ಧಿಗೂ ಒಂದೇ ಒಂದು ರು. ಅನುದಾನವನ್ನು ಸರಕಾರ ಮೀಸಲಿರಿಸಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಕೇಂದ್ರ ಸರಕಾರದ ವಿರುದ್ಧ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಆಕ್ರೋಶ

19,102 ಕೋಟಿ ರು.ಕೇಂದ್ರದಿಂದ ಜೆಜೆಎಂ ಬಾಕಿ

ವಿಧಾನಸಭೆ: ಜಲಜೀವನ್ ಮಿಷನ್ ಯೋಜನೆಯಡಿ ಕೇಂದ್ರ ಸರಕಾರದಿಂದ ರಾಜ್ಯಕ್ಕೆ 19,102 ಕೋಟಿ ಬಾಕಿ ಬರಬೇಕಿದೆ ಎಂದು ಕಾಂಗ್ರೆಸ್ ಶಾಸಕ ಎಸ್.ಎನ್.ನಾರಾಯಣ ಸ್ವಾಮಿ ತಿಳಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ಜಲಜೀವನ್ ಮಿಷನ್ ಯೋಜನೆಯಡಿ 11,770 ಕೋಟಿ ರು. ಮಾತ್ರ ಬಿಡುಗಡೆ ಮಾಡಿದೆ. ರಾಜ್ಯ ಸರಕಾರಕ್ಕೆ ಇದರಿಂದ ಹೆಚ್ಚುವರಿ ಹೊರೆಯಾಗಿದೆ ಎಂದು ಹೇಳಿದರು.

ಬೆಂಗಳೂರಿನಲ್ಲಿ 96 ಕಿ.ಮೀ. ಮೆಟ್ರೋ ಮಾರ್ಗ ಹೆಚ್ಚಳ ಮಾಡುತ್ತಿದ್ದು, 12 ಸಾವಿರ ಕೋಟಿ ಮೀಸಲಿಡಲಾಗಿದೆ. 14ನೇ ಹಣಕಾಸು ಆಯೋಗದ ಶಿಫಾರಸಿಗಿಂತ 15ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿದ್ದ ಅನುದಾನ ಇಳಿಕೆಯಾಗಿದ್ದು, ಸುಮಾರು 15 ಸಾವಿರ ಕೋಟಿ ರು. ನಷ್ಟವಾಗುತ್ತಿದೆ. ಈ ಬಗ್ಗೆ ಬಿಜೆಪಿ ಸಂಸದರು, ನಾಯಕರು ಚಕಾರವೆತ್ತುತ್ತಿಲ್ಲ. ಗ್ಯಾರಂಟಿ ಯೋಜನೆಗಳಿಗಾಗಿ 1,21,598 ಕೋಟಿ ರು. ವೆಚ್ಚ ಮಾಡಲಾಗಿದ್ದು, ಬಜೆಟ್‌ನಲ್ಲಿ ಮುಂದಿನ ಆರ್ಥಿಕ ಸಾಲಿಗೆ 51280 ಕೋಟಿ ರು. ಒದಗಿಸಲಾಗಿದೆ ಎಂದರು.

ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಬಡವರಿಗೆ ತಲುಪಿಸಲಾಗುತ್ತಿದೆ. ಆದರೆ ವಿಪಕ್ಷಗಳು ಸರಕಾರ ಪಾಪರ್ ಆಗಿದೆ ಎಂದು ಆರೋಪ ಮಾಡುತ್ತಿವೆ. ಬಂಡವಾಳ ಯೋಜನೆಗಳಿಗೆ 84 ಸಾವಿರ ಕೋಟಿ ರು. ಹೆಚ್ಚು ಹಣ ಒದಗಿಸಲಾಗಿದೆ. ಪಾಪರ್ ಆಗಿದ್ದರೆ ಈ ಪ್ರಮಾಣದ ಹಣ ಕೊಡಲಾಗುತ್ತಿತ್ತೇ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013 ರಿಂದ 2018ರ ವರೆಗಿನ ಅವಧಿಯಲ್ಲಿ ದಾನಶೂರ ಕರ್ಣನಂತೆ ಶಾಸಕರಿಗೆ ಅನುದಾನ ಕೊಡುತ್ತಿದ್ದರು. ಆದರೆ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಶಾಸಕರು ಪತ್ರ ಕೊಟ್ಟರೂ 100 ರು. ಅನುದಾನ ಕೊಡುತ್ತಿರಲಿಲ್ಲ. ಮುಖ್ಯಮಂತ್ರಿಯವರು ಈಗ 25 ಕೋಟಿ ರು. ಅನುದಾನ ಕೊಡುತ್ತಿದ್ದಾರೆ. ಹಿಂದಿನ ಸರಕಾರದ ಅವಧಿಯಲ್ಲಿ ಕುಂಠಿತವಾಗಿ ಕುಡಿಯುವ ನೀರಿನ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಆದ್ದರಿಂದ ಅವರನ್ನು ಅಭಿನಂದಿಸಬೇಕು ಎಂದರು.

ದೇಶದಲ್ಲಿಯೇ ಅತ್ಯುತ್ತಮ ಬಜೆಟ್

ದೇಶದಲ್ಲಿಯೇ ಅತ್ಯುತ್ತಮ ಬಜೆಟ್ ಅನ್ನು ಮುಖ್ಯಮಂತ್ರಿ ಮಂಡಿಸಿದ್ದು ಬೆಳಕು ಚೆಲ್ಲಿದ್ದಾರೆ. ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ 61 ಶ್ರಮಿಕ ವಸತಿ ಶಾಲೆ ಪ್ರಾರಂಭಿಸಲು ಉದ್ದೇಶಿಸಿದ್ದು, ವಿವಿ 74 ಸೌಲ್ಯಗಳನ್ನು ಕೊಡಲಾಗುತ್ತಿದೆ. ಒಳಮೀಸಲಾತಿ ವಿಚಾರ ಇತ್ಯರ್ಥವಾದ ಬಳಿಕ ಖಾಲಿ ಹುದ್ದೆ ಭರ್ತಿ ಮಾಡಲಾಗುವುದು ಎಂದ ಅವರು, 2028ರ ಚುನಾವಣೆಯಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಈಗ ನಡೆಯುತ್ತಿರುವ 2 ವಿಧಾನಸಭಾ ಉಪ ಚುನಾವಣೆಯಲ್ಲೂ ನಾವೇ ಗೆಲ್ಲುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಕ್ಕಳ ಮೊಬೈಲ್ ಬಳಕೆ ನಿಷೇಧಕ್ಕೆ ಮಾರ್ಗಸೂಚಿ: ಮಧುಬಂಗಾರಪ್ಪ

ವಿಧಾನ ಪರಿಷತ್: ಶಾಲಾಕಾಲೇಜುಗಳಲ್ಲಿ 16 ವರ್ಷದೊಳಗಿನ ಮಕ್ಕಳು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧಿಸುವ ಕುರಿತು ಮುಂದಿನ ಅಧಿವೇಶನದಲ್ಲಿ ವಿಶೇಷ ಮಾರ್ಗಸೂಚಿ ಗಳನ್ನು ರಚಿಸಿ ಸದನದಲ್ಲಿ ಮಂಡನೆ ಮಾಡಲಿದ್ದೇವೆ ಎಂದು ಶಾಲಾ ಸಾಕ್ಷರತಾ, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಸದಸ್ಯರಾದ ಪ್ರತಾಪ್ ಸಿಂಹ ನಾಯಕ್, ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ 16 ವರ್ಷದೊಳಗಿನ ಮಕ್ಕಳು ಶಾಲಾ ಮತ್ತು ಕಾಲೇಜುಗಳಲ್ಲಿ ಮೊಬೈಲ್ ಮತ್ತು ಸಾಮಾಜಿಕ ಜಾಲತಾಣ ಬಳಕೆ ಮಾಡುವುದನ್ನು ನಿಷೇಧ ಮಾಡುವುದಾಗಿ ಘೋಷಿಸಿದ್ದಾರೆ. ಇಡೀ ರಾಷ್ಟ್ರದಲ್ಲೇ ಇಂಥ ದಿಟ್ಟ ಕ್ರಮ ತೆಗೆದುಕೊಂಡಿರುವ ಮೊದಲ ರಾಜ್ಯ ಕರ್ನಾಟಕ ಎಂದು ಪ್ರಶಂಸಿಸಿದರು.

ಮೊಬೈಲ್ ಮತ್ತು ಸಾಮಾಜಿಕ ಜಾಲತಾಣ ಬಳಕೆ ಮಾಡಬಾರದೆಂಬ ನಿಯಮವಿದೆ. ಇದರಿಂದ ಅನುಕೂಲವೂ ಇದೆ, ಅನಾನುಕೂಲವೂ ಇದೆ. ನಾವು ಯಾವ ರೀತಿ ಬಳಕೆ ಮಾಡಿಕೊಳ್ಳುತ್ತೇವೆ ಎಂಬುದರ ಮೇಲೆ ಇವುಗಳು ಅವಲಂಬಿತವಾಗಿದೆ. ಮೊಬೈಲ್ ಬಳಕೆಯಿಂದ ಒಳ್ಳೆಯದನ್ನು ಕಲಿತರೆ ಸಮಸ್ಯೆ ಇಲ್ಲ. ಆದರೆ ಬಹುತೇಕ ಮಕ್ಕಳು ಬೇಡವಾದ ವಿಷಯಗಳನ್ನು ಕಲಿಯುತ್ತಾರೆ. ಇದು ಅವರ ಕಲಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಬಹುತೇಕರು ನಿಷೇಧ ಮಾಡಬೇಕೆಂದು ಹೇಳುತ್ತಿರುವುದು ಸರಿಯಾಗಿಯೇ ಇದೆ ಎಂದರು.

ಮೊಬೈಲ್ ಮತ್ತು ಸಾಮಾಜಿಕ ಜಾಲತಾಣ ಬಳಸುವುದನ್ನು ಯಾವ ರೀತಿ ನಿರ್ಬಂಧ ಹಾಕಬೇಕು ಎಂಬುದರ ಬಗ್ಗೆ ಇಲಾಖೆ ಅಧಿಕಾರಿಗಳು, ಪೋಷಕರು, ಶಿಕ್ಷಣ ತಜ್ಞರು, ಸಂಘಸಂಸ್ಥೆಗಳು ಸೇರಿದಂತೆ ಸಮಾಜದ ವಿವಿಧ ಗಣ್ಯರಿಂದ ಅಭಿಪ್ರಾಯಗಳನ್ನು ಸಂಗ್ರಹಿಸುತ್ತದೆ. ಅಂತಿಮವಾಗಿ ಎಲ್ಲರೊಂದಿಗೆ ಚರ್ಚಿಸಿದ ಬಳಿಕ ಮಾರ್ಗಸೂಚಿಗಳನ್ನು ಗುರುತಿಸಲಿದ್ದೇವೆ. ಹಲವು ರಾಷ್ಟ್ರಗಳಲ್ಲಿ ಇದನ್ನು ನಿಷೇಧ ಮಾಡಿದ್ದಾರೆ. ವಿಶ್ವಸಂಸ್ಥೆಯ ವಿಶ್ವ ಮಕ್ಕಳ ಸಂಘಟನೆಯೂ ಕೂಡ ಇದರ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಸದ್ಯ ಶಾಲಾಕಾಲೇಜುಗಳಲ್ಲಿ ಮೊಬೈಲ್ ಬಳಸಬಾರದೆಂಬ ನಿಯಮವಿದೆ. ಆದರೆ ಹೊರಗೆ ಬಂದ ನಂತರ ಬಳಸುತ್ತಾರೆ. ಇದನ್ನು ಯಾವ ರೀತಿ ತಡೆಹಿಡಿಯಬೇಕೆಂಬುದರ ಬಗ್ಗೆ ಸೂಕ್ತ ನಿಯಮಗಳನ್ನು ರೂಪಿಸಲಾಗುವುದು ಎಂದರು.

ಪರಿಣಾಮಕಾರಿ ಬೋಧನೆಗೆ ಕ್ರಮ

ಕಳೆದ ವರ್ಷವೇ ನಾವು ಮಕ್ಕಳಿಗೆ ನೈತಿಕ ಶಿಕ್ಷಣದ ಬೋಧನೆ ಮಾಡುವ ಬಗ್ಗೆ ಶಿಕ್ಷಕರಿಗೆ ಸೂಚನೆ ನೀಡಿದ್ದೆವು. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣ ಬಳಕೆ ಮಾಡುವುದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ತಿಳಿವಳಿಕೆ ನೀಡುವಂತೆ ಸಲಹೆ ಮಾಡಲಾಗಿತ್ತು. ಮುಂಬರುವ ಶೈಕ್ಷಣಿಕ ವರ್ಷದಿಂದ ಇದನ್ನು ಇನಷ್ಟು ಪರಿಣಾಮಕಾರಿಯಾಗಿ ಬೋಧನೆ ಮಾಡಲು ಸೂಚಿಸಲಾಗುತ್ತದೆ. ನಮ್ಮ ಸರಕಾರ ತರುವ ಮಾರ್ಗಸೂಚಿಗಳು ಎಲ್ಲ ರಾಜ್ಯಗಳಿಗೂ ಮಾದರಿಯಾಗಬೇಕು. ಸ್ವಲ್ಪ ವಿಳಂಬವಾದರೂ ಉತ್ತಮ ನಿಯಮಗಳನ್ನು ರೂಪಿಸುತ್ತೇವೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಪಟ್ಟಂದೂರು ಅಗ್ರಹಾರ, ಬೆಂಗಳೂರು**
- **ಸಮಸ್ಯೆಯೇನು?**

ಬೀದಿ ದೀಪಗಳನ್ನು ಅಳವಡಿಸುವ ಕುರಿತು.

- **ಪರಿಹಾರ:** ಪಟ್ಟಂದೂರು ಅಗ್ರಹಾರದ ಬಳಿಯ ಐಟಿಪಿಎಲ್ ಗೇಟ್ ನಂಬರ್ 3ರ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲವೆಂದು ಎಕ್ಸ್ ಖಾತೆಯೊಂದರಲ್ಲಿ ಪೋಸ್ಟ್ ಮಾಡಲಾಗಿತ್ತು. ಪೋಸ್ಟ್ ಆಧರಿಸಿ ಸ್ಥಳ ಪರಿಶೀಲನೆ ನಡೆಸಿರುವ ಪಾಲಿಕೆ ಅಧಿಕಾರಿಗಳು ಮುಂದಿನ ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಒದಗಿಸಿಕೊಂಡು 30 ದಿನಗಳ ಒಳಗೆ ಕಾಮಗಾರಿ ಪ್ರಾರಂಭ ಮಾಡುವುದಾಗಿ ಭರವಸೆ ನೀಡಿದ್ದಾರೆ.

ವನ್ಯಜೀವಿ ಕಾಯಿದೆ ತಿದ್ದುಪಡಿ ಅಧಿಕಾರ ಕೇಂದ್ರಕ್ಕೆ

ವಿಧಾನ ಪರಿಷತ್: ವನ್ಯ ಜೀವಿಗಳ ಅಂಗಾಂಗ, ಟ್ರೋಫಿಗಳನ್ನು ಸರಕಾರಕ್ಕೆ ನೀಡಬೇಕು ಎಂಬುದು ಕೇಂದ್ರ ಸರಕಾರದ ಕಾನೂನು. ಈ ಬಗ್ಗೆ ಉಲ್ಲೇಖಿಸುವ ವನ್ಯಜೀವಿ (ಸಂರಕ್ಷಣಾ) ಕಾಯಿದೆ–1972 ಗೆ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರಕಾರಕ್ಕೆ ಮಾತ್ರವಿದೆ. ರಾಜ್ಯಕ್ಕೆ ಅಧಿಕಾರವಿಲ್ಲ ಎಂದು ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸದಸ್ಯ ಕುಶಾಲಪ್ಪ ಎಂ. ಪಿ. (ಸುಜಾ) ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿರುವ ವಸ್ತುಗಳನ್ನು ಅವರ ಬಳಿಯೇ ಇಟ್ಟುಕೊಳ್ಳಲು ಅವಕಾಶ ನೀಡುವಂತೆ ಈಗಾಗಲೇ ಎರಡು ಬಾರಿ ಕೇಂದ್ರ ಸಚಿವರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ. ಮತ್ತೊಮ್ಮೆ ಕೇಂದ್ರ ಸಚಿವರನ್ನು ಭೇಟಿಯಾಗಲು ನಾನು ಸಿದ್ಧನಿದ್ದೇನೆ ಎಂದರು. ರಾಜ್ಯ ಸರಕಾರವು ವನ್ಯ ಜೀವಿಗಳ ವಸ್ತುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ 2024ರ ಜ.10 ರಂದು ಆದೇಶಿಸಿ, 90 ದಿನಗಳ ಕಾಲವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 192 ಜನರು, 705 ವನ್ಯ ಜೀವಿ ಅಂಗಾಂಗ, ಟ್ರೋಫಿಯನ್ನು ಸರಕಾರಕ್ಕೆ ಸಲ್ಲಿಸಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಬಲವಂತದ ಮತಾಂತರ ತಡೆಗೆ ಕಠಿಣ ಕ್ರಮ ಅಗತ್ಯ

ವಿಧಾನ ಪರಿಷತ್: ಬುಡಕಟ್ಟು, ಆದಿವಾಸಿಗಳಿಗೆ ಆಮಿಷವೊಡ್ಡಿ ಮತಾಂತರ ಮಾಡುವ ಪ್ರಯತ್ನ ನಡೆಯುತ್ತಿದೆ, ಹೀಗಾಗಿ ಬಲವಂತದ ಮತಾಂತರ ತಡೆಗೆ ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಸದಸ್ಯ ಶಾಂತಾರಾಮ್ ಬುಡ್ನಸಿದ್ದಿ ಒತ್ತಾಯಿಸಿದರು. ಬಜೆಟ್ ವೇಳೆ ನಡೆದ ಚರ್ಚೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ನಮ್ಮ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸುವಾಗ ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗುತ್ತದೆ. ಆದರೆ ನಮ್ಮ ಸಮುದಾಯಗಳು ಬಲವಂತದ ಮತಾಂತರಕ್ಕೊಳಗಾಗಿ ಆಚರಣೆ, ಸಂಸ್ಕೃತಿಯಿಂದ ವಿಮುಖವಾದರೆ ಅಪಾಯ ತಪ್ಪಿದ್ದಲ್ಲ. ನಮ್ಮ ಆಚರಣೆಗಳನ್ನು ಬಿಟ್ಟರೆ ನಮ್ಮ ಗುರುತು ಅಳಿದಂತೆಯೇ, ಹೀಗಾಗಿ ಸರಕಾರ ಬಲವಂತದ ಮತಾಂತರ ತಡೆಗೆ ಕಠಿಣ ಕ್ರಮ ಕೈಗೊಳ್ಳುವುದು ಅಗತ್ಯ ಎಂದರು.

ನ್ಯಾಯಬೆಲೆ ಅಂಗಡಿಗಳ ಮೇಲೆ ಹದ್ದಿನ ಕಣ್ಣು

ವಿಧಾನ ಪರಿಷತು: ರಾಜ್ಯದ 20 ಸಾವಿರ ನ್ಯಾಯಬೆಲೆ ಅಂಗಡಿಗಳಲ್ಲಿ ಸಿಸಿಟಿ ಕ್ಯಾಮೆರಾ ಅಳವಡಿಕೆಗೆ ಸರಕಾರ ಕ್ರಮ ಕೈಗೊಳ್ಳಲಿದೆ ಎಂದು ಆಹಾರ ಹಾಗೂ ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಪ್ರಕಟಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಅನ್ನಭಾಗ್ಯ ಅಕ್ಕಿ ಕಾಳಸಂತೆ ಸೇರುತ್ತಿದೆ ಎಂದು ಮೇಲ್ಮನೆ ಜೆಡಿಎಸ್ ಸದಸ್ಯ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ 20 ಸಾರ ನ್ಯಾಯಬೆಲೆ ಅಂಗಡಿಗಳಲ್ಲಿ ಸಿಸಿಟಿವಿ ಅಳವಡಿಕೆ ಮಾಡುವ ನಿಟ್ಟಿನಲ್ಲಿ ಸರಕಾರ ಕ್ರಮ ಕೈಗೊಳ್ಳಲಿದ್ದು, ಬೆಂಗಳೂರಿನಲ್ಲಿ ಕಮಾಂಡ್ ಸೆಂಟರ್ ರಚಿಸಿ ಈ ಎಲ್ಲ ದೃಶ್ಯಾವಳಿಗಳನ್ನು ಪರಿಶೀಲಿಸಿ ನಿಗಾ ಇರಿಸುವ ನಿಟ್ಟಿನಲ್ಲಿ ಸರಕಾರ ಮುಂದಾಗಿದೆ. ಅದೇ ತೆರನಾಗಿ ಅನ್ನಭಾಗ್ಯ ಯೋಜನೆಯಡಿಯ ಅಕ್ಕಿ ಕಳ್ಳ ಸಾಗಾಟವನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲ ವಾಹನ ಸಾಗಾಟ ವಾಹನಗಳಿಗೆ ಜಿಪಿಎಸ್ ಸಾಧನ ಅಳವಡಿಸಲಾಗುತ್ತಿದ್ದು, ಟೆಂಡರ್ ಆಹ್ವಾನಿಸಲಾಗಿದೆ ಎಂದು ಪ್ರಕಟಿಸಿದರು.

ಎಟಿಆರ್ ವರದಿ ಆಧರಿಸಿ ಕೆರೆ ಒತ್ತುವರಿ ತೆರವುಗೊಳಿಸಿ

ವಿಧಾನ ಪರಿಷತ್: ಎ.ಟಿ.ರಾಮಸ್ವಾಮಿ ವರದಿ ಆಧರಿಸಿ ಕೆರೆ ಒತ್ತುವರಿ ತೆರವುಗೊಳಿಸುವ ಕಾರ್ಯ ಆದ್ಯತೆ ಮೇರೆಗೆ ನಡೆಯಬೇಕು ಎಂದು ಮೇಲ್ಮನೆ ಕಾಂಗ್ರೆಸ್ ಸದಸ್ಯ ಶಿವಕುಮಾರ ಒತ್ತಾಯಿಸಿದರು. ಬಜೆಟ್ ಚರ್ಚೆ ವೇಳೆ ಈ ವಿಷಯವನ್ನು ಉಲ್ಲೇಖಿಸಿದ ಅವರು, ಕೆರೆ ಒತ್ತುವರಿ ತೆರವಾಗಬೇಕು, ಈ ಹಿನ್ನೆಲೆಯಲ್ಲಿ ಎ.ಟಿ. ರಾಮಸ್ವಾಮಿ ಅವರು ನೀಡಿದ ವರದಿ ಅನ್ವಯ ಕೆರೆ ಒತ್ತುವರಿ ತೆರವು ಕಾರ್ಯ ಆದ್ಯತೆ ಮೇರೆಗೆ ನಡೆಯಬೇಕು ಎಂದು ಒತ್ತಾಯಿಸಿದರು.

ಪತ್ರಕರ್ತರಿಗೆ ಮಾಶಾಸನ ನೀಡುವಲ್ಲಿ ಅನೇಕ ನಿಬಂಧನೆ ವಿಧಿಸಲಾಗಿದೆ. ಸ್ವಂತ ಮನೆ ಇರಬಾರದು ಎಂಬ ನಿಯಮ ಅಳವಡಿಸಲಾಗಿದೆ, ಹಾಗಾದರೆ ಪತ್ರಕರ್ತರು ಜೋಪಡಿಯಲ್ಲಿರಬೇಕೆ? ಈ ಹಿಂದೆ ನೆಹರೂ, ಇಂದಿರಾ ಗಾಂಧಿ ಕಾಲಘಟ್ಟದಲ್ಲಿ ಅನೇಕ ಪತ್ರಕರ್ತರಿಗೆ ದೆಹಲಿಯಲ್ಲಿ ಮನೆ ನೀಡಲಾಯಿತು, ಆದರೆ ಮೋದಿ ಅವರು ಈ ಮನೆ ಕಿತ್ತುಕೊಂಡು ಪತ್ರಕರ್ತರನ್ನು ಬೀದಿಗೆ ತಳ್ಳಿದರು, ಆದರೆ ನಮ್ಮ ಸರಕಾರ ಈ ರೀತಿ ಪತ್ರಕರ್ತರನ್ನು ಬೀದಿಗೆ ತಳ್ಳುವುದಿಲ್ಲ ಎಂಬ ಅಚಲ ನಂಬಿಕೆ ಇದೆ. ನೂತನ ಜಾಹೀರಾತು ನೀತಿ ಸಣ್ಣ ಪತ್ರಿಕೆಗಳಿಗೆ ದಮನಕಾರಿ ರೂಪದಲ್ಲಿದೆ. ಕೂಡಲೇ ಅದರನ್ನು ಹಿಂದಕ್ಕೆ ಪಡೆಯಬೇಕು ಎಂದೂ ಶಿವಕುಮಾರ ಪ್ರತಿಪಾದಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
24.03.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ. ಎಸ್.ಎನ್.ಸಿಂಹ
ವಿಷಯ
ಹಳೆಯ ಹಾಡುಗಳು

vishwavani.news

ವಿಪಕ್ಷಗಳ ವಿರುದ್ಧ ದ್ವೇಷದ ರಾಜಕಾರಣ | 2028ಕ್ಕೆ ನಮ್ಮ ಶಕ್ತಿ ಏನೆಂಬುದನ್ನು ತೋರಿಸುತ್ತೇವೆ: ಎಚ್.ಡಿ.ರೇವಣ್ಣ ಕಿಡಿ

ಪರಮೇಶ್ವರ್ ಮುಖ್ಯಮಂತ್ರಿಯಾಗಲಿ: ಶಾಸಕ ಎಚ್.ಡಿ.ರೇವಣ್ಣ ಆಶಯ

ವಿಧಾನಸಭೆ: ಕಾಂಗ್ರೆಸ್ ಸರಕಾರ ವಿಪಕ್ಷಗಳ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದ್ದು, 2028ಕ್ಕೆ ನಮ್ಮ ಶಕ್ತಿ ಏನೆಂಬುದನ್ನು ತೋರಿಸುವುದಾಗಿ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ತಿಳಿಸಿದರು.

2026–27ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ವಿಪಕ್ಷಗಳನ್ನು ದಮನ ಮಾಡಲಾಗುತ್ತಿದೆ. ನೀವೇ ದಾರಿ ತೋರಿದ್ದೀರಿ. ಯಾವುದೇ ಆರವಿಲ್ಲದೆ ನನ್ನ ಮೇಲೆ ಎಫ್‌ಐಆರ್ ಹಾಕಲಾಯಿತು ಎಂದು ಪ್ರಶ್ನಿಸಿದರು.

ಅಲ್ಲದೆ, ನನ್ನ ಬಗ್ಗೆ ಒಂದು ಫೋಟೋ ಇತ್ತಾ?, ಆಡಿಯೊ ಇತ್ತಾ? ಬೆಂಗಳೂರಿನಲ್ಲಿ ಎಫ್‌ಐಆರ್ ಹಾಕಿಸಿದರು. ಗೃಹಸಚಿವ ಡಾ.ಜಿ.ಪರಮೇಶ್ವರ್ ಅವರ ಬಗ್ಗೆ ಗೌರವವಿದೆ. ಅವರು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ರಾಜಕೀಯ ದ್ವೇಷವನ್ನು ವಿಪಕ್ಷಗಳ ಮೇಲೆ ಸಾಧಿಸಲಾಗುತ್ತಿದೆ. ಹಾಸನ ಜಿಲ್ಲೆಯಲ್ಲಿ ಇದು ಹೆಚ್ಚಾಗಿದೆ. ನಾನು 30 ವರ್ಷಗಳಿಂದ ರಾಜಕೀಯ ಜೀವನದಲ್ಲಿದ್ದೇನೆ. ಏನಾದರೂ ಮಾಡಿ ರೇವಣ್ಣರನ್ನು

ಮುಗಿಸಬೇಕೆಂಬ ಹುನ್ನಾರ ಮಾಡಲಾಗುತ್ತಿದೆ. ಇನ್ನೂ 10 ಕೇಸು ಹಾಕಲಿ ಎದುರಿಸುತ್ತೇನೆ. ನಾನು ಲೋಕೋಪಯೋಗಿ, ಇಂಧನ ಸಚಿವನಾಗಿ ಕಾರ್ಯ ನಿರ್ವಹಿಸಿದ್ದೇನೆ. ಏನಾದರೂ ಲೂಟಿ ಹೊಡೆದಿದ್ದೇನೆಯೇ?, ನನ್ನ ವಿರುದ್ಧ ಸಿಐಡಿ, ಲೋಕಾಯುಕ್ತ, ನ್ಯಾಯಮೂರ್ತಿಗಳಿಂದಲೂ ತನಿಖೆ ಮಾಡಲಾಗಿದೆ ಎಂದು ಆಕ್ರೋಶಭರಿತರಾದರು.

ನನಗೆ ಎಲ್ಲವೂ ಗೊತ್ತಿದೆ, ಮುಂದೆ ನಾವು ಅಧಿಕಾರಕ್ಕೆ ಬಂದಾಗ ಏನು ಮಾಡಬೇಕು ಎಂದು ತೋರಿಸಿಕೊಡುತ್ತಿದ್ದಾರೆ. ಹಾಸನದಲ್ಲಿ ರೇವಣ್ಣ ನಾಲ್ಕೈದು ಶಾಸಕರನ್ನು ಗೆಲ್ಲಿಸುತ್ತಾನೆ ಎಂದು ನನ್ನ ವಿರುದ್ಧ ಪಿತೂರಿ ನಡೆಯಿತು. ನನ್ನ ಬಗ್ಗೆ ದೆಹಲಿಯಲ್ಲಿ ಏನೆಲ್ಲಾ ಚರ್ಚೆ ಆಯಿತು ಎಂದು ಗೊತ್ತಿದೆ ಎಂದರು.

ಉನ್ನತ ಮಟ್ಟದ ತನಿಖೆಗೆ ಆಗ್ರಹ: ಹಾಸನ ಜಿಲ್ಲೆಯಲ್ಲಿ ಕಂದಾಯ ಇಲಾಖೆಯಲ್ಲಿ ಲೂಟಿಯಾಗುತ್ತಿದ್ದು, ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಸರಕಾರಕ್ಕೆ 2–3 ಸಾವಿರ ಕೋಟಿ ಆದಾಯ ಬರಲಿದೆ. ಅಮಾನತ್ತುಗೊಂಡ ಅಧಿಕಾರಿಯನ್ನು ಹಾಸನ ಜಿಲ್ಲೆಗೆ ವರ್ಗಾಯಿಸಲಾಗುತ್ತದೆ. ಸರಕಾರ ವೇನಾದರೂ ಶಾಮೀಲಾಗಿದೆಯೇ ಎಂದು ಪ್ರಶ್ನಿಸಿದರು.

ತಹಸೀಲ್ದಾರ್ ಅವರು ಲ್ಯಾಂಡ್ ಮಾಫೀಯಾದವರ ಮನೆಯಲ್ಲಿ ಕುಳಿತು ಭೂಮಿ ಬರೆದು ಕೊಡುತ್ತಿದ್ದಾರೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಪ್ರಾಮಾಣಿಕರು. ಆದರೆ ಕೆಳ ಹಂತದ ಅಧಿಕಾರಿಗಳ ಭ್ರಷ್ಟಚಾರವನ್ನು ತನಿಖೆ ಮಾಡಿಸುತ್ತಾರೆಯೇ ಎಂದು ಸವಾಲು ಹಾಕಿದರು. ಅಲ್ಲದೆ, ಕುಮಾರಸ್ವಾಮಿ ಅವರ ನಾಲ್ಕು ಎಕರೆಗೆ ವಿಶೇಷ ಪೀಠ ಸ್ಥಾಪನೆ ಮಾಡಿ ತ್ವರಿತ ತನಿಖೆ ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ 80 ವರ್ಷದ ವೃದ್ಧೆಯ ಜಮೀನು ಕಬಳಿಸಿದ್ದಾರೆ ಎಂದು ದೂರಿದರು. ಜಿಲ್ಲೆಯಲ್ಲಿ ನಡೆಯುತ್ತಿರುವ ಭ್ರಷ್ಟಚಾರದ ಬಗ್ಗೆ ಸಮಗ್ರ ತನಿಖೆ ನಡೆಸಿ ಎಂದು ಒತ್ತಾಯಿಸಿದರು.

ಎತ್ತಿನಹೊಳೆ ಸ್ವಾಧೀನ ಇಲ್ಲ, ಗುತ್ತಿಗೆದಾರರಿಗೆ ಬಿಲ್ ನೀಡಿಲ್ಲ, ಯೋಜನೆ ಪ್ರಾರಂಭವಾದಾಗ ನಾಲ್ಕು ಸಾವಿರ ಕೋಟಿ ಯೋಜನಾ ವೆಚ್ಚ ಇತ್ತು. ಈಗ ಹದಿನಾಲ್ಕು ಸಾವಿರ ಕೋಟಿಯಾಗಿದೆ. ಭೂಧೀನಕ್ಕೆ ಹಣ ಬಿಡುಗಡೆಯಾಗಿದೆ ಎಂದು ಉಪಮುಖ್ಯಮಂತ್ರಿ ಸದನಕ್ಕೆ ಹೇಳಿದ್ದಾರೆ. ಹಣ ಬಂದಿಲ್ಲ ಎಂದು, ಸ್ವಾಧೀನಾಧಿಕಾರಿ ಬಂದಿಲ್ಲ ಎಂದು ಹಿಂಬರಹ ನೀಡಿದ್ದಾರೆ. ರೈತರು ಪರಿಹಾರಕ್ಕಾಗಿ ಅಲೆಯುತ್ತಿದ್ದಾರೆ. ಜಿಲ್ಲಾಧಿಕಾರಿ ಹಣ ಇಲ್ಲ ಎನ್ನುತ್ತಾರೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು.

ಹಾಸನ ವಿಮಾನ ನಿಲ್ದಾಣ ಪೂರ್ಣಗೊಂಡಿಲ್ಲ

ಏಳು ಮಂದಿ ಗುತ್ತಿಗೆದಾರರಿಗೆ 14 ಸಾವಿರ ಕೋಟಿ ರು. ಗುತ್ತಿಗೆ ನೀಡಲಾಗಿದೆ. ಹಾಸನ ವಿಮಾನ ನಿಲ್ದಾಣ ಪೂರ್ಣಗೊಂಡಿಲ್ಲ. ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿದ್ದನ್ನು ಡಿ ನೋಟಿಫಿಕೇಷನ್ ಮಾಡುತ್ತಿದ್ದಾರೆ. ಸಹಕಾರ ಸಚಿವರಾಗಿದ್ದ ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ಕೈಬಿಟ್ಟಿದ್ದೇಕೆ ಎಂದು ಪ್ರಶ್ನಿಸಿದರಲ್ಲದೆ, ಪರಮೇಶ್ವರ ಮುಖ್ಯಮಂತ್ರಿಯಾಗಬೇಕಿತ್ತು. ಅವರಿಗೆ ಅವಕಾಶ ತಪ್ಪಿಸಿದ್ದೇಕೆ. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಬಗ್ಗೆ ವಿಶೇಷ ಗೌರವ ಇದೆ. ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ದೊರೆಯಲಿ ಎಂದು ಎಚ್.ಡಿ.ರೇವಣ್ಣ ಆಶಿಸಿದರು.

ದಿನ ವಿಶೇಷ

24 ಮಾರ್ಚ್ 2026 ಮಂಗಳವಾರ

» ಸೂರ್ಯೋದಯ	: 6-28
» ಸೂರ್ಯಾಸ್ತ	: 6-38
» ತಿಥಿ	: ಷಷ್ಠಿ
» ನಕ್ಷತ್ರ	: ರೋಹಿಣಿ
» ಸಂವತ್ಸರ	: ಪರಾಭವ
» ಆಯನ	: ಉತ್ತರಾಯಣ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಶುಕ್ಲಪಕ್ಷ

ಸಂಪಾದಕೀಯ

ವಿಜಯ್ ಹಾದಿ ಸುಗಮವೇ?

ತಮಿಳುನಾಡಿನ ರಾಜಕಾರಣ ದಿನಗಳೆದಂತೆ ಕಳೆಗಟ್ಟುತ್ತಿದೆ. 'ಡಿಎಂಕೆ' ಮತ್ತು 'ಎಐಎಡಿಎಂಕೆ' ಎಂಬ ಎರಡು ಪಾಳೇಪಟ್ಟುಗಳು 'ಪರ್ಯಾಯ ಪೀಠಾರೋಹಣ'ದ ಮಾದರಿಯಲ್ಲಿ ಅಧಿಕಾರದ ಗದ್ದುಗೆಯನ್ನು ದಶಕಗಳಿಂದ ಅಲಂಕರಿಸಿಕೊಂಡೇ ಬಂದಿರುವ ರಾಜ್ಯವದು. ಶುರುವಿನಲ್ಲಿ ಕಾಂಗ್ರೆಸ್ ಪಕ್ಷವು ಒಂದಷ್ಟು ವರ್ಷ ದರ್ಬಾರು ಮಾಡಿದ್ದು ಬಿಟ್ಟರೆ, ತರುವಾಯದಲ್ಲಿ ನಡೆದಿರುವುದು ಈ 'ಪರ್ಯಾಯ' ಪೀಠಾರೋಹಣವೇ! ಈಗ ಅಲ್ಲಿ ಅರಳಲು ಬಿಜೆಪಿಯ 'ಕಮಲ' ಹವಣಿಸುತ್ತಿದೆಯಾದರೂ, ಅದು ಕೈಗೂಡುವುದಕ್ಕೆ 'ಪಕ್ಷಸ್ಥರು' ಸಾಕಷ್ಟು ರಾಗಿ ಬೀಸಬೇಕಾಗಿ ಬಂದಿದೆ. ಈ ಮಧ್ಯೆ, 'ದಳಪತಿ' ಎಂದೇ ಚಲನಚಿತ್ರಾಭಿಮಾನಿಗಳಿಂದ ಕರೆಸಿಕೊಳ್ಳುವ ನಟ ವಿಜಯ್ ಅವರು ರಾಜಕೀಯದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವುದು ಹೊಸ ಸಂಚಲನೆ ಸೃಷ್ಟಿಸಿದೆ. ವಿಜಯ್‌ರ ಜನಪ್ರಿಯತೆಗಿರುವ ಗಟ್ಟಿ ಬುನಾದಿಯನ್ನು ಗಮನದಲ್ಲಿಟ್ಟುಕೊಂಡು ಎಐಎಡಿಎಂಕೆ ಮತ್ತು ಬಿಜೆಪಿ ಪಕ್ಷಗಳು ಅವರ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದೊಂದಿಗೆ ಮೈತ್ರಿಗೆ ಹವಣಿಸುತ್ತಿವೆ ಎಂಬ ಮಾತು ಕೆಲದಿನಗಳ ಹಿಂದೆ ತೇಲಿಬಂದಿತ್ತು. ಇದನ್ನು ಸಾರಾಸಗಟಾಗಿ ನಿರಾಕರಿಸಿರುವ ವಿಜಯ್, 'ನಮ್ಮ ಜಾತ್ಯತೀತ ಅಸ್ಮಿತೆಯೊಂದಿಗೆ ಎಂದಿಗೂ ರಾಜಿಮಾಡಿಕೊಳ್ಳುವುದಿಲ್ಲ; ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸ್ವತಂತ್ರವಾಗಿ ಕಣಕ್ಕಿಳಿಯುತ್ತೇವೆ. ನಮ್ಮ ರಾಜಕೀಯ ಸಿದ್ಧಾಂತವನ್ನು ಒಪ್ಪಿಕೊಳ್ಳುವವರೊಂದಿಗೆ ಮಾತ್ರವೇ ಮೈತ್ರಿ' ಎಂದು ಒತ್ತಿಹೇಳಿದ್ದಾರೆ. ಪಕ್ಷವೊಂದರ ಮುಖ್ಯಸ್ಥನಲ್ಲಿ ಇಂಥ ಆತ್ಮವಿಶ್ವಾಸವಿರಬೇಕಾದ್ದು ಅಪೇಕ್ಷಣೀಯ. ಆದರೆ, ವಿಜಯ್ ಅವರೆಡೆಗೆ ಅಭಿಮಾನಿಗಳಿಂದ ವ್ಯಕ್ತವಾಗುವ 'ಹೇರಳ' ಅಭಿಮಾನವು 'ಮತ'ವಾಗಿ, 'ಬಹುಮತ'ವಾಗಿ ರೂಪಾಂತರಗೊಳ್ಳುವುದೇ? ಎಂಬುದು ಸದ್ಯದ ಯಕ್ಷಪ್ರಶ್ನೆ. ಚಿತ್ರನಟರೆಡೆಗೆ ತಮಿಳುನಾಡಿನಲ್ಲಿ 'ಕ್ರೇಜ್' ಇರುವುದು ಹೌದಾದರೂ, ರಾಜಕೀಯವಾಗಿ ಅದನ್ನು 'ಎನ್‌ಕ್ಯಾಶ್' ಮಾಡಿಕೊಳ್ಳುವುದು ಅಂದುಕೊಂಡಷ್ಟು ಸುಲಭವಲ್ಲ. ಹಾಗೆ ಸುಲಭವಾಗಿದ್ದಿದ್ದರೆ ನಟ ಕಮಲಹಾಸನ್ ಅವರು ಅಲ್ಲಿ ಯಶ ಕಾಣಬೇಕಿತ್ತು. ಹೀಗಾಗಿ ವಿಜಯ್‌ರಿಗೆ ಅಧಿಕಾರ ಗದ್ದುಗೆಯೆಡೆಗೆ ರತ್ನಗಂಬಳಿಯ ಸ್ವಾಗತ ಸಿಗುವುದೇ ಇಲ್ಲವೇ ಎಂಬ ಸಂಗತಿ ಕುತೂಹಲವನ್ನು ಹುಟ್ಟುಹಾಕಿರುವುದಂತೂ ಖರೆ...

ಸೊಂಪಾದಕೀಯ

ಹೀಗೊಂದು ಫ್ಲ್ಯಾಷ್‌ಬ್ಯಾಕ್...

ಮಾರ್ಚ್ ತಿಂಗಳು ಬಂತೆಂದರೆ ಮನಸ್ಸು ಫ್ಲ್ಯಾಷ್‌ಬ್ಯಾಕ್‌ಗೆ ಜಾರುತ್ತದೆ. ಏಕೆಂದರೆ, ಕರೋನಾ ಮಹಾಮಾರಿ ಅಮರಿಕೊಂಡಿದ್ದಕ್ಕೆ ಅಧಿಕೃತತೆ ಒದಗಿದ ತಿಂಗಳು ಅದು. 2020ರ ಮಾರ್ಚ್‌ನಲ್ಲಿ ಇದು ಅಂಬೆಗಾಲಿಟ್ಟು ಬಂದ ತರುವಾಯದಲ್ಲಿ ನಮ್ಮ ಜನ ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಒಂದು ಕಡೆ 'ಜೀವಭಯ' ಆದ್ರೆ ಇನ್ನೊಂದು ಕಡೆ 'ಜೀವನದ ಭಯ'. ಜೀವನದ ಭಯ ಮತ್ತು ಅದರಿಂದ ಆದ ತೊಂದರೆಯಿಂದಾಗಿ 'ಇದಕ್ಕಿಂತ ಕರೋನಾ ಬಂದು ಸಾಯುವುದೇ ಮೇಲು' ಎನ್ನುವಷ್ಟರ ಮಟ್ಟಕ್ಕೆ ಜನರ ಜೀವನ ಏರುಪೇರಾಗಿತ್ತು. ನೆಮ್ಮದಿಯಾಗಿ ಬ್ಯುಸಿನೆಸ್ ಮಾಡಿಕೊಂಡಿದ್ದ ಹಲವರು ಕರೋನಾದಿಂದಾಗಿ ಬೀದಿಗೆ ಬಂದಿದ್ದರು. ಇನ್ನು ಆ ಸಮಯದಲ್ಲಿ ಜನ ಎಷ್ಟು ಭಯಭೀತರಾಗಿದ್ದರು ಅಂದ್ರೆ, ಯಾರು ಏನೇ ಹೇಳಿದರೂ ಅದನ್ನು ನಂಬುತ್ತಿದ್ದರು. 'ಮೂಗಲ್ಲಿ ನಿಂಬೆಹಣ್ಣಿನ ರಸ ಹಿಂಡಿಕೊಂಡರೆ ಕರೋನಾ ಬರಲ್ಲ' ಅಂತ ಹೇಳಿದ್ರೂ, ಅದು ನಿಜ ಅಂತ ನಂಬುತ್ತಿದ್ದರು. 'ಬಿಸಿ ರಾಗಿಮುದ್ದೆ, ಡೋಲೋ 650 ಮಾತ್ರೆ ಸಾಕು' ಅಂದ್ರೆ ಅದನ್ನೂ ನಂಬುತ್ತಿದ್ದರು. ಯಾಕಂದ್ರೆ, ಜೀವಭಯವೇ ಅಂಥದ್ದು. ಅದೇ ನಂಬಿಕೆಯಲ್ಲಿ, ಸರಕಾರ ಬಿಡುಗಡೆ ಮಾಡಿದ ವ್ಯಾಕ್ಸಿನ್‌ಗಳನ್ನು ಹಾಕಿಸಿಕೊಂಡು ಸೇಫ್ ಆಗುವುದಕ್ಕೆ ಮುಗಿಬಿದ್ದಿದ್ದರು ಜನ. ವ್ಯಾಕ್ಸಿನ್ ಸಿಗೋದು ಒಂದೆರಡು ದಿನ ತಡ ಆದರೆ ತಲ್ಲಣಿಸಿ ಹೋಗುತ್ತಿದ್ದರು. 'ಕೋವ್ಯಾಕ್ಸಿನ್ ಅಥವಾ ಕೋವಿಶೀಲ್ಡ್ ಯಾವುದು ಸಿಕ್ಕರೂ ಓಕೆ' ಅಂತ 'ತಾ ಮುಂದು, ನಾ ಮುಂದು' ಅಂತ ಮುಗಿಬೀಳುತ್ತಿದ್ದರು. ಮೊದಲು ಕೋವ್ಯಾಕ್ಸಿನ್ ಲಸಿಕೆ ಬಂದರೂ ನಂತರ ಅದು ಎಲ್ಲ ಕಡೆ ಸಿಗುತ್ತಿಲ್ಲ ಅನ್ನೋ ಕಾರಣಕ್ಕೆ ಕೋವಿಶೀಲ್ಡ್‌ನ ಮೊರೆಹೋಗಿದ್ದರು. ಕೋವಿಶೀಲ್ಡ್ ಹಾಕಿಸಿಕೊಂಡು ಅದರ ಪ್ರಮಾಣಪತ್ರವನ್ನು ಆಟದಲ್ಲಿ ಗೆದ್ದ ಶೀಲ್ಡ್‌ನಂತೆ ಎಲ್ಲ ಪ್ರದರ್ಶಿಸಿದ್ದರು. ಒಟ್ಟಿನಲ್ಲಿ, ಕರೋನಾ ಮಹಾಮಾರಿಯು ಜನರಿಂದ ಏನೆಲ್ಲಾ ಆಟಗಳನ್ನು ಆಡಿಸಿಬಿಟ್ಟಿತ್ತು ಅಲ್ವಾ?

ಸಂಪಾದಕರ ಸದ್ಯಶೋಧನೆ

ಆತ ಬದುಕುಳಿದಿದ್ದೇ ಪವಾಡ

ಸೆಪ್ಟೆಂಬರ್ 21, 2025ರ ಭಾನುವಾರ ಬೆಳಗ್ಗೆ. ಕಾಮ್ ಏರ್‌ನ ವಿಮಾನ (RQ-4401) ಕಾಬೂಲ್‌ನಿಂದ ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಒಂದು ಆಶ್ಚರ್ಯಕರ ಘಟನೆ ಬೆಳಕಿಗೆ ಬಂದಿತು. ಹದಿಮೂರು ವರ್ಷದ ಆಫ್ಘನ್ ಬಾಲಕನೊಬ್ಬ ವಿಮಾನದ ಲ್ಯಾಂಡಿಂಗ್ ಗೇರ್‌ನ ಒಳಗಡೆ ನುಗ್ಗಿ, ಟಿಕೆಟ್ ಇಲ್ಲದೇ ಕಾಬೂಲ್‌ನಿಂದ ದೆಹಲಿಗೆ ಪಯಣಿಸಿದ್ದು ಬೆಳಕಿಗೆ ಬಂದಿತು. ಕಾಮ್ ಏರ್‌ನ RQ-4401 ವಿಮಾನವು ಕಾಬೂಲ್‌ನ ಹಮೀದ್ ಕರ್ಜಾಯ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಳಗ್ಗೆ 8:46ಕ್ಕೆ ಹೊರಟು, ಸುಮಾರು 94 ನಿಮಿಷಗಳ ಪ್ರಯಾಣದ ನಂತರ ದೆಹಲಿಯಲ್ಲಿ ಬೆಳಗ್ಗೆ 10:20ರ ಸುಮಾರಿಗೆ ಲ್ಯಾಂಡ್ ಆಯಿತು. ಈ ಬಾಲಕ ಅಫ್ಘಾನಿಸ್ತಾನದ ಕುಂದುಜ್ ನಗರದವನಾಗಿದ್ದು, ಕಾಬೂಲ್ ವಿಮಾನ ನಿಲ್ದಾಣದಲ್ಲಿ ಭದ್ರತೆಯನ್ನು ದಾಟಿ, ಪ್ರಯಾಣಿಕರ ಗುಂಪಿನೊಂದಿಗೆ ಒಡನಾಡಿ ವಿಮಾನದ ಹಿಂಭಾಗದ ಲ್ಯಾಂಡಿಂಗ್ ಗೇರ್‌ನ ಒಳಗೆ ನುಗ್ಗಿದ್ದ. ವಿಮಾನದ ಲ್ಯಾಂಡಿಂಗ್ ಗೇರ್‌ನಲ್ಲಿ ಬಾಲಕ ಬಿಟ್ಟುಹೋದ ಕೆಂಪು ಬಣ್ಣದ ಚಿಕ್ಕ ಆಡಿಯೋ ಸ್ಪೀಕರ್ ಒಂದನ್ನು ಭದ್ರತಾ ತಪಾಸಣೆ ವೇಳೆ ಪತ್ತೆಹಚ್ಚಲಾಯಿತು. ವಿಮಾನ ಲ್ಯಾಂಡ್ ಆದ ಕೂಡಲೇ, ಏರ್‌ಲೈನ್‌ನ ಭದ್ರತಾ ಸಿಬ್ಬಂದಿಗಳು ಬಾಲಕನು ವಿಮಾನದ ಬಳಿ ಓಡಾಡುತ್ತಿರುವುದನ್ನು ಗಮನಿಸಿ, ಕೂಡಲೇ ಕೇಂದ್ರ ಕೈಗಾರಿಕಾ ಭದ್ರತಾ ಪಡೆಗೆ ಒಪ್ಪಿಸಿದರು. ಬಾಲಕನನ್ನು ವಿಚಾರಣೆ ಒಳಪಡಿಸಲಾಯಿತು. ವಿಚಾರಣೆಯ ವೇಳೆ, ಬಾಲಕನು ತಾನು ಇರಾನ್‌ಗೆ ತೆರಳಲು ಇಚ್ಛಿಸಿದ್ದಾಗಿ, ಆದರೆ ತಪ್ಪಾಗಿ ದೆಹಲಿಗೆ ಹೋಗುವ ವಿಮಾನವನ್ನು ಏರಿದ್ದಾಗಿ ತಿಳಿಸಿದ. ಕೆಲವು ಮೂಲಗಳ ಪ್ರಕಾರ, ಅವನು ಈ ಸಾಹಸವನ್ನು 'ಕುತೂಹಲ'ಕ್ಕಾಗಿ ಮಾಡಿದ್ದಾಗಿ ಹೇಳಿದ. ಆದರೆ ಇದರ ಹಿಂದಿನ ನಿಜವಾದ ಉದ್ದೇಶವು ಸ್ಪಷ್ಟವಾಗಿಲ್ಲ. ವಿಚಾರಣೆ ಮತ್ತು ಅಗತ್ಯ ಕಾನೂನು ಕ್ರಮಗಳ ನಂತರ, ಬಾಲಕನನ್ನು ಅದೇ ದಿನ ಮಧ್ಯಾಹ್ನ 12:30 ರಿಂದ 4:00 ಗಂಟೆಯ ಸುಮಾರಿಗೆ ಕಾಮ್ ಏರ್‌ನ, ಮರಳಿ ಕಾಬೂಲ್‌ಗೆ ಹೋಗುವ ವಿಮಾನ (RQ-4402)ದಲ್ಲಿ ಅಫ್ಘಾನಿಸ್ತಾನಕ್ಕೆ ವಾಪಸ್ ಕಳುಹಿಸಲಾಯಿತು. ಲ್ಯಾಂಡಿಂಗ್ ಗೇರ್‌ನ ಒಳಗೆ ಪ್ರಯಾಣಿಸುವುದು ಅತ್ಯಂತ ಅಪಾಯಕಾರಿ. ವಿಮಾನವು 30,000ದಿಂದ 40,000 ಅಡಿ ಎತ್ತರದಲ್ಲಿ ಹಾರುವಾಗ, ಈ ವಿಭಾಗದಲ್ಲಿ ಆಮ್ಲಜನಕದ ಕೊರತೆ, ಮೈನಸ್ 50 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ತಾಪಮಾನ ಮತ್ತು ಲ್ಯಾಂಡಿಂಗ್ ಗೇರ್‌ನ ಚಲನೆಯಿಂದ ಅಪಾಯವಾಗುವ ಸಾಧ್ಯತೆಯಿದೆ. ಈ ರೀತಿಯ ಪ್ರಯಾಣದಲ್ಲಿ ಬದುಕುಳಿಯುವ ಸಾಧ್ಯತೆ ಕೇವಲ ಶೇ.20ರಿಂದ ಶೇ.25 ಮಾತ್ರ. ಆಮ್ಲಜನಕದ ಕೊರತೆಯಿಂದ ಉಸಿರಾಟಕ್ಕೆ ತೊಂದರೆಯಾಗಬಹುದು. ತೀವ್ರ ಶೀತದಿಂದ ದೇಹದ ತಾಪಮಾನ ಕಡಿಮೆ (ಹೈಪೋಥರ್ಮಿಯಾ)ಯಾಗಬಹುದು. ಲ್ಯಾಂಡಿಂಗ್ ಗೇರ್‌ನ ಚಲನೆಯಿಂದ ಗಾಯವಾಗಬಹುದು ಅಥವಾ ಎತ್ತರದಿಂದ ಬೀಳುವ ಸಾಧ್ಯತೆ ಇರುತ್ತದೆ. ಹೀಗಿರುವಾಗ ಈ ಬಾಲಕ ಬದುಕುಳಿದಿರುವುದೇ ಒಂದು ಅಚ್ಚರಿ ಮತ್ತು ಅದ್ಭುತ. ಏಕೆಂದರೆ ಕಾಬೂಲ್-ದೆಹಲಿ ವಿಮಾನವು ಕಡಿಮೆ ಎತ್ತರದಲ್ಲಿ ಹಾರುತ್ತಿತ್ತು. ಅಲ್ಲದೇ ನಿಗದಿತ ವೇಳೆಗಿಂತ ಹದಿನೈದು ನಿಮಿಷ ಮುಂಚಿತವಾಗಿ ಆಗಮಿಸಿತು. ಕಾಬೂಲ್ ಸಮುದ್ರ ಮಟ್ಟದಿಂದ ಸುಮಾರು 6,000 ಅಡಿ ಎತ್ತರದಲ್ಲಿದೆ, ಇದು ಬಾಲಕನಿಗೆ ಆಮ್ಲಜನಕದ ಕೊರತೆಯನ್ನು ಸಹಿಸಿಕೊಳ್ಳಲು ಸಹಾಯ ಮಾಡಿರಬಹುದು. ಈ ಘಟನೆಯು ಕಾಬೂಲ್ ವಿಮಾನ ನಿಲ್ದಾಣದ ಭದ್ರತೆಯ ಕುರಿತು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಒಬ್ಬ 13 ವರ್ಷದ ಬಾಲಕ ಭದ್ರತೆಯನ್ನು ದಾಟಿ ವಿಮಾನದ ಲ್ಯಾಂಡಿಂಗ್ ಗೇರ್‌ಗೆ ಒಳನುಗ್ಗಿದ್ದು, ಒಡ್ಡಿಕೊಳ್ಳಬಹುದಾದ ಭಯೋತ್ಪಾದಕ ದಾಳಿಗಳ ಅಪಾಯವನ್ನು ಎತ್ತಿ ತೋರಿಸುತ್ತದೆ. ಈ ರೀತಿಯ 'ವೀಲ್-ವೆಲ್ ಸ್ಟೋವೇ' ಘಟನೆಗಳು ವಿರಳವಾದರೂ, ಸಂಪೂರ್ಣವಾಗಿ ಅಪರೂಪವೇನಲ್ಲ. ಉದಾಹರಣೆಗೆ, 1996ರಲ್ಲಿ ದೆಹಲಿಯಿಂದ ಲಂಡನ್‌ಗೆ ಹೋಗುವ ಬ್ರಿಟಿಷ್ ಏರ್‌ವೇಸ್ ವಿಮಾನದಲ್ಲಿ ಇಬ್ಬರು ಭಾರತೀಯ ಸಹೋದರರಾದ ಪ್ರದೀಪ್ ಸೈನಿ ಮತ್ತು ವಿಜಯ್ ಸೈನಿ ಲ್ಯಾಂಡಿಂಗ್ ಗೇರ್‌ನಲ್ಲಿ ಒಳನುಗ್ಗಿದ್ದರು. ಪ್ರದೀಪ್ ಬದುಕುಳಿದರೂ, ವಿಜಯ್ ಮೃತಪಟ್ಟಿದ್ದ. 2024ರ ಜನವರಿಯಲ್ಲಿ, ಡೊಮಿನಿಕನ್ ರಿಪಬ್ಲಿಕ್‌ನಿಂದ ಫ್ಲೋರಿಡಾಕ್ಕೆ ಹೋಗುವ ಜೆಟ್‌ಬ್ಲೂ ವಿಮಾನದ ಲ್ಯಾಂಡಿಂಗ್ ಗೇರ್‌ನಲ್ಲಿ ಇಬ್ಬರು ವ್ಯಕ್ತಿಗಳ ಶವಗಳು ಕಂಡುಬಂದಿದ್ದವು.

ನುಂಗಲಾರದ ತುತ್ತಾಗುವುದೇ ದೋಸ್ತಿ ಪಕ್ಷ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ರಾಜಕೀಯದಲ್ಲಿ ಗೋಚರ ಶತ್ರುಗಳಿಗಿಂತ, ಅಗೋಚರ ಶತ್ರುಗಳು ಹೆಚ್ಚು ಅಪಾಯಕಾರಿಯಂತೆ. ಅದರಲ್ಲಿಯೂ ಜತೆಯಲ್ಲಿದ್ದುಕೊಂಡು ಹಾಕುವ ರಾಜಕೀಯ ಪಟ್ಟುಗಳು ಅನೇಕ ಬಾರಿ ಹೊಡೆತ ಬಿದ್ದ ಬಳಿಕವೇ ತಿಳಿಯುವುದಂತೆ. ಇದೀಗ ಒಳಯೇಟಿನ ಹೊಡೆತ ಬಿಜೆಪಿಯ ರಾಜ್ಯ ನಾಯಕರಿಗೆ ಗೋಚರಿಸಲು ಶುರುವಾಗಿದೆ ಎಂದರೆ ತಪ್ಪಾಗುವುದಿಲ್ಲ.

ಏಕೆಂದರೆ, ಆರಂಭದಲ್ಲಿ ಕಾಂಗ್ರೆಸ್‌ನ ಬಲ ಕುಗ್ಗಿಸಲು, ಹಳೇ ಮೈಸೂರು ಭಾಗದಲ್ಲಿ ಅಸ್ತಿತ್ವ ಸ್ಥಾಪಿಸಿಕೊಳ್ಳಲು ಹಾಗೂ ರಾಜ್ಯದ ಎಲ್ಲ ಕ್ಷೇತ್ರದಲ್ಲಿದ್ದ ಜೆಡಿಎಸ್‌ನ ಸಾಂಪ್ರದಾಯಿಕ ಮತಗಳನ್ನು ಪಡೆಯುವ ಆಲೋಚನೆಯಲ್ಲಿ ಕೇಂದ್ರ ಬಿಜೆಪಿ ನಾಯಕರು ಮುಂದಿಟ್ಟ ಜೆಡಿಎಸ್‌ನೊಂದಿಗಿನ ಮೈತ್ರಿಯನ್ನು ಒಪ್ಪಿಕೊಂಡಿದ್ದ ರಾಜ್ಯ ನಾಯಕರಿಗೆ ಈಗ ಅದರ ಒಳಯೇಟು ಬೀಳಲು ಶುರುವಾಗಿದೆ. ಅಂದಿನ ಅನಿವಾರ್ಯತೆ ಹಾಗೂ ಕೇಂದ್ರ ನಾಯಕರ ಒತ್ತಡಕ್ಕೆ ಮಣಿದು ಒಪ್ಪಿಕೊಂಡಿದ್ದ ಮೈತ್ರಿಯು ಸದ್ಯ ರಾಜ್ಯ ಬಿಜೆಪಿ ನಾಯಕರಿಗೆ ನುಂಗಲಾರದ ತುತ್ತಾಗಿದೆ.

ದಕ್ಷಿಣ ಭಾರತದಲ್ಲಿ ಬಿಜೆಪಿ ನೆಚ್ಚಿಕೊಳ್ಳಬಹುದಾದ ಏಕೈಕ ರಾಜ್ಯ ಕರ್ನಾಟಕವಾಗಿದ್ದರೂ, ಈವರೆಗೆ ಸ್ವಂತ ಬಲದಲ್ಲಿ ಅಧಿಕಾರದ ಗದ್ದುಗೆ ಏರಿದ್ದಕ್ಕಿಂತ ಮೈತ್ರಿ, ಆಪರೇಷನ್ ಕಮಲದ ಮೂಲಕ 'ಮ್ಯಾಜಿಕ್ ನಂಬರ್' ದಾಟಿರುವುದು ವಾಸ್ತವ. ಈ ಕಾರಣಕ್ಕಾಗಿಯೇ, ಕರ್ನಾಟಕ ರಾಜಕೀಯದ ಮೂರನೇ ಶಕ್ತಿಯಾಗಿದ್ದ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಿಜೆಪಿಯ ದೆಹಲಿ ನಾಯಕರು ಮುಂದಾದರು. ಇದೇ ಸಮಯಕ್ಕೆ ಕಾಯುತ್ತಿದ್ದ ಜೆಡಿಎಸ್ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಿಜೆಪಿಯೊಂದಿಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಂಡಿರುವುದಷ್ಟೇ ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಅವರ ಕ್ಯಾಬಿನೆಟ್‌ನಲ್ಲಿ ಆಯಕಟ್ಟಿನ ಸ್ಥಾನವನ್ನು ಕುಮಾರಸ್ವಾಮಿ ಗಿಟ್ಟಿಸಿಕೊಂಡರು.

ಬಿಜೆಪಿಯ ದೆಹಲಿ ಮಟ್ಟದಲ್ಲಿ ಈಗಲೂ ದೇವೇಗೌಡರು, ಕುಮಾರಸ್ವಾಮಿ ಅವರಿಗೆ ಯಾವುದೇ ಸಮಸ್ಯೆಯಿಲ್ಲ. ಎಲ್ಲವನ್ನೂ ಹೊಂದಾಣಿಕೆ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಸಮಸ್ಯೆ ಇರುವುದೇ ಸ್ಥಳೀಯ ನಾಯಕತ್ವದಲ್ಲಿ. ಬಿಜೆಪಿ-ಜೆಡಿಎಸ್ ನಡುವಿನ ಕಂದಕವನ್ನು ತಗ್ಗಿಸಲು ಸಮನ್ವಯ ಸಮಿತಿ ಮಾಡಿಕೊಂಡು 'ನಾಮ್ ಕೆ ವಾಸ್ತೆ' ಒಂದೆರಡು ಸಭೆಗಳನ್ನು ನಡೆಸಿಕೊಂಡು ಬಂದರೂ, ಎರಡೂ ಪಕ್ಷಗಳು ಈಗಲೂ ಒಂದಾಗಿ ಹೋರಾಡುತ್ತಿಲ್ಲ ಎನ್ನುವುದು ಸ್ಪಷ್ಟ. ಆಡಳಿತಾರೂಢ ಕಾಂಗ್ರೆಸ್ ಸರಕಾರದಲ್ಲಿ ಹಾಗೂ ಕಾಂಗ್ರೆಸ್ ಪಕ್ಷದೊಳಗೆ ಹತ್ತಾರು ಸಮಸ್ಯೆಗಳಿದ್ದರೂ, ಅವುಗಳನ್ನು ಎತ್ತಿಹಿಡಿಯುವಲ್ಲಿ ಪ್ರತಿಪಕ್ಷಗಳಾಗಿ ಬಿಜೆಪಿ-ಜೆಡಿಎಸ್ ಕೆಲಸ ಮಾಡುತ್ತಿಲ್ಲ ಎನ್ನುವ ಆರೋಪಗಳು ಪಕ್ಷದೊಳಗೆ ಇವೆ.

ಎರಡೂ ಪಕ್ಷದ ನಾಯಕರು ಸದನದ ಒಳ-ಹೊರಗೆ ಒಂದಾಗಿ ಹೋರಾಡುವುದಾಗಿ ಹೇಳಿಕೆ ನೀಡುತ್ತಿದ್ದಾರೆ. ಈ ಒಗ್ಗಟ್ಟಿನ ಮಂತ್ರ ಕೇವಲ ಹೇಳಿಕೆಗೆ ಸೀಮಿತವಾಗಿದೆಯೇ ಹೊರತು, ಜಾರಿಗೆ ಬರುತ್ತಿಲ್ಲ. ಸದನದೊಳಗೆ ಬಿಜೆಪಿ ಎತ್ತಿಕೊಂಡ ವಿಷಯದಲ್ಲಿ ಜೆಡಿಎಸ್ ನಿರ್ಲಕ್ಷ್ಯ ತೋರಿದರೆ, ಜೆಡಿಎಸ್ ಎತ್ತುವ ವಿಷಯಕ್ಕೂ ನಮಗೂ ಸಂಬಂಧವಿಲ್ಲ ಎನ್ನುವಂತೆ ಬಿಜೆಪಿಗರು ಇರುತ್ತಾರೆ. ಕಳೆದ ಜನವರಿಯಲ್ಲಿ ನಡೆದ ಜಂಟಿ ಅಧಿವೇಶನದಲ್ಲಿ ಬಿಜೆಪಿ ಕರೆ ನೀಡಿದ ಅಹೋರಾತ್ರಿ ಧರಣಿಗೂ ಮೊದಲು ನಮ್ಮನ್ನು ಸಂಪರ್ಕಿಸಿಲ್ಲವೆಂದು ಜೆಡಿಎಸ್ ಧರಣಿಯಿಂದ ದೂರ ಉಳಿಯಿತು. ಇದಿಷ್ಟೇ ಅಲ್ಲದೇ, ಸರಕಾರದ ವಿರುದ್ಧ ಕೇಳಿಬಂದ ಹಲವು ಆರೋಪಗಳ ವಿಷಯದಲ್ಲಿ ಎರಡೂ ಪಕ್ಷಗಳೂ ಒಂದಾಗಿ ಹೋರಾಟ ಮಾಡಿದ ಉದಾಹರಣೆಗಳಿಲ್ಲ.

ಈ ಭಿನ್ನದಾರಿ ಕೇವಲ ಹೋರಾಟಕ್ಕೆ ಸೀಮಿತವಾಗದೇ, ಚುನಾವಣೆಗಳಿಗೆ ಅಭ್ಯರ್ಥಿಗಳ ನೇಮಕದ ವಿಷಯಕ್ಕೂ ಮುಂದುವರಿದಿರುವುದು ಕುಮಾರಸ್ವಾಮಿ ಅವರ ಅಸಮಾಧಾನಕ್ಕೆ ಕಾರಣವಾಗಿದೆ. ದೀರ್ಘ ಮೈತ್ರಿಯ ಮಾತುಗಳನ್ನು ದೆಹಲಿ ನಾಯಕರು ಆಡುತ್ತಿದ್ದರೆ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕ ಅಶೋಕ್ ಸೇರಿದಂತೆ ಸ್ಥಳೀಯ ನಾಯಕರು ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎನ್ನುವ ತಗಾದೆಯನ್ನು ಜೆಡಿಎಸ್‌ನವರು ತೆಗೆದಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದ ದೂರನ್ನು ಅಮಿತ್ ಶಾ ಅವರಿಗೂ ಮುಟ್ಟಿಸಿದ್ದಾರೆ.

ಕಳೆದ ವಾರ ಯುಗಾದಿ ಹಬ್ಬದ ನೆಪದಲ್ಲಿ ಗೃಹ ಸಚಿವ ಅಮಿತ್ ಶಾ ಅವರನ್ನು ಎಚ್.ಡಿ. ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಅವರು ಭೇಟಿಯಾಗಿದ್ದಾರೆ. 'ಹಬ್ಬದ ಶುಭಾಶಯ ಕೋರಲು ಭೇಟಿಯಾಗಿದ್ದೆ' ಎನ್ನುವ ಮಾತನ್ನು ಕುಮಾರಸ್ವಾಮಿ ಹೇಳಿದ್ದರೂ, ಈ ಭೇಟಿಯ ವೇಳೆ ರಾಜ್ಯ ಬಿಜೆಪಿ ನಾಯಕರ ನಡವಳಿಕೆ ಬಗ್ಗೆ 'ಗಹನ'ವಾದ ಚರ್ಚೆಯಾಗಿದೆ ಎನ್ನುವುದು ವಾಸ್ತವ. ಅಮಿತ್ ಶಾ ಅವರನ್ನು ಭೇಟಿಯಾದ ಕುಮಾರಸ್ವಾಮಿ ಅವರು ವಿಧಾನಪರಿಷತ್ ಚುನಾವಣೆ ಹಾಗೂ ರಾಜ್ಯಸಭಾ ಚುನಾವಣೆಯ ವಿಷಯದಲ್ಲಿ ರಾಜ್ಯ ಬಿಜೆಪಿ ಕೋರ್ ಕಮಿಟಿ ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ದೂರು ನೀಡಿದ್ದಾರೆ ಎನ್ನಲಾಗಿದೆ.

ಮುಂದಿನ ಕೆಲ ತಿಂಗಳಲ್ಲಿ ಮಾಜಿ ಪ್ರಧಾನಿ ದೇವೇಗೌಡ ಅವರ ರಾಜ್ಯಸಭಾ ಅವಧಿ ಪೂರ್ಣಗೊಳ್ಳಲಿದೆ. ಪುನರಾಯ್ಕೆ ಬಯಸುವುದಿಲ್ಲ ಎಂದು ದೇವೇಗೌಡರು ಹೇಳುತ್ತಿದ್ದರೂ, ಮತ್ತೊಮ್ಮೆ ಗೌಡರನ್ನು ರಾಜ್ಯಸಭೆಗೆ ಕಳುಹಿಸುವ ಇರಾದೆ ಜೆಡಿಎಸ್‌ನಲ್ಲಿದೆ. ಒಂದು ವೇಳೆ ದೇವೇಗೌಡರು ನಿರಾಕರಿಸಿದರೂ, ಪಕ್ಷದ ಒಬ್ಬರಿಗೆ ರಾಜ್ಯಸಭೆಗೆ ಅವಕಾಶ ನೀಡಬೇಕು ಎನ್ನುವುದು ಜೆಡಿಎಸ್ ನಾಯಕರ ವಾದವಾಗಿದೆ. ಬಿಜೆಪಿ ತನ್ನ ಕೋರ್ ಕಮಿಟಿ ಸಭೆಯಲ್ಲಿ, ದೇವೇಗೌಡರ ಸ್ಥಾನಕ್ಕೆ ಬಿಜೆಪಿಯಿಂದ ಮಾಜಿ ಮುಖ್ಯಮಂತ್ರಿ, ಒಕ್ಕಲಿಗ ನಾಯಕನನ್ನು ಕಳುಹಿಸಬೇಕು ಎನ್ನುವ ಚರ್ಚೆ ನಡೆಸಿದೆ. ಈ ಬಗ್ಗೆ ಯಾವುದೇ ಅಂತಿಮ ತೀರ್ಮಾನವಾಗದಿದ್ದರೂ, ದೇವೇಗೌಡರ ಬದಲಿಗೆ ಇನ್ನೊಬ್ಬರನ್ನು ಕಳುಹಿಸುವ ಚರ್ಚೆಯೇ ಕುಮಾರಸ್ವಾಮಿ ಅವರಿಗೆ ಸಹ್ಯವಾಗಿಲ್ಲ.

ಆದ್ದರಿಂದ ಅಮಿತ್ ಶಾ ಅವರ ಮುಂದೆ ವಿಧಾನಪರಿಷತ್ ಟಿಕೆಟ್ ಆಯ್ಕೆ ವಿಷಯವನ್ನು ಮುಂದಿಟ್ಟುಕೊಂಡು ರಾಜ್ಯ ಬಿಜೆಪಿ ನಾಯಕರ ವಿರುದ್ಧ ದೂರು ನೀಡಿದ್ದಾರೆ. ಮುಂಬರುವ ನವೆಂಬರ್‌ನಲ್ಲಿ ನಡೆಯುವ ನಾಲ್ಕು ಕ್ಷೇತ್ರಗಳ ವಿಧಾನಪರಿಷತ್ ಚುನಾವಣೆಯಲ್ಲಿ ಮೂರು ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡು, ಒಂದನ್ನು ಜೆಡಿಎಸ್‌ಗೆ ನೀಡಿದೆ. ಆದರೆ ಬೆಂಗಳೂರು ಶಿಕ್ಷಣ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಪುಟ್ಟಣ್ಣ ಸ್ಪರ್ಧಿಸುವುದು ಖಚಿತವಾಗಿದೆ. ಹೀಗಿರುವಾಗ, 'ಗೆಲುವು ಕಷ್ಟ ಎನ್ನುವ ಸ್ಥಾನವನ್ನು ನಮಗೆ ನೀಡಿ, ಸೇಫ್ ಕ್ಷೇತ್ರಗಳನ್ನು ಬಿಜೆಪಿ ಉಳಿಸಿಕೊಂಡಿದೆ. ಈ ತೀರ್ಮಾನ ಕೈಗೊಳ್ಳುವ ಮೊದಲು ಒಂದು ಮಾತು ಸಹ ನಮ್ಮನ್ನು ಕೇಳಿಲ್ಲ' ಎನ್ನುವ ಅಸಮಾಧಾನವನ್ನು ಅಮಿತ್ ಶಾ ಮುಂದೆ ಕುಮಾರಣ್ಣ ಹೊರಹಾಕಿದ್ದಾರೆ. ಅಮಿತ್ ಶಾ ಭೇಟಿಗೂ ಮೊದಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರನ್ನೂ ಭೇಟಿಯಾಗಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ರಾಜ್ಯ ಬಿಜೆಪಿ ನಾಯಕರೊಂದಿಗೆ ಜೆಡಿಎಸ್‌ನ ಗೊಂದಲ ಕೇವಲ ರಾಜ್ಯಸಭೆ, ವಿಧಾನಪರಿಷತ್‌ಗೆ ಸೀಮಿತವಾಗಿಲ್ಲ, ಸ್ಥಳೀಯ ಮಟ್ಟದಲ್ಲಿಯೂ ಗೊಂದಲ 'ಬೂದಿಮುಚ್ಚಿದ ಕೆಂಡವಾಗಿದೆ'. ಆ ಕಾರಣಕ್ಕಾಗಿಯೇ, ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಾಗಿ ಕುಮಾರಸ್ವಾಮಿ ಹೇಳಿದ್ದರೆ, ದೇವೇಗೌಡರು ಬಿಜೆಪಿ-ಜೆಡಿಎಸ್ ಮೈತ್ರಿಯು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿಯೂ ಮುಂದುವರಿಯಲಿದೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ಭಿನ್ನ ಹೇಳಿಕೆಗಳು ಎಚ್‌ಡಿಕೆ-ಎಚ್‌ಡಿಡಿ ನಡುವೆ ಭಿನ್ನಾಭಿಪ್ರಾಯವಿದೆ ಎನ್ನುವುದಕ್ಕಿಂತ, ಯಾವ ಹೇಳಿಕೆಗೆ ಬಿಜೆಪಿ ಯಾವ ರೀತಿ ಪ್ರತಿಕ್ರಿಯಿಸಲಿದೆ ಎನ್ನುವುದನ್ನು ನೋಡುವ ಲೆಕ್ಕಾಚಾರಗಳಿವೆ. ಮೈತ್ರಿ ವಿಷಯದಲ್ಲಿ ಬಿಜೆಪಿ ನಾಯಕರಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬಾರದೇ ಇದಿದ್ದರಿಂದ, ದೇವೇಗೌಡರು ಕೊನೆಯದಾಗಿ 'ನಮಗೆ ಮೈತ್ರಿ ಬೇಕಿದೆ; ಬಿಜೆಪಿಯ ದೆಹಲಿ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ' ಎನ್ನುವ ಮೂಲಕ ಬಿಜೆಪಿ ವರಿಷ್ಠರ ಮೇಲೆಯೇ ಹೊರೆ ಹೊರಿಸಿ ಕಾದು ನೋಡುವ ತಂತ್ರಕ್ಕೆ ಶರಣಾಗಿದ್ದಾರೆ.

ಸಾಮಾನ್ಯವಾಗಿ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೆ ಸಂಬಂಧಿಸಿದ ಚುನಾವಣಾಪೂರ್ವ ಮತ್ತು ಚುನಾವಣೋತ್ತರ ಮೈತ್ರಿಗಳ ವಿಷಯದಲ್ಲಿ ದೆಹಲಿ ನಾಯಕರು ತಲೆ ಹಾಕುವುದಿಲ್ಲ. ರಾಜ್ಯ ನಾಯಕರು ಕೂತು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆ. ತಾಲೂಕು ಪಂಚಾಯಿತಿ ಹಂತದ ಚುನಾವಣೆಗಳಾದರೆ, ಜಿಲ್ಲಾ ಮಟ್ಟದಲ್ಲಿಯೇ ತೀರ್ಮಾನ ಕೈಗೊಳ್ಳಲಾಗುತ್ತದೆ. ಈ ವಿಷಯ ಗೊತ್ತಿದ್ದರೂ, ದೇವೇಗೌಡರು ರಾಷ್ಟ್ರ ನಾಯಕರೇ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನುವ ಮೂಲಕ ರಾಜ್ಯ ಬಿಜೆಪಿ ನಾಯಕರಿಗೆ ಯಾವ ಸಂದೇಶ ರವಾನಿಸಿದ್ದಾರೆ ಎನ್ನುವ ಪ್ರಶ್ನೆ ಮೂಡುತ್ತದೆ.

ಹಾಗೆ ನೋಡಿದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ದಿನದಿಂದಲೂ ಜೆಡಿಎಸ್ ಪಕ್ಷವು ರಾಜ್ಯ ಬಿಜೆಪಿ ನಾಯಕರಿಗಿಂತ ಹೆಚ್ಚಾಗಿ ಕೇಂದ್ರ ಬಿಜೆಪಿ ನಾಯಕರನ್ನೇ ನೆಚ್ಚಿಕೊಂಡಿದೆ. ಕರ್ನಾಟಕದಲ್ಲಿ ಮುಂದಿನ ಚುನಾವಣೆಯಲ್ಲಿ ಜೆಡಿಎಸ್‌ಗೆ ಎಷ್ಟು ಸೀಟು ಕೊಡಲಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ, ಜೆಡಿಎಸ್ ಸ್ವತಂತ್ರವಾಗಿ ಸ್ಪರ್ಧಿಸಿದರೆ ಆಗಬಹುದಾದ ನಷ್ಟದ ಲೆಕ್ಕಾಚಾರದಲ್ಲಿ ಪಕ್ಷದ ಹೈಕಮಾಂಡ್ ಜೆಡಿಎಸ್ ಅನ್ನು ಪಕ್ಕದಲ್ಲಿಯೇ ಕೂರಿಸಿಕೊಂಡಿದೆ. ಇನ್ನೊಂದೆಡೆ ಜೆಡಿಎಸ್‌ಗೆ ದಿನದಿಂದ ದಿನಕ್ಕೆ ತನ್ನ ಮತಬ್ಯಾಂಕ್ ಪ್ರಮಾಣ ಸಣ್ಣದಾಗುತ್ತಿರುವ ಬಗ್ಗೆಯೂ ಅರಿವಿದೆ. ಆದ್ದರಿಂದ ಸ್ವತಂತ್ರವಾಗಿ ಚುನಾವಣೆಗೆ ಹೋಗುವುದಕ್ಕಿಂತ ಬಿಜೆಪಿಯೊಂದಿಗೆ ಹೋದರೆ, ತನ್ನ ಅಸ್ತಿತ್ವವನ್ನು ರಾಜ್ಯದಲ್ಲಷ್ಟೇ ಅಲ್ಲದೇ ರಾಷ್ಟ್ರ ರಾಜಕಾರಣದಲ್ಲಿಯೂ ಉಳಿಸಿಕೊಳ್ಳಬಹುದು ಎನ್ನುವುದಾಗಿದೆ.

ಈ ಮೈತ್ರಿಯಿಂದ ಎರಡೂ ಪಕ್ಷಕ್ಕೂ ಲಾಭವಿದ್ದರೂ, ಹೊಂದಾಣಿಕೆ ವಿಷಯದಲ್ಲಿ ಆಗುತ್ತಿರುವ ಸಮಸ್ಯೆಯೇನು ಎನ್ನುವ ಪ್ರಶ್ನೆಗಳು ಮೂಡುವುದು ಸಹಜ. ಇದಕ್ಕೆ ಉತ್ತರವೆಂದರೆ, ಬಿಜೆಪಿ-ಜೆಡಿಎಸ್ ಮೈತ್ರಿಯ ವಿಷಯದಲ್ಲಿ ಜೆಡಿಎಸ್ ನಾಯಕರಿಗಾಗಲೀ, ಬಿಜೆಪಿಯ ದೆಹಲಿ ನಾಯಕರಿಗೆ ಆಗಲೀ ಯಾವುದೇ ಗೊಂದಲ ಅಥವಾ ತಿಕ್ಕಾಟವಿಲ್ಲ. ಅವು ಇರುವುದು ಜೆಡಿಎಸ್ ಹಾಗೂ ರಾಜ್ಯ ಬಿಜೆಪಿ ನಾಯಕತ್ವಕ್ಕೆ. ಸ್ಥಳೀಯ ನಾಯಕರೊಂದಿಗೆ ಜೆಡಿಎಸ್‌ಗೆ ಭಿನ್ನಾಭಿಪ್ರಾಯವಿದ್ದರೂ, ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಸೇರಿದಂತೆ ದೆಹಲಿ ಮಟ್ಟದ ನಾಯಕರೊಂದಿಗೆ ಜೆಡಿಎಸ್ ವರಿಷ್ಠ ದೇವೇಗೌಡರು ಹಾಗೂ ಕುಮಾರಸ್ವಾಮಿ ಇಬ್ಬರೂ ಉತ್ತಮ 'ಕೆಮಿಸ್ಟ್ರಿ' ಹೊಂದಿದ್ದಾರೆ. ಗೌಡರ ಕುಟುಂಬ ಹಾಗೂ ಬಿಜೆಪಿ ವರಿಷ್ಠರ ಈ ಕೆಮಿಸ್ಟ್ರಿ ರಾಜ್ಯ ಬಿಜೆಪಿ ನಾಯಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದು, ಮುಂದಿನ ವಿಧಾನಸಭಾ ಚುನಾವಣೆ ವೇಳೆಗೆ ಈ ಕೆಮಿಸ್ಟ್ರಿ ಮುಂದಿಟ್ಟುಕೊಂಡು ದೇವೇಗೌಡರು ಹಾಗೂ ಕುಮಾರಸ್ವಾಮಿ ಇನ್ನಾವೆಲ್ಲ ಲೆಕ್ಕಾಚಾರಗಳನ್ನು ತಲೆಕೆಳಗೆ ಮಾಡುವರೋ ಎನ್ನುವ ಆತಂಕ ರಾಜ್ಯ ನಾಯಕರಲ್ಲಿ ಮೂಡಿದೆ.

ರಾಜ್ಯ ಬಿಜೆಪಿ ಘಟಕದಲ್ಲಿ ಎಲ್ಲವೂ ಸರಿಯಾಗಿದ್ದರೆ ವರಿಷ್ಠರೊಂದಿಗೆ ಗೌಡರ ಆಪ್ತತೆ ಈ ಪ್ರಮಾಣದಲ್ಲಿ ಆತಂಕಕ್ಕೆ ಕಾರಣವಾಗುತ್ತಿರಲಿಲ್ಲ ಹಾಗೂ ಬಿಜೆಪಿ ವರಿಷ್ಠರು ಈ ಪ್ರಮಾಣದಲ್ಲಿ ಜೆಡಿಎಸ್ ಅನ್ನು ಹತ್ತಿರಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಆದರೆ ಕರ್ನಾಟಕ ಬಿಜೆಪಿಯಲ್ಲಿ ಹತ್ತಾರು ಗೊಂದಲ, ಭಿನ್ನಾಭಿಪ್ರಾಯ ಹಾಗೂ ಬಂಡಾಯ ಇರುವುದರಿಂದ ಈ ಎಲ್ಲವನ್ನೂ ಮೀರಿ ಕಾಂಗ್ರೆಸ್ ಅನ್ನು ಕಟ್ಟಿಹಾಕಲು ಉಳಿದಿರುವ ಏಕೈಕ ಮಾರ್ಗವಾಗಿ ಜೆಡಿಎಸ್ ಕಾಣಿಸಿಕೊಳ್ಳುತ್ತಿದೆ. ಸದ್ಯ ಜೆಡಿಎಸ್ ಅಸ್ತಿತ್ವದ ಬಗ್ಗೆ ಆಲೋಚಿಸುವುದಕ್ಕಿಂತ ಹೆಚ್ಚಾಗಿ ಇಡೀ ದೇಶದಲ್ಲಿ ದಿನದಿಂದ ದಿನಕ್ಕೆ ಬಲ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್‌ನ ಬಲ ಕರ್ನಾಟಕದಲ್ಲಿ ಮಾತ್ರ ತಗ್ಗುತ್ತಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಬಲ ತಗ್ಗಿದರೆ, ಇಡೀ ದೇಶದಲ್ಲಿ ಕಾಂಗ್ರೆಸ್‌ನ ಅಸ್ತಿತ್ವದ ಪ್ರಶ್ನೆ ಶುರುವಾಗಲಿದೆ. ಆದ್ದರಿಂದ ಬಿಜೆಪಿಯ ದೆಹಲಿ ನಾಯಕರಿಗೆ 2028ರಲ್ಲಿ ಕಾಂಗ್ರೆಸ್‌ನ ಬಲ ಕುಗ್ಗಿಸುವುದು ಪ್ರಮುಖ ಎನಿಸಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ. ಸುಮಾರು ಮೂರು ದಶಕಗಳಿಂದ ಕಟ್ಟಿಕೊಂಡು ಬಂದಿದ್ದ ಪಕ್ಷ ಸಂಘಟನೆ ಸಂಪೂರ್ಣ ನೆಲಕಚ್ಚಿದೆ. ಈ ಸಮಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದರಿಂದ ಬಿಜೆಪಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವ ಅರಿವು ದೆಹಲಿ ನಾಯಕರಿಗೆ ಇದೆ. ಈ ಕಾರಣಕ್ಕಾಗಿಯೇ, ಜೆಡಿಎಸ್‌ನೊಂದಿಗಿನ ಸ್ನೇಹವನ್ನು ಹೆಚ್ಚಿಸಿಕೊಳ್ಳುವತ್ತ ಬಿಜೆಪಿ ನಾಯಕರ ಚಿಂತನೆಯಿದೆ.

ಕಥೆ ಹೇಳುವೇ ನನ್ನ ಕಥೆ ಹೇಳುವೆ...!!

ಪದಸಾಗರ

ನವೀನ್ ಸಾಗರ್
vveditoped@gmail.com

ಯಶ್ ಅಭಿನಯದ 'ಟಾಕ್ಸಿಕ್' ಚಿತ್ರದ ಬಿಡುಗಡೆಯನ್ನು ಜೂನ್ ತಿಂಗಳಿಗೆ ಮುಂದೂಡಿದಾಗ ಆ ಘೋಷಣೆಯನ್ನು ಸಮರ್ಥಿಸಿ ಫೇಸ್‌ಬುಕ್‌ನಲ್ಲಿ ಒಂದು ಪೋಸ್ಟ್ ಹಾಕಿದ್ದೆ. ಅದೇ ಪೋಸ್ಟಿನ ಭಾಗವಾಗಿ ಒಂದು ಸಾಲು ಬರೆದಿದ್ದೆ- 'ಧುರಂಧರ್ ಮತ್ತು ಟಾಕ್ಸಿಕ್ ನಡುವೆ ಇರುವ ಗ್ಯಾಪ್‌ನಲ್ಲಿ ಕೆಟ್ಟ ಚಿತ್ರಗಳ ಸ್ಟಾಕ್ ಖಾಲಿಯಾಗಲಿ' ಎಂದು. ಹಾಗೆ ಬರೆಯಲು ಕಾರಣವಿತ್ತು. ಧುರಂಧರ್ ಎದುರಲ್ಲಿ ಭರವಸೆಯ ಚಿತ್ರಗಳ್ಯಾವುವೂ ಬಿಡುಗಡೆಯಾಗುವ ಸಾಹಸ ಮಾಡುವುದಿಲ್ಲ. ಧುರಂಧರ್ ಬಿಡುಗಡೆಯಾಗಿ ಎರಡೇ ವಾರದಲ್ಲಿ ಐಪಿಎಲ್ ಶುರುವಾಗುತ್ತದೆ. ಐಪಿಎಲ್ ಸಮಯದಲ್ಲಿ ಗೆಲ್ಲುವ ಲಕ್ಷಣ ಇರುವ ಸಿನಿಮಾಗಳು ಬಿಡುಗಡೆಯಾಗುವುದಿಲ್ಲ. ಕಳೆದ ಒಂದು ದಶಕದ ಟ್ರೆಂಡ್ ಗಮನಿಸಿದರೂ ಈ ಅವಧಿಯಲ್ಲಿ ಸ್ಟಾಕ್ ಕ್ಲಿಯರೆನ್ಸೇ ಆಗಿದ್ದು ಹೆಚ್ಚು. ಇಂಥ ಸಮಯದಲ್ಲಿ ಥಿಯೇಟರ್‌ಗೆ ಡಿಮ್ಯಾಂಡ್ ಕಡಿಮೆ ಇರುವುದರಿಂದ ರಿಲೀಸ್ ಶಾಸ್ತ್ರ ಮುಗಿಸಿಕೊಳ್ಳೋಣ, ಬೈ ಚಾನ್ಸ್ ಗೆದ್ದರೆ ಗೆಲ್ಲಲಿ ಎಂಬ ಮನಸ್ಥಿತಿಯ ಸಿನಿಮಾಗಳೇ ಹೆಚ್ಚು ರಿಲೀಸ್ ಆಗುವುದು. ಅವು ಸಹಜವಾಗಿಯೇ ಡಬ್ಬ ಸೇರಿವೆ. ನಾನು ಬರೆದ ಆ ಸಾಲು ಕೆಟ್ಟ ಚಿತ್ರಗಳಿಗೆ ಮಾತ್ರವೇ ಅನ್ವಯವಿತ್ತು. ಒಳ್ಳೆಯ ಚಿತ್ರವೊಂದು ಐಪಿಎಲ್ ಟೈಮಲ್ಲೂ ಬಂದು ಗೆದ್ದರೆ ಅದಕ್ಕಿಂತ ಸಂತಸ ಇನ್ನೇನಿದೆ? ಆದರೆ ಕೆಟ್ಟ ಚಿತ್ರಗಳ ಪರವಾಗಿ ಹೆಗಲು ಮುಟ್ಟಿಕೊಂಡು ಒಂದಷ್ಟು ಮಂದಿ ಆ ಸಾಲಿಗೆ ಕಿಡಿ ಕಾರಿದ್ದರು.

ಅಂದಹಾಗೆ, ಟಾಕ್ಸಿಕ್ ಜಾಗದಲ್ಲಿ ಬಿಡುಗಡೆಯಾದದ್ದು ಡಾರ್ಲಿಂಗ್ ಕೃಷ್ಣ ನಿರ್ದೇಶನ-ನಿರ್ಮಾಣ-ನಟನೆಯ 'ಲವ್ ಮಾಕ್ಟೇಲ್-3'. 2019ರಲ್ಲಿ ಬಿಡುಗಡೆಯಾದ 'ಲವ್ ಮಾಕ್ಟೇಲ್' ಒಂದು ಕ್ಯೂಟ್ ಸಿನಿಮಾ. ನಗು-ಅಳುಗಳನ್ನು ತುಂಬಿಕೊಂಡ, ಕಥೆ ಹೇಳುವಿಕೆಯಲ್ಲಿ ತಾಜಾತನ ಇದ್ದ ಎಮೋಷನಲ್ ಚಿತ್ರ. ಪ್ರೇಕ್ಷಕರಿಂದಲೇ ಪ್ರಚಾರ ಪಡೆದು ಗೆದ್ದಿತ್ತು. ಆದರೆ ಆ ಗೆಲುವನ್ನು ಎನ್‌ಕ್ಯಾಶ್ ಮಾಡಿಕೊಳ್ಳಲೆಂದೇ ಕಷ್ಟಪಟ್ಟು ಕಥೆ ಹೆಣೆದು ಪ್ರೇಕ್ಷಕರ ಮೇಲೆ ಹೇರಿದ್ದ ಭಾಗ-2 ನಿರಾಸೆಗೊಳಿಸಿತ್ತು. ಆ ನಂತರ ಮೂರನೇ ಭಾಗ ಮಾಡ್ತೇನೆಂದು ಹೇಳಿದಾಗಲಂತೂ, ಇದು ಬೇಕಿತ್ತಾ? ಎರಡನೇ ಭಾಗಕ್ಕೇ ಖಾಲಿಯಾಗಿದ್ದ ಕೃಷ್ಣ-ಮಿಲನ ಜೋಡಿ ಇದ್ಯಾಕೆ ಲವ್ ಮಾಕ್ಟೇಲ್ ಹಿಡಿದು ಎಳೆದಾಡ್ತಿದ್ದಾರೆ ಎಂದೆನಿಸಿತ್ತು. ಆದರೆ ಲವ್ ಮಾಕ್ಟೇಲ್ ಮೊದಲ ದಿನದಿಂದಲೇ ಹೌಸ್‌ಫುಲ್ ಆಯ್ತು. ಚಿತ್ರದ ಬಗ್ಗೆ 'ವಾಹ್' ಎಂಬಂಥ ವಿಮರ್ಶೆಗಳು ಬಂದವು. ಸೆಕೆಂಡ್ ಹಾಫ್‌ನ ಕೋರ್ಟ್ ಡ್ರಾಮಾ ಮತ್ತು ಭಾವುಕ ಅಂಶಗಳು ಸಿನಿಮಾವನ್ನು ಗೆಲ್ಲಿಸಿಬಿಟ್ಟಿದ್ದವು. ಸಿನಿಮಾ ಇಷ್ಟವಾಗಿದ್ದರ ಜತೆಗೆ ಗೆಲುವು ಕಂಡು ಖುಷಿಯಾಯ್ತು. ಅಂದು ನಾನು ಬರೆದ ಸಾಲಿಗೆ ಅಪವಾದವಾಗಿ ಒಂದು ಒಳ್ಳೆಯ ಚಿತ್ರ ಬಂತಲ್ಲ, ಮನಸಾರೆ ಚಿತ್ರವನ್ನು ಹೊಗಳಿ ಇತರ ಚಿತ್ರಪ್ರೇಮಿಗಳಿಗೆ ರೆಕಮೆಂಡ್ ಮಾಡೋಣ ಎಂದು ಬರೆಯಲು ಕೂತೆ. ಆಗ ಹೊರ ಬಂತು ಕೃತಿಚೌರ್ಯದ ಆರೋಪ.

ರಾಘವೇಂದ್ರ ನಾಯ್ಕ್ ಎಂಬ ನಿರ್ದೇಶಕರು ಬರೆದು, ಡಾರ್ಲಿಂಗ್ ಕೃಷ್ಣನಿಗೆ ನರೇಟ್ ಮಾಡಿದ್ದ ಕಥೆಯನ್ನೇ, ಕೃಷ್ಣ ತಮ್ಮ ಸಿನಿಮಾಗೆ ಬೇಕಾದಂತೆ ಅಲ್ಲಲ್ಲಿ ಬದಲಿಸಿಕೊಂಡು ಲವ್ ಮಾಕ್ಟೇಲ್ ಮಾಡಿದ್ದಾರೆ ಎಂಬ ಆರೋಪ ಇವತ್ತಿಗೆ ಸೋಷಿಯಲ್ ಮೀಡಿಯಾದ ಹಾಟ್ ಕಂಟೆಂಟ್. ಈ ಸಿನಿಮಾ ಬರುವ ಮುನ್ನವೇ ರಾಘವೇಂದ್ರ ನಾಯ್ಕ್ ಕಥೆ-ಚಿತ್ರಕಥೆ-ಸಂಭಾಷಣೆ ಬರೆದದ್ದಕ್ಕೆ, ಅದನ್ನು ಹಲವರ ಬಳಿ ಹೇಳಿದ್ದಕ್ಕೆ, ಡಾರ್ಲಿಂಗ್ ಕೃಷ್ಣ ಅವರಿಗೂ ಕಥೆ ಹೇಳಿದ್ದಕ್ಕೆ ಒಂದಷ್ಟು ಸಡಿಲ ಸಾಕ್ಷಿಗಳೇನೋ ಇವೆ. ಆದರೆ ಇಂದು ಗಟ್ಟಿಯಾಗಿ ನಿಂತು ವಾದ ಮಾಡಲು, ಲೀಗಲಿ ಸಾಬೀತುಮಾಡಲು ಅವರ ಬಳಿ ಯಾವ ಆಡಿಯೋ/ವಿಡಿಯೋ/ಡಿಜಿಟಲ್ ಅಥವಾ ಬರವಣಿಗೆಯಲ್ಲಿರುವ ಸಾಕ್ಷಿಗಳಿಲ್ಲ. ಹೀಗಾಗಿ ಇಲ್ಲಿ ರಾಘವೇಂದ್ರ ನಾಯ್ಕ್ ಅವರದ್ದು ಅಸಹಾಯಕ ರೋದನೆಯಷ್ಟೇ ಆಗಿದೆ. ಇದರ ಜತೆಗೆ ಅವರಿಗಿರೋ ಇನ್ನೊಂದು ಅಪಾಯವೆಂದರೆ, ಸಾಕ್ಷಿಗಳಿಲ್ಲದೇ ಆರೋಪ ಮಾಡಿದ್ದಕ್ಕೆ ಕೃಷ್ಣ ಅವರಿಂದ ಮಾನನಷ್ಟ ಮೊಕದ್ದಮೆ ಬೀಳುವ ಆತಂಕ. ಕಷ್ಟಪಟ್ಟು ಮಾಡಿರುವ ಕಥೆಯನ್ನು ಕಳೆದುಕೊಂಡಿರುವ ನೋವಿನ ಜತೆಗೆ ಕೇಸ್ ಹಾಕಿಸಿಕೊಂಡು ಒದ್ದಾಡುವ ಸಂಕಟ!

ಸ್ಕ್ರೀನ್ ರೈಟರ್ಸ್ ಅಸೋಸಿಯೇಷನ್‌ನಲ್ಲಿ ಕಥೆ ರಿಜಿಸ್ಟರ್ ಮಾಡಿಸಿದರೆ ಈ ರೀತಿ ಕೃತಿಚೌರ್ಯ ಆಗುವುದಿಲ್ಲ ಎಂಬ ಒಂದು ವಾದವೇನೋ ನಡೆಯುತ್ತಿದೆ. ಆದರೆ ಸಿನಿಮಾದಲ್ಲಿ ಕೃತಿಚೌರ್ಯ ತಡೆಗಟ್ಟುವುದು ಅಸಾಧ್ಯ. ಜಾಣಕಳ್ಳರು ತಾವು ಸಿಕ್ಕಿಕೊಳ್ಳದಂತೆ ಕದಿಯುವ ಕಳ್ಳದಾರಿಗಳನ್ನು ಕಂಡುಕೊಳ್ಳುತ್ತಾರೆ. ಇಷ್ಟಕ್ಕೂ ಕೃತಿಚೌರ್ಯ ಇಂದು ನಿನ್ನೆಯದಲ್ಲ, ಸಿನಿಮಾರಂಗದಲ್ಲಿ ಕೃತಿಚೌರ್ಯಕ್ಕೊಂದು ಬೃಹತ್ ಇತಿಹಾಸವೇ ಇದೆ. ರೀಮೇಕ್ ರೈಟ್ಸ್ ತೆಗೆದುಕೊಳ್ಳದೇ 'ಸ್ಫೂರ್ತಿ' ಎಂದು ಸಿನಿಮಾ ಮಾಡುವುದು, ನಾಲ್ಕೈದೋ ಹತ್ತಾರೋ ಸಿನಿಮಾಗಳ ಸೀನ್ ಕದ್ದು ರೀಮಿಕ್ಸ್ ಮಾಡುವುದು, ಬರಹಗಾರನಿಂದ ಕಥೆ ಕದ್ದು, ಅಲ್ಲಲ್ಲಿ ಬದಲಿಸಿ ಸಿನಿಮಾ ಮಾಡುವುದು, ಮ್ಯೂಸಿಕ್ ಕಾಪಿ ಮಾಡುವುದು, ಪೋಸ್ಟರ್ ಡಿಸೈನ್ ಕದಿಯುವುದು, ಹೀಗೆ ಸಾಕಷ್ಟಿವೆ. ಬೇರೆ ಯಾವುದನ್ನಾದರೂ ಸಾಕ್ಷೀಕರಿಸಬಹುದೇನೋ, ಎದುರು ಬದುರು ಕೂತು ಕಥೆ ಹೇಳಿದ್ದನ್ನು ಕದ್ದುಬಿಟ್ಟರೆ, ಸಾಬೀತುಪಡಿಸುವುದಾದರೂ ಹೇಗೆ? ನಿಮ್ಮೊಂದಿಗಿನ ಈ ಭೇಟಿಯನ್ನು ಮಾತುಕತೆಯನ್ನು ರೆಕಾರ್ಡ್ ಮಾಡಿಕೊಳ್ಳುತ್ತೇನೆ ಅಂದರೆ ಅನುಮತಿಸುತ್ತಾರಾ? ಇಲ್ಲ. 'ನಮ್ಮ ಮೇಲೆ ನಂಬಿಕೆ ಇಲ್ಲವೇ?' ಎಂಬಂಥ ಪ್ರತಿಕ್ರಿಯೆಗಳು ಬರುತ್ತವೆ. ಪ್ರೊಫೆಷನಲಿಸಂ ಇಲ್ಲದ ಚಿತ್ರರಂಗ ನಿಂತಿರುವುದು ನಂಬಿಕೆಯ ಮೇಲೆ. ಆ ನಂಬಿಕೆಗೆ ಈ ರೀತಿ ಹೊಡೆತ ಬಿದ್ದರೆ?

ಡಾರ್ಲಿಂಗ್ ಕೃಷ್ಣ ತಾವೀ ಕಥೆಯನ್ನು ಕೇಳಿದ್ದೇ ನೆನಪಿಲ್ಲ ಅಂತಾರಂತೆ. ಹಾಗಾದರೆ ಅದೇ ಕಥೆ ಕೃಷ್ಣ ಅವರಿಗೂ ಹೊಳೆದಿದೆ ಅಂದರೆ ಇದೆಂಥ ಕಾಕತಾಳೀಯವಿದ್ದಿರಬೇಕು. 'ನಾನೂ ಅಪ್ಪ-ಮಗು ಕಥೆ ಇಟ್ಕೊಂಡು ಲವ್ ಮಾಕ್ ಟೇಲ್ 3 ಮಾಡ್ತಾ ಇದೀನಿ, ನಿಮ್ಮ ಕಥೇನೂ ಅಪ್ಪ-ಮಗೂದೇ ಇದೆ, ಅದಕ್ಕೇ ಬೇಡ' ಅಂತ ಕೃಷ್ಣ ಹೇಳಿದ್ದರಂತೆ. ಕೃಷ್ಣ ಅವರು ಕಥೆ ಕೇಳುವ ಮುನ್ನವೇ ಹಾಗೆ ಹೇಳಿದ್ದಾಗಿದ್ರೆ, ಯೆಸ್, ಅವರು ಕಥೆ ಕದ್ದಿರೋ ಚಾನ್ಸೇ ಇಲ್ಲ ಅನ್ನಬಹುದಿತ್ತು. ಪೂರ್ತಿ ಕಥೆ ಕೇಳಿದ ಮೇಲೆ ಈ ಮಾತು ಬಂದಿದೆ ಅಂದರೆ ಅದು ಅನುಮಾನಕ್ಕೆ ಕಾರಣವಾಗುತ್ತದೆ ಅಥವಾ ಅನುಮಾನ ಪರಿಹರಿಸುತ್ತದೆ.

ಲವ್ ಮಾಕ್ಟೇಲ್-3ರ ಕಥೆ ನಿಜಕ್ಕೂ ಕದ್ದದ್ದಲ್ಲವೆಂದರೆ, ರಾಘವೇಂದ್ರ ನಾಯ್ಕ್ ಅವರು ಮಾಡಿರುವ ಕಥೆಗೂ ಅದಕ್ಕೂ ಹೋಲಿಕೆ ಇದೆ ಅಂದರೆ ಅದರರ್ಥ, ಇವರಿಬ್ಬರಿಗೂ ಇನ್ಯಾವುದೋ ಕಥೆ ಸ್ಫೂರ್ತಿಯಾಗಿದೆ ಅಥವಾ ಇವರಿಬ್ಬರೂ ಇನ್ನೆಲ್ಲಿಂದಲೋ ಪ್ರತ್ಯೇಕವಾಗಿ ಕಥೆ ಎತ್ತಿದ್ದಾರೆ ಎಂದಾಗುತ್ತದೆ. ಅದು ಇನ್ನೂ ಅಸಹ್ಯಕರ ಟ್ವಿಸ್ಟ್. ಅದು 1990. ವಿಷ್ಣುವರ್ಧನ್ ಒಬ್ಬ ಗಾಯಕ. ಅವನಿಗೆ ಸಿರಿವಂತ ಉದ್ಯಮಿಯ ಮಗಳು ರೂಪಿಣಿ ಜತೆ ಲವ್. ಮದುವೆಗೆ ವಿರೋಧ ಹುಟ್ಟಿ, ಆಕೆಯನ್ನು ಇನ್ನೊಬ್ಬ ಸಿರಿವಂತ ಉದ್ಯಮಿಯ ಮಗ ಅನಂತನಾಗ್ ಮದುವೆಯಾಗುತ್ತಾರೆ. ಅವರಿಗೊಂದು ಮಗುವಾಗುತ್ತದೆ. ಆದರೆ ತಾಯಿ ಸಾವನ್ನಪ್ಪುತ್ತಾಳೆ. ಅನಂತನಾಗ್ ಇನ್ನೊಂದು ಮದುವೆಯಾಗುತ್ತಾರೆ. ಎರಡನೇ ಪತ್ನಿಗೆ ಈ ಮಗುವನ್ನು ಸಾಕಲು ಇಷ್ಟವಿರುವುದಿಲ್ಲ. ತನ್ನ ಪ್ರೇಯಸಿಯ ಆ ಮಗುವನ್ನು ವಿಷ್ಣುವರ್ಧನ್ ಸಾಕಿಕೊಳ್ಳುತ್ತಾರೆ. ಅದು ಚುರುಕಾಗಿ ಮುದ್ದಾಗಿ ಬೆಳೆಯುತ್ತದೆ. ವಿಷ್ಣು ಮತ್ತು ಮಗು ಮಧ್ಯೆ ಅಪ್ಪ-ಮಗಳ ಥರದ ಅಟ್ಯಾಚ್ಮೆಂಟ್ ಬೆಳೆಯುತ್ತದೆ. ಇತ್ತ ಅನಂತ್ ಮತ್ತು ಎರಡನೇ ಪತ್ನಿಗೆ ಮಕ್ಕಳಾಗುವುದೇ ಇಲ್ಲ. ಮಗು ಬೇಕೆಂಬ ಹಂಬಲ ಹೆಚ್ಚುತ್ತದೆ. ಚುರುಕಾದ ಮುದ್ದಾದ ಈ ಮಗುವನ್ನು ನೋಡುತ್ತಾರೆ. ಆಗ ಬೇಡವಾಗಿದ್ದ ಮಗು ಈಗ ಬೇಕೆನಿಸುತ್ತದೆ. ತಮ್ಮದೇ ಮಗು ಎಂಬ ಹಕ್ಕಿನಿಂದ ಕೇಳಿ ಪಡೆಯುತ್ತಾರೆ. ವಿಷ್ಣು ಹೃದಯ ಭಾರವಾಗಿಸಿಕೊಂಡು ತ್ಯಾಗ ಮಾಡುತ್ತಾರೆ. ಆದರೆ ಅಂತಿಮವಾಗಿ ಮಗು ವಿಷ್ಣುವನ್ನು ಬಿಟ್ಟು ಹೋಗಲು ಒಪ್ಪದೇ ಬಯಾಲಾಜಿಕಲ್ ತಂದೆಯನ್ನು ಬಿಟ್ಟು ಸಾಕಿದ ತಂದೆಯನ್ನು ಸೇರುತ್ತದೆ.

ಚಿತ್ರದ ಹೆಸರು 'ಮತ್ತೆ ಹಾಡಿತು ಕೋಗಿಲೆ'. ನಿರ್ದೇಶಕ ಭಾರ್ಗವ. ಕಥೆ ಬರೆದವರು ಚಿ.ಉದಯಶಂಕರ್.

ಕೃಷ್ಣ ಮತ್ತು ರಾಘವೇಂದ್ರ ನಾಯ್ಕ್ ಇಬ್ಬರಿಗೂ 'ಮತ್ತೆ ಹಾಡಿತು ಕೋಗಿಲೆ' ಚಿತ್ರ ಸ್ಫೂರ್ತಿಯಾಯ್ತೇ? ಕೃತಿಚೌರ್ಯವೆಂದು ಕ್ಲೈಮ್ ಮಾಡೋಕೆ ಚಿ.ಉದಯಶಂಕರ್ ಅವರೇ ಇಲ್ಲ. ರಾಘವೇಂದ್ರ ನಾಯ್ಕ್ ಅವರ ಸಂಕಟಕ್ಕೆ ಸಹಾನುಭೂತಿ ಇದೆ. ಕೃಷ್ಣ ಅವರ ಲವ್ ಮಾಕ್ಟೇಲ್ ಚಿತ್ರ ಮನಗೆದ್ದದ್ದಕ್ಕೆ ಸಂತಸವೂ ಇದೆ. ಆದರೆ ಕಥೆಯ

ಈ ತಕರಾರಿಗೆ ನ್ಯಾಯ ಸಿಗುವುದಾದರೂ ಹೇಗೆ?

ಕಥೆ ಸೃಷ್ಟಿಸುವುದು ಸುಲಭದ ಕೆಲಸವಲ್ಲ. ಆದರೆ ಸಿಕ್ಕಿರುವ ಕಥೆಯನ್ನು ಗುರುತು ಸಿಗದಂತೆ ಬದಲಿಸುವುದು ಬಹಳ ಸುಲಭದ ಕೆಲಸ. ಮೂಲ ಕಥೆಗಾರನಿಗೆ ಇದು ತನ್ನದೇ ಕಥೆಯ ರೂಪಾಂತರ ಅಂತ ಗೊತ್ತಾಗುತ್ತದೆ. ಅಷ್ಟೊತ್ತಿಗೆ ಆ ಕಥೆ ಬೇರೆಯವರದ್ದಾಗಿ ಹೋಗಿರುತ್ತದೆ. ಕ್ಯಾಶು-ಕ್ರೆಡಿಟ್ಟು ಏನೂ ಸಿಗದೆ, ಮೇಲಾಗಿ ಆರೋಪ ಮಾಡಿದ ಕಾರಣಕ್ಕೆ ಕೇಸ್ ಹಾಕಿಸಿಕೊಳ್ಳುವ ಸ್ಥಿತಿ.

ಹಿಂದೊಮ್ಮೆ ಕಿರುತೆರೆಯಲ್ಲಿ ನಡೆಯುವ ಇಂಥ ಕಥೆ ಕಳ್ಳತನದ ಬಗ್ಗೆ ಒಂದು ಲೇಖನ ಬರೆದಿದ್ದೆ. ಅಲ್ಲಿ ಇಲ್ಲಿಗಿಂತ ಬೃಹತ್ ಕಳ್ಳಜಾಲವಿದೆ. ಕಿರುತೆರೆಯಲ್ಲಿ ಯಾವ ವಾಹಿನಿಯೂ ಹೆಚ್ಚು ರಿಸ್ಕ್ ತೆಗೆದುಕೊಳ್ಳುವುದಿಲ್ಲ. ರೀಮೇಕ್ ಜಮಾನದಲ್ಲಿರುವ ಚಾನೆಲ್‌ಗಳು, ಬೇರೆ ಭಾಷೆಗಳಲ್ಲಿ ಪ್ರಸಾರ ಮಾಡುತ್ತಿರುವ ಯಶಸ್ವಿ ಧಾರಾವಾಹಿಗಳನ್ನು ನೇರವಾಗಿ ರೀಮೇಕ್ ಮಾಡುತ್ತವೆ. ಇಲ್ಲಿ ಹೊಸ ಕಥೆ ಬರೆಯುವವರಿಗೆ ಕೆಲಸವಿಲ್ಲ. ಆದರೂ ಚಾನೆಲ್ ತಲೆಗಳು ಕಥೆ ಬರೆಸುತ್ತವೆ. ಬರೆಯುವ ಪ್ರತಿಭಾವಂತ ಕೈಗಳಿಂದ ಬರೆಸುತ್ತವೆ. ಕಥೆ ಕೊಳ್ಳುತ್ತೇವೆ, ಸ್ಲಾಟ್ ಕೊಡುತ್ತೇವೆ ಅಂತ ಆಸೆ ಹುಟ್ಟಿಸುತ್ತವೆ. ಆಮೇಲೆ?

ಕಥೆ ಬರೆದು ಬರೆದು ಕಳಿಸುತ್ತಾರೆ. ವಾಹಿನಿಗೆ ಹೋಗಿ ಕಥೆ ಹೇಳುತ್ತಾರೆ. ಸಿನಾಪ್ಸಿಸ್ ಮಾತ್ರವಲ್ಲದೆ ಐವತ್ತು ಎಪಿಸೋಡ್‌ಗೆ ಆಗುವಷ್ಟು ಚಿತ್ರಕಥೆ-ಸಂಭಾಷಣೆಗಳನ್ನು ಬರೆದು, ಅವನ್ನು ಹೇಗೆ ಚಿತ್ರೀಕರಿಸಬೇಕು ಎಂಬ ಮಾಹಿತಿಯನ್ನೂ ಸೇರಿಸಿ ಕಳಿಸುತ್ತಾರೆ. ತಮ್ಮ ಕಥೆ ಓಕೆ ಆಗಿ... ನೀವೇ ನಿರ್ದೇಶಿಸಿಬಿಡಿ ಎಂದೂ ಚಾನೆಲ್‌ನವರು ಹೇಳಬಹುದೆಂಬ ಭ್ರಮೆಯಲ್ಲಿ!

ಆದರೆ ಹಾಗೆಲ್ಲ ಆಮಂತ್ರಣ ಬರುವುದಿಲ್ಲ, ಕಥೆಗಾರರು ಚಾನೆಲ್‌ಗಳ ಬಾಗಿಲ ಬಳಿ ನಿಂತು, ತಾವು ಕಳಿಸಿದ ಕಥೆ ಏನಾಯಿತೆಂದು ಕೇಳಿ ಬಳಲುತ್ತಾರೆ. 'ಇನ್ನೂ ಓದಿಲ್ಲ, ಇನ್ನೂ ಅಪ್ರೂವ್ ಆಗಿಲ್ಲ' ಎಂಬ ಉತ್ತರಗಳು ಮೊದಲು ಬರುತ್ತವೆ. ಆ ನಂತರ ಉತ್ತರವೇ ಸಿಗುವುದಿಲ್ಲ, ತೀರಾ ದುಂಬಾಲು ಬಿದ್ದಾಗ 'ನಿಮ್ಮ ಕಥೆ ರಿಜೆಕ್ಟ್ ಆಗಿದೆ' ಎಂಬ ಉತ್ತರ ಬರುತ್ತದೆ. ಕಥೆಗಾರ ನಿರಾಶನಾಗುತ್ತಾನೆ. ಸ್ವಲ್ಪ ದಿನಗಳ ನಂತರ ಮತ್ತೆ ನಿರಾಶೆ ಬದಿಗೊತ್ತಿ ಇನ್ನೊಂದು ಒಳ್ಳೆ ಕಥೆ ಮಾಡೋ ನಿರ್ಧಾರಕ್ಕೆ ಬಂದು ಕೂರುತ್ತಾನೆ. ಅಷ್ಟೊತ್ತಿಗೆ ಅದೇ ವಾಹಿನಿಯಲ್ಲೋ ಅಥವಾ ಇನ್ನೊಂದು ವಾಹಿನಿಯಲ್ಲೋ ಹೊಸದೊಂದು ಸೀರಿಯಲ್ ಶುರುವಾಗುತ್ತದೆ. ಪ್ರೊಮೋ ನೋಡಿದರೆ, 'ಅರೆ ಇದು ನನ್ನ ಕಥೆ ಅಲ್ವೇ?' ಅನಿಸಲಾರಂಭಿಸುತ್ತದೆ. ಮೊದಲ ಎಪಿಸೋಡ್ ನೋಡೋ ಹೊತ್ತಿಗೆ ಅದು ನೀವು ಕೊಟ್ಟ ಕಥೆಯೇ ಎಂದು ಕನ್ಫರ್ಮ್ ಕೂಡ ಆಗಿಬಿಡುತ್ತದೆ. ಆದರೆ ಹಾಗೆಂದು ವಾದ ಮಾಡುವುದಕ್ಕೆ ನಿಮ್ಮಲ್ಲಿ ಯಾವುದೇ ಪುರಾವೆಗಳೂ ಇರುವುದಿಲ್ಲ, ವಾಹಿನಿಯ ಕೈಗಳು ನೀವು ಕೊಟ್ಟ ಕಥೆಯನ್ನು ಅತಿ ಚಾಣಾಕ್ಷತನದಿಂದ ರೂಪಾಂತರಗೊಳಿಸಿಬಿಟ್ಟಿರುತ್ತವೆ.

ನೀವು ಬರೆದಿರೋ ಹೆಣ್ಣು ಪಾತ್ರಗಳು ಗಂಡಾಗಿರುತ್ತವೆ. ಕಿವುಡು ಪಾತ್ರ ಮೂಗನ ಪಾತ್ರವಾಗಿ ಬದಲಾಗಿರುತ್ತದೆ. ಹಳ್ಳಿ ಬ್ಯಾಕ್‌ಡ್ರಾಪ್ ಸಿಟಿಯಾಗಿರುತ್ತದೆ. ಒಟ್ಟಾರೆ ನೀವು ಮಾಡಿದ ಮೆಯ್ಲು, ಪೋಸ್ಟು, ಕಥೆ ಹೇಳೋಕೆ ಮೀಟ್ ಮಾಡಿದ ವ್ಯಕ್ತಿಗಳು, ಆಫೀಸಿನ ಮೆಟ್ಟಿಲ ಮೇಲಿನ ನಿಮ್ಮ ಹೆಜ್ಜೆ ಗುರುತು, ಸ್ಕ್ರಿಪ್ಟ್ ಮೇಲೆ ಕೈ ಇರಿಸಿದವರ ಬೆರಳಚ್ಚು ಏನೇ ತಂದರೂ ಈ ಕಳ್ಳತನವನ್ನು ಪ್ರೂವ್ ಮಾಡಲಾಗುವುದೇ ಇಲ್ಲ!

ಅಲ್ಲಿ ವಾಹಿನಿಯ ಕಥಾಕಣಜ ಅಂತಲೋ, ಕಥಾಬಳಗ ಎಂದೋ ಇನ್ನೇನೋ ಹೆಸರು ಮೂಲ ಕಥೆಗಾರರ ಬದಲು ಕಾಣಿಸುತ್ತದೆ. ಇನ್ನು ಕೆಲವೊಮ್ಮೆ ಇನ್ನೂ ವಿಚಿತ್ರ ಪರಿಸ್ಥಿತಿ. ಬಂದಿರುವ ರಾಶಿಕಥೆಗಳಲ್ಲಿ ಮೂರೋ ನಾಲ್ಕೋ ಕಥೆಗಳನ್ನು ಸೇರಿಸಿ ಒಂದು ಕಥೆ ಮಾಡಿಕೊಂಡು ಸೀರಿಯಲ್ ಮಾಡಿಬಿಡುವ ಜಾಣತನಗಳನ್ನೂ ವಾಹಿನಿಗಳು ತೋರಿಸೋದಿದೆ. ಕೆಲವು ಬಾರಿ ಖುದ್ದು ಬರಹಗಾರನಿಗೇ ತಾನು ಹೀಗೊಂದು ಕಥೆ ಬರೆದು ಕಳಿಸಿದ್ದೆ ಎಂದು ಮರೆತುಹೋಗುವಷ್ಟು ಕಾಲದ ನಂತರ ಆತನ ಕಥೆ ಧಾರಾವಾಹಿಯಾಗಿ ಬರುತ್ತದೆ! ಇನ್ನು ಕೆಲವೊಮ್ಮೆ ವಾಹಿನಿಗಳಿಂದ ವಾಹಿನಿಗೆ ಜಂಪ್ ಆಗುವ ತಲೆಗಳು ತಮ್ಮೊಂದಿಗೆ ಕಥೆಗಳನ್ನೂ ವಲಸೆ ಕರೆದೊಯ್ಯುತ್ತಾರೆ. ಆಗ ಒಂದು ವಾಹಿನಿಗೆ ಕಳಿಸಿದ್ದ ಕಥೆ ಇನ್ನೊಂದು ವಾಹಿನಿಯಲ್ಲಿ ಪ್ರಸಾರವಾಗುತ್ತದೆ. ಅಲ್ಲಿಗೆ ನಿಮ್ಮ ವಾದ ತಂತಾನೆ ಸೋತುಬಿಡುತ್ತದೆ.

ಇದೆಲ್ಲಕ್ಕಿಂತ ಭಾರಿ ಮೋಸವೆಂದರೆ, ನಿಮ್ಮ ಕಥೆ ಸೀದಾ ಅವರದೇ ಬೇರೆ ಭಾಷೆಯ ಸಿಸ್ಟರ್ ಕನ್ಸರ್ನ್ ಚಾನೆಲ್‌ಗಳಿಗೆ ಹೋಗಿ ಸೀರಿಯಲ್ ಆಗಿಬಿಡುತ್ತದೆ. ಅಲ್ಲಿಂದ ರೀಮೇಕ್ ಎಂಬ ಹೆಸರಲ್ಲಿ ಕನ್ನಡಕ್ಕೆ ಬರುತ್ತದೆ. ಕಥೆಗಾರ ಪ್ರಶ್ನಿಸಿದರೆ, 'ಇದು ಬೇರೆ ಭಾಷೆಯಿಂದ ಅಧಿಕೃತವಾಗಿ ರೀಮೇಕ್ ಆಗುತ್ತಿರುವ ಸೀರಿಯಲ್. ನಿಮ್ಮ ಕಥೆ ಆ ಭಾಷೆಯಲ್ಲಿ ಬಂದಿರೋಕೆ ಹೇಗೆ ಸಾಧ್ಯ?' ಎಂಬ ಗದರಿಕೆ ಬರುತ್ತದೆ. ಅಲ್ಲಿಗೆ ಕಥೆಗಾರ ಫಿನಿಷ್. ಎಳೆ ಸಿಕ್ಕರೆ ಸಾಕು ಕಥೆ ಮಾಡಿಕೊಳ್ಳಬಲ್ಲ ಜಾಣ ಹಾಗೂ ಅನುಭವಿ ಕೈಗಳು ವಾಹಿನಿಗಳಲ್ಲಿದ್ದಾಗ ಪೂರ್ತಿ ಕಥೆ ಕೊಟ್ಟರೆ ಅದನ್ನು ಬದಲಾಯಿಸೋದೇನು ಕಷ್ಟದ ಕೆಲಸವೇ?

'ಕನ್ನಡದಲ್ಲಿ ಕಥೆಗಳು ಬರುತ್ತಿಲ್ಲ.. ಕಥೆ ಬರೆಯುವವರಿಲ್ಲ..' ಇವೆಲ್ಲ ಶುದ್ಧ ಸುಳ್ಳು. ಬರೆಯುವ ಕೈಗಳಿಗೆ ಬೆಲೆ ಇಲ್ಲ ಎಂಬುದಷ್ಟೇ ಸತ್ಯ. ಇಂದಿಗೂ ಬರವಣಿಗೆ ಎಂಬುದು ನಿರ್ಲಕ್ಷಿಸುವ ಅಥವಾ ಕದಿಯುವ ವಸ್ತುವಾಗಿದೆಯೇ ಹೊರತು, ಮರ್ಯಾದೆ ಕೊಟ್ಟು ಕೊಳ್ಳುವ ವಸ್ತುವಾಗಿಲ್ಲ. ಹೀಗಾಗಿ ಕನ್ನಡ ದೃಶ್ಯಮಾಧ್ಯಮ ಸೊರಗುತ್ತಿದೆ, ನಲುಗುತ್ತಿದೆ...

ಭಟ್ಟರ್ ಸ್ಕಾಚ್

- **ದೇವು, (ಇಮೇಲ್ ಮೂಲಕ)**
ಭಟ್ರೇ, ಸಾಲ ಮತ್ತು ಸೊಳ್ಳೆ ನಡುವೆ ಇರುವ ಸಾಮ್ಯತೆ ಏನು?
– **ಎರಡೂ ನಿದ್ದೆ ಗೆಡಿಸುತ್ತವೆ, ಆದರೆ ಸೊಳ್ಳೆ ರಕ್ತ ಹೀರುತ್ತದೆ, ಸಾಲ ಜೀವವನ್ನೇ ಹೀರುತ್ತದೆ!**

- **ಸುಕೇಶ ಶೆಟ್ಟಿ, ಬೆಂಗಳೂರು**
ಭಟ್ರೇ, ಮದುವೆಯಾದ ಮೇಲೆ ಹುಡುಗರು ಯಾಕೆ ದಪ್ಪಗಾಗುತ್ತಾರೆ?
– **ಮದುವೆಯಾದ ಮೇಲೆ ಹೆಂಡತಿ ಬೈಯ್ಗುಳ ತಿಂದು ದಪ್ಪಗಾಗುತ್ತಾರೆ!**

- **ರಾಜೇಶ ಕೋಳೂರು, ಕೋಳೂರು**
ಭಟ್ರೇ, ಕಳ್ಳನಿಗೆ ಮತ್ತು ಲವ್ ಫೈಲ್ಯೂರ್ ಆದವನಿಗೆ ಇರುವ ವ್ಯತ್ಯಾಸವೇನು?
– **ಕಳ್ಳ 'ಲಾಕಪ್'ನಲ್ಲಿ ಇರುತ್ತಾನೆ, ಲವ್ ಫೈಲ್ಯೂರ್ ಆದವನು ಚಿಂತೆಯಲ್ಲಿ ಬಂಧಿತನಾಗಿರುತ್ತಾನೆ!**

- **ಜೈಶಂಕರ ಸಿ., ಚನ್ನರಾಯಪಟ್ಟಣ**
ಭಟ್ರೇ, ಪರೀಕ್ಷೆ ಅಂದರೆ ಏನು?
– **ಗೊತ್ತಿಲ್ಲದವರು ಕೇಳುವ ಪ್ರಶ್ನೆಗೆ, ಗೊತ್ತಿದ್ದವರು ಉತ್ತರ ಬರೆದು ಪಾಸ್ ಆಗುವ ಪ್ರಕ್ರಿಯೆ!**

- **ಪ್ರಭಾ ಶಂಕರ, (ಇಮೇಲ್ ಮೂಲಕ)**
ಭಟ್ರೇ, ಟೀಚರ್ ಅಂದರೆ ಯಾರು?
– **ತಮಗೆ ಗೊತ್ತಿಲ್ಲದ್ದನ್ನು ನಮಗೆ ಗೊತ್ತಿಲ್ಲ ಎಂದು ಸಾಬೀತು ಮಾಡುವವರು!**

- **ಲೋಕೇಶ ಬಾರಿ, ಶಿವಮೊಗ್ಗ**
ಭಟ್ರೇ, ಡಾಕ್ಟರ್ ಯಾಕೆ **ಬಿಳಿ ಕೋಟು ಹಾಕಿಕೊಳ್ಳುತ್ತಾರೆ?**
– **ಬಿಲ್ ನೋಡಿ ಪೇಷಂಟ್ ಬಿಳಿಚಿಕೊಂಡಾಗ, ಯಾರು ಪೇಷಂಟ್ ಯಾರು ಡಾಕ್ಟರ್ ಅಂತ ಕನ್‌ಫ್ಯೂಸ್ ಆಗಬಾರದು ಅಂತ!**

- **ಶ್ರುತಿ ಭಟ್, ಶಿರಸಿ**
ಭಟ್ರೇ, ಕ್ರಿಕೆಟ್ ಅಂಪೈರ್ ಮತ್ತು ಮ್ಯಾನೇಜರ್ ನಡುವೆ ಇರುವ ಸಾಮ್ಯತೆ ಏನು?
– **ಇಬ್ಬರೂ ತಮಗೆ ಇಷ್ಟ ಬಂದಾಗ ಕೈ ಎತ್ತುತ್ತಾರೆ, ಆಗ ಔಟ್ ಆಗುವುದು ಮಾತ್ರ ನಾವೇ!**

- **ರವಿ ಸಾತೂರು, ಬೆಂಗಳೂರು**
ಭಟ್ರೇ, ಮನುಷ್ಯನಿಗೆ ಅತಿ ಹೆಚ್ಚು ಸಮಾಧಾನ ಸಿಗುವುದು ಎಲ್ಲಿ?
– **ತನ್ನ ಫ್ರೆಂಡ್ ಕೂಡ ಫೇಲ್ ಆಗಿದ್ದಾನೆ ಎಂದು ತಿಳಿದಾಗ!**

- **ವಿನಾಯಕ ಶಾಸ್ತ್ರಿ, ಕುಮಟಾ**
ಭಟ್ರೇ, ಹೆಂಡತಿಯನ್ನು 'ಹೋಮ್ ಮಿನಿಸ್ಟರ್' ಎಂದು ಯಾಕೆ ಕರೆಯುತ್ತಾರೆ?
– **ಮನೆಯಲ್ಲಿ ಯಾವ 'ಬಿಲ್' ಪಾಸ್ ಆಗಬೇಕು ಎನ್ನುವುದು ಅವರ ಕೈಯಲ್ಲೇ ಇರುತ್ತದೆ!**

ಬದುಕನ್ನು ಬದಲಿಸುವ ಶಕ್ತಿಯಿರುವುದು ಕಲಿಕೆಗೆ

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಕಲಿಕೆ ಎನ್ನುವ ಪದಕ್ಕೆ ವಿಶಾಲವಾದ ಅರ್ಥವಿದೆ. ಕಲಿಕೆ ಎಂದರೆ ಕೇವಲ ಶಾಲೆಗೆ ಹೋಗುವುದಲ್ಲ, ಪುಸ್ತಕ ಓದುವುದಲ್ಲ, ಅದು ಕೇವಲ ಗಣಿತದ ಫಾರ್ಮುಲಾಗಳು ಕೂಡ ಅಲ್ಲ, ಇತಿಹಾಸದ ಇಸವಿಗಳು, ಘಟನೆಗಳು ಅಲ್ಲ. ಆದರೆ ಇವು ಕೂಡ ಕಲಿಕೆಯ ಅಂಶಗಳು. ಅಡುಗೆ ಮಾಡುವುದು, ಕ್ರಿಕೆಟ್ ಆಡುವುದು, ಚೆಸ್, ಕಬಡ್ಡಿ, ಚಿನ್ನಿ-ದಾಂಡುವಿನಿಂದ ಹಿಡಿದು, ಈಜುವುದು, ಓಡುವುದು, ಹಾಡುವುದು, ಕುಣಿಯುವುದು, ಮಾತನಾಡುವುದು, ಕೇಳಿಸಿಕೊಳ್ಳುವುದು ಕೂಡ ಕಲಿಕೆ. ಸರಳವಾಗಿ ಹೇಳಬೇಕೆಂದರೆ ಬದುಕಿನ ಎಲ್ಲಾ ಹಂತದಲ್ಲೂ ನಾವು ಕಲಿಯುತ್ತಿರುತ್ತೇವೆ. ಕೆಲವು ಐಚ್ಛಿಕ, ಮತ್ತೆ ಕೆಲವು ಅನೈಚ್ಛಿಕ. ಪ್ರಜ್ಞಾಪೂರ್ವಕವಾಗಿ ನಿತ್ಯವೂ ಹತ್ತು ಪುಟವಾದರೂ ಓದುವ ಗುಣವನ್ನು, ಕಲೆಯನ್ನು ಬೆಳೆಸಿಕೊಂಡರೆ ಅದು ಐಚ್ಛಿಕ ಕಲಿಕೆ. ಸುಖಾಸುಮ್ಮನೆ ರಸ್ತೆಯಲ್ಲಿ ಬೇರೊಬ್ಬರ ಮೇಲೆ ಜಗಳಕ್ಕೆ ಬಿದ್ದವರನ್ನು ನೋಡಿ, ರೋಡ್ ರೇಜ್‌ನಲ್ಲಿ ಸಿಕ್ಕಿಹಾಕಿಕೊಳ್ಳಬಾರದು ಎನ್ನುವ ವಿವೇಚನೆಯನ್ನು ಕಲಿಸಿದ್ದು ಅನೈಚ್ಛಿಕ ಕಲಿಕೆ. ತಿನ್ನುವುದು, ವಿಸರ್ಜಿಸುವುದು ಕೂಡ ಬದುಕಿನ ಒಂದು ಹಂತದಲ್ಲಿ ಐಚ್ಛಿಕ ಕಲಿಕೆಯಾಗಿತ್ತು ಅಲ್ಲವೇ? ಬದುಕಿನಲ್ಲಿ ಒಂದು ಹಂತದ ನಂತರ ಇವು ಮತ್ತೆ ಐಚ್ಛಿಕ ಕ್ರಿಯೆಗಳಾಗಿ ಮಾರ್ಪಾಟಾದರೆ ಅದರಲ್ಲಿ ವಿಶೇಷವೇನಿಲ್ಲ. ಒಟ್ಟಾರೆ ಕಲಿಕೆ ಎನ್ನುವುದು ಜೀವನದ ಅವಿಭಾಜ್ಯ ಅಂಗ. ಅದು ಜೀವನ ಶೈಲಿ, ಬದುಕುವ ರೀತಿ.

ಕೆಲವು ಕಲಿಕೆಗಳು ಬದುಕಿಗೆ ಅವಶ್ಯಕ. ಅದರಿಂದ ಲಾಭವನ್ನು ಲೆಕ್ಕ ಹಾಕುವಂತಿಲ್ಲ. ಇನ್ನು ಕೆಲವು ಲಾಭಕ್ಕಾಗಿ, ಬದುಕಿನ ಓಘವನ್ನು ಬದಲಿಸಿಕೊಳ್ಳಲು, ಇನ್ನಷ್ಟು ಉನ್ನತಿಯ ಕಡೆಗೆ ಸಾಗಲು ಅವಶ್ಯಕ. ಬದುಕು ಬಹಳ ಸೂಕ್ಷ್ಮ, ಅದು ಯಾವಾಗ ಬೇಕಾದರೂ ಬದಲಾಗಬಹುದು. ನನ್ನ ಸ್ನೇಹಿತನೊಬ್ಬ ಆಸ್ಟ್ರೇಲಿಯಾ ದೇಶದಲ್ಲಿದ್ದಾನೆ. ನನಗಿಂತ ಎರಡು ವರ್ಷ ಹಿರಿಯ. ಕರೋನ ಸಮಯದಲ್ಲಿನ ಒತ್ತಡ ನಿರ್ವಹಣೆಯಲ್ಲಿ ಹೆಚ್ಚು ಕಡಿಮೆಯಾಗಿ ಪೆರಾಲಿಸಿಸ್‌ಗೆ ತುತ್ತಾಗಿದ್ದ. ಫೋನ್ ಮಾಡಿ ಅವನನ್ನು ವಿಚಾರಿಸುವಾಗ, ''ಮತ್ತೆ ಮಗುವಿನಂತೆ ನಡೆಯುವುದು ಕಲಿಯುತ್ತಿದ್ದೇನೆ. ಒಂದು ನಿಮಿಷ ಒಂದೇ ಸಮನೆ ನಿಲ್ಲಲು ಆಗುತ್ತಿಲ್ಲ'' ಎಂದಿದ್ದ. ಇವತ್ತಿಗೆ ಮತ್ತೆ ಸಾಮಾನ್ಯವಾಗಿದ್ದಾನೆ ಎನ್ನುವುದು ಶುಭಸುದ್ದಿ. ಈ ಮಾತುಗಳನ್ನು ಹೇಳಲು ಕಾರಣ, ಕೆಲವೊಮ್ಮೆ ಕಲಿಕೆ ಇಷ್ಟಪಟ್ಟು ಆಗಬೇಕೆಂದಿಲ್ಲ! ಅದು ನಮ್ಮ ತಪ್ಪುಗಳಿಂದ, ಅಥವಾ ಇತರರ ತಪ್ಪುಗಳಿಂದ ಹೇಗೋ ಒಟ್ಟಾರೆ ಕಲಿಕೆಯಾಗುತ್ತದೆ.

ಜಗತ್ತಿನಲ್ಲಿ ಸಾವಿರ ವಿಷಯಗಳಿವೆ, ನಾವು ಅವೆಲ್ಲವನ್ನೂ ಕಲಿಯಲು ಸಾಧ್ಯವಿಲ್ಲ. ನಮ್ಮ ಕಾರ್ಯಕ್ಷೇತ್ರ ಯಾವುದಿದೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಾವು ಶ್ರದ್ಧೆಯಿಂದ ಕಲಿಯಬೇಕು. ಇಂಥ ಔಪಚಾರಿಕ ಕಲಿಕೆಯಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಇವುಗಳನ್ನು ಸಮಯದ ಸದ್ವಿನಿಯೋಗ ಮಾಡಿಕೊಳ್ಳುವ ಅಡಿಯಲ್ಲಿ ಸರಿಯಾಗಿ ಬಳಸಿಕೊಂಡರೆ ನಾವು ತಲುಪುವ ಮಟ್ಟವನ್ನು ಊಹಿಸಿಕೊಳ್ಳುವುದು ಕೂಡ ಅಸಾಧ್ಯ. ಅಂಥ ಪ್ರಚಂಡ ಶಕ್ತಿ ಕಲಿಕೆಯಲ್ಲಿದೆ.

ನಿತ್ಯವೂ 30ರಿಂದ 60 ನಿಮಿಷ ಓದಿಗೆ ಮೀಸಲಿಡಿ

ಓದು ಕಲಿಕೆಯ ಒಂದು ಮಹತ್ತರ ಭಾಗ. ಓದುವುದರಿಂದ ಓದಿದ ವಿಷಯ ಮನಸ್ಸಿನಲ್ಲಿ ನೇರವಾಗಿ ಜಾಗ ಪಡೆದುಕೊಳ್ಳುತ್ತದೆ. ಓದುವುದರ ಜತೆಗೆ ಮುಖ್ಯವಾದ ಅಂಶಗಳನ್ನು ಬರೆದಿಟ್ಟು ಕೊಳ್ಳುವುದು ಕೂಡ ಮಾಡಬೇಕು. ಇವತ್ತಿಗೆ ನೂರಾರು ಹೊಸ ವಿಧಾನಗಳು, ತಂತ್ರಜ್ಞಾನಗಳು ಬಂದಿವೆ. ಆದರೂ ನಾವು ಓದುವುದು ಮತ್ತು ಬರೆಯುವುದು ಮನಸ್ಸಿನ ಆಳಕ್ಕೆ ಇಳಿದಷ್ಟು ಬೇರೆ ಯಾವ ವಿಧಾನಗಳೂ ಪರಿಣಾಮಕಾರಿ ಆಗಿರುವುದಿಲ್ಲ ಎನ್ನುವುದು ನನ್ನ ಸ್ವಂತ ಅನುಭವ ಕೂಡ. ದಿನದಲ್ಲಿ ಒಂದು ಗಂಟೆ ಓದುತ್ತಾ ಹೋದರೆ ಆಗ ವಾರದಲ್ಲಿ ಒಂದು ಪುಸ್ತಕ ಓದಿ ಮುಗಿಸಬಹುದು. ವರ್ಷಕ್ಕೆ 50 ಪುಸ್ತಕ! ಹತ್ತು ವರ್ಷದಲ್ಲಿ 500 ಪುಸ್ತಕ ಓದಿ ಮುಗಿಸಬಹುದು. ನಿಮಗೆ ಗೊತ್ತಿರಲಿ ಒಬ್ಬ ಸಾಮಾನ್ಯ ಮನುಷ್ಯ ವರ್ಷದಲ್ಲಿ ಒಂದು



ಪುಸ್ತಕ ಓದಿದರೆ ಅದು ಹೆಚ್ಚು! ದಿನಕ್ಕೆ ಒಂದು ಗಂಟೆ ಓದುವ ಅಭ್ಯಾಸ ನಮ್ಮನ್ನು ಅದ್ಯಾವ ಮಟ್ಟದಲ್ಲಿ ಸಾಮಾನ್ಯ ಮನುಷ್ಯನಿಗಿಂತ ವಿಭಿನ್ನವಾಗಿಸುತ್ತದೆ ಎನ್ನುವುದನ್ನು ಗಮನಿಸಿ. ಓದು ಹೊಸ ಚಿಂತನೆಗೆ ನಮ್ಮನ್ನು ಹಚ್ಚುತ್ತದೆ. ಗೊತ್ತಿಲ್ಲದ ಹೊಸ ಆಯಾಮಗಳನ್ನು ನಮಗೆ ಉಣಬಡಿಸುತ್ತದೆ. ನಮ್ಮ ಸಮಕಾಲೀನರು ಯೋಚಿಸಲು ಕೂಡ ಆಗದ ಹೊಸ ವಿಚಾರಗಳನ್ನು ನಾವು ಅಳವಡಿಸಿಕೊಳ್ಳುವುದರ ಮೂಲಕ ನಮ್ಮ ಕಾರ್ಯಕ್ಷೇತ್ರದಲ್ಲಿ ಅಗ್ರಗಣ್ಯರಾಗಬಹುದು. ಒಂದು ಗಂಟೆ ಓದುವುದರಿಂದ ಹಣ, ಹೆಸರು, ಅಂತಸ್ತು ಎಲ್ಲವನ್ನೂ ಪಡೆಯಲು ಸಾಧ್ಯ. ಅಚ್ಚರಿ ಎನ್ನಿಸುತ್ತೆ ಅಲ್ಲವೇ? ನೆನಪಿರಲಿ ಇದು ಒಂದು ದಿನ ಮಾಡಿ ನಿಲ್ಲಿಸುವ ಕೆಲಸವಲ್ಲ. ಕೆಲಸದಲ್ಲಿ ಪ್ರಮೋಷನ್ ಸಿಕ್ಕಿತು ಎಂದು ನಿಲ್ಲಿಸುವಂತೆಯೂ ಇಲ್ಲ. ಓಪ್ರಾ ವಿನ್‌ಫ್ರೆ ಎನ್ನುವ ಅಮೆರಿಕನ್ ಮಹಿಳೆ ಸಾವಿರಾರು ಯಶಸ್ವಿ ವ್ಯಕ್ತಿಗಳನ್ನು ಸಂದರ್ಶನ ಮಾಡಿದ್ದಾರೆ. ಅಲ್ಲಿನ ಸಾರಾಂಶ ಅವರೆಲ್ಲರೂ ಓದಿನ ಗೀಳು ಹಚ್ಚಿಕೊಂಡವರು. ವರ್ಷದಲ್ಲಿ ಸರಾಸರಿ 60 ಪುಸ್ತಕ ಓದುತ್ತಿರುವವರು. ವಾರೆನ್ ಬಫೆಟ್, ಬಿಲ್ ಗೇಟ್ಸ್ ಸಹಿತ ಜಗತ್ತಿನ ಬಹುಪಾಲು ಸಿಇಒಗಳು ಓದುತ್ತಾರೆ. ಸರಳವಾಗಿ ಹೇಳಬೇಕೆಂದರೆ ಅತ್ಯಂತ ಯಶಸ್ವಿ ಮತ್ತು ಬಿಲಿಯನೇರ್‌ಗಳ ಒಂದು ಸಾಮಾನ್ಯಗುಣ 'ಓದು'. ಮುಂದಿನ ದಿನ ತಿನ್ನಲು ಏನು ಸಿಗುತ್ತದೆ ಎನ್ನುವುದರ ಗ್ಯಾರಂಟಿ ಇರದಿರುತ್ತಿದ್ದ ನನ್ನ ಬದುಕನ್ನು ಕೂಡ ಬದಲಿಸಿದ್ದು ಓದು. ಒಪ್ಪತ್ತಿಗೆ ಆದರೆ ಮುಂದಿನ ಊಟದ ತತ್ವಾರ ಎದುರಿಸುತ್ತಿದ್ದ ನಮ್ಮ ಮನೆಯಲ್ಲಿ ಪುಸ್ತಕಗಳಿಗೆ ಮಾತ್ರ ಕಡಿಮೆಯಿರುತ್ತಿರಲಿಲ್ಲ. ನಿತ್ಯವೂ ಎರಡು ನ್ಯೂಸ್ ಪೇಪರ್. ಒಂದು ಇಂಗ್ಲಿಷ್, ಇನ್ನೊಂದು ಕನ್ನಡ. ಜತೆಗೆ ರೀಡರ್ಸ್ ಡೈಜೆಸ್ಟ್, ಕಾಂಪಿಟಿಷನ್ ಸಕ್ಸಸ್ ರಿವ್ಯೂ, ದಿಕ್ಸೂಚಿ, ಹೀಗೆ ಹತ್ತಾರು ಮಾಸಿಕ, ಸಾಪ್ತಾಹಿಕ ಪತ್ರಿಕೆಗಳು ಮನೆಯನ್ನು, ಮನಸ್ಸನ್ನು ತುಂಬುತ್ತಿದ್ದವು. ಇಂಟರ್ನೆಟ್ ಇಲ್ಲದ ಆ ಕಾಲದಲ್ಲಿ, ಮನಸ್ಸಿನಲ್ಲಿ ಏನಾದರೂ ಆಗಬೇಕೆನ್ನುವ ಕನಸು, ಹಂಬಲ ಬಿತ್ತಿದ್ದು ಪುಸ್ತಕಗಳು. ಎಂದಿಗೂ ಮೋಸ ಮಾಡದ, ಕುಸಿತ ಕಾಣದ ಬೆಸ್ಟ್ ಇನ್ವೆಸ್ಟ್‌ಮೆಂಟ್ ಈ ಭೂಮಿಯ ಮೇಲಿದ್ದರೆ ಅದು ಓದು, ಪುಸ್ತಕಗಳು.

ಆಡಿಯೋ ಕಾರ್ಯಕ್ರಮಗಳನ್ನು ಕೇಳುವುದು

ಓದು ಅತ್ಯುತ್ತಮ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇಂದು ಜನರಲ್ಲಿ ಸಮಯದ ಅಭಾವ ಹೆಚ್ಚಾಗಿದೆ. ಅದಕ್ಕೆ ಕಾರಣಗಳು ಹಲವು. ಅದನ್ನು ವಿಮರ್ಶಿಸಲು ಇದು ಸ್ಥಳವಲ್ಲ. ಹೀಗಾಗಿ ಇದ್ದುದರಲ್ಲಿ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಇರುವ ಇನ್ನೊಂದು ಮಾರ್ಗ ಆಡಿಯೋ ಬುಕ್ಸ್ ಕೇಳುವುದು. ಪಾಡ್‌ಕಾಸ್ಟ್ ಇತ್ಯಾದಿಗಳನ್ನು ಕೇಳಬಹುದು. ಓಡುವಾಗ, ನಡೆಯುವಾಗ, ಕಾರಿನಲ್ಲಿ ಹೋಗುವಾಗ, ಹೀಗೆ ದೈಹಿಕ ಚಟುವಟಿಕೆ ಜತೆಗೆ ಮಾನಸಿಕವಾಗಿ ಕೂಡ ಅಭಿವೃದ್ಧಿ ಹೊಂದಬಹುದು. ನಿಮಗೆಲ್ಲಾ ಒಂದು ಆಶ್ಚರ್ಯ ಎನ್ನಿಸಬಹುದಾದ ವಿಷಯವನ್ನು ಹೇಳುವೆ. ಸಾಮಾನ್ಯ ಮನುಷ್ಯ ಜಗತ್ತಿನ ಎಲ್ಲಾ ದೊಡ್ಡ ನಗರಗಳಲ್ಲಿ ವಾರ್ಷಿಕವಾಗಿ 500ರಿಂದ 1000 ಗಂಟೆಗಳ ಕಾಲ ಕಾರು, ಬಸ್ ಅಥವಾ ಬೈಕ್, ರೈಲು, ಹೀಗೆ ಒಟ್ಟಾರೆ ಪ್ರಯಾಣದಲ್ಲಿ ಕಳೆಯುತ್ತಾನೆ. ನೆನಪಿರಲಿ ಇದು ಕೇವಲ ಮನೆ ಮತ್ತು ಕೆಲಸದ ಜಾಗಕ್ಕೆ ಹೋಗಿಬರಲು ಆಗುವ ಪ್ರಯಾಣದ ಸಮಯ ಮಾತ್ರ! ಸಮಯವಿಲ್ಲ ಎನ್ನುವುದು ಅತ್ಯಂತ ಸಾಮಾನ್ಯ ಗೊಣಗಾಟ. ಇರುವ ಸಮಯವನ್ನು ನಾವು ಸರಿಯಾಗಿ ಪ್ಲಾನ್ ಮಾಡಿ ಬಳಸಿಕೊಂಡರೆ ಖಂಡಿತ ಎಲ್ಲಕ್ಕೂ ಸಮಯವನ್ನು ಹೊಂದಿಸಿಕೊಳ್ಳಬಹುದು. ಸರಳವಾಗಿ ಹೇಳಬೇಕೆಂದರೆ ಮಾಡಬೇಕು ಎನ್ನುವ ಇಚ್ಛೆ ಮನಸ್ಸಿನಲ್ಲಿ ಪ್ರಬಲವಾಗಿದ್ದರೆ ಸಮಯ, ದಾರಿ ಎಲ್ಲವೂ ಪೂರಕವಾಗಿ ಬದುಕಿಗೆ ಜತೆಯಾಗುತ್ತವೆ.

ಸರ್ಟಿಫಿಕೇಷನ್ ಕೋರ್ಸ್ ಮಾಡುವುದು

ನಮ್ಮ ವೃತ್ತಿಗೆ ಪೂರಕವಾದ ಕಲಿಕೆಯನ್ನು ಮಾಡುತ್ತಾ ಹೋದರೂ ಅದು ನಮ್ಮ ಬದುಕನ್ನು ಬದಲಿಸಿಬಿಡುತ್ತದೆ. ಇವತ್ತಿನ ದಿನದಲ್ಲಿ ಆನ್‌ಲೈನ್ ಮೂಲಕ ಬೇಕಾದಷ್ಟು ಸರ್ಟಿಫಿಕೇಷನ್ ಕೋರ್ಸ್ ಮಾಡಬಹುದು. ಆನ್‌ಲೈನ್ ಆದುದರಿಂದ ಇದೇ ಸಮಯಕ್ಕೆ ಅಲ್ಲಿ ಕೂರಬೇಕು ಎನ್ನುವ ಕಟ್ಟಳೆಗಳು ಇರುವುದಿಲ್ಲ. ಕೇವಲ ಸರ್ಟಿಫಿಕೇಟ್ ಪಡೆಯಬೇಕು ಎನ್ನುವುದು ಉದ್ದೇಶವಾಗಿರದೆ ಹೊಸತು ಕಲಿಯಬೇಕು. ಅಪ್‌ಡೇಟ್ ಆಗಬೇಕು ಎಂದು ಕಲಿಯುವುದು ಬಹಳಷ್ಟು ವ್ಯತ್ಯಾಸ ಉಂಟುಮಾಡುತ್ತದೆ. ಹಾಗೆ ಇಂದಿನ ದಿನಗಳಲ್ಲಿ ಬಹಳಷ್ಟು ಸೆಮಿನಾರ್, ವರ್ಕ್‌ಶಾಪ್‌ಗಳು ನಡೆಯುತ್ತವೆ. ಅದಕ್ಕೆ ನಮ್ಮ ವೃತ್ತಿಬದುಕನ್ನು ಮತ್ತು ಒಟ್ಟಾರೆ ಜೀವನವನ್ನು ಉನ್ನತಿಯ ಕಡೆಗೆ ಒಯ್ಯುವ ಸಾಧ್ಯತೆಯಿದೆ ಎಂದಾಗ ಅಂಥ ಸೆಮಿನಾರ್‌ಗಳಲ್ಲಿ ಭಾಗವಹಿಸಬೇಕು. ಈ ರೀತಿಯ ವರ್ಕ್‌ಶಾಪ್ ನಡೆಸುವವರ ಜೀವನಾನುಭವ, ಕಲಿಕೆ ನಮಗೂ ಹೆಚ್ಚಿನ ಸಮಯ ಮತ್ತು ಖರ್ಚಿಲ್ಲದೆ ತಲುಪುತ್ತದೆ. ಇದರ ಉಪಯೋಗವನ್ನು ನಾವು ಮಾಡಿಕೊಳ್ಳಬೇಕು. ಇದು ಖಂಡಿತ ಸಾವಿರಾರು ರುಪಾಯಿ ಮತ್ತು ನೂರಾರು ಗಂಟೆಗಳನ್ನು ಉಳಿಸುತ್ತದೆ. ಅಷ್ಟು ಅನುಭವವನ್ನು ಕಟ್ಟಿಕೊಡುತ್ತದೆ.

ನೆನಪಿರಲಿ, ಮೈಂಡ್ ಎನ್ನುವುದು ಒಂದು ಮಸಲ್ ಇದ್ದಂತೆ! ಹೆಚ್ಚು ಬಳಸಿದಷ್ಟೂ ಹರಿತಾಗುತ್ತದೆ. ಇದರ ಜತೆಗೆ ಇನ್ನೊಂದು ಮುಖ್ಯ ಅಂಶವನ್ನು ಕೂಡ ಗಮನಿಸಿ. ನೀವು ಮಕ್ಕಳನ್ನು ನೋಡಿ, ಅವುಗಳಲ್ಲಿ ಸಹಜ ಕುತೂಹಲವಿರುತ್ತದೆ. ಅದೇಕೆ ಹೀಗೆ? ಅದೇನು? ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಯನ್ನು ಸದಾ ಕೇಳುತ್ತಲೇ ಇರುತ್ತವೆ. ಬೆಳೆಯುತ್ತ ಹೋದಂತೆ ಈ ಪ್ರಶ್ನೆ ಕೇಳುವ ಪ್ರವೃತ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಇದಕ್ಕೆ ಕಾರಣ ನಾವು, ನಮ್ಮ ಸಮಾಜ. ಮಕ್ಕಳಲ್ಲಿ ಸಹಜವಾಗಿ ಮೂಡುವ ಕುತೂಹಲ, ಪ್ರಶ್ನಿಸುವ ಸ್ವಭಾವವನ್ನು ನಾವು ಕಾಪಿಡಬೇಕು. ಜತೆಗೆ ನಮ್ಮಲ್ಲಿರುವ ಆ ಮಗುವಿನ ಗುಣವನ್ನು ಕೂಡ ಜತನದಿಂದ ಪೋಷಿಸಬೇಕು. ಎಲ್ಲಿಯವರೆಗೆ ಬದುಕಿನಲ್ಲಿ ಕುತೂಹಲ ಉಳಿಸಿಕೊಳ್ಳುತ್ತೇವೋ ಅಲ್ಲಿಯವರೆಗೆ ನಾವು ಅಭಿವೃದ್ಧಿಯ ಹಾದಿಯಲ್ಲಿದ್ದೇವೆ ಎಂದರ್ಥ. ಬದುಕು ಎಂದಿಗೂ ನಿಂತ ನೀರಾಗಬಾರದು. ಚಲನೆಯೇ ಬದುಕು, ಕ್ರಿಯಾಶೀಲತೆಯೇ ಶುಕ್ರದೆಸೆ, ಜಡತ್ವವೇ ಶನಿದೆಸೆ. ಈ ಸತ್ಯವನ್ನು ನಾವು ಎಷ್ಟು ಬೇಗ ಅರಿತುಕೊಳ್ಳುತ್ತೇವೋ ಅಷ್ಟು ನಮಗೆ ಒಳ್ಳೆಯದು. ಓದುವ ಅಭ್ಯಾಸ ಗುಣವಾಗಿ ಮಾರ್ಪಾಟಾದರೆ ಆಗ ನೋಡಿ 'ಕಂಫರ್ಟ್ ಜೋನ್' ಎನ್ನುವ ಬೌಂಡರಿ ಇರುವುದಿಲ್ಲ. ಏಕೆಂದರೆ ಎಲ್ಲಾ ಬೌಂಡರಿ ಕೂಡ ನಮ್ಮದೇ ಆಗಿರುತ್ತದೆ.

ಕಲಿಕೆಯಿಂದ ಆಗುವ ಲಾಭಗಳು ಒಂದಲ್ಲ ಹಲವಾರು. ಕಲಿಕೆ ಎನ್ನುವುದು ಬದುಕಿಗೆ ಒಂದು ಹೊಸ ಹುಮ್ಮಸ್ಸು ನೀಡುತ್ತದೆ ಎನ್ನುವುದು ನನ್ನ ಅನುಭವ ಕೂಡ. ಏನೂ ಮಾಡದೆ, ಅಂದರೆ ಹೊಸತನ್ನು ಕಲಿಯದೇ, ಓದದೇ ಒಂದು ವಾರ ಕಳೆದುಬಿಟ್ಟರೆ ಸಾಕು. ಜೀವನ ಬಹಳ ಬೋರ್ ಎನ್ನಿಸಿಬಿಡುತ್ತದೆ. ಗೊತ್ತಿಲ್ಲದೇ ಬೇಸರ ಆವರಿಸಿಬಿಡುತ್ತದೆ. ಸದಾ ಕಲಿಕೆಯಲ್ಲಿ ಮಗ್ನರಾಗಿದ್ದರೆ ಅದು ಬದುಕಿಗೆ ಒಂದು ಭರವಸೆ ನೀಡುತ್ತದೆ. ಏನೋ ಮಾಡುತ್ತಿದ್ದೇನೆ ಎನ್ನುವ ತೃಪ್ತಿ ನೀಡುತ್ತದೆ. ಪ್ರಮಾಣ ಮಾಡಿ ಹೇಳುತ್ತೇನೆ, ಒಮ್ಮೆ ಆ ಜೋನ್‌ಗೆ ಹೋಗಿ ನೋಡಿ, ಅದು ನೀಡುವ ಆನಂದ ಬೇರೆಯ ಮಟ್ಟದಲ್ಲಿರುತ್ತದೆ.

ಕಲಿಕೆಯ ಹಾದಿಯಲ್ಲಿ ಸಮಾನಮನಸ್ಕರ ಭೇಟಿ, ಹೊಸ ಸ್ನೇಹ, ಸಂಬಂಧವನ್ನು ಕೂಡ ಇದು ನೀಡುತ್ತದೆ. ಇದು ಬೆಲೆ ಕಟ್ಟಲಾಗದ ಲಾಭ. ಇಂಥ ಲಭ್ಯತೆ ಕಲಿಕೆಯ ಹೊರತಾಗಿ ಬೇರೆಡೆ ಸಿಕ್ಕರೂ ಅವುಗಳ ಆಯಸ್ಸು ಕಡಿಮೆಯಿರುತ್ತದೆ. ಕಲಿಕೆಯ ಜತೆಗಾರರು ಬಹಳ ದೂರ ಜತೆಯಾಗುತ್ತಾರೆ. ಇವತ್ತಿನ ಜಗತ್ತಿನಲ್ಲಿ ಪ್ರಸ್ತುತತೆ ಉಳಿಸಿಕೊಳ್ಳಲು ಇರುವ ಏಕೈಕ ಮಾರ್ಗ ಕಲಿಕೆ. ಹೀಗಾಗಿ 'ನೆವರ್ ಎವರ್ ಸ್ಟಾಪ್ ಲರ್ನಿಂಗ್'. ಬಹುದೊಡ್ಡ, ಪ್ರಸಿದ್ಧ, ಯಶಸ್ವಿ ವ್ಯಕ್ತಿಗಳನ್ನು ನೋಡಿ ಅವರು ಕಲಿಕೆಯನ್ನು ನಿಲ್ಲಿಸಿರುವುದಿಲ್ಲ, ನೆನಪಿರಲಿ, ಕಲಿಕೆ ಎನ್ನುವುದರ ವ್ಯಾಪ್ತಿ ಬಹುದೊಡ್ಡದು.

ಕಳಕಳಿ

ರಮಾನಂದ ಶರ್ಮಾ

ಅನ್ಯ ಚಟುವಟಿಕೆಗಳಿಗೆ ಶಿಕ್ಷಕರ ಬಳಕೆಯಾಗದಿರಲಿ

ಮಾಧ್ಯಮ ವರದಿಯೊಂದರ ಪ್ರಕಾರ, ದೆಹಲಿಯ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ಕಾಣಬರುವ ಬೀದಿನಾಯಿ ಸಂಬಂಧಿತ ಸಮಸ್ಯೆಗಳನ್ನು ಅವಲೋಕಿಸಿ ವರದಿ ಮಾಡಲು ಅಲ್ಲಿನ ಶಿಕ್ಷಕರನ್ನು 'ನೋಡಲ್ ಅಧಿಕಾರಿ'ಗಳನ್ನಾಗಿ ನೇಮಿಸಿ ಅಲ್ಲಿನ ಶಿಕ್ಷಣ ನಿರ್ದೇಶನಾಲಯವು ಆದೇಶ ಹೊರಡಿಸಿದೆ. ನಿರೀಕ್ಷೆಯಂತೆ ಇದಕ್ಕೆ ಶಿಕ್ಷಕರ ಸಂಘಟನೆಗಳು ಆಕ್ಷೇಪಿಸಿದ್ದು, 'ಈ ಆದೇಶವು ಕಾರ್ಯಸಾಧ್ಯವಲ್ಲ ಮತ್ತು ಇದು ಅಮಾನವೀಯ' ಎಂದು ಅವು ಪ್ರತಿಕ್ರಿಯಿಸಿವೆಯಂತೆ.

ದೇಶಾದ್ಯಂತ ಬೀದಿನಾಯಿಗಳ ಕಾಟವು ಗಂಭೀರ ಸ್ವರೂಪವನ್ನು ಪಡೆದಿದ್ದು, ಅದು ಸರ್ವೋಚ್ಚ ನ್ಯಾಯಾಲಯದವರೆಗೂ ಮುಟ್ಟಿದೆ. ಈ ಸಮಸ್ಯೆಯ ನಿಯಂತ್ರಣಕ್ಕೆ ತ್ವರಿತ ಕ್ರಮವನ್ನು ಕೈಗೊಳ್ಳುವಂತೆ ನ್ಯಾಯಾಲಯವು ಆದೇಶಿಸಿದೆ. ಬಹುಶಃ ಇದೇ ಕಾರಣಕ್ಕಾಗಿ, ದೆಹಲಿ ಸರಕಾರವು ಸಮಸ್ಯೆಯ ಪರಿಹಾರದ ಮೊದಲ ಹೆಜ್ಜೆಯಾಗಿ ಈ ಕ್ರಮವನ್ನು ಕೈಗೊಂಡಿರಬಹುದು. ಇದು ಫಲಪ್ರದವಾದರೆ, ಮಿಕ್ಕ ರಾಜ್ಯಗಳಿಗೂ ಅದು ಹಬ್ಬುವುದರಲ್ಲಿ ಸಂದೇಹವಿಲ್ಲ. ಈಗಾಗಲೇ ಗುಜರಾತ್ ಮತ್ತು ಬಿಹಾರ ರಾಜ್ಯಗಳು ಈ ನಿಟ್ಟಿನಲ್ಲಿ ಆಸಕ್ತಿ ತೋರಿವೆಯಂತೆ, ಕರ್ನಾಟಕವೂ ಇಂಥ ಕ್ರಮಕ್ಕೆ ಮುಂದಾಗಿರುವುದು ತಿಳಿದುಬಂದಿದೆ. ಆದರೆ ಈ ಕ್ರಮಕ್ಕೆ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು, ''ಚುನಾವಣಾ ಕಾರ್ಯ, ಜನಗಣತಿ, ಜಾತಿಗಣತಿ ಮತ್ತು ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರು, ಶಾಲಾ ಮಕ್ಕಳಿಗೆ ಹಾಲು-ಮೊಟ್ಟೆ ವಿತರಿಸುವಂಥ ಬೋಧಕೇತರ

ಕೆಲಸಗಳಲ್ಲಿಯೂ ನಿರತರಾಗಿದ್ದಾರೆ. ರಾಜ್ಯಾದ್ಯಂತ ಈಗಾಗಲೇ ಶಿಕ್ಷಕರ ಕೊರತೆಯಿದ್ದು, ಇಂಥ ಸಂದರ್ಭದಲ್ಲಿ ಶಿಕ್ಷಕರಿಗೆ ಈ ರೀತಿಯ ಹೆಚ್ಚುವರಿ ಕೆಲಸ ನೀಡುವುದು ಸರಿಯಲ್ಲ'' ಎಂದಿದ್ದಾರೆ. ಈ ಅಭಿಪ್ರಾಯಕ್ಕೆ ರಾಜ್ಯಾದ್ಯಂತ ಸಹಮತ ವ್ಯಕ್ತವಾಗುತ್ತಿದೆ.

ಶಾಲಾ ಮಕ್ಕಳಿಗೆ ಬೋಧಿಸುವುದು, ತನ್ಮೂಲಕ ಅವರ ಉಜ್ವಲ ಭವಿಷ್ಯಕ್ಕೆ ಭದ್ರಬುನಾದಿ ಹಾಕುವುದು ಶಿಕ್ಷಕರ ಕರ್ತವ್ಯ. ಈ ಕಾರ್ಯವನ್ನು ಶಿಕ್ಷಕರು ಎಷ್ಟು ನಿಷ್ಠೆಯಿಂದ, ಸಮರ್ಥವಾಗಿ ಮತ್ತು ನಿರಂತರವಾಗಿ ಮಾಡುತ್ತಾರೆ ಎನ್ನುವುದರ ಮೇಲೆ ಇದು ನಿರ್ಧಾರವಾಗುತ್ತದೆ. ಮಕ್ಕಳು ವಿದ್ಯಾಭ್ಯಾಸದಲ್ಲಿ ನಿರೀಕ್ಷಿತ ಪ್ರಗತಿಯನ್ನು ತೋರದಿದ್ದರೆ, ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸದಿದ್ದರೆ ಅದಕ್ಕೆ ಶಿಕ್ಷಕರನ್ನೇ ಹೊಣೆಯಾಗಿಸಿ ದೂರುವುದು ನಮ್ಮಲ್ಲಿ ತೀರಾ ಸಾಮಾನ್ಯ. ತಪ್ಪುಗಳು ಯಾರದ್ದೇ ಆಗಿರಲಿ, ಶಿಕ್ಷಕರ ಲೋಪ-ದೋಷಗಳು ಮಾತ್ರ ಹೆಚ್ಚು ಚರ್ಚಿತವಾಗುತ್ತವೆ ಹಾಗೂ ಎತ್ತಿಹೇಳಲ್ಪಡುತ್ತವೆ. ಆದರೆ ನಿರೀಕ್ಷಿತ ಸಾಧನೆಯನ್ನು ತೋರುವುದಕ್ಕೆ ಶಿಕ್ಷಕರಿಗೆ ಆಗುತ್ತಿಲ್ಲವೇಕೆ? ಅದರ ಹಿಂದಿರುವ ಕಾರಣಗಳೇನು? ಎಂಬುದರ ಬಗ್ಗೆ ಮಾತ್ರ ವಿಸ್ತೃತ ಚಿಂತನೆ ನಡೆಯುವುದಿಲ್ಲ. ಶಾಲಾ ಶಿಕ್ಷಕರು ಎದುರಿಸುತ್ತಿರುವ ಸವಾಲುಗಳ ಬಗ್ಗೆ 'ರಿಯಾಲಿಟಿ ಚೆಕ್' ಆಗುವುದಿಲ್ಲ. ಶಿಕ್ಷಕರನ್ನು ಶೈಕ್ಷಣಿಕ ಕಾರ್ಯಕ್ಕಿಂತ 'ಪಠ್ಯೇತರ ಚಟುವಟಿಕೆ'ಗಳಿಗೇ ಹೆಚ್ಚು ಬಳಸಿಕೊಳ್ಳಲಾಗುತ್ತಿದೆ ಎಂಬ ಆರೋಪ-ಅಸಮಾಧಾನಗಳು ಲಾಗಾಯ್ತಿನಿಂದಲೂ ಇವೆ. ದೆಹಲಿ ಮತ್ತು ಇನ್ನಿತರ ರಾಜ್ಯ ಸರಕಾರಗಳಿಂದ ಪ್ರಸ್ತುತ ಹೊಮ್ಮಿರುವ ಆದೇಶವು ಈ ಆರೋಪಕ್ಕೆ ಪುಷ್ಟಿ ನೀಡುವ ಇನ್ನೊಂದು ಸಾಕ್ಷಿಯಾಗಿದೆ.

ಶಿಕ್ಷಕರನ್ನು ಶಿಕ್ಷಣೇತರ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಬೋಧಕ ವೃತ್ತಿಯ ಮೇಲಾಗುವ ಪರಿಣಾಮಗಳ ಬಗ್ಗೆ National Institute Of Education and Administration ವತಿಯಿಂದ ಕೆಲ ವರ್ಷಗಳ ಹಿಂದೆ ಸಮೀಕ್ಷೆಯೊಂದನ್ನು ನಡೆಸಲಾಗಿತ್ತು. ಅದರ ವರದಿಯ ಪ್ರಕಾರ, ಶಿಕ್ಷಕರು ಬೋಧನೆಗೆಂದು ಕೇವಲ ಶೇ.19.1ರಷ್ಟು ಸಮಯವನ್ನು ಬಳಸುತ್ತಿದ್ದು, ಮಿಕ್ಕ ಅವಧಿಯನ್ನು ಬೋಧಕೇತರ ಮತ್ತು ಅಮುಖ್ಯ ಚಟುವಟಿಕೆಯಲ್ಲಿ ಕಳೆಯುತ್ತಾರೆ. ಅಂದರೆ, ಚುನಾವಣಾ ಕರ್ತವ್ಯ, ವಿವಿಧ ರೀತಿಯ ಸಮೀಕ್ಷೆ, ಪಲ್ಸ್ ಪೋಲಿಯೋ ಅಭಿಯಾನ, ಶಾಲಾ ಮಕ್ಕಳ ಮಧ್ಯಾಹ್ನದ ಬಿಸಿಯೂಟದ ಸಿದ್ಧತೆ, ಅದರ ಲೆಕ್ಕಪತ್ರಗಳ ತಯಾರಿ, ಆಡಿಟ್ ಮಾಡಿಸುವಿಕೆ, ಹತ್ತು ಹಲವು ಜಯಂತಿಗಳ ಆಚರಣೆ- ಇಂಥವುಗಳಿಗೆ ಶಿಕ್ಷಕರ ಸಮಯದ ಸಿಂಹಪಾಲು ವಿನಿಯೋಗವಾಗುತ್ತಿದೆಯಂತೆ. ಇನ್ನೂ ಬಿಡಿಸಿ ಹೇಳಬೇಕೆಂದರೆ, ಜನಗಣತಿ, ದನಗಣತಿ, ಜಾತಿಗಣತಿ, ಮನೆಗಣತಿ, ಸಾಕ್ಷರತಾ ಗಣತಿ, ಸಾಮಾಜಿಕ ಗಣತಿ, ವೃಕ್ಷಗಣತಿ ಹೀಗೆ ವೈವಿಧ್ಯಮಯ ಗಣತಿಗಳಿಗೆ ಶಿಕ್ಷಕರೇ ಬೇಕು! ಇಷ್ಟು ಸಾಲದೆಂಬಂತೆ ಈಗ ಬೀದಿನಾಯಿಯ ಮೇಲೆ ನಿಗಾ ಇಡುವ ಕೆಲಸ!

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ, ರಾಜ್ಯಸಭೆಗೆ ನಡೆಯುವ ಚುನಾವಣೆ, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಗಳ ಹೊರತಾಗಿ ಬಹುತೇಕ ಸಾರ್ವತ್ರಿಕ ಚುನಾವಣೆಗಳ ನಿರ್ವಹಣೆಯ ಹಿಂದೆ ಶಿಕ್ಷಕರ ಪಾತ್ರ/ಸೇವೆ ಇದ್ದೇ ಇರುತ್ತದೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಐದು ವರ್ಷಕ್ಕೊಮ್ಮೆ ನಡೆಯಬೇಕಾದ್ದು ನಿಯಮ; ಆದರೆ ಬದಲಾದ ಕಾಲಘಟ್ಟ ಮತ್ತು ರಾಜಕೀಯ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಅದು ಅವಧಿಪೂರ್ವವಾಗಿ ನಡೆಯಬೇಕಾಗಿ ಬಂದಾಗಲೂ, ಉಪಚುನಾವಣೆಗಳ ಅನಿವಾರ್ಯತೆ ಸೃಷ್ಟಿಯಾದಾಗಲೂ ಅಲ್ಲಿ ಸೇವೆ ಸಲ್ಲಿಸಲು ಶಿಕ್ಷಕರು ಬೇಕೇಬೇಕು. ಇಷ್ಟು ಮಾತ್ರವಲ್ಲದೆ, ಪ್ರತಿಷ್ಠಿತರು/ಗಣ್ಯರು, ಮಂತ್ರಿ-ಮಹೋದಯರು ಬಂದಾಗ, ಮಕ್ಕಳು ಮಳೆ-ಚಳಿ-ಬಿಸಿಲು ಎನ್ನದೆ ಆ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆಯೂ ಶಿಕ್ಷಕರ ಮೇಲೇ ಇರುತ್ತದೆ! ಇಂಥ ಪರಿಸ್ಥಿತಿಯಲ್ಲಿ ಶಿಕ್ಷಕರು ತಮ್ಮ ಪ್ರಮುಖ ಕಾರ್ಯವಾದ ಬೋಧನೆ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಯತ್ತ ಗಮನ ಹರಿಸಲಾದೀತೇ? ಶಿಕ್ಷಕರನ್ನು ಬೋಧಕೇತರ ಕಾರ್ಯಗಳಿಗೆ ಎರವಲು ಪಡೆದು, ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುವುದು ಎಷ್ಟು ಸರಿ? ಬ್ಯಾಂಕ್ ಸಿಬ್ಬಂದಿಗಳಿಗೆ ಇನ್ಶೂರೆನ್ಸ್ ಪಾಲಿಸಿಗಳನ್ನು ಮಾರಾಟ ಮಾಡುವ ಕೆಲಸವನ್ನೂ ಕೊಟ್ಟಿರುವುದನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಗಮನಕ್ಕೆ ಇತ್ತೀಚೆಗೆ ತಂದಾಗ, 'ಬ್ಯಾಂಕ್ ಸಿಬ್ಬಂದಿಗಳು ಠೇವಣಿ ಸ್ವೀಕರಿಸುವಿಕೆ ಮತ್ತು ಸಾಲ ನೀಡುವಿಕೆಯಂಥ ಬ್ಯಾಂಕಿಂಗ್ ವ್ಯವಸ್ಥೆಯ ಪ್ರಮುಖ ಕೆಲಸಗಳನ್ನಷ್ಟೇ ಮಾಡಲಿ' ಎಂದು ಅವರು ಆದೇಶಿಸಿದ್ದಾರೆ. ಶಿಕ್ಷಕ ಸಮೂಹಕ್ಕೂ ಇಂಥ ಆದೇಶ ಅನ್ವಯವಾಗುವಂತಾಗಲಿ.

ಒಂದು ನಿರ್ದಿಷ್ಟ ಹುದ್ದೆಗೆ ನೇಮಕ ಮಾಡಿಕೊಂಡು, ಸಂಬಂಧವಿಲ್ಲದ ಮತ್ತೊಂದು ಹುದ್ದೆಯ ಕೆಲಸ ಮಾಡಿಸುವುದು ನಮ್ಮ ದೇಶದಲ್ಲಿ ಹೊಸ ಬೆಳವಣಿಗೆಯೇನಲ್ಲ. ಹಾಗೆಯೇ ಹೆಚ್ಚುವರಿ ಕೆಲಸ ಮಾಡಿಸುವುದು ಕೂಡ ಬಹುತೇಕ 'ರೂಢ ಮಾದರಿ'ಯೇ ಆಗಿಬಿಟ್ಟಿದೆ. ಇಂಥ ನಡೆಯನ್ನು ವಿರೋಧಿಸುವವರಿಗೆ ಅಥವಾ ಈ ನಿಟ್ಟಿನಲ್ಲಿ ನೀತಿ-ನಿಯಮಾವಳಿಗಳನ್ನು ಉಲ್ಲೇಖಿಸುವವರಿಗೆ 'ಶಿಸ್ತಿನ ಕ್ರಮ'ದ ಹೆಸರಿನಲ್ಲಿ ಶಿಕ್ಷೆ ಇಲ್ಲದಿಲ್ಲ. ಶಿಕ್ಷಕರ ಪಾಡು ಈ ರೀತಿಯಾಗಿರುವುದು ಅಮಾನವೀಯ ಮತ್ತು ಖಂಡನೀಯ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಹುಚ್ಚರ ಮದುವೆಯಲ್ಲಿ ಉಂಡ ಜಾಣ ರಷ್ಯಾ

ಯುದ್ಧಕಾಂಡ
ಲೀನಾ ಜೋಶಿ
vveditoped@gmail.com

ನಮ್ಮಲ್ಲೊಂದು ಗಾದೆಯಿದೆ- 'ಹುಚ್ಚರ ಮದುವೆಯಲ್ಲಿ ಉಂಡವನೇ ಜಾಣ' ಅಂತ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷವನ್ನು ನೋಡಿದರೆ, ಈ ಮಾತು ಅತ್ಯಂತ ಸೂಕ್ತವಾಗಿದೆ. ಯುದ್ಧದ ಕಣದಲ್ಲಿಲ್ಲದಿದ್ದರೂ, ಅದರ ನೆರಳಿನಲ್ಲಿ ಲಾಭ ಪಡೆಯುತ್ತಿರುವ ದೇಶಗಳಲ್ಲಿ 'ರಷ್ಯಾ' ಪ್ರಮುಖವಾಗಿದೆ. ಈ ಸಂಘರ್ಷವು ಕೇವಲ ಮಧ್ಯಪ್ರಾಚ್ಯದ ಯುದ್ಧವಲ್ಲ; ಇದು ಜಾಗತಿಕ ಶಕ್ತಿಗಳ ನಡುವೆ ನಡೆಯುತ್ತಿರುವ ಭೂ-ರಾಜಕೀಯ (Geopolitical) ಚದುರಂಗ.

ಮಧ್ಯಪ್ರಾಚ್ಯ ಎಂದರೆ ಕೇವಲ ಮರಳುಭೂಮಿ ಅಲ್ಲ; ಅದು ಜಗತ್ತಿನ ಇಂಧನದ ಜೀವನಾಡಿ. ಇಲ್ಲಿ ಉಂಟಾಗುವ ಯಾವುದೇ ಉದ್ವಿಗ್ನತೆಗೆ, ಜಗತ್ತಿನ ಆರ್ಥಿಕತೆಯನ್ನು ಕದಲಿಸುವ ಶಕ್ತಿಯಿದೆ. ಇರಾನ್, ಇಸ್ರೇಲ್ ಮತ್ತು ಅಮೆರಿಕ ನಡುವೆ ಉದ್ಭವಿಸಿದ ಸಂಘರ್ಷವು ತೈಲ ಸರಬರಾಜಿನ ಭದ್ರತೆಗೆ ಅಪಾಯ ತಂದಿದೆ, ಸಮುದ್ರ ಮಾರ್ಗಗಳ ಸುರಕ್ಷತೆ ಅಪಾಯದಲ್ಲಿದೆ, ಜಾಗತಿಕ ಮಾರುಕಟ್ಟೆಗಳಲ್ಲಿ ಅದು ಆತಂಕವನ್ನು ಹೆಚ್ಚಿಸಿದೆ. ತೈಲ ಬೆಲೆ ಗಗನಕ್ಕೇರುವ ಲಕ್ಷಣಗಳು ಗೋಚರಿಸುತ್ತಿವೆ. ಈ ಆತಂಕದ ಪರಿಸ್ಥಿತಿಯಲ್ಲಿ, ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದ ರಷ್ಯಾಗೆ ಖಜಾನೆ ತುಂಬುವ ಹೊಸ ಅವಕಾಶಗಳ ಮಹಾಪೂರವೇ ಹರಿದುಬರುತ್ತಿದೆ. ರಷ್ಯಾ, ಜಗತ್ತಿನ ಅತಿದೊಡ್ಡ ತೈಲ ಮತ್ತು ಅನಿಲ ರಫ್ತು ದೇಶಗಳಲ್ಲಿ ಒಂದು, ಇಂಧನದ ಮೇಲೆ ಅವಲಂಬಿತವಾಗಿರುವ ಆರ್ಥಿಕತೆಯನ್ನು ಹೊಂದಿರುವ ರಾಷ್ಟ್ರ. 1991ನೇ ವರ್ಷವು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಮಹತ್ವದ ತಿರುವು ನೀಡಿದ ವರ್ಷಗಳಲ್ಲಿ ಒಂದಾಗಿದೆ. ಈ ವರ್ಷದಲ್ಲಿ 'ಸೋವಿಯತ್ ಒಕ್ಕೂಟದ ವಿಘಟನೆ' ಸಂಭವಿಸಿತು. ಇದರಿಂದ ರಷ್ಯಾ ಹಾಗೂ ಅದರೊಂದಿಗೆ ಸೇರಿದ ಹಲವಾರು ರಾಷ್ಟ್ರಗಳು ಭಾರಿ ಆರ್ಥಿಕ ಮತ್ತು ರಾಜಕೀಯ ಸಂಕಷ್ಟಗಳನ್ನು ಎದುರಿಸಬೇಕಾಯಿತು. ವಿಶೇಷವಾಗಿ ಆಹಾರ ಕೊರತೆ ಮತ್ತು ಸಾಲ ಡೀಫಾಲ್ಟ್ (debt default) ಸಮಸ್ಯೆಗಳು ರಷ್ಯಾದ ಜನಜೀವನವನ್ನು ತೀವ್ರವಾಗಿ ಬಾಧಿಸಿದವು.

ಸೋವಿಯತ್ ಕುಸಿತ: ಸಮಸ್ಯೆಗಳ ಆರಂಭ

1991ರ ಮೊದಲು ರಷ್ಯಾ ಸ್ವತಂತ್ರ ರಾಷ್ಟ್ರವಾಗಿರಲಿಲ್ಲ. ಅದು ದೊಡ್ಡ ರಾಷ್ಟ್ರಗಳನ್ನು ಒಳಗೊಂಡಿದ್ದ 'ಸೋವಿಯತ್ ಒಕ್ಕೂಟ'ದ ಭಾಗವಾಗಿತ್ತು. ಸೋವಿಯತ್ ವ್ಯವಸ್ಥೆ ಸಂಪೂರ್ಣವಾಗಿ ಸರಕಾರದ ನಿಯಂತ್ರಣದಲ್ಲಿದ್ದ ಆರ್ಥಿಕ ವ್ಯವಸ್ಥೆಯಾಗಿತ್ತು. ಕೃಷಿ, ಕೈಗಾರಿಕೆ, ಆಹಾರ ವಿತರಣೆ ಎಲ್ಲವೂ ಸರಕಾರದ ಯೋಜನೆಗಳ ಮೇಲೆ ಅವಲಂಬಿತವಾಗಿತ್ತು. 1980ರ ದಶಕದ ಅಂತ್ಯದ ವೇಳೆಗೆ ಈ ವ್ಯವಸ್ಥೆ ದುರ್ಬಲವಾಗತೊಡಗಿತು. ಉತ್ಪಾದನೆ ಕಡಿಮೆಯಾಯಿತು, ಸರಕುಗಳ ಕೊರತೆ ಹೆಚ್ಚಾಯಿತು ಮತ್ತು ಸರಕಾರದ ಆರ್ಥಿಕ ಶಕ್ತಿ ಕುಸಿಯಿತು. 1991ರ ವೇಳೆಗೆ ಆಹಾರ ಸರಬರಾಜು ವ್ಯವಸ್ಥೆ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿತು. 1990-1991ರ ಅವಧಿಯಲ್ಲಿ ರಷ್ಯಾದ ನಗರಗಳಲ್ಲಿ ಆಹಾರ ಕೊರತೆ ಭಾರಿ ಮಟ್ಟಕ್ಕೆ ಏರಿತು. ಜನರು ಬ್ರೆಡ್, ಹಾಲು, ಮಾಂಸ ಮತ್ತು ಸಕ್ಕರೆ ಮುಂತಾದ ಮೂಲಭೂತ ಆಹಾರ ವಸ್ತುಗಳನ್ನು ಪಡೆಯಲು ಗಂಟೆಗಳ ಕಾಲ ಸರದಿಯಲ್ಲಿ ನಿಲ್ಲಬೇಕಾಗುತ್ತಿತ್ತು. ಈ ಸಮಯದಲ್ಲಿ ಆಹಾರ ಕೊರತೆ ಕೇವಲ ಆರ್ಥಿಕ ಸಮಸ್ಯೆಯಾಗಿರಲಿಲ್ಲ, ಅದು ರಾಜಕೀಯ ಅಸ್ಥಿರತೆಗೂ ಕಾರಣವಾಯಿತು.

ಸಾಲ ಡೀಫಾಲ್ಟ್ ಸಮಸ್ಯೆ

1991ರಲ್ಲಿ ಸೋವಿಯತ್ ಒಕ್ಕೂಟ ಕುಸಿದ ನಂತರ ರಷ್ಯಾ ದೊಡ್ಡ ಪ್ರಮಾಣದ ಸಾಲವನ್ನು ಹೊತ್ತಿತ್ತು. ಸೋವಿಯತ್ ಒಕ್ಕೂಟದ ಕಾಲದಲ್ಲಿ ವಿದೇಶಿ ಬ್ಯಾಂಕುಗಳು ಮತ್ತು ದೇಶಗಳಿಂದ ದೊಡ್ಡ ಪ್ರಮಾಣದ ಸಾಲ ತೆಗೆದುಕೊಳ್ಳಲಾಗಿತ್ತು. ಆದರೆ ಆರ್ಥಿಕ ಕುಸಿತದಿಂದ ಈ ಸಾಲವನ್ನು ತೀರಿಸುವ ಸಾಮರ್ಥ್ಯ ಕಡಿಮೆಯಾಯಿತು. ಇದರಿಂದ, ಸರಕಾರದ ಆದಾಯ ಕಡಿಮೆಯಾಯಿತು, ಕರೆನ್ಸಿ ಮೌಲ್ಯ ಕುಸಿತ ಕಂಡಿತು, ಹಣದುಬ್ಬರ



(inflation) ಭಾರಿ ಮಟ್ಟಕ್ಕೆ ಏರಿತು. ಒಂದು ಕಾಲದಲ್ಲಿ, ಜಗತ್ತಿನ ಎರಡನೇ ಅತಿ ದೊಡ್ಡ ಶಕ್ತಿಯಾಗಿದ್ದ ರಷ್ಯಾ, ಆರ್ಥಿಕವಾಗಿ ದುರ್ಬಲ ರಾಷ್ಟ್ರವಾಗಿ ಅಧೋಗತಿಗಿಳಿದಿತ್ತು. ಈ ಸಂಕಷ್ಟದ ಸಮಯದಲ್ಲಿ ರಷ್ಯಾದ ಅಧ್ಯಕ್ಷರಾಗಿದ್ದವರು ಬೋರಿಸ್ ಯೆಲ್ಸಿನ್. ಅವರ ಸರಕಾರವು ಹಳೆಯ ಸೋವಿಯತ್ ಆರ್ಥಿಕ ವ್ಯವಸ್ಥೆಯನ್ನು ಬದಲಿಸಿ, ಹೊಸ ಮಾರುಕಟ್ಟೆ ಆಧಾರಿತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ನಿರ್ಧರಿಸಿತು. ಈ ಬದಲಾವಣೆಯನ್ನು 'ಶಾಕ್ ಥೆರಪಿ' (Shock Therapy) ಎನ್ನುತ್ತಾರೆ.

ಶಾಕ್ ಥೆರಪಿ ಎಂದರೇನು?

ಇದು ಆರ್ಥಿಕ ವ್ಯವಸ್ಥೆಯನ್ನು ತ್ವರಿತವಾಗಿ ಬದಲಿಸುವ ವಿಧಾನ. ಬೆಲೆ ನಿಯಂತ್ರಣಗಳನ್ನು ತೆಗೆದುಹಾಕುವುದು ಮತ್ತು ಸರಕಾರಿ ಉದ್ಯಮಗಳನ್ನು ಖಾಸಗೀಕರಣ ಮಾಡುವುದು ಇದರಲ್ಲಿ ಸೇರಿರುತ್ತದೆ.

1990ರ ದಶಕದ ಕೊನೆಯ ಭಾಗದಲ್ಲಿ ಮತ್ತು 2000ರ ದಶಕದ ಆರಂಭದಲ್ಲಿ ರಷ್ಯಾ ನಿಧಾನವಾಗಿ ಪುನರುತ್ಥಾನ ಕಂಡಿತು. ಇದಕ್ಕೆ ಮುಖ್ಯ ಕಾರಣ 'ಎನರ್ಜಿ ಪವರ್' (ತೈಲ ಮತ್ತು ಅನಿಲ) ಪಥವನ್ನು ಆಯ್ಕೆ ಮಾಡಿಕೊಂಡಿದ್ದು. ತೈಲ ಬೆಲೆಗಳು ಜಾಗತಿಕ ಮಾರುಕಟ್ಟೆಯಲ್ಲಿ ಏರಿದ ಕಾರಣ ರಷ್ಯಾದ ಆದಾಯ ಹೆಚ್ಚಾಯಿತು.

1991ರಲ್ಲಿ ರಷ್ಯಾ ಎದುರಿಸಿದ ಆಹಾರ ಕೊರತೆ ಮತ್ತು ಸಾಲ ಡೀಫಾಲ್ಟ್ ಸಮಸ್ಯೆಗಳು ಜಗತ್ತಿನ ಇತಿಹಾಸದಲ್ಲಿನ ಅತ್ಯಂತ ಗಂಭೀರ ಆರ್ಥಿಕ ಸಂಕಷ್ಟಗಳಲ್ಲಿ ಒಂದಾಗಿವೆ. ಸೋವಿಯತ್ ಒಕ್ಕೂಟದ ಕುಸಿತ, ದುರ್ಬಲ ಆರ್ಥಿಕ ವ್ಯವಸ್ಥೆ ಮತ್ತು ರಾಜಕೀಯ ಬದಲಾವಣೆಗಳು ಈ ಸಮಸ್ಯೆಗಳನ್ನು ಉಂಟುಮಾಡಿದವು. ಆದರೆ ಹೊಸ ಆರ್ಥಿಕ ನೀತಿಗಳು, ಅಂತಾರಾಷ್ಟ್ರೀಯ ಸಹಾಯ ಮತ್ತು ನೈಸರ್ಗಿಕ ಸಂಪತ್ತಿನ ಉಪಯೋಗದ ಮೂಲಕ ರಷ್ಯಾ ನಿಧಾನವಾಗಿ ಈ ಸಂಕಷ್ಟದಿಂದ ಹೊರಬಂದಿತು.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ, ತೈಲ ಬೆಲೆ ಏರಿಕೆ, ಸರಬರಾಜು ವ್ಯತ್ಯಯ, ಮಾರುಕಟ್ಟೆ ಅನಿಶ್ಚಿತತೆ ಇವೆಲ್ಲವೂ ರಷ್ಯಾಕ್ಕೆ ಆರ್ಥಿಕ ಶಕ್ತಿ ನೀಡುತ್ತಿವೆ. ತೈಲದ ಬೆಲೆ ಏರಿಕೆಯಿಂದ ರಷ್ಯಾದ ಖಜಾನೆಗೆ ನೇರ ಲಾಭ.

ಈಗ ಜಗತ್ತಿನ ಗಮನ ಮಧ್ಯಪ್ರಾಚ್ಯದತ್ತ ನೆಟ್ಟಿದೆ. ಉಕ್ರೇನ್ ಮೇಲಿನ 'ಫೋಕಸ್' ಕಡಿಮೆ ಆಗಿದೆ. ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ಬಳಿಕ, ಅಮೆರಿಕ ತನ್ನ ಗಮನವನ್ನು ಎರಡು ಕಡೆ ಹಂಚಿಕೊಳ್ಳಬೇಕಾಗಿದೆ, ಯುರೋಪ್ ದೇಶಗಳ ಗಮನ ವಿಭಜನೆಯಾಗಿದೆ. ಉಕ್ರೇನ್ ಯುದ್ಧಕ್ಕೆ ಸಿಗುತ್ತಿದ್ದ ಜಾಗತಿಕ ಗಮನ ಕುಗ್ಗುತ್ತಿದೆ. ಇದು ರಷ್ಯಾಗೆ ಯುದ್ಧದ ಮಧ್ಯೆ ವಿಶ್ರಾಂತಿ ನೀಡುತ್ತಿದೆ. ಎದುರಾಳಿಯನ್ನು ಸೋಲಿಸುವುದಕ್ಕಿಂತ, ಅವನ ಗಮನವನ್ನು ಬೇರೆಡೆಗೆ ತಿರುಗಿಸುವುದು ಹೆಚ್ಚು ಪರಿಣಾಮಕಾರಿ ತಂತ್ರ.

ಮಧ್ಯಪ್ರಾಚ್ಯದ ಸಂಘರ್ಷ ದೀರ್ಘಕಾಲ ಮುಂದುವರಿದರೆ, ಅಮೆರಿಕ ತನ್ನ ಶಸ್ತ್ರಾಸ್ತ್ರ ಸಂಗ್ರಹಗಳನ್ನು ಹೆಚ್ಚು ಬಳಸಬೇಕಾಗುತ್ತದೆ, ಯುರೋಪ್ ದೇಶಗಳು ತಮ್ಮ ಸಂಪನ್ಮೂಲಗಳನ್ನು ಹಂಚಿಕೊಳ್ಳಬೇಕಾ ಗುತ್ತದೆ, ಉಕ್ರೇನ್‌ಗೆ ನೀಡುವ ಬೆಂಬಲದ ಪ್ರಮಾಣ ಕುಗ್ಗಬಹುದು. ಈ ಪರಿಸ್ಥಿತಿಯಿಂದ ರಷ್ಯಾಗೆ ಪರೋಕ್ಷ ಲಾಭ. ಯುದ್ಧದಲ್ಲಿ ಕೆಲವೊಮ್ಮೆ ಎದುರಾಳಿಯನ್ನು ದುರ್ಬಲಗೊಳಿಸುವುದು ನೇರ ದಾಳಿಯಿಂದಲ್ಲ, ಅವರ ಸಂಪನ್ಮೂಲಗಳನ್ನು ಹೀರಿಕೊಳ್ಳುವ ಮೂಲಕ.

ಯುದ್ಧ ಹೀಗೇ ಮುಂದುವರಿದರೆ, ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಕೊರತೆ ಉಂಟಾಗಬಹುದು, ರಾಷ್ಟ್ರಗಳು ಪರ್ಯಾಯ ಸರಬರಾಜು ದಾರರನ್ನು ಹುಡುಕುತ್ತವೆ, ಇದು ರಷ್ಯಾ ತನ್ನ ತೈಲವನ್ನು ಹೊಸ ಮಾರುಕಟ್ಟೆಗಳಿಗೆ ವಿಸ್ತರಿಸಲು ಸುವರ್ಣಾವಕಾಶ. ಇದು ಕೇವಲ ತಾತ್ಕಾಲಿಕ ಲಾಭವಲ್ಲ, ಜತೆಗೆ ಭವಿಷ್ಯದ ಮಾರುಕಟ್ಟೆಯ ಮೇಲಿನ ಹಿಡಿತ. ರಷ್ಯಾ ಒಂದು ಬುದ್ಧಿವಂತ ರಾಜಕೀಯದಾಟ ಆಡುತ್ತಿದೆ. ಒಂದು ಕಡೆ ಯುದ್ಧದಿಂದ ಆರ್ಥಿಕ ಲಾಭ ಪಡೆಯುತ್ತಿದೆ, ಮತ್ತೊಂದು ಕಡೆ ತನ್ನನ್ನು 'ಶಾಂತಿದೂತ'ನಂತೆ ತೋರಿಸಿಕೊಳ್ಳುತ್ತಿದೆ. ಇದು ಜಾಗತಿಕ ವೇದಿಕೆಯಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ತಂತ್ರ. ರಾಜಕೀಯದಲ್ಲಿ 'ಶಾಂತಿ' ಎಂಬ ಪದವೇ ಕೆಲವೊಮ್ಮೆ ದೊಡ್ಡ ಶಸ್ತ್ರಾಸ್ತ್ರವಾಗುತ್ತದೆ.ಇದು '21ನೇ ಶತಮಾನದ ಯುದ್ಧ'. ಈ ಯುದ್ಧದಲ್ಲಿ ಗೆಲ್ಲುವವರು ಹೆಚ್ಚು ಬಲಿಷ್ಠರಾಗಿರುವವರಲ್ಲ, ಹೆಚ್ಚು ಬುದ್ಧಿವಂತರಾಗಿರುವವರು. ಯುದ್ಧದ ಕಣದಲ್ಲಿಲ್ಲದವರೇ ಕೆಲವೊಮ್ಮೆ ದೊಡ್ಡ ವಿಜಯಿಗಳು. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಹಿನ್ನೆಲೆ ನೋಡಿದರೆ, ಕೆಲವರು ಯುದ್ಧ ಮಾಡುತ್ತಿದ್ದಾರೆ, ಇನ್ನು ಕೆಲವರು ಯುದ್ಧವನ್ನು ಎದುರಿಸುತ್ತಿದ್ದಾರೆ, ಮತ್ತೆ ಕೆಲವರು ಯುದ್ಧದಿಂದ ಲಾಭ ಪಡೆಯುತ್ತಿದ್ದಾರೆ.

ಭಾರತಕ್ಕೆ ಹೇಗೆ ಲಾಭವಾಯಿತು?

2022ರಲ್ಲಿ ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡಿದ ನಂತರ ಅಮೆರಿಕ ಮತ್ತು ಯುರೋಪ್ ದೇಶಗಳು ರಷ್ಯಾ ಮೇಲೆ ಕಠಿಣ ಆರ್ಥಿಕ ನಿರ್ಬಂಧಗಳನ್ನು ಹೇರಿದವು. ರಷ್ಯಾದಿಂದ ತೈಲ ಖರೀದಿಸುವುದನ್ನು ಯುರೋಪ್ ದೇಶಗಳು ಕಡಿಮೆ ಮಾಡಿದ ಕಾರಣ, ರಷ್ಯಾ ತನ್ನ ತೈಲವನ್ನು ಕಡಿಮೆ ದರದಲ್ಲಿ ಇತರ ದೇಶಗಳಿಗೆ ಮಾರಾಟ ಮಾಡಲು ಪ್ರಾರಂಭಿಸಿತು. ಇದೇ ಸಂದರ್ಭದಲ್ಲಿ ಭಾರತ ಮತ್ತು ಚೀನಾ, ಕಡಿಮೆ ದರದ ತೈಲವನ್ನು ಖರೀದಿಸಲು ಮುಂದಾದವು. ಈ ಬದಲಾವಣೆ ಜಾಗತಿಕ ತೈಲ ವ್ಯಾಪಾರದ ದಿಕ್ಕನ್ನೇ ಬದಲಿಸಿತು.

ಕಡಿಮೆ ದರದ ರಷ್ಯಾ ತೈಲ

ಉಕ್ರೇನ್ ಯುದ್ಧಕ್ಕೂ ಮುನ್ನ ಭಾರತವು ಮಧ್ಯಪ್ರಾಚ್ಯ ದೇಶಗಳಿಂದ ತೈಲವನ್ನು ಖರೀದಿಸುತ್ತಿತ್ತು. ಆದರೆ ಯುದ್ಧದ ನಂತರ ರಷ್ಯಾ ತೈಲವನ್ನು ಕಡಿಮೆ ದರದಲ್ಲಿ ನೀಡಲು ಪ್ರಾರಂಭಿಸಿತು. ರಷ್ಯಾದ ತೈಲವು ಪ್ರತಿ ಬ್ಯಾರೆಲ್‌ಗೆ (1 ಬ್ಯಾರೆಲ್ = 159 ಲೀಟರ್‌ಗಳು) ಸುಮಾರು 15-20 ಡಾಲರ್ ಕಡಿಮೆ ದರದಲ್ಲಿ ಲಭ್ಯವಾಗುತ್ತಿತ್ತು. ರಷ್ಯಾದಿಂದ ಕಡಿಮೆ ದರದಲ್ಲಿ ತೈಲ ಖರೀದಿಸುವ ಮೂಲಕ ಪ್ರತಿ ವರ್ಷ ಭಾರತಕ್ಕಾದ ಲಾಭ ಸುಮಾರು 20,000 ಕೋಟಿ ರು.

ಸಂಸ್ಕರಿಸಿದ ತೈಲ ಮಾರಾಟ

ಯುರೋಪ್ ದೇಶಗಳು ರಷ್ಯಾದ ಕಚ್ಚಾ ತೈಲವನ್ನು ನೇರವಾಗಿ ಖರೀದಿಸಲು ನಿರ್ಬಂಧ ವಿಧಿಸಿದವು. ಆದರೆ ಸಂಸ್ಕರಿಸಿದ (refined) ತೈಲವನ್ನು ಖರೀದಿಸಲು ಅವಕಾಶ ಇತ್ತು. ಭಾರತದ ರಿಫೈನರಿ ಕಂಪನಿಗಳು ರಷ್ಯಾದಿಂದ ಕಡಿಮೆ ದರದಲ್ಲಿ ಕಚ್ಚಾ ತೈಲವನ್ನು ಖರೀದಿಸಿ, ಅದನ್ನು ಪೆಟ್ರೋಲ್ ಮತ್ತು ಡೀಸೆಲ್ ಆಗಿ ಸಂಸ್ಕರಿಸಿ ಯುರೋಪ್‌ಗೆ ಮಾರಾಟ ಮಾಡಿದ್ದವು. ಯುರೋಪ್ ಮತ್ತು ರಷ್ಯಾದ ನಡುವೆ ನಿರ್ಬಂಧ ಏರ್ಪಟ್ಟಿದ್ದರೂ ಭಾರತ ಅದರಿಂದ ಲಾಭ ಪಡೆದುಕೊಂಡಿತು. ರಷ್ಯಾ ತೈಲ ಲಭ್ಯವಾದ ನಂತರ ಭಾರತದ ಡೀಸೆಲ್ ಮತ್ತು ಪೆಟ್ರೋಲ್ ರಫ್ತುಗಳು ಬಹಳ ಪ್ರಮಾಣದಲ್ಲಿ ಹೆಚ್ಚಿದವು, ವಿಶೇಷವಾಗಿ ಯುರೋಪ್ ದೇಶಗಳಿಗೆ. ಇದು ಭಾರತದ ಉದ್ಯಮಗಳಿಗೆ ಹೆಚ್ಚುವರಿ ಆದಾಯ ನೀಡಿತು ಮತ್ತು ಉದ್ಯೋಗಾವಕಾಶಗಳನ್ನೂ ಹೆಚ್ಚಿಸಿತು. ರಷ್ಯಾ ತೈಲ ಖರೀದಿ ಮತ್ತು ಸಂಸ್ಕರಣೆಯಿಂದ ಖಾಸಗಿ ಕಂಪನಿಗಳು ಹೆಚ್ಚು ಲಾಭ ಪಡೆದವು. ಉಕ್ರೇನ್ ಯುದ್ಧದ ನಂತರ ಭಾರತವು ರಷ್ಯಾದ ಪ್ರಮುಖ ತೈಲ ಖರೀದಿದಾರನಾಯಿತು. ಭಾರತವು ಉಕ್ರೇನ್ ಯುದ್ಧದಲ್ಲಿ ತಟಸ್ಥ ನಿಲುವನ್ನು ತೆಗೆದುಕೊಂಡಿತು. ಅಮೆರಿಕ ಮತ್ತು ಯುರೋಪ್ ದೇಶಗಳೊಂದಿಗೆ ಸ್ನೇಹ ಉಳಿಸಿಕೊಂಡು, ಅದೇ ಸಮಯದಲ್ಲಿ ರಷ್ಯಾದೊಂದಿಗೆ ವ್ಯಾಪಾರವನ್ನು ಮುಂದುವರಿಸಿತು. ಈ ಸಮತೋಲನ ನೀತಿಯು ಭಾರತಕ್ಕೆ ಆರ್ಥಿಕ ಲಾಭವನ್ನು ತಂದುಕೊಟ್ಟಿತು.ಯುದ್ಧದಲ್ಲಿ ಭಾರತ ನೇರವಾಗಿ ಭಾಗವಹಿಸದಿದ್ದರೂ, ಜಾಗತಿಕ ಮಾರುಕಟ್ಟೆಯ ಬದಲಾವಣೆಗಳಿಂದ ಭಾರತಕ್ಕೆ ಕೆಲವು ಲಾಭಗಳಾದವು. ಇದು ಭಾರತ ತೆಗೆದುಕೊಂಡ 'ವ್ಯೂಹಾತ್ಮಕ ನಿರ್ಧಾರ'ಗಳ ಫಲ. ಉಕ್ರೇನ್ ಯುದ್ಧವು ಜಗತ್ತಿಗೆ ದೊಡ್ಡ ಸಂಕಷ್ಟವನ್ನು ಉಂಟುಮಾಡಿದ್ದರೂ, ಕೆಲವು ದೇಶಗಳಿಗೆ ಹೊಸ ಅವಕಾಶಗಳನ್ನು ತಂದಿತು. ಭಾರತದ ಆರ್ಥಿಕ ತಂತ್ರ, ರಾಜಕೀಯ ಸಮತೋಲನ ಮತ್ತು ಜಾಗತಿಕ ವ್ಯಾಪಾರದ ಜಾಣ್ಮೆ ಇದಕ್ಕೆ ಕಾರಣ. ಯುದ್ಧಗಳು ನಡೆಯುತ್ತಲೇ ಇರುತ್ತವೆ. ಆದರೆ ಇತಿಹಾಸ ನೆನಪಿಡುವುದು ಯುದ್ಧದಲ್ಲಿ ಹೋರಾಡಿದವರನ್ನು ಮಾತ್ರವಲ್ಲ, ಯುದ್ಧದ ನೆರಳಿನಲ್ಲಿ ಗೆದ್ದವರನ್ನೂ...

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:67

ಸಮಾಚಾರ ಸಣ್ಣದಲ್ಲ

ಲೋಕಸಭೆ: ವಿಧೇಯಕ ಮಂಡಿಸಿದ ನಿರ್ಮಲಾ

ದೆಹಲಿ: ಬಜೆಟ್ ಅಧಿವೇಶನದ 2ನೇ ಭಾಗದ ಕಲಾಪಗಳು ಲೋಕಸಭೆ, ರಾಜ್ಯಸಭೆಯಲ್ಲಿ ಮುಂದುವರಿದಿದ್ದು, ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಯಲ್ಲಿ ಕಾರ್ಪೊರೇಟ್ ಲಾಸ್(ತಿದ್ದುಪಡಿ)-2026 ವಿಧೇಯ ಕವನ್ನು ಮಂಡಿ ಸಿದರು. 'ಲಿಮಿಟೆಡ್ ಲಯಬಲಿಟಿ ಪಾರ್ಟನರ್‌ಷಿಪ್ ಆಕ್ಟ್-2008' ಮತ್ತು 'ಕಂಪನಿಗಳ ಕಾಯಿದೆ-2013'ಕ್ಕೆ ಕೆಲವು ತಿದ್ದುಪಡಿಗಳನ್ನು ಬಯಸಿದ್ದ ಈ ವಿಧೇಯಕ ದ ಕುರಿತು ಕೆಲಕಾಲ ಚರ್ಚೆ ನಡೆಸಲಾಯಿತು. ಆ ಬಳಿಕ ಸದನವು ನೂತನ ತಿದ್ದುಪಡಿ ವಿಧೇಯಕವನ್ನು ಜಂಟಿ ಸಂಸದೀಯ ಸಮಿತಿ ರವಾನಿಸಿ ಪರಾಮರ್ಶೆಗೆ ಒಳಪಡಿಸಲು ನಿರ್ಣಯ ಕೈಗೊಂಡಿತು. ಇದೇ ವೇಳೆ, ಸಚಿವೆ ನಿರ್ಮಲಾ ಅವರು 2026-27ನೇ ಹಣಕಾಸು ವರ್ಷಕ್ಕೆ ಕೇಂದ್ರ ಸರಕಾರದ ಹಣಕಾಸು ಪ್ರಸ್ತಾವನೆಯನ್ನು(ಮುಂಗಡಪತ್ರ) ಸದನದ ಸಮ್ಮತಿಗಾಗಿ ಮಂಡನೆ ಮಾಡಿದರು.

ಅಸ್ಸಾಂ ಸಚಿವೆ ನಂದಿತಾ ಕಾಂಗ್ರೆಸ್‌ಗೆ ಸೇರ್ಪಡೆ

ಗುವಾಹಟಿ: ವಿಧಾನಸಭಾ ಚುನಾವಣೆಗೆ ಭಾರತೀಯ ಜನತಾ ಪಕ್ಷ (ಬಿಜೆಪಿ) ಟಿಕೆಟ್ ನಿರಾಕರಿಸಿದ್ದರಿಂದ ಅಸ್ಸಾಂ ಸರಕಾರದಲ್ಲಿ ಈವರೆಗೆ ಸಚಿವೆಯಾಗಿದ್ದ ನಂದಿತಾ ಗರ್ಲೋಸಾ ಭಾನುವಾರ ಕಾಂಗ್ರೆಸ್ ಪಕ್ಷವನ್ನು ಸೇರಿದರು. ನಂದಿತಾ ಈಗ ದಿಮಾ ಹಸಾವೊ ಜಿಲ್ಲೆಯ ಹಾಫ್ಲಾಂಗ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ತಿಳಿಸಿದೆ. ನಂದಿತಾ ಗರ್ಲೋಸಾ 2022ರಿಂದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಸರಕಾರದಲ್ಲಿ ವಿದ್ಯುತ್, ಸಹಕಾರ, ಗಣಿ, ಖನಿಜ, ಸ್ಥಳೀಯ ಮತ್ತು ಬುಡಕಟ್ಟು-ಸಂಸ್ಕೃತಿ ಸಚಿವೆಯಾಗಿದ್ದರು. 'ನಂದಿತಾ ತತ್ವಗಳಿಗಾಗಿ ಹೋರಾಡಿದವರು. ಅವರು ಕಾಂಗ್ರೆಸ್ ಪಕ್ಷ ಸೇರಿದ್ದರಿಂದ ನಮಗೆ ಸಂತೋಷವಾಗಿದೆ. ಅವರು 5 ವರ್ಷಗಳಿಂದ ದಿಮಾ ಹಸಾವೊ ಜನರ ಧ್ವನಿಯಾಗಿದ್ದಾರೆ' ಎಂದು ಹೇಳಿಕೊಂಡಿರುವ ಅಸ್ಸಾಂ ಕಾಂಗ್ರೆಸ್ ಘಟಕದ ಮಾಧ್ಯಮ ವಿಭಾಗ, ನಂದಿತಾ ಪಕ್ಷಕ್ಕೆ ಸೇರ್ಪಡೆಯಾದ ಸಂದರ್ಭದ ಫೋಟೋವನ್ನು ಜಾಲತಾಣದಲ್ಲಿ ಹಂಚಿಕೊಂಡಿದೆ. ನಂದಿತಾ ಪ್ರತಿನಿಧಿಸಿದ್ದ ಹಫ್ಲಾಂಗ್ ಕ್ಷೇತ್ರದಿಂದ ಬಿಜೆಪಿ ರೂಪಾಲಿ ಲ್ಯಾಂಗ್ಥಾಸಾ ಅವರನ್ನು ಕಣಕ್ಕಿಳಿಸುತ್ತಿದೆ.

ಬಾಸಿತ್ ದಾಳಿ ಬೆದರಿಕೆ: ಬಿಜೆಪಿ ವಕ್ತಾರ ಆಕ್ರೋಶ



ದೆಹಲಿ: ಅಮೆರಿಕ ಪಾಕ್ ಮೇಲೆ ದಾಳಿ ಮಾಡಿದರೆ ನಾವು ಭಾರತದ ದೆಹಲಿ, ಮುಂಬೈ ಮೊದಲಾದ ನಗರಗಳಿಗೆ ಬಾಂಬ್ ಹಾಕುತ್ತೇವೆ ಎಂಬ ಪಾಕಿಸ್ತಾನದ ಮಾಜಿ ರಾಯಭಾರಿ ಅಬ್ದುಲ್ ಬಾಸಿತ್ ಹೇಳಿಕೆಗೆ ಬಿಜೆಪಿ ತಿರುಗೇಟು ನೀಡಿದೆ. ಪಾಕಿಸ್ತಾನ ಭಯೋತ್ಪಾದನೆ ಇಲ್ಲದೇ ಬದುಕಲಾರದು. ಅದಕ್ಕೇ ಇಂಥ ಹೇಳಿಕೆ ನೀಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ತುಹಿನ್ ಸಿನ್ಹಾ ಕಿಡಿಕಾರಿದ್ದಾರೆ. ಪಾಕಿಸ್ತಾನದ ಮನೋಭಾವ ಇನ್ನೂ ಬದಲಾಗಿಲ್ಲ ಎಂಬುದನ್ನು ದಾಳಿ ಬೆದರಿಕೆಯೇ ತೋರಿಸುತ್ತದೆ. ಆ ದೇಶದ ನಾಯಕರು ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆ ಎಂಬುದಕ್ಕೆ ಈ ಹೇಳಿಕೆಯೇ ಸಾಕ್ಷಿಯಾಗಿದೆ ಎಂದು ಖಂಡಿಸಿದ್ದಾರೆ. ಪಾಕ್ ಸೇನಾ ಮುಖ್ಯಸ್ಥ ಅಸಿಮ್ ಮುನೀರ್, ಅಗತ್ಯವಿದ್ದರೆ ಗುಜರಾತ್‌ನ ಜಾಮ್ ನಗರದಲ್ಲಿರುವ ತೈಲ ಸಂಸ್ಕರಣಾಗಾರಗಳನ್ನು ಸ್ಫೋಟಿಸಲಾಗುವುದು ಎಂದು ಕಳೆದ ವರ್ಷ ಹೇಳಿದ್ದರು. ಪಾಕ್ ಮೂಲದಲ್ಲೇ ಭಯೋತ್ಪಾದಕ ರಾಷ್ಟ್ರ. ಅದನ್ನೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆ ದೇಶದ ಸೇನೆಯ ನಾಯಕರು, ರಾಜತಾಂತ್ರಿಕರು ಬಳಸುವ ಭಾಷೆ ಕೇಳಿದರೆ, ಭಯೋತ್ಪಾದನೆ ಅವರ ಮೂಲ ಸ್ವಭಾವದಲ್ಲೇ ಇದೆ ಎಂಬುದು ಗೊತ್ತಾಗುತ್ತದೆ ಎಂದು ಸಿನ್ಹಾ ಆಕ್ರೋಶ ಹೊರಹಾಕಿದ್ದಾರೆ.

ಸಾಂಬಾ ತಡರಾತ್ರಿ ಸ್ಫೋಟ

ಜಮ್ಮು: ಜಮ್ಮು-ಕಾಶ್ಮೀರದ ಸಾಂಬಾ ಜಿಲ್ಲೆಯಲ್ಲಿ ಸೋಮವಾರ ಮುಂಜಾನೆ ನಿಗೂಢ ಸ್ಫೋಟವಾಗಿದೆ. ಆದರೆ, ಸ್ಫೋಟದಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ. ಸಾಂಬಾ ಜಿಲ್ಲೆಯ ಘಗ್ವಾಲ್ ಪ್ರದೇಶದ ಗವಾಲಾ ತಲಾಬ್ ಗ್ರಾಮದಲ್ಲಿ ಮಾಜಿ ಸರಪಂಚ್ ಜೈರಾಮ್ ಶರ್ಮಾ ಮನೆ ಹೊರಗೆ ಸ್ಫೋಟವಾಗಿದೆ. ಅಂತಾರಾಷ್ಟ್ರೀಯ ಗಡಿಗೆ 10 ಕಿಮೀ ಸಮೀಪದ ಈ ಪ್ರದೇಶದಲ್ಲಿ ಸೋಮವಾರ ನಸುಕಿನ 2 ಗಂಟೆಯಲ್ಲಿ ಸ್ಫೋಟವಾಗಿದೆ. ಅದರ ತೀವ್ರತೆಗೆ ಮನೆಯ ಮುಖ್ಯ ಗೇಟ್ ಸಂಪೂರ್ಣ ಧ್ವಂಸವಾಗಿದೆ. ಕಾಂಪೌಂಡ್ ಗೋಡೆ ಭಾಗವೂ ಹಾನಿಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸರ ತಂಡ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದೆ.

{ ಪಿಣರಾಯಿ ವಿಜಯನ್ } ಕೇರಳ ಸಿಎಂ

ಬಾರಿ ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಿಜೆಪಿ ಜತೆ ರಹಸ್ಯ ಒಳ ಒಪ್ಪಂದ ಮಾಡಿಕೊಳ್ಳಲಿದೆ. ಈ ಮೊದಲೂ 2016ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನೇಮಮ್ ಕ್ಷೇತ್ರದಲ್ಲಿ ದುರ್ಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಪರೋಕ್ಷವಾಗಿ ಬಿಜೆಪಿಗೆ ಸಹಕರಿಸಿತ್ತು. ರಾಹುಲ್ ಮತ್ತಿತರ ಕಾಂಗ್ರೆಸ್ ನಾಯಕರಿಗೆ ಬಿಜೆಪಿ ಸಂಪರ್ಕವಿದೆ.

ವಿಮಾನದ ಮುಂಬದಿ ಸಾಲಿನಲ್ಲಿದ್ದ ಹಲವಾರು ಮಂದಿಗೆ ಗಾಯ | ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರ, ಸಾವು ಹೆಚ್ಚಳ ಸಾಧ್ಯತೆ

ನ್ಯೂಯಾರ್ಕ್: ಟ್ರಕ್‌ಗೆ ವಿಮಾನ ಡಿಕ್ಕಿ-2 ಸಾವು

ನ್ಯೂಯಾರ್ಕ್: ಅಮೆರಿಕದ ನ್ಯೂಯಾರ್ಕ್ ಮಹಾನಗರದಲ್ಲಿನ 'ಲಾಗಾರ್ಡಿಯಾ ವಿಮಾನ ನಿಲ್ದಾಣ'ದಲ್ಲಿ ಭಾನುವಾರ ರಾತ್ರಿ 11.38ರಲ್ಲಿ(ಸ್ಥಳೀಯ ಸಮಯ) ಲ್ಯಾಂಡಿಂಗ್ ವೇಳೆ ಏರ್ ಕೆನಡಾ ಎಕ್ಸ್‌ಪ್ರೆಸ್ ಸಂಸ್ಥೆಯ ಸಿಆರ್‌ಜೆ -900 ವಿಮಾನವು ಅಗ್ನಿಶಾಮಕ ದಳದ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದು, ಅವಘಡದಲ್ಲಿ ವಿಮಾನದ ಇಬ್ಬರೂ ಪೈಲಟ್‌ಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ವಿಮಾನದ ಮುಂಬದಿ ಸಾಲುಗಳಲ್ಲಿ ಆಸೀನರಾಗಿದ್ದ ಹಲವಾರು ಪ್ರಯಾಣಿಕರು ಗಾಯಗೊಂಡಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ. ಅಗ್ನಿಶಾಮಕ ವಾಹನದಲ್ಲಿದ್ದ ಚಾಲಕ, ಇಬ್ಬರು ಅಧಿಕಾರಿಗಳು ಸೇರಿದಂತೆ ನಾಲ್ವರು ಸಿಬ್ಬಂದಿಗಳ ಕೈಕಾಲು ಮೂಳೆಗಳು ಮುರಿದುಹೋಗಿದ್ದು, ಅವರ ಸ್ಥಿತಿಯೂ ಬಲು ಗಂಭೀರವಾಗಿದೆ. ಹಾಗಾಗಿ, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೆನಡಾದ ಮಾಂಟ್ರಿಯಲ್‌ಗೆ ಆಗಮಿಸಿದ ವಿಮಾನ ರನ್ ವೇ 4ರಲ್ಲಿ ಇಳಿಯಿತು. ಆಗ ವಿಮಾನ ನಿಲ್ದಾಣದಲ್ಲಿ ಮಳೆ ಸುರಿಯುತ್ತಿದ್ದುದರಿಂದ ಗೋಚರಿಸುವ ಪ್ರಮಾಣ ಕಡಿಮೆಯಾಗಿತ್ತು.

ಇದೇ ವೇಳೆ ರನ್ ವೇ 4ರಲ್ಲಿ ನಿಲುಗಡೆಯಾಗಿದ್ದ ಅಗ್ನಿಶಾಮಕ ದಳದ ಟ್ರಕ್ ವಿಮಾನದ ಪೈಲಟ್‌ಗೆ ಗೋಚರಿಸದೇ ಇದ್ದ ಕಾರಣ ಇನ್ನೂ 40 ಕಿಮೀ ವೇಗದಲ್ಲೇ ಸಾಗುತ್ತಿದ್ದ ವಿಮಾನ ನೇರವಾಗಿ ಸಾಗಿ ಅಗ್ನಿಶಾಮಕ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ವಿಮಾನದ ಮುಂದಿನ ಅರ್ಧ ಭಾಗ ನಜ್ಜುಗುಜ್ಜಾಗಿ ಕತ್ತರಿಸಿ ಹೋಗಿದೆ. ಪೈಲಟ್ ಮತ್ತು ಸಹ ಪೈಲಟ್ ಸ್ಥಳದಲ್ಲೇ ಅಸುನೀಗಿದ್ದಾರೆ. ಗಾಯಾಳುಗಳು ನಜ್ಜುಗುಜ್ಜಾದ ವಿಮಾನದ ಭಾಗಗಳಲ್ಲಿ ಸಿಲುಕಿಕೊಂಡಿದ್ದರಿಂದ ವಿಮಾನದ ಭಾಗಗಳನ್ನು ಕತ್ತರಿಸಿ ತೆಗೆದು ಗಾಯಾಳುಗಳನ್ನು ಹೊರತೆಗೆಯಲಾಗಿದೆ. ಬಳಿಕ ತಕ್ಷಣವೇ ವಿಮಾನ ನಿಲ್ದಾಣದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಮಾನದಲ್ಲಿ 72 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ವರ್ಗದವರಿದ್ದರು. ಆದರೆ, ಅಪಘಾತದಲ್ಲಿ ಗಾಯಗೊಂಡವರ ನಿಖರ ಸಂಖ್ಯೆ ಎಷ್ಟು? ವಿಮಾನಕ್ಕೆ ಯಾವ ಪ್ರಮಾಣದ ಹಾನಿ ಆಗಿದೆ ಎಂಬ ಬಗ್ಗೆ ಅಧಿಕಾರಿಗಳು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿಲ್ಲ. ಆದರೆ, ಈ ಸಂದರ್ಭದ ವಿಡಿಯೊಗಳು ಜಾಲತಾಣದಲ್ಲಿ ವೈರಲ್ ಆಗಿದ್ದು, ವಿಮಾನದ ಮುಂಭಾಗಕ್ಕೆ ತೀವ್ರ ಸ್ವರೂಪದಲ್ಲಿ ಹಾನಿಯಾಗಿರುವುದು ಗೋಚರಿಸುತ್ತದೆ.

ಸ್ಟಾಪ್ ಸ್ಟಾಪ್ ಸ್ಟಾಪ್

ವಿಮಾನಗಳ ಹಾರಾಟ ಮತ್ತು ಇಳಿಯುವುದನ್ನು ನಿಯಂತ್ರಿಸುತ್ತಿದ್ದ 'ಏರ್ ಟ್ರಾಫಿಕ್ ಕಂಟ್ರೋಲ್ ರೂಂ'ನಲ್ಲಿನ ಸಿಬ್ಬಂದಿಗಳು ಕೆನಡಾದ ಮಾಂಟ್ರಿಯಲ್‌ನಿಂದ ಹಾರಿಬಂದ ಏರ್ ಕೆನಡಾ ಎಕ್ಸ್‌ಪ್ರೆಸ್ ವಿಮಾನವನ್ನು ರನ್ ವೇ 4ರಲ್ಲಿ ಲ್ಯಾಂಡ್ ಆಗಲು ಸೂಚನೆ ನೀಡಿದ್ದಾರೆ. ಆ ಸೂಚನೆಯಂತೆಯೇ ಏರ್ ಕೆನಡಾ ಎಕ್ಸ್‌ಪ್ರೆಸ್ ಸಂಸ್ಥೆಯ ಸಿಆರ್‌ಜೆ -900 ವಿಮಾನವು ಲ್ಯಾಂಡ್ ಆಗಿದೆ. ಅದೇ ಸಮಯದಲ್ಲಿ ಅಮೆರಿಕದ ಜಾರ್ಜ್ ಏವಿಯೇಷನ್ ಫ್ಲೈಟ್ ಕೂಡಾ ಬಂದಿದ್ದರಿಂದ ಅದಕ್ಕೆ ಸ್ಥಳಾವಕಾಶ ಮಾಡಿಕೊಡುವ ಸಲುವಾಗಿ ಅಗ್ನಿಶಾಮಕ ದಳದ ಟ್ರಂಕ್ ಪಕ್ಕಕ್ಕೆ ಚಲಿಸಲಾರಂಭಿಸಿದೆ. ಅದನ್ನು ಗಮನಿಸಿದ ಏರ್‌ಟ್ರಾಫಿಕ್ ಕಂಟ್ರೋಲ್ ರೂಂ ಸಿಬ್ಬಂದಿ 'ಸ್ಟಾಪ್ ಸ್ಟಾಪ್ ಟ್ರಕ್ 1, ಸ್ಟಾಪ್ ಸ್ಟಾಪ್ ಸ್ಟಾಪ್ ' ಎಂದು ಸಮನೆ ಉದ್ವೇಗದಿಂದ ಕೂಗಿಕೊಂಡಿದ್ದಾರೆ. ಅದೇ ವೇಳೆಗೆ ಮಳೆ ಸುರಿಯಲಾರಂಭಿಸಿದ್ದರಿಂದ ಮುಂಬದಿಯ ದೃಶ್ಯಗಳ ಗೋಚರಿಸುವಿಕೆ ಪ್ರಮಾಣ ಕಡಿಮೆಯಾಗಿದೆ. ಟ್ರಕ್‌ನವರಿಗೂ ಸೂಚನೆ ಕೇಳಿಸಿಲ್ಲ. ಕೆನಡಾ ವಿಮಾನಕ್ಕೂ ಟ್ರಕ್ ಮುಂದೆ ಇರುವುದು ಕಾಣಿಸಿಲ್ಲ. ವಿಮಾನ ನೇರವಾಗಿ ಟ್ರಕ್‌ಗೆ ಗುದ್ದಿದೆ. ಅವಘಡದ ಬಳಿಕ ರಕ್ಷಣಾ ಕಾರ್ಯಾಚರಣೆ ಸಲುವಾಗಿ ವಿಮಾನ ನಿಲ್ದಾಣದ ರನ್‌ವೇ 4 ಮಾತ್ರವಲ್ಲದೇ ಇಡೀ ವಿಮಾನ ನಿಲ್ದಾಣದಲ್ಲಿನ ಕಾರ್ಯಾಚರಣೆಯನ್ನೇ ಕೆಲವು ಗಂಟೆಗಳ ಕಾಲ ಸ್ಥಗಿತಗೊಳಿಸಲಾಗಿದೆ. ವಿಮಾನಗಳ ಪ್ರವೇಶ ನಿರ್ಬಂಧಿಸಲಾಗಿದ್ದು, ಲಾಗಾರ್ಡಿಯ ವಿಮಾನ ನಿಲ್ದಾಣದಲ್ಲಿ ಇಳಿಯಬೇಕಿದ್ದ ವಿಮಾನಗಳನ್ನು ಸಮೀಪದ ಬೇರೆ ನಿಲ್ದಾಣಗಳತ್ತ ತಿರುಗಿಸಲು ಸೂಚನೆ ಹೊರಡಿಸಲಾಗಿದೆ.

ಎಐಎಡಿಎಂಕೆ-178, ಬಿಜೆಪಿ-27, ಪಿಎಂಕೆ-18, ಎಎಂಎಂಕೆ-11

ತ.ನಾಡು ಚುನಾವಣೆಗೆ ಎನ್‌ಡಿಎ ಸೀಟು ಹಂಚಿಕೆ

ಚೆನ್ನೈ/ದೆಹಲಿ: 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಗೆ ಏ.2ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಗೆ ಎಲ್ಲಾ ರಾಜಕೀಯ ಪಕ್ಷಗಳೂ ಸಿದ್ಧತೆಯಲ್ಲಿ ತೊಡಗಿವೆ. ಬಿಜೆಪಿ ಮತ್ತು ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಸೀಟು ಹಂಚಿಕೆ ಸೋಮವಾರ ಅಂತಿಮಗೊಂಡಿದೆ.

ಈ ಮೊದಲು ರಾಜ್ಯದಲ್ಲಿ ಆಡಳಿತ ಪಕ್ಷವಾಗಿ ಅನುಭವ ಪಡೆದಿರುವ ಎಐಎಡಿಎಂಕೆಗೆ ಹಿರಿತನದ ಆಧಾರದ ಮೇಲೆ ಅತ್ಯಂತ ದೊಡ್ಡ ಪಾಲನ್ನು ಬಿಟ್ಟುಕೊಡಲಾಗಿದೆ. ಎಐಎಡಿಎಂಕೆ ಒಟ್ಟು 178 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಅವಕಾಶ ನೀಡಲಾಗಿದೆ. ಉಳಿದಂತೆ ಬಿಜೆಪಿ 27 ಕ್ಷೇತ್ರಗಳಲ್ಲಿ, ಪಟ್ಟಾಳಿ ಮಕ್ಕಳ್ ಕಚ್ಚಿ(ಪಿಎಂಕೆ) 18 ಕ್ಷೇತ್ರಗಳಲ್ಲಿ, 'ಎಎಂಎಂಕೆ' ಪಕ್ಷ 11 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಅವಕಾಶವಾಗಿದೆ. ಸೀಟು ಹಂಚಿಕೆ ಪ್ರಕ್ರಿಯೆಯನ್ನು ಕೇಂದ್ರ ಸಚಿವ ಪಿಯೂಶ್ ಗೋಯಲ್ ಮತ್ತು ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರ ನೇತೃತ್ವದಲ್ಲಿ ಚೆನ್ನೈನಲ್ಲಿನ ಎಐಎಡಿಎಂಕೆ ಪಕ್ಷದ ಪ್ರಧಾನ ಕಚೇರಿಯಲ್ಲಿ ಸೋಮವಾರ ಅಂತಿಮಗೊಳಿಸಲಾಗಿದೆ.

ಎಐಎಡಿಎಂಕೆ ಪ್ರಧಾನ ಕಚೇರಿ ಆವರಣದಲ್ಲಿ ಸೋಮವಾರ ಸಂಜೆ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರದ ವಾಣಿಜ್ಯ ಸಚಿವ ಪಿಯೂಶ್ ಗೋಯಲ್ ಅವರು, ತಮಿಳುನಾಡಿನ ಜನತೆ ಕಳೆದ 5 ವರ್ಷಗಳಲ್ಲಿ ಡಿಎಂಕೆ ಸರಕಾರದ ಆಡಳಿತದಿಂದ ಬೇಸರಗೊಂಡಿದ್ದಾರೆ. ಡಿಎಂಕೆ, ಕಾಂಗ್ರೆಸ್ ನೇತೃತ್ವದ ಜ್ಯಾತ್ಯತೀತ ಪಕ್ಷಗಳ ಒಕ್ಕೂಟವನ್ನು ತಮಿಳುನಾಡು ಮತದಾರರು ಈ ಬಾರಿಯ ಚುನಾವಣೆಯಲ್ಲಿ ತಿರಸ್ಕರಿಸಿ, ಬಿಜೆಪಿ-ಎಐಎಡಿಎಂಕೆ ನೇತೃತ್ವದ ಎನ್‌ಡಿಎ ಸರಕಾರ ರಚನೆಗೆ ಅವಕಾಶ ಮಾಡಿಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚೆನ್ನೈನಲ್ಲಿ ಎಐಎಡಿಎಂಕೆ ಪಕ್ಷದ ಪ್ರಧಾನ ಕಚೇರಿ ಆವರಣದಲ್ಲಿ ಕೇಂದ್ರದ ವಾಣಿಜ್ಯ ಸಚಿವ, ಬಿಜೆಪಿ ತಮಿಳುನಾಡು ಉಸ್ತುವಾರಿ ಪಿಯೂಶ್ ಗೋಯಲ್ ಸೋಮವಾರ ಸಂಜೆ ಸುದ್ದಿಗೋಷ್ಠಿ ನಡೆಸಿದರು.

ಏ.1ರಿಂದ ರಾಷ್ಟ್ರೀಯ ಹೆದ್ದಾರಿ ಶುಲ್ಕ ಶೇ.4-5 ಏರಿಕೆ

ದೆಹಲಿ: ದೇಶಾದ್ಯಂತ ಇರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ (ವಾಹನ ಪ್ರವೇಶ ಸುಂಕ) ದರವನ್ನು ಪರಿಷ್ಕರಿಸಿದ್ದು, ಶೇ. 4ರಿಂದ ಶೇ.5ರಷ್ಟು ಏರಿಕೆ ಮಾಡಲಾಗಿದೆ. ಹೊಸ ಸುಂಕ ದರ ಏ.1ರಿಂದ ದೇಶಾದ್ಯಂತದ ರಾಷ್ಟ್ರೀಯ ಹೆದ್ದಾರಿ ಸುಂಕ ಸಂಗ್ರಹ ಕೇಂದ್ರಗಳಲ್ಲಿ ಜಾರಿಗೆ ಬರಲಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ಅಧಿಕಾರಿಗಳು ತಿಳಿಸಿದ್ದಾರೆ.

ಈ ಸುಂಕ ಪ್ರಮಾಣದ ಏರಿಕೆ ಕಾರು, ಬಸ್, ಲಾರಿ ಸೇರಿದಂತೆ ಎಲ್ಲಾ ವಾಹನಗಳಿಗೂ ಅನ್ವಯ ವಾಗಲಿದೆ. ಹೆದ್ದಾ ರಿಗಳ ನಿರ್ವಹಣೆ, ದುರಸ್ತಿ ಹಾಗೂ ಅಭಿವೃದ್ಧಿ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಂಡು ಟೋಲ್ ದರ ಪರಿಷ್ಕರಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.ಕರ್ನಾಟಕದಲ್ಲಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಸೇರಿದಂತೆ 8 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ಸುಂಕ ಏರಿಕೆ ಪರಿಣಾಮ ಬೀರಲಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಯಲ್ಲಿ 2023ರ ಏ.1ರಿಂದ ಟೋಲ್ ಸಂಗ್ರಹ ಆರಂಭವಾಗಿದ್ದು, ಈವರೆಗೆ 4ನೇ ಬಾರಿ ಸುಂಕ ಪ್ರಮಾಣ ಏರಿಕೆ ಮಾಡಲಾಗುತ್ತಿದೆ.

ರಾಜ್ಯದ 9 ರಾಷ್ಟ್ರೀಯ ಹೆದ್ದಾರಿ

- ರಾ.ಹೆ. 48: ಬೆಂಗಳೂರು-ತುಮಕೂರು-ಹಾವೇರಿ-ಬೆಳಗಾವಿ (ಮುಂಬೈ)
- ರಾ.ಹೆ. 275: ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ
- ರಾ.ಹೆ. 44: ಬೆಂಗಳೂರು - ಹೈದರಾಬಾದ್
- ರಾ.ಹೆ. 75(ಪಶ್ಚಿಮ): ಬೆಂಗಳೂರು-ಹಾಸನ-ಮಂಗಳೂರು
- ರಾ.ಹೆ. 75(ಪೂರ್ವ): ಬೆಂಗಳೂರು-ಹೊಸಕೋಟೆ-ಕೋಲಾರ
- ರಾ.ಹೆ. 66: ಮಂಗಳೂರು-ಉಡುಪಿ-ಕುಂದಾಪುರ
- ರಾ.ಹೆ. 50 / 52 ವಿಜಯಪುರ-ಹೊಸಪೇಟೆ-ಚಿತ್ರದುರ್ಗ
- ರಾ.ಹೆ. 150ಎ: ಹಿರಿಯೂರು-ಬಳ್ಳಾರಿ-ಜೇವರ್ಗಿ
- ರಾ.ಹೆ. 766: ಮೈಸೂರು-ಗುಂಡ್ಲುಪೇಟೆ

ಈ ಹಿಂದೆ 2023ರ ಜೂನ್ ತಿಂಗಳಲ್ಲಿ ಶೇ.22ರಷ್ಟು ಸುಂಕ ಏರಿಕೆ ಘೋಷಿಸಿ ಬಳಿಕ ವಾಹನ ಚಾಲಕರಿಂದ ತೀವ್ರ ವಿರೋಧ ವ್ಯಕಜ್ತವಾಗಿದ್ದರಿಂದ ಹಿಂಪಡೆಯಲಾಗಿತ್ತು. ಆದರೆ ಪ್ರತಿವರ್ಷವೂ ಏ.1ರಂದು ಶೇ.5ರಷ್ಟು ಸುಂಕ ಏರಿಕೆ ಪ್ರಕ್ರಿಯೆ ಮುಂದುವರೆದಿದೆ.

ಟೋಲ್‌ನ ವಾರ್ಷಿಕ ಪಾಸ್ ದರ ಕೂಡಾ 3,000 ರು.ನಿಂದ 3,075 ರು.ಗೆ ಏ.1ರಿಂದ ಏರಿಕೆ ಆಗಲಿದೆ.

ಅಡ್ಡ ಮತ: ಒಡಿಶಾ ಕೈ ಶಾಸಕಿಗೆ ಬೆಂಗಳೂರು ನಂಟು

ಭುವನೇಶ್ವರ: ಮಾ.16ರಂದು 3 ರಾಜ್ಯಗಳಲ್ಲಿನ ರಾಜ್ಯಸಭೆಯ 11 ಸ್ಥಾನಗಳಿಗೆ(ಒಟ್ಟು 37 ಸ್ಥಾನಗಳಲ್ಲಿ 26 ಸದಸ್ಯರ ಅವಿರೋಧ ಆಯ್ಕೆ ಮೊದಲೇ ಪೂರ್ಣ) ನಡೆದ ಚುನಾವಣೆಯಲ್ಲಿ ಒಡಿಶಾದಲ್ಲಿ ಬಿಜೆಪಿ ಅಭ್ಯರ್ಥಿಗೆ (ಅಡ್ಡ) ಮತದಾನ ಮಾಡಿದ ಕಾಂಗ್ರೆಸ್ ಶಾಸಕಿಗೂ ಬೆಂಗಳೂರಿಗೂ ನಂಟಿದೆ. ಕೆಐಐಟಿ-ಭುವನೇಶ್ವರ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ವಿಷಯದಲ್ಲಿ ಬಿಟೆಕ್ ಪದವಿ ಪಡೆದಿರುವ ಸೋಫಿಯಾ ಫಿರ್ದೋಷ್(35), ಬಳಿಕ ಬಂದಿದ್ದೇ ಬೆಂಗಳೂರಿಗೆ. ಐಐಎಂ-ಬೆಂಗಳೂರು ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಯಲ್ಲಿ 2022ರಲ್ಲಿ ಎಕ್ಸಿಕ್ಯುಟಿವ್ ಜನರಲ್ ಮ್ಯಾನೇಜ್‌ಮೆಂಟ್ ಪ್ರೋಗ್ರಾಮ್‌ನಲ್ಲಿ ವ್ಯಾಸಂಗ ಮಾಡಿದ್ದಾರೆ. ಬಳಿಕ ಸ್ವಂತ ಉದ್ಯಮ ಆರಂಭಿಸಿ ಯಶಸ್ವಿ ಉದ್ಯಮಿ ಎನಿಸಿಕೊಂಡಿದ್ದಾರೆ. ನಂತರದಲ್ಲಿ 2024ರ ವಿಧಾನಸಭೆ ಚುನಾವಣೆಯಲ್ಲಿ ಕೋರ್ಟ್ ವ್ಯಾಜ್ಯದ ಕಾರಣ ತಂದೆ ಮೊಹಮ್ಮದ್ ಮೊಕ್ವಿಮ್ ಅವರು ಚುನಾವಣೆಗೆ ಸ್ಪರ್ಧೆ ಮಾಡುವುದು ಅಸಾಧ್ಯವಾಗಿದ್ದರಿಂದ ಕಾಂಗ್ರೆಸ್ ಟಿಕೆಟ್ ಪುತ್ರಿ ಸೋಫಿಯಾಗೆ ಸಿಕ್ಕಿದೆ, ಹೀಗೆ ಸೋಫಿಯಾ ಮೊದಲ ಯತ್ನದಲ್ಲೇ ಶಾಸಕಿಯಾಗಿದ್ದಾರೆ.ಬಿಜೆಪಿಯ ಪ್ರಭಾವಶಾಲಿ ಅಭ್ಯರ್ಥಿ ಪೂರ್ಣಚಂದ್ರ ಮಹಾಪಾತ್ರ ವಿರುದ್ಧ 8001 ಮತಗಳ ಅಂತರದಿಂದ ಗೆದ್ದು ಮೊದಲ ಚುನಾವಣೆಯಲ್ಲೇ ಒಡಿಶಾ ವಿಧಾನಸಭೆ ಪ್ರವೇಶಿಸಿದ ಸೋಫಿಯಾ, ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವಿಗೆ ಕಾರಣವಾಗಿದ್ದಾರೆ. . ಪರಿಣಾಮ ಸದ್ಯ ಪಕ್ಷದಿಂದ ಅಮಾನತುಗೊಂಡಿದ್ದಾರೆ.

ಪ್ರಧಾನಿ ಹೊಸದೇನೂ ಹೇಳಿಲ್ಲ: ಪ್ರಿಯಾಂಕಾ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಪಶ್ಚಿಮ ಏಷ್ಯಾ ಪರಿಸ್ಥಿತಿ ಕುರಿತು ಸೋಮವಾರ ಮಧ್ಯಾಹ್ನ ನೀಡಿದ ಹೇಳಿಕೆಯಲ್ಲಿ ಹೊಸದೇನೂ ಇರಲಿಲ್ಲ ಎಂದು ಲೋಕಸಭಾ ಸದಸ್ಯೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ ಸಂಸತ್ ಭವನದ ಹೊರಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಭಾರತ ಎಲ್‌ಪಿಜಿ ಅಗತ್ಯದ ಶೇ.60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ ಎಂದು ನಮಗೆಲ್ಲರಿಗೂ ತಿಳಿದಿದೆ. ಪ್ರಧಾನಿ ಸದ್ಯದ ಪರಿಸ್ಥಿತಿಯನ್ನು ದೇಶಕ್ಕೆ ತಿಳಿಸಿದ್ದಾರೆ. ಹೊಸದಾಗಿ ಏನನ್ನೂ ಹೇಳಲಿಲ್ಲ. ನಾವು ಪಶ್ಚಿಮ ಏಷ್ಯಾದಲ್ಲಿನ ಸಮಸ್ಯೆ, ಆ ವಿಚಾರದಲ್ಲಿ ಸರಕಾರದ ನಿಲುವು ತಿಳಿಯುವುದಕ್ಕಾಗಿ ಸಮಗ್ರ ಚರ್ಚೆಗೆ ನೋಟಿಸ್ ನೀಡಿದ್ದೇವೆ. ಅದರಂತೆ ಚರ್ಚೆ ನಡೆಯಬೇಕು. ಆಗ ನಾವೂ ನಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಬೇರೆ ಪಕ್ಷಗಳವರೂ ಅಭಿಪ್ರಾಯ ಮಂಡಿಸಬಹುದು. ಸಂಸತ್ತಿನಲ್ಲಿ ಚರ್ಚೆ ನಡೆಯುವುದು ಒಳ್ಳೆಯದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೇಳಿದರು.

ವೇಗದ ದೋಣಿ ಸ್ಪರ್ಧೆ ಸಾಧಕರೇ ಅವಘಡದಲ್ಲಿ ಕಣ್ಮರೆ

ದೋಣಿ ದುರಂತ: ಪತ್ತೆಯಾಗದ ಹರಿ, ಮಹೇಶ್

ದೆಹಲಿ: ಹೈಸ್ಪೀಡ್ ಬೋಟ್ ರೇಸಿಂಗ್ ಕ್ಷೇತ್ರದ ಚಾಂಪಿಯನ್ ಚಾಲಕ ಹರಿಸಿಂಗ್ ಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತ ನಾವಿಕ ಮಹೇಶ್ ರಾಮಚಂದ್ರನ್ ಮಾಲ್ಡೀವ್ಸ್‌ನ ಫೆಲಿಧೋ ದ್ವೀಪದಲ್ಲಿ ಗುರುವಾರ ರಾತ್ರಿ ನಡೆದ ಅಪಘಾತದಲ್ಲಿ ಕಾಣೆ ಯಾಗಿ, ಸೋಮವಾರ ಸಂಜೆ ವೇಳೆಗೆ 4 ದಿನಗಳೇ ಆಗಿವೆ. ಹಾಗಿದ್ದೂ ಈವ ರೆಗೂ ಅವರಿಬ್ಬರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ರಕ್ಷಣಾ ತಂಡಗಳು ಶೋಧ ಕಾರ್ಯ ಮುಂದುವರಿಸಿದ್ದರೂ ಇಬ್ಬರೂ ಸಾಧಕರ ಬಗ್ಗೆ ಸಣ್ಣ ಸುಳಿವು ಕೂಡಾ ಸಿಕ್ಕಿಲ್ಲ. ಇದೇ ದೋಣಿ ಅವಘಡದಲ್ಲಿ (ದೋಣಿ ತಳಕೆಳಗಾಗಿತ್ತು) ಗಾಯಗೊಂಡಿದ್ದ ರೇಮಾಂಡ್ಸ್ ಕಂಪನಿಯ ಅಧ್ಯಕ್ಷ ಗೌತಮ್ ಸಿಂಘಾನಿಯಾ ಸೇರಿದಂತೆ ದೋಣಿಯಲ್ಲಿ ಸಹಪ್ರ ಯಾಣಿಕರಾಗಿದ್ದ ಮೂವರು ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ರಷ್ಯಾ ಮಹಿಳೆ ಮತ್ತು ಒಬ್ಬ ಭಾರತೀಯ ಪ್ರಜೆಗೆ ಈಗಲೂ ಮಾಲ್ಡೀವ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಆದರೆ, ದೇಶದ ಮುಂಚೂಣಿ ನೆಲೆಯ ವೇಗದ ದೋಣಿ ರೇಸಿಂಗ್ ಚಾಲಕ, 'ಏಷ್ಯಾ ಜೋನ್ ರ‍್ಯಾಲಿ ಚಾಂಪಿಯನ್‌ಷಿಪ್'ನ ಪದಕ ಮತ್ತು 5 ಬಾರಿಯ ನ್ಯಾಷನಲ್ ಚಾಂಪಿಯನ್ ಹರಿಸಿಂಗ್(59) ಮತ್ತು ದೋಣಿ ಚಾಲನೆ ವಿಭಾಗದಲ್ಲಿ ಅರ್ಜುನ ಪ್ರಶಸ್ತಿ ಪುರಸ್ಕೃತ ನೇವಲ್ ಏವಿಯೇಟರ್, ಕಮಾಂಡರ್ ಮಹೇಶ್ ರಾಮಚಂದ್ರನ್ ಈವರೆಗೂ ಪತ್ತೆಯಾಗಿಲ್ಲ. ಮಹೇಶ್ ರಾಮಚಂದ್ರನ್ ಅವರು ಗೌತಮ್ ಸಿಂಘಾನಿಯ ಅವರ 'ಯಾಚ್'ನ(ಐಶಾರಾಮಿ ದೋಣಿ) ಕ್ಯಾಪ್ಟನ್ ಆಗಿದ್ದರು. ಅಪಘಾತಕ್ಕೀಡಾದ ದೋಣಿಯಲ್ಲಿ ಗೌತಮ್ ಸಿಂಘಾನಿಯ, ಬೆಂಗಳೂರಿನ ಮಾಣಿಕ ಭೀಮಸೇನ್ ಭಾರದ್ವಾಜ್ ಸೇರಿದಂತೆ ಐವರು ಭಾರತೀಯರು, ಬ್ರಿಟನ್ ಮತ್ತು ರಷ್ಯಾದ ಇಬ್ಬರು ಮಹಿಳೆಯರು ಇದ್ದರು. ಮೂವರು ಭಾರತೀಯರು, ಇಬ್ಬರು ಮಹಿಳೆಯರು ಗಾಯಗೊಂಡರೂ ಜೀವಂತ ಪಾರಾದರು.

400 ಕ್ಷಿಪಣಿ ಪ್ರಯೋಗಿಸಿದ ಇರಾನ್: ಇಸ್ರೇಲ್

ಟೆಲ್‌ಅವಿವ್: ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಯುದ್ಧ ಶುರುವಾದಾಗಿ ನಿಂದ(ಫೆ.28ರಿಂದ) ಈವರೆಗೂ ಇರಾನ್‌ನ ವಾಯುಪಡೆ ಇಸ್ರೇಲ್ ಮೇಲೆ 400ಕ್ಕೂ ಅಧಿಕ ಖಂಡಾಂತರ ಕ್ಷಿಪಣಿಗಳಿಂದ ದಾಳಿ ನಡೆಸಿದೆ. ಇದರಲ್ಲಿ ಶೇ.92ರಷ್ಟು ಕ್ಷಿಪಣಿಗಳನ್ನು ಆಕಾಶದಲ್ಲೇ ಸ್ಫೋಟಗೊಳ್ಳುವಂತೆ ಮಾಡಿ ವಿಫಲಗೊಳಿಸಲಾಗಿದೆ ಎಂದು ಇಸ್ರೇಲ್‌ನ ಡಿಫೆನ್ಸ್ ಫೋರ್ಸ್(ಐಡಿಎಫ್) ಭಾನುವಾರ ಅಂಕಿ ಅಂಶ ನೀಡಿದೆ. ಶನಿವಾರ ನೆಗೆವ್ ಮರುಭೂಮಿಯಲ್ಲಿನ ಶಿಮೋನ್ ಪೆರೆಸ್ ನೆಗೆವ್ ಪರಮಾಣ ಅಭಿವೃದ್ಧಿ ಕೇಂದ್ರವನ್ನು ಗುರಿಯಾಗಿಟ್ಟುಕೊಂಡು ಇರಾನ್ ನಡೆಸಿದ ಖಂಡಾಂತರ ಕ್ಷಿಪಣಿಗಳನ್ನು ಆಕಾಶದಲ್ಲೇ ನಾಶಪಡಿಸುವಲ್ಲಿ ಇಸ್ರೇಲ್‌ನ ವಾಯು ದಾಳಿ ನಿಗ್ರಹ ವ್ಯವಸ್ಥೆ ವಿಫಲವಾಗಿದೆ. ಅದು ಏಕೆ ವಿಫಲವಾಯಿತು ಎಂಬುದನ್ನು ಕಂಡುಕೊಳ್ಳಲು ಸದ್ಯ ತನಿಖೆ ನಡೆಸಲಾಗುತ್ತಿದೆ ಎಂದು ಇಸ್ರೇಲ್ ಸೇನೆಯ ವಕ್ತಾರ ಲೆ.ಕರ್ನಲ್ ನಡಾವ್ ಶೋಷನಿ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಇರಾನ್ ಬಳಿ ಕೆಲವೇ ನೂರು ಕಿಮೀ ವ್ಯಾಪ್ತಿಯ ಕ್ಷಿಪಣಿಗಳಿಂದ ಆರಂಭಿಸಿ 4000 ಕಿಮೀವರೆಗೂ ಸಾಗಿ ದಾಳಿ ಮಾಡಬಲ್ಲ ಖಂಡಾಂತರ ಕ್ಷಿಪಣಿಗಳ ಸಂಗ್ರಹವೇ ಇದೆ. ಇದರಲ್ಲಿಯೇ ಕೆಲವು ಖಂಡಾಂತರ ಕ್ಷಿಪಣಿಗಳನ್ನು ಇರಾನ್, ಇಸ್ರೇಲ್‌ನ ನೆಗೆವ್‌ನಲ್ಲಿನ ಅಣು ಸ್ಥಾವರದ ಮೇಲೆ ಭಾನುವಾರ ಪ್ರಯೋಗಿಸಿದೆ. ಇವು ಅಣು ಕೇಂದ್ರಕ್ಕೆ ಅಪ್ಪಳಿಸುವ ಬದಲಾಗಿ 20 ಕಿಮೀ ದೂರದ ದಿಮೋನಾ ಮತ್ತು ಅರಾದ್ ಪಟ್ಟಣಗಳ ಮೇಲೆ ಬಿದ್ದಿವೆ. ಎರಡೂ ಪಟ್ಟಣಗಳಲ್ಲಿ ಹಲವಾರು ಕಟ್ಟಡಗಳು ಹಾನಿಗೊಂಡು ನೂರಾರು ಮಂದಿ ಗಾಯಗೊಂಡಿದ್ದಾರೆ.

ಇರಾನ್ ಬಳಿ ಇರುವ ಖಂಡಾಂತರ ಕ್ಷಿಪಣಿಗಳ ಮಾದರಿ.

ಪುದುಚೇರಿಯ ಎಲ್ಲಾ ಕ್ಷೇತ್ರ ಸ್ಪರ್ಧೆ: ಟಿವಿಕೆ

ಪುದುಚೇರಿ: ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿನ ವಿಧಾನಸಭೆಗೆ ಏ.9ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಸದ್ಯ ನಡೆದಿದೆ. ಚಿತ್ರನಟ-ರಾಜಕಾರಣಿ ಜೋಸೆಫ್ ವಿಜಯ್ ಅವರ ನೇತೃತ್ವದ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷವು ತಮಿಳುನಾಡಿನಲ್ಲಿ ಮಾತ್ರವಲ್ಲದೇ ಪುದುಚೇರಿಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದೆ. ಪುದುಚೇರಿಯ 30 ವಿಧಾನಸಭಾ ಕ್ಷೇತ್ರಗಳಲ್ಲಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಮಂಗಳಂ ಮತ್ತು ಕದಿರ್‌ಕಾಮಮ್ (2) ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಲಾಗುವುದು. ಕೇಂದ್ರಾಡಳಿತ ಪ್ರದೇಶದ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧೆ ಮಾಡಲಾಗುವುದು ಎಂದು ಟಿವಿಕೆ ಅಧಿಕೃತ ಹೇಳಿಕೆಯಲ್ಲಿ ಸೋಮವಾರ ತಿಳಿಸಿದೆ. ಎಐಎಡಿಎಂಕೆ ಪಕ್ಷದ ಮಾಜಿ ಶಾಸಕರಾದ ಕೆ.ಎ.ಯು. ಆಸನ್ ಮತ್ತು ಎಲ್.ಪೆರಿಯಸ್ವಾಮಿ ಸದ್ಯ ಟಿವಿಕೆ ಪಕ್ಷಕ್ಕೆ ಸೇರಿದ್ದು, ಇಬ್ಬರಿಗೂ ಕಾರೈಕಲ್(ದಕ್ಷಿಣ) ಮತ್ತು ನೆಟ್ಟಪಕ್ಕಂ(ಮೀಸಲು) ಕ್ಷೇತ್ರದ ಟಿಕೆಟ್ ಘೋಷಣೆಯಾಗಿದೆ.

ತಿದ್ದುಪಡಿ: ಬಜೆಟ್ ಅಧಿವೇಶನದಲ್ಲೇ ಅಂಗೀಕಾರಕ್ಕೆ ಯತ್ನ

ಮಹಿಳಾ ಮೀಸಲು ಶೀಘ್ರ ಜಾರಿಗೆ ಯತ್ನ

ದೆಹಲಿ: ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಕೇಂದ್ರ ಸರಕಾರ ಮಹಿಳಾ ಮೀಸಲು ಕಾಯಿದೆಯನ್ನು ಜಾರಿಗೆ ತರಲು ಸಿದ್ಧತೆ ನಡೆಸುತ್ತಿದೆ. 2011ರ ಜನಗಣತಿ ಆಧರಿಸಿ ಹೊಸ ಶಾಸನ ಜಾರಿಗೆ ತರಲು ಯೋಜಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರಸ್ತಾವಿತ ಚೌಕಟ್ಟಿನಲ್ಲಿ ಒಟ್ಟು ಲೋಕಸಭಾ ಸ್ಥಾನಗಳ ಸಂಖ್ಯೆ 543ರಿಂದ 816ಕ್ಕೆ ಏರಿಕೆ ಆಗಲಿದೆ. ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುತ್ತವೆ. ಹೊಸದಾಗಿ ನಡೆಯಲಿರುವ ಜನಗಣತಿ ಮತ್ತು ಕ್ಷೇತ್ರಗಳ ಸೀಮೆಯ ನಿರ್ಣಯವಾದ ನಂತರವಷ್ಟೇ ಈ ಮಹಿಳಾ ಮೀಸಲು ಕಾಯಿದೆ ಜಾರಿಗೆ ಬರಲಿದೆ ಎಂಬುದು ಮತ್ತೊಂದು ಮೂಲದ ಮಾಹಿತಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ಮಹಿಳಾ ಮೀಸಲು ಕಾಯಿದೆ ಜಾರಿ ವಿಚಾರದಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳಲು ಉತ್ಸುಕವಾಗಿದೆ.

ಕ್ಷೇತ್ರಗಳ ಪುನರ್‌ವಿಂಗಡಣೆಗೂ ಮುನ್ನವೇ ಮೀಸಲು ಕಾಯಿದೆಯನ್ನು ಜಾರಿಗೆ ತರಬೇಕೆಂದರೆ ಮತ್ತೊಂದು ಸಾಂವಿಧಾನಿಕ ತಿದ್ದುಪಡಿ ಅಗತ್ಯವಿದೆ. ಅದಕ್ಕಾಗಿಯೇ ಕಾಯಿದೆಗೆ ತಿದ್ದುಪಡಿ ಮಾಡಿ ಲೋಕಸಭೆಯ ಈಗಿನ ಬಜೆಟ್ ಅಧಿವೇಶನದಲ್ಲಿಯೇ ತಿದ್ದುಪಡಿ ವಿಧೇಯಕವನ್ನು ಮಂಡಿಸಿ ಸದನದ ಅಂಗೀಕಾರ ಪಡೆಯುವ ಉದ್ದೇಶವಿದೆ ಎಂದು ಮೂಲಗಳು ತಿಳಿಸಿವೆ.

ಪ್ರತಿಪಕ್ಷಗಳಿಗೆ ನೀಡಲಾಗಿರುವ ಪ್ರಾಥಮಿಕ ಮಾಹಿತಿಯು ಸಾಂವಿಧಾನಿಕ ತಿದ್ದುಪಡಿಗಳನ್ನು ಅಂಗೀಕರಿಸುವ ಪ್ರಕ್ರಿಯೆಯು ಸುಗಮವಾಗಿ ನಡೆದು, ಹೆಚ್ಚಿನ ಬೆಂಬಲವನ್ನು ಪಡೆಯುವ ಪ್ರಯತ್ನವಾಗಿದೆ ಎನ್ನಲಾಗಿದೆ.

2023ರಲ್ಲಿಯೇ ಸಂಸತ್ತಿನಿಂದ ಅಂಗೀಕಾರಗೊಂಡಿರುವ ಮಹಿಳಾ ಮೀಸಲು ಕಾಯಿದೆಯು ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲು ಸೌಲಭ್ಯವನ್ನು ಒದಗಿಸಲಿದೆ. ಆದರೆ ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆ ಬಾಕಿ ಇರುವುದರಿಂದ ಈವರೆಗೂ ಜಾರಿಗೊಂಡಿಲ್ಲ.

10 ಕೆಜಿ ಎಲ್‌ಪಿಜಿ ಚಿಂತನೆ

ದೆಹಲಿ: ಇರಾನ್‌ನಲ್ಲಿ 24 ದಿನಗಳಿಂದ ನಡೆಯುತ್ತಿರುವ ಯುದ್ಧ ಹಾಗೂ ಹಾರ್ಮೋಜ್ ಜಲಸಂಧಿಯಲ್ಲಿ ತೈಲ-ಅನಿಲ ನೌಕೆಗಳು ಮುಂದೆ ಸಾಗದಂತಾಗಿರುವುದರಿಂದ ಭಾರತ ಸೇರಿದಂತೆ ಹಲವಾರು ದೇಶಗಳಲ್ಲಿ ಇಂಧನ ಸಮಸ್ಯೆ ತಲೆದೋರಿದೆ.

10 kg cylinder

ಭಾರತದಲ್ಲಿ ಪೆಟ್ರೋಲ್, ಡೀಸೆಲ್‌ಗೆ ಸದ್ಯ ಕೊರತೆ ಇಲ್ಲವಾದರೂ ವಾಣಿಜ್ಯ ಮತ್ತು ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜಿನಲ್ಲಿನ ಕೊರತೆಯಾಗಿದೆ. ಎಲ್‌ಪಿಜಿ ಸಾಗಣೆಯ ಕೆಲವು ಹಡಗುಗಳು ರಷ್ಯಾದಿಂದ, ಅಮೆರಿಕದಿಂದ, ಗಲ್ಫ್ ದೇಶಗಳಿಂದ ಕಳೆದ ವಾರದಲ್ಲಿ ಭಾರತದ ಬಂದರುಗಳಿಗೆ ಬಂದು ಮುಟ್ಟಿದ್ದರೂ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಸಹಜ ಸ್ಥಿತಿಗೆ ಇನ್ನೂ ಬಂದಿಲ್ಲ. ಹಾಗಾಗಿ, ಸಿಲಿಂಡರ್‌ಗಳ ಲಭ್ಯತೆ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು 14.2 ಕೆಜಿಗೆ ಬದಲಾಗಿ 10 ಕೆಜಿಗೆ ಬದಲಿಸಲು ಕೇಂದ್ರ ಸರಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ.

14.2 ಕೆಜಿಯ ಎರಡು ಎಲ್‌ಪಿಜಿ ಸಿಲಿಂಡರ್‌ಗಳ ಜಾಗದಲ್ಲಿ 10 ಕೆಜಿಯ 3 ಸಿಲಿಂಡರ್‌ಗಳು ಬರುತ್ತವೆ. ಆಗ 2 ಕುಟುಂಬಗಳ ಬದಲು 3 ಕುಟುಂಬಗಳಿಗೆ ಸಿಲಿಂಡರ್ ವಿತರಿಸಿದಂತಾಗುತ್ತದೆ ಎಂಬುದು ಪೆಟ್ರೋಲಿಯಂ ಸಚಿವಾಲಯದ ಆಲೋಚನೆಯಾಗಿದೆ. ಭರ್ತಿಯಾದ ಅಡುಗೆ ಅನಿಲ ಪ್ರಮಾಣಕ್ಕೆ ತಕ್ಕಂತೆ ಸಿಲಿಂಡರ್ ದರವೂ ಬದಲಾಗುತ್ತದೆ ಎನ್ನಲಾಗಿದೆ.

ಕ್ಷಿಪಣಿ ಚೂರು ತಾಗಿ ಎನ್ನಾರೈಗೆ ಗಾಯ

ಅಬುಧಾಬಿ: ಇರಾನ್‌ನ ಹಾರಿಸಿದ್ದ ಖಂಡಾಂತರ ಕ್ಷಿಪಣಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ)ನ ಕ್ಷಿಪಣಿಗಳ ನಿಗ್ರಹ ವ್ಯವಸ್ಥೆಯು ಸ್ವಯಂಚಾಲಿತವಾಗಿ ಹೊಡೆದುರುಳಿಸಿದ್ದು, ಕ್ಷಿಪಣಿಯ ಅವಶೇಷಗಳು ಚೂರಾಗಿ ಕೆಳಕ್ಕೆ ಬಿದ್ದಾಗ ಭಾರತೀಯ ಪ್ರಜೆಗೆ ತಗುಲಿದ್ದು, ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಅಬುಧಾಬಿಯ ಅಲ್ ಷಾ ಮೇಖ್ ಪ್ರದೇಶದ ಮೇಲೆ ಇರಾನ್‌ನ ಖಂಡಾಂತರ ಕ್ಷಿಪಣಿ ಭಾನುವಾರ ರಾತ್ರಿ ಹಾರಿಬಂದಿದ್ದು, ಯುಎಇಯ ಕ್ಷಿಪಣಿ ನಿರೋಧಕ ವ್ಯವಸ್ಥೆಯು ಕ್ಷಿಪಣಿಯನ್ನು ಆಕಾಶದಲ್ಲೇ ಛಿದ್ರಗೊಳಿಸಿದೆ. ಕ್ಷಿಪಣಿ ಅವಶೇಷಗಳು ನೆಲಕ್ಕೆ ಬಿದ್ದ ಪರಿಣಾಮ ಓರ್ವ ಭಾರತೀಯರಿಗೆ ಗಾಯವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಬುದಾಬಿಯಲ್ಲಿ ಅಳವಡಿಸಿಕೊಂಡಿರುವ ವಾಯು ದಾಳಿ ನಿಗ್ರಹ ವ್ಯವಸ್ಥೆಯು ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಯಶಸ್ವಿಯಾಗಿ ತಡೆದ ನಂತರ ಅಲ್ ಷಾ ಮೇಖ್ ಪ್ರದೇಶದಲ್ಲಿ ಕ್ಷಿಪಣಿಯ ಅವಶೇಷಗಳು ಬಿದ್ದು ಒಟ್ಟು 161 ಮಂದಿ ಗಾಯಗೊಂಡಿದ್ದಾರೆ. ಭಾರತೀಯ ಪ್ರಜೆಗೆ ಸಣ್ಣಪುಟ್ಟ ಗಾಯವಾಗಿದ್ದು, ಅವರ ಗುರುತು ಇನ್ನೂ ಪತ್ತೆಯಾಗಿಲ್ಲ.

ಯುಎಇ, ಈಜಿಪ್ಟ್, ಸುಡಾನ್, ಇಥಿಯೋಪಿಯ, ಫಿಲಿಪ್ಪೈನ್ಸ್, ಪಾಕಿಸ್ತಾನ, ಇರಾನ್, ಭಾರತ, ಬಾಂಗ್ಲಾದೇಶ, ಶ್ರೀಲಂಕಾ, ಅಜರ್‌ಬೈಜಾನ್, ಯೆಮೆನ್, ಉಗಾಂಡ, ಎರಿಟ್ರಿಯ, ಲೆಬನಾನ್, ಅಫ್ಘಾನಿಸ್ತಾನ, ಬಹ್ರೇನ್, ಕೊಮೊರೊಸ್, ಟರ್ಕಿ, ಇರಾಕ್, ನೇಪಾಳ, ನೈಜೀರಿಯ, ಒಮಾನ್, ಜೋರ್ಡಾನ್, ಪ್ಯಾಲೆಸ್ತೀನ್, ಘಾನಾ, ಇಂಡೋನೇಷ್ಯಾ, ಸ್ವೀಡನ್ ಮತ್ತು ಟುನೀಶಿಯ ಪ್ರಜೆಗಳು ಗಾಯಗೊಂಡವರಲ್ಲಿ ಸೇರಿದ್ದಾರೆ ಎಂದು ಅಬುಧಾಬಿ ಮಾಧ್ಯಮ ಕಚೇರಿ ತಿಳಿಸಿದೆ.

ಮೋದಿ ಜತೆಗಿನ ಮೈತ್ರಿ 2014ರಲ್ಲೇ ಆರಂಭ | ಕಾಂಗ್ರೆಸ್ ಪ್ರೀತಿ, ಮೋದಿ ಜತೆ ಮದುವೆ ಎಂದು ಟೀಕಿಸಿದ್ದ ಖರ್ಗೆಗೆ ಟಾಂಗ್

ಕಾಂಗ್ರೆಸ್ ಎಸಗಿದ ದ್ರೋಹದ ವಿವರ ಕೊಟ್ಟ ಗೌಡ್ರು

ದೆಹಲಿ/ಬೆಂಗಳೂರು: ನಮ್ಮ ಜತೆ ಪ್ರೀತಿ ಹೊಂದಿದ್ದರು, ಮೋದಿ ಅವರ ಜತೆ ಮದುವೆ ಯಾದರು ಎಂದು ತಮ್ಮ ಬಗ್ಗೆ ಟೀಕೆ ಮಾಡಿದ್ದ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಜಿ ಪ್ರಧಾನಿಗಳಾದ ಎಚ್. ಡಿ.ದೇವೇಗೌಡರು ರಾಜ್ಯಸಭೆಯಲ್ಲಿಯೇ ಸೋಮವಾರ ತಿರುಗೇಟು ನೀಡಿದರು.

ಈ ಬಗ್ಗೆ ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದ ದೇವೇಗೌಡರು, ನಾನು ಸದನದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಖರ್ಗೆ ಅವರು ಈ ವಿಷಯ ಪ್ರಸ್ತಾಪಿಸಿದ್ದಾರೆ. ಅವರು ನಾನೇನೂ ಅವರಿಗೆ, ಅವರ ಪಕ್ಷಕ್ಕೆ ದ್ರೋಹ ಬಗೆದಿದ್ದೇನೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ, ನಿಜವಾಗಿಯೂ ಕಾಂಗ್ರೆಸ್ ಪಕ್ಷದಿಂದ ದ್ರೋಹ ಆಗಿರುವುದು ನಮಗೆ, ನಮ್ಮ ಪಕ್ಷಕ್ಕೆ ಎಂದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷವು ನಮ್ಮ ಪಕ್ಷಕ್ಕೆ ಒಂದಲ್ಲ, ಎರಡಲ್ಲ.. ಅನೇಕ ಬಾರಿ ದ್ರೋಹ ಮಾಡಿದೆ. ಅದರ ಬಗ್ಗೆ ನಾನು ಸಾಕ್ಷಿ ಸಹಿತವಾಗಿ ಮಾತನಾಡಬಲ್ಲೆ. ಅದೆಲ್ಲವನ್ನು ಮರೆಮಾಚಲು ಖರ್ಗೆ ಅವರು ನನ್ನ ವಿಷಯ ಎಳೆದು ತಂದಿದ್ದಾರೆ. ಅದಕ್ಕೆ ನಾನು ಉತ್ತರ ನೀಡಬೇಕಿದೆ ಎಂದು ದೇವೇಗೌಡ ಹೇಳಿದರು.

ಈ ಸಂದರ್ಭದಲ್ಲಿ ತಮ್ಮ ಕಾಲದ ಕರ್ನಾಟಕ ರಾಜ್ಯದ ರಾಜಕಾರಣವನ್ನು ಮೆಲುಕು ಹಾಕಿದ ಮಾಜಿ ಪ್ರಧಾನಿ ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ ಅವರಿಗೆ ಏನಾಯಿತು ಎಂಬುದು ಮಲ್ಲಿಕಾರ್ಜುನ ಖರ್ಗೆ ಅವರಿಗೂ ಗೊತ್ತಿದೆ. ಅವರು ಹೇಗೆ ಅಧಿಕಾರ ಕಳೆದು ಕೊಂಡರು ಎಂಬುದನ್ನು ಖರ್ಗೆ ಅವರು ಹೇಳಬೇಕಾಗುತ್ತದೆ. ಅವರೆಲ್ಲರೂ ಅಧಿಕಾರ ಕಳೆದುಕೊಂಡಿದ್ದಕ್ಕೆ ನಾವು ಸಾಕ್ಷಿಗಳಾಗಿದ್ದೆವು. ಮಲ್ಲಿಕಾರ್ಜುನ ಖರ್ಗೆ ಒಳ್ಳೆಯ ವ್ಯಕ್ತಿ. ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ನೋಡಬೇಕೆಂದು ನಾವೆಲ್ಲರೂ ಆಶಿಸಿದ್ದೆವು. ಆದರೆ, ಅವರ ಸ್ವಂತ ಪಕ್ಷವೇ ಅವರನ್ನು ಸಿಎಂ ಆಗಲು ಬಿಡಲಿಲ್ಲ ಎಂದರು.

2018ರಲ್ಲಿ ಕಾಂಗ್ರೆಸ್ ಪಕ್ಷದ ಜತೆ ನಮ್ಮ ಪಕ್ಷ ಮೈತ್ರಿ ಹೊಂದಿದ್ದ ಕಾರಣಕ್ಕೆ ಎಚ್.ಡಿ. ಕುಮಾರ ಸ್ವಾಮಿ ಅವರು ಕರ್ನಾಟಕದ ಸಿಎಂ ಆಗದಂತೆ ತಡೆಯಿತು. ಆಗ ಮತ್ತೆ ಮನೆ ಬಾಗಿಲಿಗೆ ಬಂದು ಮೈತ್ರಿ ಹಸ್ತ ಚಾಚಿದ ಕಾಂಗ್ರೆಸ್ ಕುಮಾರಸ್ವಾಮಿ ಅವರನ್ನು ಸಿಎಂ ಮಾಡುವಂತೆ ಒತ್ತಡ ಹೇರಿತು. ಮತ್ತೆ ಒಂದೇ ವರ್ಷದಲ್ಲಿ ಕಾಂಗ್ರೆಸ್ ನಮಗೆ ದ್ರೋಹ ಬಗೆಯಿತು. ಈ ಎಲ್ಲಾ ವಿವರಗಳು ಖರ್ಗೆ ಅವರಿಗೆ ಗೊತ್ತಿವೆ ಎಂದರು.

1962ರಲ್ಲಿ ನಾನು ಕರ್ನಾಟಕ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಉದ್ದೇಶಿಸಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ಕೊಡುವುದಾಗಿ ಹೇಳಿತ್ತು. ನೀಲಂ ಸಂಜೀವರೆಡ್ಡಿ ಅವತ್ತಿನ ಎಐಸಿಸಿ ಅಧ್ಯಕ್ಷರಾಗಿದ್ದರು. ಆದರೆ, ನನಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತು. ನನ್ನ ರಾಜಕೀಯದ ಅಂತ್ಯಕಾಲದಲ್ಲಿ ನಾನಿದ್ದೇನೆ. ಈಗಲೂ ನಾನು ರಾಜ್ಯಸಭೆ ಸದಸ್ಯನಾಗಿ ಇಲ್ಲಿ ಕೂತಿದ್ದೇನೆ. ಇನ್ನೊಂದು ತಿಂಗಳಲ್ಲಿ ಈ ಸದಸ್ಯತ್ವದ ಅವಧಿ ಮುಗಿಯುತ್ತದೆ. ಹೀಗಾಗಿ ನಾನು ಖರ್ಗೆ ಅವರು ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಬೇಕಿದೆ ಎಂದರು.

ಮೋದಿಯಿಂದ ಪ್ರಭಾವಿತನಾದೆ

ನಿಜ ಹೇಳಬೇಕು ಎಂದರೆ, ನನ್ನ ಮತ್ತು ನರೇಂದ್ರ ಮೋದಿ ಅವರ ನಡುವಿನ ಮೈತ್ರಿ ಕಳೆದ ಲೋಕಸಭೆ ಚುನಾವಣೆಯಲ್ಲಿ ಶುರುವಾಗಿದ್ದಲ್ಲ. 2014ರಲ್ಲಿಯೇ ಆರಂಭವಾಯಿತು. ನಾನು ಅವತ್ತಿನ ಲೋಕಸಭೆ ಚುನಾವಣೆಯಲ್ಲಿ ಮೋದಿ ಅವರ ವಿರುದ್ಧ ಪ್ರಚಾರ ನಡೆಸಿದ್ದೆ. ಅವರ ಬಗ್ಗೆ ಅತ್ಯಂತ ಕಟುವಾಗಿ ಮಾತನಾಡಿದ್ದೆ. ಅವರು ಅಧಿಕಾರಕ್ಕೆ ಬಂದರೆ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಘೋಷಣೆ ಮಾಡಿದ್ದೆ. ಬಳಿಕ ಅವರು ಗೆದ್ದ ನಂತರ ನಾನು ನಿಜವಾಗಿಯೂ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ಕೊಡಲು ಮುಂದಾದೆ. ಆದರೆ, ಮೋದಿ ಅವರು ಹಾಗೆ ಮಾಡಬೇಡಿ ಎಂದು ತಡೆದರು. ನಾನು ಅವತ್ತಿನ ಅವರ ನಡವಳಿಕೆಯಿಂದ ಪ್ರಭಾವಿತನಾದೆ. ಆ ಘಟನೆ ನಡೆದ ನಂತರ ನಾನು ಅವರ ಮೈತ್ರಿಯಲ್ಲಿ ಇದ್ದೇನೆ. ರಾಷ್ಟ್ರಕ್ಕೆ ನರೇಂದ್ರ ಮೋದಿ ಅವರು ಸದೃಢ ನಾಯಕತ್ವ ನೀಡಿದ್ದಾರೆ. ಜನರು ಕೂಡ ಅವರ ಮೇಲೆ ಅಪರಿಮಿತ ವಿಶ್ವಾಸ ಇರಿಸಿ ಸತತವಾಗಿ ಆಯ್ಕೆ ಮಾಡುತ್ತಾ ಬರುತ್ತಿದ್ದಾರೆ. ಇದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಕಾಲಮಿತಿಯಲ್ಲಿ ಕಾಮಗಾರಿಯಾಗದಿದ್ದರೆ ದಂಡ

ಬೆಂಗಳೂರು: ಜಕ್ಕೂರು ರೈಲ್ವೆ ಸೇತುವೆ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಗುತ್ತಿಗೆದಾರರಿಗೆ ದಂಡ ವಿಧಿಸಿ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೂಚನೆ ನೀಡಿದರು.

ಜಕ್ಕೂರು ರೈಲ್ವೆ ಸೇತುವೆ ಕಾಮಗಾರಿಯನ್ನು ಪರಿಶೀಲಿಸಿದ ಬಳಿಕ ಮಾತನಾಡಿ, ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಕಾಮಗಾರಿಯ ಪ್ರಗತಿ, ಬಾಕಿ ಇರುವ ಕೆಲಸಗಳು ಹಾಗೂ ಎದುರಾಗುತ್ತಿರುವ ತಾಂತ್ರಿಕ ಅಡಚಣೆಗಳ ಕುರಿತು ಸ್ಥಳದಲ್ಲೇ ಪರಿಶೀಲನೆ ನಡೆಸಿ ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಯಿತು.

ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಮುಖ್ಯ ಅಭಿಯಂತರ ರಾಘವೇಂದ್ರ ಪ್ರಸಾದ್, ಅಧೀಕ್ಷಕ ಅಭಿಯಂತರ ಪ್ರಕಾಶ್, ಕಾರ್ಯಪಾಲಕ ಅಭಿಯಂತರ ನಾಗಪ್ಪ ಕಮತಿ ಮತ್ತಿತರರು ಇದ್ದರು.

ಫ್ರೀಡಂಪಾರ್ಕ್‌ನಲ್ಲಿ 25ರಂದು ಪ್ರತಿಭಟನೆ

ನ್ಯಾ.ನಾಗಮೋಹನ್ ದಾಸ್ ವರದಿ ಸಂಪೂರ್ಣ ಅವೈಜ್ಞಾನಿಕ

ಸುದ್ದಿಗೋಷ್ಠಿಯಲ್ಲಿ ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಮಾತನಾಡಿದರು.

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ.ನಾಗಮೋಹನ್ ದಾಸ್ ಆಯೋಗವು ನೀಡಿರುವ ವರದಿಯು ಅವೈಜ್ಞಾನಿಕ, ದೋಷಪೂರಿತ ಹಾಗೂ ಪಕ್ಷಪಾತದಿಂದ ಕೂಡಿರುವುದರಿಂದ ವರದಿಯನ್ನು ತಿರಸ್ಕರಿಸಿ ಮರು ಸಮೀಕ್ಷೆ ನಡೆಸಲು ಒತ್ತಾಯಿಸಿ ಮಾ.25 ರಂದು ನಗರದ ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಒಳಮೀಸಲಾತಿಯು 101 ಜಾತಿಗಳಿಗೆ ಸಮಾನವಾಗಿ ಹಂಚಿಕೆಯಾಗುವ ದೃಷ್ಟಿಯಿಂದ ಪ್ರಮಾಣ ಹೆಚ್ಚಾಗಬೇಕಾದ್ದುದ್ದು, ಅನಿವಾರ್ಯವಾಗಿರುತ್ತದೆ. ಆದರೆ, 101 ಜಾತಿಗಳ ಪೈಕಿ 1 ಜಾತಿಯ ಒತ್ತಡಕ್ಕೆ ಸರಕಾರ ಮಣಿದು ಶೇ.15+3ರ ಮೀಸಲಾತಿಯಲ್ಲಿ ಒಳ ಮೀಸಲಾತಿ ಜಾರಿಗೊಳಿಸಲು ಮುಂದಾದರೆ, ಬಲಗೈ ಸಮುದಾಯಗಳ ಪ್ರತಿರೋಧವನ್ನು ರಾಜ್ಯ ಸರಕಾರವು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್, ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳಾದ ಪುರುಷೋತ್ತಮ್, ನಿವೃತ್ತ ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಟಿ.ಆರ್. ಶಿವರಾಮು ಮತ್ತಿತರರು ಇದ್ದರು.

ನಗರದ ಐತಿಹಾಸಿಕ ಕರಗ ಉತ್ಸವಕ್ಕೆ ಇಂದು ಚಾಲನೆ

ಬೆಂಗಳೂರು: ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವದ ಸಂಕೇತವಾಗಿರುವ ಬೆಂಗಳೂರು ಕರಗ ಶಕ್ತ್ಯ ಉತ್ಸವಕ್ಕೆ ಇಂದು ಚಾಲನೆ ದೊರೆಯಲಿದ್ದು, ಈ ಬಾರಿ ಭಕ್ತರ ಭಕ್ತಿ-ಭಾವನೆಗೆ ಸಾಕ್ಷಿಯಾಗಲು ಸಜ್ಜಾಗಿದೆ.

ಮಂಗಳವಾರ ಸಂಜೆ ಧ್ವಜಾರೋಹಣದೊಂದಿಗೆ ಉತ್ಸವಕ್ಕೆ ಅಧಿಕೃತ ಚಾಲನೆ ದೊರೆಯುವ ಮೂಲಕ ಈ ಮಹೋತ್ಸವವು ಒಟ್ಟು 11 ದಿನಗಳ ಕಾಲ ನಡೆಯಲಿದ್ದು, ಏಪ್ರಿಲ್ 1ರಂದು ಮಧ್ಯರಾತ್ರಿ ನಡೆಯುವ ಕರಗ ಉತ್ಸವವೇ ಪ್ರಮುಖ ಆಕರ್ಷಣೆಯಾಗಲಿದೆ. ಆ ದಿನ ದ್ರೌಪದಿ ದೇವಿಯ ಹೂವಿನ ಕರಗವು ನಾಡಪ್ರಭು ಕೆಂಪೇಗೌಡ ನಿರ್ಮಿಸಿದ ಪೇಟೆಗಳ ಮೂಲಕ ಸಂಚರಿಸಿ ಲಕ್ಷಾಂತರ ಭಕ್ತರಿಗೆ ದರ್ಶನ ನೀಡಲಿದೆ. ಈ ಬಾರಿಯೂ ಕರಗವನ್ನು ಹೊರುವ ಗೌರವವನ್ನು ಎ.ಜ್ಞಾನೇಂದ್ರ ಸ್ವಾಮಿ ಅವರಿಗೆ ಸಿಕ್ಕಿದ್ದು, ಇದು ಅವರ 16ನೇ ಬಾರಿ ಕರಗ ಹೊರುವ ವಿಶೇಷ ಸಂದರ್ಭವಾಗಿದೆ.

ಕಳೆದ ವರ್ಷ ಅವರು 15ನೇ ಬಾರಿ ಕರಗ ಹೊತ್ತಿದ್ದರು. ಮಾರ್ಚ್ 30ರಂದು ಹಸಿ ಕರಗ ನಡೆಯಲಿದ್ದು, ಇದಕ್ಕೂ ಭಕ್ತರಿಂದ ಅಪಾರ ಸ್ಪಂದನೆ ನಿರೀಕ್ಷಿಸಲಾಗಿದೆ. ತಿಗಳರಪೇಟೆಯ ಶ್ರೀಧರ್ಮರಾಯ ಸ್ವಾಮಿ ದೇವಾಲಯ ಈ ಉತ್ಸವದ ಕೇಂದ್ರಬಿಂದುವಾಗಿದ್ದು, ಸಕಲ ಸಿದ್ಧತೆಗಳು ಜೋರಾಗಿದೆ. ಈ ಬಾರಿ ಮೈಸೂರು ದಸರಾ ಮಾದರಿಯಲ್ಲಿ ಭವ್ಯ ವಿದ್ಯುತ್ ದೀಪಾಲಂಕಾರ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಹಡ್ಸನ್ ಸರ್ಕಲ್, ಮೈಸೂರು ಬ್ಯಾಂಕ್ ಸರ್ಕಲ್ ಸೇರಿದಂತೆ ಪೇಟೆಗಳಾದ್ಯಂತ ಬೆಳಕಿನ ಕಂಗೊಳಿಸಲಿದೆ. ಕರಗ ಹಾದಿಯುದ್ದಕ್ಕೂ ಸ್ವಚ್ಛತೆ, ಅಗಲೀಕರಣ, ಸಿಸಿಟಿವಿ ಕ್ಯಾಮೆರಾಗಳು ಹಾಗೂ ಕಟ್ಟು ನಿಟ್ಟಿನ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ.

ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತರು ಭಾಗವಹಿಸುವ ನಿರೀಕ್ಷೆಯಿದ್ದು, ಎಲ್ಲಾ ಧರ್ಮದವರಿಗೂ ವ್ಯಾಪಾರ ಅವಕಾಶ ಕಲ್ಪಿಸುವುದಾಗಿ ಅಧಿಕಾರಿಗಳು ತಿಳಿಸಿದ್ದು, ಭಕ್ತಿ, ಪರಂಪರೆ ಮತ್ತು ವೈಭವದ ಸಂಗಮವಾಗಿರುವ ಬೆಂಗಳೂರು ಕರಗ ಶಕ್ತ್ಯ ಕಣ್ತುಂಬಿಕೊಳ್ಳಲು ನಗರದ ಜನ ಕಾತರದಿಂದ ಕಾಯುತ್ತಿದ್ದಾರೆ.

ಮೆಟ್ರೋ ಗುಲಾಬಿ ಮಾರ್ಗ ಮೇನಲ್ಲಿ ಕಾರ್ಯಾಚರಣೆ?

ಬೆಂಗಳೂರು: ನಮ್ಮ ಮೆಟ್ರೋದ ಗುಲಾಬಿ ಮಾರ್ಗವು ಮೇ ತಿಂಗಳಲ್ಲಿ ಭಾಗಶಃ ಉದ್ಘಾಟನೆಗೊಳ್ಳಲಿದ್ದು, 7.53 ಕಿ.ಮೀ ಎತ್ತರದ ಕಾರಿಡಾರ್ ಕಾಳೇನ ಅಗ್ರಹಾರದಿಂದ ತಾವರೆಕೆರೆ ವರೆಗೆ ಇರುತ್ತದೆ.

ಏಪ್ರಿಲ್ 5ರ ವರೆಗೆ 16 ದಿನಗಳ ಕಾಲ ಆರ್‌ಡಿಎಸ್‌ಒ ಅಧಿಕಾರಿಗಳ ನೇತೃತ್ವದಲ್ಲಿ ವಿವಿಧ ಪರಿಶೀಲನಾ ಕಾರ್ಯಗಳು ನಡೆಯಲಿದ್ದು, ರೈಲಿನ ಸ್ಪೀಡ್ ಮತ್ತು ಲೋಡ್ ಟೆಸ್ಟ್ ಜತೆಗೆ ಟ್ರ್ಯಾಕ್ ಟೆಸ್ಟ್, ಸ್ಟೇಷನ್‌ಗಳ ತಪಾಸಣೆ, ಪವರ್ ಚೆಕ್ಕಿಂಗ್ ಸೇರಿ ಹಲವು ಬಗೆಯ ಪರೀಕ್ಷೆಗಳನ್ನು ಅಧಿಕಾರಿಗಳು ನಡೆಸಲಿದ್ದಾರೆ.

ಈ ಪರೀಕ್ಷೆಯು ಬ್ರೇಕಿಂಗ್ ವ್ಯವಸ್ಥೆಗಳು, ಸಿಗ್ನಲಿಂಗ್, ವೇಗ ಪರೀಕ್ಷೆ, ತೂಕದ ಪರೀಕ್ಷೆಗಳು ಮತ್ತು ಇತರ ಸುರಕ್ಷತಾ ನಿಯತಾಂಕಗಳಂತಹ ಹಲವಾರು ತಾಂತ್ರಿಕ ಮೌಲ್ಯಮಾಪನಗಳನ್ನು ಒಳಗೊಂಡಿರುತ್ತದೆ. ಅಲ್ಲದೆ, ಇದು ಸಿವಿಲ್ ಕಾಮಗಾರಿಗಳ ಕಾರ್ಯ ಕ್ಷಮತೆಯನ್ನು ಪರೀಕ್ಷಿಸುವತ್ತ ಗಮನಹರಿಸುತ್ತದೆ ಎಂದು ಮೆಟ್ರೋ ಅಧಿಕಾರಿಗಳು ಹೇಳಿದ್ದಾರೆ.

ಈ ಪರೀಕ್ಷೆಗಳು ಪೂರ್ಣಗೊಂಡ ನಂತರ, ಫಲಿತಾಂಶಗಳನ್ನು ರೈಲ್ವೆ ಮಂಡಳಿಯ ತಾಂತ್ರಿಕ ಅನುಮೋದನೆ ಪಡೆಯಲು ಸಲ್ಲಿಸಲಾಗುತ್ತದೆ. ತಾಂತ್ರಿಕ ಅನುಮೋದನೆ ಪಡೆದ ನಂತರ, ಅಂತಿಮ ಪರಿಶೀಲನೆ ನಡೆಸಲು ಮೆಟ್ರೋ ರೈಲ್ವೆ ಸುರಕ್ಷತಾ ಆಯುಕ್ತರನ್ನು ಆಹ್ವಾನಿಸಲಾಗುತ್ತದೆ. ಸಿಎಂಆರ್‌ಎಸ್ ಅನುಮೋದನೆಯ ನಂತರವೇ ಪ್ರಯಾಣಿಕರ ಕಾರ್ಯಾಚರಣೆಗಳಿಗೆ ಮಾರ್ಗವನ್ನು ತೆರವುಗೊಳಿಸಲಾಗುತ್ತದೆ ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ.

ACRE MAKING ASSETS WORK

ಅಸೆಟ್ಸ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿಮಿಟೆಡ್

ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ - 66, ಜಿ - ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051. ದೂರವಾಣಿ : 022 68643101

ನೋಂದಾಯಿತ ಕಚೇರಿ: 14 ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ - 110019

ಇಮೇಲ್ : acre.arc@acreindia.in I ವೆಬ್‌ಸೈಟ್: www.acreindia.in I CIN : U65993DL2002PLC115769

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. V028OXXIII (ಹಿಂದೆ ಡಿಎಚ್‌ಎಫ್‌ಎಲ್ ನ ಎಲ್.ಎ.ಎನ್. 00000911 ಮತ್ತು ಐಹೆಚ್‌ಎಫ್‌ಎಲ್ ನ ಎಲ್.ಎ.ಎನ್. S800003861 / HDHLBAN00487471 (ಈಗ ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ ಎಂದು ಕರೆಯಲಾಗುತ್ತದೆ)) 1. ವಿಶಾಲ್ ಪರೀಕ್ ಆರ್ 2. ಸುನಿತಾ ಎಸ್ ಅಲಿಯಾಸ್ ಸುನಿತಾ ಪರೀಕ್	ಆಸ್ತಿ ಸಂಖ್ಯೆ 103/ಎ, ಮೌಲ್ಯಮಾಪನ ಸಂಖ್ಯೆ 42/51 ನಲ್ಲಿ ರೂಪಿತವಾಗಿದ್ದು, ಕಥಾ ಸಂಖ್ಯೆ 375/368/103ಎ/42/51, ಹಳೆಯ ಕಥಾ ಸಂಖ್ಯೆ 361/103ಎ/42/51, ಅದಕ್ಕೂ ಮುಂಚೆ ಸಂಖ್ಯೆ 37, ಮಲ್ಲತಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ನಲ್ಲಿ ಇರುವದು. ಈಗ ಇದು ಬಿಬಿಎಂಪಿ ವ್ಯಾಪ್ತಿಯ ವಾರ್ಡ್ ಸಂಖ್ಯೆ 129, ಬೆಂಗಳೂರು ಒಳಪಡುತ್ತದೆ. ಈ ಆಸ್ತಿ ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಅಳತೆಯನ್ನು ಹೊಂದಿದ್ದು, ಒಟ್ಟು 1200 ಚದರ ಅಡಿ ವಿಸ್ತೀರ್ಣ ಹೊಂದಿದೆ. ಈ ಆಸ್ತಿಯೊಂದಿಗೆ ಆರ್. ಸಿ. ಸಿ. ಮೇಲ್ಛಾವಣಿಯ ಕಟ್ಟಡ ಹಾಗೂ ಎಲ್ಲಾ ನಾಗರಿಕ ಸೌಲಭ್ಯಗಳು ಸೇರಿವೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	31.03.2021	02.03.2026ರಂದಿನಂತೆ ರೂ. 37,74,215.03/- (ರೂಪಾಯಿ ಮೂವತ್ತ ಏಳು ಲಕ್ಷ ಎಪ್ಪತ್ತ ನಾಲ್ಕು ಸಾವಿರದ ಇನ್ನೂರ ಹದಿನೈದು ಮತ್ತು ಪೈಸೆ ಮೂರು ಮಾತ್ರ)
2.	ಸಾಲ ಖಾತೆ ನಂ. HHLMAL00367856 1. ವಿನೋದ್ ಅಲಿಯಾಸ್ ವಿನೋದ್ ಡಿ ಮಾಲೀಕ ವಿ.ಎಸ್. ಎಂಟರ್ಪ್ರೈಸಸ್ 2. ಸುಜಾತಾ ವಿನೋದ್	ಫ್ಲಾಟ್ ಸಂಖ್ಯೆ 409, 4ನೇ ಮಹಡಿಯಲ್ಲಿ ಇರುವದು. ಇದರ ಸೂಪರ್ ಬಿಲ್ಟ್-ಅಪ್ ಪ್ರದೇಶ 965 ಚದರ ಅಡಿ ಆಗಿದೆ. ಇದಕ್ಕೆ ಆರ್. ಸಿ. ಸಿ. ಮೇಲ್ಛಾವಣಿ, ಒಂದು ಕವರ್ಡ್ ಕಾರ್ ಪಾರ್ಕಿಂಗ್ ಸ್ಥಳ, ಮತ್ತು ಸಾಮಾನ್ಯ ಪ್ರದೇಶಗಳು ಹಾಗೂ ಸೌಲಭ್ಯಗಳಲ್ಲಿ ಅನುಪಾತದ ಹಕ್ಕು ಸೇರಿವೆ. ಈ ಫ್ಲಾಟ್ ''ಎ ಆರ್ ಆರ್ಕಿಡ್'' ಎಂದು ಕರೆಯಲ್ಪಡುವ ಕಟ್ಟಡದಲ್ಲಿ ಇದೆ. ಈ ಕಟ್ಟಡವು ಪರಿವರ್ತಿತ ಸರ್ವೆ ಸಂಖ್ಯೆ 143, ಈಗಿನ ಹೊಸ ಬಿಬಿಎಂಪಿ ಖಾತಾ ಸಂಖ್ಯೆ 46/ಸರ್ವೆ ಸಂಖ್ಯೆ 143 ನಲ್ಲಿ ನಿರ್ಮಿತವಾಗಿದ್ದು, ಹೊರಮಾವು ಆಗರ ಗ್ರಾಮ, ಕೆ. ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು - 560043, ಕರ್ನಾಟಕ ನಲ್ಲಿ ಇದೆ.	04.08.2021	02.03.2026ರಂದಿನಂತೆ ರೂ. 9,18,834.24/- (ರೂಪಾಯಿ ಒಂಬತ್ತು ಲಕ್ಷ ಹದಿನೆಂಟು ಸಾವಿರದ ಎಂಟು ನೂರ ಮೂವತ್ತ ನಾಲ್ಕು ಮತ್ತು ಪೈಸೆ ಇಪ್ಪತ್ತ ನಾಲ್ಕು ಮಾತ್ರ)

ಈ ಮೇಲೆ ಹೆಸರಿಸಲಾದ ಸಾಲಗಾರ (ರು) ಆರ್ಥಿಕ ಶಿಸ್ತು ಮತ್ತು ಸಾಲದ ಖಾತೆಯ ಜವಾಬ್ದಾರಿಯ ಹೊಣೆಯನ್ನು ಸರಿಯಾಗಿ ಪಾಲಿಸದೇ ಇದ್ದುದರಿಂದ ಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳ ಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದ ಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇ ವಿಫಲರಾಗಿದ್ದಾರೆ ಎಂದು ತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರ ಉಪೇಕ್ಷೆ ತೋರಿಸಿದುದ ರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದು ವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನ ಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬ ಸಾಲಗಾರನಿಗೆ (ರಿಗೆ) ಸೂಚನೆಗಳನ್ನು ಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆ ಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ) ಕಂಪೆನಿಯು ಈ ಮೇಲೆ ಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದ ಬಡ್ಡಿ, ವೆಚ್ಚಗಳು ಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವ ಮೂಲಕ ಕಂಪನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆ ಕಾಲಮ್ ಬಿಯಲ್ಲಿ ನಮೂದಿಸಲಾದ ಅಡವು ಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅರ್ಹವಾಗಿದೆ ಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವ ಇತರ ಕ್ರಮಗಳನ್ನು ಕೂಡಾ ತೆಗೆದು ಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ) ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

''ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹಮ್ಮದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011&66115609, ಇಮೇಲ್: complaint@acreindia.in ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪಡೆಯಬಹುದು.''

ಅಸೆಟ್ ಕೇರ್ ಮತ್ತು ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ. ಗಾಗಿ
ಎ.ಸಿ.ಆರ್.ಇ 102 ಟ್ರಸ್ಟ್‌ನ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

OLA ELECTRIC

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್

(ಹಿಂದೆ ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಿಐಎನ್: L74999KA2017PLC099619
ನೋಂದಾಯಿತ ಕಚೇರಿ: ವಿಂಗ್ ಸಿ, ಪ್ರೆಸ್ಟೀಜ್ ಆರ್‌ಎಂಝುಡ್ ಸ್ಟಾರ್ಟೆಕ್, ಹೊಸೂರು ರಸ್ತೆ, ಮುನಿಸಿಪಲ್ ವಾರ್ಡ್ ನಂ. 67, ಮುನಿಸಿಪಲ್ ನಂ. 140 ಕೋರಮಂಗಲ VI ಬ್ಲಾಕ್, ಬೆಂಗಳೂರು-560095, ಕರ್ನಾಟಕ, ಭಾರತ.
ದೂರವಾಣಿ: 080-35440050, **ಇಮೇಲ್ ಐಡಿ:** companysecretary@olaelectric.com

ಅಂಚೆ ಮತಪತ್ರ ಸೂಚನೆ

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ ("**ಕಂಪನಿ**") ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯ್ದೆ, 2013 ("**ಕಾಯ್ದೆ**") ರ ಸೆಕ್ಷನ್ 108, 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ಮತ್ತು ನಿಯಮ 22, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಕಾರ್ಯದರ್ಶಿ ಮಾನದಂಡ ("**ಎಸ್‌ಎಸ್-2**"), ಮತ್ತು ಸೆಬಿ (ಲಿಸ್ಟಿಂಗ್ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು, 2015 ("**ಸೆಬಿ ಎಲ್‌ಒಡಿಆರ್ ನಿಯಮಗಳು**") ರ ನಿಯಮ 44 ರ ಅನ್ವಯ (ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ತಿದ್ದುಪಡಿಗಳು ಅಥವಾ ಮರು-ಜಾರಿಗೊಳಿಸುವಿಕೆಗಳನ್ನು ಒಳಗೊಂಡಂತೆ), ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("**ಎಂಸಿಎ**") ಸೆಪ್ಟೆಂಬರ್ 22, 2025 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಮತ್ತು ಭಾರತೀಯ ಷೇರು ಮತ್ತು ವಿನಿಮಯ ಮಂಡಳಿ ("**ಸೆಬಿ**") ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳು ("**ಸೆಬಿ ಸುತ್ತೋಲೆಗಳು**") ಮತ್ತು ಈ ಸಂಬಂಧ ಹೊರಡಿಸಲಾದ ಇತರ ಸಂಬಂಧಿತ ಸುತ್ತೋಲೆಗಳಿಗೆ ಅನುಗುಣವಾಗಿ, ಕಂಪನಿಯು ಮಾರ್ಚ್ 18, 2026 ದಿನಾಂಕದ ಅಂಚೆ ಮತದಾನದ ಸೂಚನೆಯಲ್ಲಿ ("**ಸೂಚನೆ**") ವಿವರಿಸಲಾದ ವಿವರಣಾತ್ಮಕ ಹೇಳಿಕೆಯೊಂದಿಗೆ, ಒಂದು ವಿಶೇಷ ನಿರ್ಣಯದ ಮೂಲಕ ವಿಶೇಷ ವ್ಯವಹಾರಕ್ಕಾಗಿ ಸದಸ್ಯರ ಅನುಮೋದನೆಯನ್ನು ಕೇವಲ ಎಲೆಕ್ಟ್ರಾನಿಕ್ ವಿಧಾನದ (ಅಂದರೆ ರಿಮೋಟ್ ಇ-ವೋಟಿಂಗ್) ಮೂಲಕ ಮಾತ್ರ ಕೋರುತ್ತಿದೆ.

ಮೇಲೆ ತಿಳಿಸಲಾದ ನಿಬಂಧನೆಗಳಿಗೆ ಅನುಗುಣವಾಗಿ, ಅಂಚೆ ಮತದಾನ ನೋಟಿಸ್‌ನ ("ನೋಟಿಸ್") ಎಲೆಕ್ಟ್ರಾನಿಕ್ ಪ್ರತಿಗಳನ್ನು ಮತ್ತು ವಿವರಣಾತ್ಮಕ ಹೇಳಿಕೆಯನ್ನು ಮಾರ್ಚ್ 23, 2026 ರಂದು ಆ ಸದಸ್ಯರಿಗೆ ಕಳುಹಿಸಲಾಗಿದ್ದು, ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ ("ಸಿಡಿಎಸ್‌ಎಲ್") ನಿಂದ ಸ್ವೀಕರಿಸಲ್ಪಟ್ಟ ಸದಸ್ಯರ ನೋಂದಣಿಯಲ್ಲಿ ಹೆಸರು ಕಂಡುಬಂದಿರುವವರಿಗೆ ಮತ್ತು ಬುಧವಾರ, ಮಾರ್ಚ್ 18, 2026 ರ ವ್ಯವಹಾರದ ಅವಧಿಯ ಅಂತ್ಯದ ವೇಳೆಗೆ ("ಕಟ್ ಆಫ್ ದಿನಾಂಕ") ಕಂಪನಿ/ಡಿಪಾಸಿಟರಿಗಳು/ಎಮ್‌ಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಆರ್‌ಟಿಎ") ನಲ್ಲಿ ನೋಂದಾಯಿಸಲ್ಪಟ್ಟಿರುವವರ ಹೆಸರಿಗೆ ಈ ನೋಟಿಸ್ ತಲುಪಿಸಲಾಗಿದೆ. ಎಂಸಿಎ ಸುತ್ತೋಲೆಗಳಲ್ಲಿ ನೀಡಲಾದ ವಿನಾಯಿತಿಗೆ ಅನುಗುಣವಾಗಿ, ಈ ಅಂಚೆ ಮತದಾನಕ್ಕಾಗಿ ಸದಸ್ಯರಿಗೆ ಅಂಚೆ ಮತದಾನದ ನಮೂನೆಗಳು ಮತ್ತು ಪ್ರಿ-ಪೇಯ್ಡ್ ಬಿಸಿನೆಸ್ ರಿಪ್ಲೈ ಎನ್ವಲಪ್‌ಗಳನ್ನೊಳಗೊಂಡ ಮುದ್ರಿತ ಪ್ರತಿಗಳನ್ನು ಕಳುಹಿಸಲಾಗುತ್ತಿಲ್ಲ.

ಸೂಚನೆಯು ಕಂಪನಿಯ ವೆಬ್‌ಸೈಟ್ www.olaelectric.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಲಭ್ಯವಿದೆ.

ಕಾಯಿದೆಯ ಕಲಂಗಳು 108, 110 ರ ನಿಬಂಧನೆಗಳಿಗೆ, ತಿದ್ದುಪಡಿ ಮಾಡಿದ ನಿಯಮಗಳೊಂದಿಗೆ ಮತ್ತು ಲಿಸ್ಟಿಂಗ್ ನಿಯಮಗಳು 44 ಕ್ಕೆ ಅನುಸಾರವಾಗಿ, ಕಂಪನಿಯು ಸದಸ್ಯರಿಗೆ ಎನ್‌ಎಸ್‌ಡಿಎಲ್ ಒದಗಿಸಿದ ರಿಮೋಟ್ ಇ-ವೋಟಿಂಗ್ ಪ್ಲಾಟ್‌ಫಾರ್ಮ್ ಮೂಲಕ ಇ-ವೋಟಿಂಗ್ ಮೂಲಕ ಮಾತ್ರ ತಮ್ಮ ಮತಗಳನ್ನು ಚಲಾಯಿಸಲು ಸೌಲಭ್ಯವನ್ನು ಒದಗಿಸಿದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತಗಳನ್ನು ಚಲಾಯಿಸಲು ಲಾಗಿನ್ ರುಜುವಾತುಗಳನ್ನು ಸೂಚನೆಯ ಟಿಪ್ಪಣಿಗಳ ಭಾಗದಲ್ಲಿ ಉಲ್ಲೇಖಿಸಲಾಗಿದೆ, ಅದನ್ನು ಸದಸ್ಯರಿಗೆ ಕಳುಹಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತಗಳನ್ನು ಚಲಾಯಿಸಲು ವಿವರವಾದ ವಿಧಾನವನ್ನು ಸೂಚನೆಯಲ್ಲಿ ಒದಗಿಸಲಾಗಿದೆ.

ಕಟ್-ಆಫ್ ದಿನಾಂಕದಂದು ಸದಸ್ಯರ ನೋಂದಣಿ ಪುಸ್ತಕದಲ್ಲಿ/ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಯಾರ ಹೆಸರುಗಳು ಕಂಡುಬರುತ್ತವೆಯೋ, ಅಂತಹ ಸದಸ್ಯರು ಮಾತ್ರ ನೋಟಿಸ್‌ನಲ್ಲಿ ತಿಳಿಸಲಾದ ನಿರ್ಣಯಗಳ ಮೇಲೆ ಕೇವಲ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟ ಪಾವತಿಸಿದ ಇಕ್ವಿಟಿ ಷೇರುಗಳ ಮೇಲೆ ಮತದಾನದ ಹಕ್ಕುಗಳನ್ನು ಎಣಿಕೆ ಮಾಡಲಾಗುತ್ತದೆ. ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ಮಾತ್ರ ತಮ್ಮ ಒಪ್ಪಿಗೆಯನ್ನು (ಪರ) ಅಥವಾ ಭಿನ್ನಾಭಿಪ್ರಾಯವನ್ನು (ವಿರುದ್ಧ) ನೀಡಲು ವಿನಂತಿಸಲಾಗಿದೆ.

ಇ-ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ:

ಇ-ವೋಟಿಂಗ್ ಪ್ರಾರಂಭವಾಗುವ ದಿನ, ದಿನಾಂಕ ಮತ್ತು ಸಮಯ	ಮಂಗಳವಾರ, ಮಾರ್ಚ್ 24, 2026 ರಂದು ಬೆಳಿಗ್ಗೆ 9.00 ಗಂಟೆಯಿಂದ (ಭಾರತೀಯ ಕಾಲಮಾನ)
ಇ-ವೋಟಿಂಗ್ ಮುಕ್ತಾಯಗೊಳ್ಳುವ ದಿನ, ದಿನಾಂಕ ಮತ್ತು ಸಮಯ	ಬುಧವಾರ, ಏಪ್ರಿಲ್ 22, 2026 ರ ಸಂಜೆ 5.00 ಗಂಟೆಯವರೆಗೆ (ಭಾರತೀಯ ಕಾಲಮಾನ)

ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ಪ್ರಮೋದ್ ಎಸ್‌ಎಂ (ಎಫ್‌ಸಿಎಸ್ ಸಂಖ್ಯೆ: 7834 ಸಿಪಿ ಸಂಖ್ಯೆ: 13784) ಅಥವಾ ಅವರ ಅನುಪಸ್ಥಿತಿಯಲ್ಲಿ ಶ್ರೀ ಬಿಸ್ವಜಿತ್ ಘೋಷ್ (ಎಫ್‌ಸಿಎಸ್: 8750, ಸಿಪಿ ಸಂಖ್ಯೆ: 8239), ಎಮ್/ಎಸ್. ಬಿಎಂಪಿ & ಕೋ. ಎಲ್‌ಎಲ್‌ಪಿ, ಒಂದು ಅಭ್ಯಾಸ ಮಾಡುವ ಕಂಪನಿ ಸೆಕ್ರೆಟರಿಸ್ ಸಂಸ್ಥೆ, ಬೆಂಗಳೂರು ಅವರನ್ನು ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರವನ್ನು ನ್ಯಾಯಸಮ್ಮತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ತಪಾಸಕರನ್ನಾಗಿ ನೇಮಿಸಿದೆ.

ಪೋಸ್ಟಲ್ ಬ್ಯಾಲೆಟ್‌ನ ಫಲಿತಾಂಶಗಳನ್ನು, ಇ-ವೋಟಿಂಗ್ ಅವಧಿಯು ಮುಕ್ತಾಯಗೊಂಡ ನಂತರ ಕಾಯಿದೆಯಡಿ ಸೂಚಿಸಲಾದ ಸಮಯದೊಳಗೆ ಘೋಷಿಸಲಾಗುವುದು. ಈ ಫಲಿತಾಂಶಗಳನ್ನು ತಪಾಸಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ www.olaelectric.com ನಲ್ಲಿ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ನಲ್ಲಿ ಪ್ರಕಟಿಸಲಾಗುವುದು.

ಸದಸ್ಯರು ಸೂಚನೆಯಲ್ಲಿ ವಿವರಿಸಿದ ಎಲ್ಲಾ ಟಿಪ್ಪಣಿಗಳನ್ನು ಮತ್ತು ವಿಶೇಷವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದುವಂತೆ ವಿನಂತಿಸಲಾಗಿದೆ. ಸದಸ್ಯರು ಸೂಚನೆಯಲ್ಲಿ ಒದಗಿಸಿದ ಇ-ವೋಟಿಂಗ್‌ಗೆ ಸಂಬಂಧಿಸಿದ ಸೂಚನೆಗಳನ್ನು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ. ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು.

ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯೊಂದಿಗೆ ತಮ್ಮ ಇ-ಮೇಲ್ ಐಡಿಯನ್ನು ಇನ್ನೂ ನೋಂದಾಯಿಸದ / ನವೀಕರಿಸದ ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯೊಂದಿಗೆ ತಮ್ಮ ಇ-ಮೇಲ್ ಐಡಿಯನ್ನು ಇನ್ನೂ ನೋಂದಾಯಿಸದ / ನವೀಕರಿಸದ ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ಆಗಿರುವ ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ enotices@in.mpms.mufg.com ಗೆ ವಿನಂತಿಗಳನ್ನು ಕಳುಹಿಸುವ ಮೂಲಕ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ, ಫೋಲಿಯೋ ಸಂಖ್ಯೆಯ ವಿವರಗಳನ್ನು ನೀಡಿ ಮತ್ತು ಪ್ಯಾನ್ ಕಾರ್ಡ್‌ನ ಸ್ವಯಂ-ದೃಢೀಕೃತ ನಕಲು ಮತ್ತು ಯಾವುದೇ ಇತರ ದಾಖಲೆಯ (ಉದಾ. ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಇತ್ಯಾದಿ) ಸ್ವಯಂ-ದೃಢೀಕೃತ ನಕಲನ್ನು ಲಗತ್ತಿಸಿ. ಡಿಮ್ಯಾಟ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ತಮ್ಮ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ) ಬಳಿ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ಈ ಅವಧಿಯಲ್ಲಿ, ಕಟ್-ಆಫ್ ದಿನಾಂಕದಂದು ಮುದ್ರಿತ ರೂಪದಲ್ಲಿ ಅಥವಾ ಡಿಮ್ಯಾಟ್ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಬಹುದು. ಇ-ವೋಟಿಂಗ್‌ನ ಕೊನೆಯ ದಿನಾಂಕದ ನಂತರ ಸದಸ್ಯರು ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ. ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ನಂತರ ಬದಲಾಯಿಸಲು ಅಥವಾ ಮತ್ತೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕದಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರ ಪಾಲಿಗೆ ಅನುಗುಣವಾಗಿರುತ್ತವೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು.

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್‌ಗಾಗಿ
ಸಹಿ/-
ದೀಪಕ್ ರಸ್ತೋಗಿ
ಮುಖ್ಯ ಹಣಕಾಸು ಅಧಿಕಾರಿ
ಸ್ಥಳ: ಬೆಂಗಳೂರು
ದಿನಾಂಕ: ಮಾರ್ಚ್ 24, 2026

CONCEPT

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBGM00550264 / HHEBGM00550819 1. ಅಬೂಬಕ್ಕರ್ ಸಿದ್ದಿಕ್, ಪಾಲುದಾರ, ಎಸ್ ಜಿ ಅಲ್ಯೂಮಿನಿಯಂ ಮತ್ತು (ಖಾತರಿದಾರ) 2. ಜಬೀನ್ ತಾಜ್ 3. ಎಸ್ ಜಿ ಅಲ್ಯೂಮಿನಿಯಂ ಅದರ ಪಾಲುದಾರರ ಮೂಲಕ ಮತ್ತು (ಖಾತರಿದಾರ) 4. ಜ್ಯೋತಿ ಪ್ರಕಾಶ್ ನಾಯಕ್, ಪಾಲುದಾರ, ಎಸ್ ಜಿ ಅಲ್ಯೂಮಿನಿಯಂ (ಖಾತರಿದಾರ)	ಆಸ್ತಿ ಸೈಟ್ ಸಂಖ್ಯೆ 30, ಹಳೆಯ ಸಂಖ್ಯೆ 26/8, ಹೊಸ ಬಿಎಂಪಿ ಮುನಿಸಿಪಲ್ ಸಂಖ್ಯೆ 179/177/170/26/8/30, ಹಳೆಯ ಪಿಐಡಿ ಖಾತಾ ಸಂಖ್ಯೆ 170/26/8/30, ಯಲ್ಲುಕುನ್ತೆ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೊಮ್ಮನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ, ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ, ವಾರ್ಡ್ ಸಂಖ್ಯೆ 190, ಬೆಂಗಳೂರು - 560068, ಕರ್ನಾಟಕ ನಲ್ಲಿ ಇರುವದು. ಇದಕ್ಕೆ ಸಂಬಂಧಿಸಿದ ಕಟ್ಟಡದಲ್ಲಿ ಭೂ ಮಹಡಿಯಲ್ಲಿ 700 ಸ್ಕ್ವೇರ್, ಮೊದಲ ಮಹಡಿಯಲ್ಲಿ 8-00 ಸ್ಕ್ವೇರ್ ಮತ್ತು ಎರಡನೇ ಮಹಡಿಯಲ್ಲಿ 8-00 ಸ್ಕ್ವೇರ್ ವಿಸ್ತೀರ್ಣ ಹೊಂದಿದ್ದು, ಆರ್. ಸಿ. ಸಿ. ಮೇಲ್ಛಾವಣಿ ಹಾಗೂ ಎಲ್ಲಾ ನಾಗರಿಕ ಸೌಲಭ್ಯಗಳು ಹೊಂದಿವೆ. ಈ ಆಸ್ತಿ ಯಲ್ಲುಕುನ್ತೆ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೊಮ್ಮನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ, ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ, ವಾರ್ಡ್ ಸಂಖ್ಯೆ 190, ಬೆಂಗಳೂರು-560068, ಕರ್ನಾಟಕ ನಲ್ಲಿ ಇದೆ.	06.05.2025	ರೂ. 44,94,802.30/- (ರೂಪಾಯಿ ನಲವತ್ತ ನಾಲ್ಕು ಲಕ್ಷ ತೊಂಬತ್ತ ನಾಲ್ಕು ಸಾವಿರದ ಎಂಟು ನೂರ ಎರಡು ಮತ್ತು ಪೈಸೆ ಮೂವತ್ತು ಮಾತ್ರ) (ಸಾಲ ಸೌಲಭ್ಯ ಸಂಖ್ಯೆ 1 ರ ವಿರುದ್ಧ) ಮತ್ತು ರೂ. 1,36,415.13/- (ರೂಪಾಯಿ ಒಂದು ಲಕ್ಷ ಮೂವತ್ತ ಆರು ಸಾವಿರದ ನಾಲ್ಕು ನೂರ ಹದಿನೈದು ಮತ್ತು ಪೈಸೆ ಹದಿಮೂರು ಮಾತ್ರ) (ಸಾಲ ಸೌಲಭ್ಯ ಸಂಖ್ಯೆ 2 ರ ವಿರುದ್ಧ) ಒಟ್ಟು ಬಾಕಿ ಮೊತ್ತ ರೂ. 46,31,217.43/- (ರೂಪಾಯಿ ನಲವತ್ತ ಆರು ಲಕ್ಷ ಮೂವತ್ತ ಒಂದು ಸಾವಿರದ ಇನ್ನೂರ ಹದಿನೇಳು ಮತ್ತು ಪೈಸೆ ನಲವತ್ತ ಮೂರು ಮಾತ್ರ) (ಸಾಲ ಸೌಲಭ್ಯಗಳು ಸಂಖ್ಯೆ 1 ಮತ್ತು 2 ರ ವಿರುದ್ಧ) 02.03.2026 ರಂತೆ
2.	ಸಾಲ ಖಾತೆ ನಂ. HHLBNE00553895 1. ಇಮ್ರಾನ್ ಪಾಷಾ (ಸಹ-ಸಾಲಗಾರ, ಸಹೋದರ ಹಾಗೂ ದಿವಂಗತ ಸಕೀಬ್ ಪಾಷಾ ಅವರ ಕಾನೂನುಬದ್ಧ ಉತ್ತರಾಧಿಕಾರಿ) 2. ನಯಾಜ್ ಪಾಷಾ (ಸಹೋದರ ಹಾಗೂ ದಿವಂಗತ ಸಕೀಬ್ ಪಾಷಾ ಅವರ ಕಾನೂನುಬದ್ಧ ಉತ್ತರಾಧಿಕಾರಿ) 3. ಅನ್ಸಾರ್ ಪಾಷಾ (ದಿವಂಗತ ಸಕೀಬ್ ಪಾಷಾ ಅವರ ತಂದೆ ಹಾಗೂ ಕಾನೂನುಬದ್ಧ ಉತ್ತರಾಧಿಕಾರಿ) 4. ಜಬೀನ್ ತಾಜ್ (ತಾಯಿ ಹಾಗೂ ದಿವಂಗತ ಸಕೀಬ್ ಪಾಷಾ ಅವರ ಕಾನೂನುಬದ್ಧ ಉತ್ತರಾಧಿಕಾರಿ)	ಆಸ್ತಿ ಫ್ಲಾಟ್ ಸಂಖ್ಯೆ 903, 9ನೇ ಮಹಡಿಯಲ್ಲಿ, ವಿಂಗ್-ಬಿ ಯಲ್ಲಿ ಇರುವ ''ರೂಬಲ್'' ಬ್ಲಾಕ್ ನಲ್ಲಿ (ಅನುಮೋದಿತ ಯೋಜನೆಯಲ್ಲಿ ಬಿಲ್ಡಿಂಗ್ ಸಂಖ್ಯೆ 1ರ ಬ್ಲಾಕ್-ಎ ಟವರ್-2 ಎಂದು ತೋರಿಸಲಾಗಿದೆ), ''ಪಾರ್ಕ್ ಕ್ಯೂಬಿಕ್ಸ್ (PARK CUBIX)'' ಎಂಬ ವಸತಿ ಅಭಿವೃದ್ಧಿಯ ಫೇಸ್-1 ನಲ್ಲಿ ಇದೆ. ಈ ಫ್ಲಾಟ್ನ ಕಾರ್ಪೆಟ್ ಪ್ರದೇಶ 669 ಚದರ ಅಡಿ ಅಥವಾ ಸೂಪರ್ ಬಿಲ್ಟ್-ಅಪ್ ಪ್ರದೇಶ 1009 ಚದರ ಅಡಿ (ಅಂದರೆ 93.738 ಚದರ ಮೀಟರ್) ಆಗಿದೆ. ಇದಕ್ಕೆ 270.5416 ಚದರ ಅಡಿ ಪ್ರಮಾಣದ ಅನುಪಾತದ ಅವಿಭಾಜಿತ ಹಂಚಿಕೆ (Undivided Share) ಹಾಗೂ ಸಾಮಾನ್ಯ ಪ್ರದೇಶಗಳು, ಸಾಮಾನ್ಯ ಸೌಲಭ್ಯಗಳು ಮತ್ತು ಸೌಕರ್ಯಗಳು ಸೇರಿವೆ. ಜೊತೆಗೆ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಸಹ ಇದೆ. ಈ ವಸತಿ ಯೋಜನೆ ''ಪಾರ್ಕ್ ಕ್ಯೂಬಿಕ್ಸ್ (PARK CUBIX)'' ಫೇಸ್-1 ಆಗಿದ್ದು ''ಸಲಾಪುರಿಯಾ'' ಮತ್ತು ''ಸತಿವಾ ಗ್ರೂಪ್'' ಯೋಜನೆಯ ಭಾಗವಾಗಿದೆ. ಈ ಕಟ್ಟಡವು ಟಿಎಂಸಿ ಖಾತಾ ಸಂಖ್ಯೆ 2714, ಸರ್ವೆ ಸಂಖ್ಯೆ 341/1, 342/1, 342/2-1, 342/2-2, 343/1, 343/2, 345-2, 362/1, 345/2, 359, 360, 361/2 ಮತ್ತು 367/1, ವಾರ್ಡ್ ಸಂಖ್ಯೆ 22, ದೇವನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು - 562110, ಕರ್ನಾಟಕ ನಲ್ಲಿ ಇರುವ ಭೂಮಿಯ ಮೇಲೆ ನಿರ್ಮಿಸಲಾಗಿದೆ.	08.01.2026	ದಿನಾಂಕ 26.02.2026 ರಂತೆ ರೂ. 52,20,107.98/- (ರೂಪಾಯಿ ಐವತ್ತ ಎರಡು ಲಕ್ಷ ಇಪ್ಪತ್ತು ಸಾವಿರದ ನೂರ ಏಳು ಮತ್ತು ಪೈಸೆ ತೊಂಬತ್ತ ಎಂಟು ಮಾತ್ರ)
3.	ಸಾಲ ಖಾತೆ ನಂ. HHLSKN00512634 1. ಲೋಕನಾಥನ್ ಅಲಿಯಾಸ್ ಲೋಕನಾಥನ್ ಆರ್ಕಾಟ್ ಅಲಿಯಾಸ್ ಲೋಕನಾಥನ್ ರಘುಪತಿ ಆರ್ಕಾಟ್ 2. ಜಾನಕಿ ಬಿ ಎನ್	ಫ್ಲಾಟ್ ಸಂಖ್ಯೆ 001, ನೆಲ ಮಹಡಿಯಲ್ಲಿ, 1169 ಚದರ ಅಡಿ ಅಳತೆ, ಸೂಪರ್ ಬಿಲ್ಟ್ ಅಪ್ ಪ್ರದೇಶದ, ಒಂದು ಕಾರು ಪಾರ್ಕಿಂಗ್ ಸ್ಲಾಟ್ನೊಂದಿಗೆ, ಸಾಮಾನ್ಯ ಪ್ರವೇಶ ಮತ್ತು ಕಟ್ಟಡದ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಹೊಂದಿದ್ದು, ''ಸಾಯಿ ಸುಮುಖ ಸ್ವಿಸ್ ಲೈಟ್ಸ್'' ಎಂದು ಕರೆಯಲ್ಪಡುವ ನಿವಾಸ ಸಂಕೀರ್ಣದಲ್ಲಿ 312 ಚದರ ಅಡಿ ವಿಸ್ತೀರ್ಣದ ಅವಿಭಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿಯನ್ನು ಹೊಂದಿರುವ ಭೂಮಿಯಲ್ಲಿ ಹಿಂದಿನ ಮನೆಗಳನ್ನು ಹೊಂದಿರುವ ಆಸ್ತಿಯನ್ನು ಒಳಗೊಂಡಿರುವ ಪಟ್ಟಿ ಸಂಖ್ಯೆ. 121/5-1, 17, 17/ ಎ , ಕೊತ್ತನೂರು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು, ಬೆಂಗಳೂರು-560078, ಕರ್ನಾಟಕದಲ್ಲಿ ನೆಲೆಗೊಂಡಿದೆ.	08.01.2026	ದಿನಾಂಕ 02.03.2026 ರಂತೆ ರೂ. 64,24,235.48/- (ರೂಪಾಯಿ ಅರವತ್ತ ನಾಲ್ಕು ಲಕ್ಷದ ಇಪ್ಪತ್ತ ನಾಲ್ಕು ಸಾವಿರದ ಇನ್ನೂರ ಮೂವತ್ತ ಐದು ಮತ್ತು ಪೈಸೆ ನಲವತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ) ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಸಮಾಚಾರ ಸಣ್ಣದಲ್ಲ

ಮಾಜಿ ಎಂಎಲ್‌ಸಿ ಕರಿಯಣ್ಣ ನಿಧನ

ಕೊಪ್ಪಳ: ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತ, ಮಾಜಿ ವಿಧಾನ ಪರಿಷತ್ ಸದಸ್ಯ ಕರಿಯಣ್ಣ ಸಂಗಟಿ (60) ಅವರು ವಿಧಿವಶರಾಗಿದ್ದಾರೆ. ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ಕೊನೆಯುಸಿರೆಳೆದಿದ್ದಾರೆ. ಮೂಲತಃ ಕೊಪ್ಪಳ ತಾಲೂಕಿನ ಯಲಮಗೇರಿ ನಿವಾಸಿಯಾಗಿರುವ ಕರಿಯಣ್ಣ ಸಂಗಟಿ ಅವರು ಎರಡು ಬಾರಿ ಕೊಪ್ಪಳ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು.

ಕರಿಯಣ್ಣ ಸಂಗಟಿ ನಿಧನಕ್ಕೆ ಸಂತಾಪ

ವಿಧಾನ ಪರಿಷತ್ತು: ಅಕಾಲಿಕವಾಗಿ ನಿಧನರಾದ ವಿಧಾನ ಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಅವರಿಗೆ ಸದನದಲ್ಲಿ ಸಂತಾಪ ಸಲ್ಲಿಸಲಾಯಿತು. ಸಭಾಪತಿ ಬಸವರಾಜ ಹೊರಟ್ಟಿ ಸಂತಾಪ ಸೂಚಕ ನಿರ್ಣಯ ಮಂಡಿಸಿದರು. ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಜ್ಜನ ರಾಜಕಾರಣಕ್ಕೆ ಉದಾಹರಣೆಯಾಗಿದ್ದ ಕರಿಯಣ್ಣ ಸಂಗಟಿ ಬೇರೆ ಪಕ್ಷದಲ್ಲಿದ್ದರೂ ನಾನು ಅವರ ಒಡನಾಡಿ, ಅತ್ಯಂತ ಹತ್ತಿರದಿಂದ ಅವರನ್ನು ಬಲ್ಲೆ, ಅವರ ಅಡ್ಡ ಹೆಸರು ಸಂಗಟಿ, ತೆಲುಗಿನಲ್ಲಿ ರಾಗಿ ಮುದ್ದೆ ಎಂಬರ್ಥ ಬರುತ್ತದೆ. ಹೀಗಾಗಿಯೇ ಅವರನ್ನು ನಾವೆಲ್ಲರೂ ರಾಗಿ ಮುದ್ದೆ ಎಂದೇ ಕರೆಯುತ್ತಿದ್ದೆವು, ಆಗ ಅವರು ಸಂತೋಷದಿಂದ ರಾಗಿ ಮುದ್ದೆ ಇಲ್ಲದೇ ನಿಮ್ಮ ಊಟ ಪರಿಪೂರ್ಣವಾಗುವುದಿಲ್ಲ ಎಂದು ಹಾಸ್ಯಭರಿತವಾಗಿ ಉತ್ತರಿಸುತ್ತಿದ್ದರು. ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಸಂತಾಪ ವ್ಯಕ್ತಪಡಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಹಿರಿಯ ನಾಯಕರಾಗಿದ್ದ ಕರಿಯಣ್ಣ ಸಂಗಟಿ ಅವರ ಅಕಾಲಿಕ ನಿಧನರಿಂದ ನಾವು ಓರ್ವ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ ಎಂದು ಹೇಳಿದರು.

ಮತಪತ್ರ ಬಳಕೆಗೆ ಅವಕಾಶ ನೀಡುವ ತಿದ್ದುಪಡಿ ಮಸೂದೆ ಅಂಗೀಕಾರ | ಪ್ರತಿಪಕ್ಷಗಳಿಂದ ಸಭಾತ್ಯಾಗ, ಮಸೂದೆ ಹರಿದ ಹಾಕಿದ ಪ್ರತಿಪಕ್ಷ

ಲೋಕಲ್ ಚುನಾವಣೆಗೆ ಮತಪತ್ರವೇ ನಿಶ್ಚಿತ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಪ್ರತಿಪಕ್ಷಗಳ ವಿರೋಧದ ಮಧ್ಯೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂ ಬದಲು ಮತಪತ್ರ ಬಳಕೆಗೆ ಅವಕಾಶ ನೀಡುವ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ವಿಧಾನಸಭೆಯಲ್ಲಿ ಅಂಗೀಕಾರ ನೀಡಲಾಯಿತು.

ಸಚಿವ ಪ್ರಿಯಾಂಕ್ ಖರ್ಗೆ ಈ ವಿಧೇಯಕ ಪರ್ಯಾಯಲೋಚಿಸಿದರು. ಪ್ರತಿಪಕ್ಷಗಳ ತೀವ್ರ ವಿರೋಧದ ಮಧ್ಯೆ ಮಸೂದೆ ಅಂಗೀಕಾರವಾಯಿತು. ಪ್ರತಿಪಕ್ಷ ನಾಯಕ ಆರ್.ಅಶೋಕ ಮಸೂದೆ ಪ್ರತಿ ಹರಿದು ಹಾಕಿ ಸಭಾತ್ಯಾಗ ಮಾಡಿದರು. ಈ ತಿದ್ದುಪಡಿ ಮಸೂದೆ ಮೊದಲಿಗೆ ಆಡಳಿತ ಪಕ್ಷ ಹಾಗೂ ಪ್ರತಿಪಕ್ಷಗಳ ವಾಕ್ಸಮರಕ್ಕೆ ಕಾರಣವಾಯಿತು.

ಮಸೂದೆ ಬಗ್ಗೆ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ಎವಿಎಂ ಮೇಲೆ ವಿಶ್ವಾಸ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ ವಿಧಾನಭೆ ಚುನಾವಣೆಯಲ್ಲಿ ಆಯೋಗದ ವರದಿಯಂತೆ ಸಂಜೆ ಶೇ.58.22 ಮತದಾನ ಆಗಿತ್ತು. ರಾತ್ರಿ 11.30 ಗಂಟೆಗೆ ಶೇ.68.02 ಆಗಿದೆ ಎಂದರು. ಅಂತಿಮ ವರದಿ

ಬಂದಾಗ ಒಟ್ಟು ಮತದಾನ ಶೇ.66.05 ಆಗಿದೆ. ಅಂದರೆ 5 ಗಂಟೆಯಲ್ಲಿ 50 ಲಕ್ಷ ಮತ ಸೇರ್ಪಡೆಯಾಗಿವೆ ಎಂದು ಆರೋಪಿಸಿದರು. ಅಲ್ಲದೆ, ಹರಿಯಾಣ ಮತ್ತು ಮಧ್ಯಪ್ರದೇಶದಲ್ಲಿ ಅದೇ ರೀತಿ ಆಗಿದೆ. ಹಲವಾರು ಸಂಸ್ಥೆಗಳು ಈ ಬಗ್ಗೆ ಪ್ರಶ್ನೆ ಮಾಡಿವೆ. ಆದರೆ, ಚುನಾವಣಾ ಆಯೋಗ ಈ ಬಗ್ಗೆ ಸಮರ್ಪಕ ಉತ್ತರ ನೀಡಿಲ್ಲ. ಈ ಮಸೂದೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮತಪತ್ರದ ಮೂಲಕ ಮಾಡಲು ಈ ತಿದ್ದುಪಡಿ ತರುತ್ತಿದ್ದೇವೆ. ಮತಯಂತ್ರದ ಬದಲು ಮತಪತ್ರ ಬಳಕೆ ಮಾಡಲು ಈ ಮಸೂದೆ ತರಲಾಗುತ್ತಿದೆ. ಮಸೂದೆಯಲ್ಲಿ 6 ಬದಲಾವಣೆಗಳನ್ನು ತರಲಾಗುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಲಾಭ: ಶಾಸಕ ಸುನಿಲ್ ಕುಮಾರ್ ಮಾತನಾಡಿ, ಈ ಮಸೂದೆಯಲ್ಲಿ ಜನಸಾಮಾನ್ಯರಿಗೆ ಯಾವುದೇ ಲಾಭ ಇಲ್ಲ. ಇದರಿಂದ ಕಾಂಗ್ರೆಸ್‌ಗೆ ಮಾತ್ರ ಲಾಭ. ಬ್ರ್ಯಾಂಡ್ ಬೆಂಗಳೂರು ಘೋಷಣೆ ಮಾಡುವ ನೀವು ಸ್ಥಳೀಯ ಸಂಸ್ಥೆಗಳಲ್ಲಿ ಇವಿಎಂ ಬಿಟ್ಟು ಮತಪತ್ರ ಬಳಕೆ ಮಾಡಲು ಮುಂದಾಗಿದ್ದೀರ. ಈ ಹಿಂದೆ ಬೂತ್ ಕೇಂದ್ರಗಳಿಗೆ ಹೋಗಲು ಆಗುತ್ತಿರಲಿಲ್ಲ. ಅದನ್ನು ದೂರ ಮಾಡಲು ಇವಿಎಂ ತರಲಾಗಿತ್ತು. ಇದರ ಹಿಂದೆ ದೊಡ್ಡ ಹುನ್ನಾರ ಇದ್ದಂತಿದೆ. ಸರಕಾರ ಆಡಳಿತ ವ್ಯವಸ್ಥೆ ದುರುಪಯೋಗ ಮಾಡಲು ಮುಂದಾದಂತೆ ಕಂಡು ಬರುತ್ತಿದೆ. ಈ ಮೂಲಕ ವೋಟ್ ಕ್ಯಾಪ್ಚರ್ ಮಾಡಲು ಮುಂದಾದಂತೆ ಕಾಣುತ್ತಿದೆ. ನೀವು ಒಮ್ಮೆ ಇವಿಎಂ ಸರಿ ಇಲ್ಲ ಅಂತೀರಿ, ಇನ್ನೊಮ್ಮೆ ಮತದಾರರ ಪಟ್ಟಿ ಸರಿ ಇಲ್ಲ ಅಂತೀರ, ಕೊನೆಗೆ ಮತದಾರರೇ ಸರಿ ಇಲ್ಲ ಅಂತೀರ. ನಿಮ್ಮ ಸೋಲಿಗೆ ಕಾಂಗ್ರೆಸ್ ಪಕ್ಷದ ನಿಲುವು, ನೀತಿ ಕಾರಣವಾಗಿದೆ ಎಂದು ಆಕ್ಷೇಪಿಸಿದರು.

ರಾಹುಲ್ ಗಾಂಧಿ ಹಿತಾಸಕ್ತಿ ಮಾತ್ರ: ಶಾಸಕ ಸುರೇಶ್ ಕುಮಾರ್ ಮಾತನಾಡಿ, ಈ ಮಸೂದೆ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವರು ಮಾಹಿತಿ ತಂತ್ರಜ್ಞಾನದ ಸಚಿವರ ವಿರುದ್ಧವಾಗಿ ಇದ್ದಾರೆ. ನಾವು ಏಕೆ ಸೋತೆವು ಎಂದು ಯೋಚನೆ ಮಾಡಬೇಕಿತ್ತು. ಆತ್ಮಾವಲೋಕನ ಮಾಡಬೇಕಾಗಿತ್ತು. ಚುನಾವಣಾ ಆಯೋಗ ಹ್ಯಾಕಥಾನ್ ಕರೆ ಕೊಟ್ಟರು, ಅದರಲ್ಲಿ ಎಷ್ಟು ಜನ ಪಾಲ್ಗೊಂಡರು ಅನ್ನೋದು ಎಲ್ಲರಿಗೂ ಗೊತ್ತು. ಅಮೇಥಿ ಲೋಕಸಭೆ ಕ್ಷೇತ್ರದ ಸಂಸದರ ಹಿತಾಸಕ್ತಿ ಕಾಪಾಡಲು ತಂದ ಮಸೂದೆ ಇದಾಗಿದೆ. ಅವರು ಹೇಳಿದ್ದನ್ನು ಇವರು ಮಾಡ್ತಾ ಇದ್ದಾರೆ ಎಂದು ಆರೋಪಿಸಿದರು. ಸಿಲಿಕಾನ್ ವ್ಯಾಲಿ ಎಂದು ಹೇಳುವ ರಾಜ್ಯಕ್ಕೆ ನೀವು ಬಗೆಯುತ್ತಿರುವ ದ್ರೋಹ ಇದು. ಯಾವ ಮತದಾರ ಕಳವಳ ವ್ಯಕ್ತಪಡಿಸಿದ್ದಾರೆ?. ತಮಗೆ ಅಂದು ಕೊಂಡಂತೆ ಫಲಿತಾಂಶ ಬರದವರ ಕಳವಳ ಅಷ್ಟೇ ಇದು. ಇದರಿಂದ ರಾಜೀವ್ ಗಾಂಧಿ ಆತ್ಮ ವಿಲಿ ವಿಲಿ ಒದ್ದಾಡುತ್ತದೆ. ಇದಾ ನಮ್ಮ ಕಾಂಗ್ರೆಸ್ ಅಂದುಕೊಳ್ಳುತ್ತಾರೆ. ಇದು ನಮ್ಮನ್ನು ಹಿಂದಕ್ಕೆ ಕರೆದೊಯ್ಯುವ ಬಿಲ್, ರಾಜಕೀಯ ದುರುದ್ದೇಶಿತ ಬಿಲ್ ಆಗಿದೆ ಎಂದು ವಾಗ್ದಾಳಿ ನಡೆಸಿದರು.

ಶಿಲಾಯುಗಕ್ಕೆ ಕೊಂಡೊಯ್ಯುತ್ತಿದ್ದಾರೆ

ಪ್ರತಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ತುಘಲಕ್ ದರ್ಬಾರ್ ಇದಾಗಿದೆ. ಇವಿಎಂ ತಂದವರು ಕಾಂಗ್ರೆಸ್‌ನವರು. ಅವರೇ ತಂದ ಇವಿಎಂನ್ನು ತೆಗೆದು ಹಾಕುತ್ತಿದ್ದಾರೆ. ರಾಜೀವ್ ಗಾಂಧಿ ಈ ಕಾಯಿದೆ ತರುವಾಗ ವಿಸ್ತೃತವಾಗಿ ಚರ್ಚೆ ಮಾಡಿ ಇದನ್ನು ಜಾರಿಗೆ ತಂದಿರುತ್ತಾರೆ. ಸುಪ್ರೀಂಕೋರ್ಟ್ ಈ ಇವಿಎಂನಲ್ಲೇ ಮತದಾನ ನಡೆಯಬೇಕು ಅಂದಿದೆ. ಕರ್ನಾಟಕದಲ್ಲಿ ಮತದಾನ ನಡೆಯುವಾಗ ಇವಿಎಂ ಸರಿ ಇತ್ತು. ತೆಲಂಗಾಣದಲ್ಲಿ ಇವಿಎಂ ಸರಿ ಇತ್ತು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಪಲ್ಟಿ ಹೊಡೆಯಿತು. ಆಗ ಚರ್ಚೆ ಆರಂಭವಾಯಿತು. ನೀವೇ ಹಾಕಿರುವ ಎಸಿ, ತಹಸೀಲ್ದಾರ್, ಅಧಿಕಾರಿಗಳನ್ನು ನಿಯೋಜನೆ ಮಾಡಲಾಗುತ್ತದೆ. ಅವರ ಮೇಲೆನೇ ನಿಮಗೆ ನಂಬಿಕೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜನವಿರೋಧಿ ವಿಧೇಯಕ ಮಂಡನೆ

ಮಾಜಿ ಡಿಸಿಎಂ ಅಶ್ವತ್ಥನಾರಾಯಣ್ ಮಾತನಾಡಿ, ಹೊಸ ಮಸೂದೆಯಲ್ಲಿ ನಾಮಪತ್ರ ಸಲ್ಲಿಸುವ ಕೊನೆ ದಿನವರೆಗೆ ಮತದಾರರ ಹೆಸರು ಸೇರ್ಪಡೆಗೊಳಿಸುವ ಅವಕಾಶ ನೀಡಲಾಗಿದೆ. ಹೇಗಾದರೂ ಮಾಡಿ ಚುನಾವಣೆ ಗೆಲ್ಲುವ ಉದ್ದೇಶ ಇದರ ಹಿಂದಿದೆ ಅಷ್ಟೇ. ಚುನಾವಣಾ ಆಯೋಗದ ಮೇಲೆ ಇಲ್ಲಸಲ್ಲದ ಆರೋಪ ಮಾಡುವುದು ಸರಿಯಲ್ಲ. ಜನವಿರೋಧಿ ಮಸೂದೆ ಇದು. ಇವರಿಗೆ ಯಾರು ನೆಮ್ಮದಿಯಿಂದ ಇರಬಾರದು. ಎಲ್ಲರೂ ಹೊಡೆದಾಡಿ ಸತ್ತು, ಸಮಾಜ ನೆಮ್ಮದಿಯಿಂದ ಇರಲು ತಯಾರಿಲ್ಲ ಎಂಬುದು ಇದರ ಉದ್ದೇಶ ಆಗಿದೆ. ಬ್ಯಾಲೆಟ್ ಪೇಪರ್ ಕಳ್ಳತನ ಆಗಿರುವುದನ್ನು ನಾವು ಹಿಂದೆ ನೋಡಿದ್ದೇವೆ. ಐಟಿ ಸಚಿವರು ಇಂಥ ಬಿಲ್ ತಂದಿರುವುದು ದುರದೃಷ್ಟಕರ. ಇದನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಬಿಜೆಪಿ-ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ

← ಮೊದಲಪುಟದಿಂದ

ದಾವಣಗೆರೆ ಅಲ್ಪಸಂಖ್ಯಾತ ಸಮುದಾಯದ ಮುಖಂಡ ಖಾಲಿದ್ ಸಾದಿಕ್ ಪೈಲ್ವಾನ್, ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಕೈ-ಕಮಲದಿಂದ ಬಲಾಬಲ ಪ್ರದರ್ಶನ: ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಪೈಪೋಟಿಗೆ ಬಿದ್ದವರಂತೆ ಭಾರೀ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಸೇರಿಸಿ ಬಲಾಬಲ ಪ್ರದರ್ಶಿಸಿದ್ದಾರೆ. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳು ಎರಡು ಕ್ಷೇತ್ರಗಳಲ್ಲಿ ಒಂದೇ ಮಾರ್ಗದಲ್ಲಿ ತೆರೆದ ವಾಹನ ಮೂಲಕ ಮೆರವಣಿಗೆಯಲ್ಲಿ ಸಾಗಿ ಪ್ರಮುಖ ಬೀದಿಗಳ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿದರು. ಬಿಜೆಪಿ ಅಭ್ಯರ್ಥಿಗಳು ಭಾರತ್ ಮಾತೆಗೆ, ಪ್ರಧಾನಿ ನರೇಂದ್ರ ಮೋದಿಗೆ ಜೈಕಾರ ಹಾಕಿದರೆ. ಕಾಂಗ್ರೆಸ್ ಕಾರ್ಯಕರ್ತರು ಮುಖ್ಯ ಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಜೈಕಾರ ಹಾಕಿದರು. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಭಾರೀ ಭದ್ರತೆ ಕೈಗೊಂಡಿದ್ದರು.

ಬಾಗಲಕೋಟೆಯಲ್ಲೂ ಶಕ್ತಿ ಪ್ರದರ್ಶನ: ಬಾಗಲಕೋಟೆಯಲ್ಲಿ ಅಭ್ಯರ್ಥಿ ಡಾ.ವೀರಣ್ಣ ಚರಂತಿಮಠ ಬೃಹತ್ ಶೋಭಾಯಾತ್ರೆ ಮೂಲಕ ನಾಮಪತ್ರ ಸಲ್ಲಿಕೆ ಮಾಡಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಸಿಎಂ ಜಗದೀಶ ಶೆಟ್ಟರ, ಸಂಸದರಾದ ಪಿ.ಸಿ ಗದ್ದಿಗೌಡರ್ ,ಗೋವಿಂದ ಕಾರಜೋಳ, ರಾಜ್ಯಸಭಾ ಸದಸ್ಯ ನಾರಾಯಣ ಸಾ. ಭಾಂಡಗೆ ಮಾಜಿ ಸಚಿವರಾದ ಬಿ.ಶ್ರೀ ರಾಮುಲು, ಮುರುಗೇಶ್ ನಿರಾಣಿ ಮತ್ತಿತರರು ಇದ್ದರು. ಕಾಂಗ್ರೆಸ್‌ನ ಉಮೇಶ ಮೇಟಿ ಕೂಡ ನಾಮಪತ್ರ ಸಲ್ಲಿಸಿದ್ದು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಆರ್.ಬಿ.ತಿಮ್ಮಾಪುರ, ಸತೀಶ ಜಾರಕಿಹೊಳಿ, ಎಂ.ಬಿ. ಪಾಟೀಲ, ಶಿವಾನಂದ ಪಾಟೀಲ, ಶಿವರಾಜ ತಂಗಡಗಿ, ರಹೀಂಖಾನ್ ಸೇರಿದಂತೆ ಹಲವು ಮುಖಂಡರು ಭಾಗಿಯಾಗಿದ್ದರು.

ಭಾರತೀಯ ಷೇರು ಪೇಟೆಯಲ್ಲಿ ರಕ್ತಪಾತ

← ಮೊದಲಪುಟದಿಂದ

ಇತರೆ ಕಂಪನಿಗಳು ನಷ್ಟ ಅನುಭವಿಸಿದವು. ಯುದ್ಧದ ಪರಿಸ್ಥಿತಿಯಿಂದ ಷೇರುದಾರರು ಆತಂಕಗೊಂಡು ಷೇರುಗಳನ್ನು ಮಾರಲು ಶುರು ಮಾಡಿದ್ದರಿಂದ ಈ ಪರಿಸ್ಥಿತಿಯುಂಟಾಗಿದೆ.

ರುಪಾಯಿ ಮೌಲ್ಯ ಕುಸಿತ: ಆರಂಭಿಕ ವಹಿವಾಟಿನಲ್ಲಿ ಯುಎಸ್ ಡಾಲರ್ ವಿರುದ್ಧ ರುಪಾಯಿ ಮೌಲ್ಯ 33 ಪೈಸೆ ಕುಸಿದು 93.86ಕ್ಕೆ ತಲುಪಿ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಹೋಗಿದೆ. ರುಪಾಯಿ ಮೌಲ್ಯ ಕುಸಿಯುತ್ತಿರುವ ಕಾರಣ ಮಾರುಕಟ್ಟೆಯಿಂದ ವಿದೇಶಿ ಹೂಡಿಕೆದಾರರು ನಿರ್ಗಮಿಸುತ್ತಿದ್ದಾರೆ. ಇತ್ತ ಯುದ್ಧದ ಭೀತಿ, ಕಚ್ಚಾತೈಲ, ಗ್ಯಾಸ್ ಕೊರತೆ ಹಿನ್ನೆಲೆಯಲ್ಲಿಯೂ ದೇಶೀಯ ಹೂಡಿಕೆದಾರರಿಗೂ ಆತಂಕ ಎದುರಾಗಿದೆ. ಪರಿಣಾಮ ಮಾರುಕಟ್ಟೆ ನಿರಂತರವಾಗಿ ಕುಸಿಯುತ್ತಿದೆ.

ಗಂಡು ಹುಲಿ ಸೆರೆ, ಸ್ಥಳೀಯರು ನಿಟ್ಟುಸಿರು

ಚಾಮರಾಜನಗರ: ಕಳೆದ ನಾಲ್ಕೈದು ದಿನಗಳಿಂದ ಜಾನುವಾರುಗಳ ಮೇಲೆ ಸತತ ದಾಳಿ ನಡೆಸುತ್ತಿದ್ದ ಹುಲಿಯನ್ನು ಬಂಡೀಪುರ ಟೈಗರ್ ರಿಸರ್ವ್‌ನ ಅರಣ್ಯಾಧಿಕಾರಿಗಳು ಸಾಕಾನೆಯ ಕಾರ್ಯಚರಣೆ ಮೂಲಕ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬೇರಂಬಾಡಿ ಗ್ರಾಮದ ಸುತ್ತಮುತ್ತ ಜಾನುವಾರುಗಳ ಮೇಲೆ ದಾಳಿ ಮಾಡಿ ಜನರ ಕಣ್ಣಿಗೂ ಕಾಣಿಸಿಕೊಂಡು ಆತಂಕ ಸೃಷ್ಟಿಸಿದ್ದ ಹುಲಿ ಸೋಮವಾರ ಸೆರೆಯಾಗಿದ್ದು, ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದಾರೆ. ಸಾಕಾನೆ ಜಯಪ್ರಕಾಶ್ ಮೂಲಕ ನುರಿತ ತಜ್ಞರ ತಂಡದೊಂದಿಗೆ ಕಾರ್ಯಚರಣೆ ಆರಂಭಿಸಿದ ಅರಣ್ಯ ಸಿಬ್ಬಂದಿಗಳು, ಡಾಟ್ ಮೂಲಕ ಹುಲಿ ಸೆರೆ ಹಿಡಿದಿದ್ದಾರೆ. ಇನ್ನು ಈ ಹುಲಿ ನಂಜೇದೇವನಪುರದ ಬಳಿ ನಾಪತ್ತೆಯಾಗಿದ್ದ ಹುಲಿಯಾ ಅಥವಾ ಬೇರೆಯ ಹುಲಿಯೇ ಎಂಬುದು ತಿಳಿಯಬೇಕಾಗಿದೆ. ಅಲ್ಲಿ ನಾಲ್ಕು ಹುಲಿ ಮರಿಗಳ ಪೈಕಿ ಮೂರು ಮರಿ ಹುಲಿ ಸಿಕ್ಕಿದ್ದವು. ಈಗ ಈ ಹುಲಿಯೂ ಒಂದೂವರೆ ವರ್ಷದ ಹುಲಿಯಾದದ್ದರಿಂದ ಯಾವುದು ಎಂಬುದು ಪತ್ತೆಯಾಗಬೇಕಿದೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/5054–4059ಸಿಎಂಐಡಿಪಿ–ಎಸ್‌ಸಿಪಿ–ಟಿಎಸ್‌ಪಿ–3054/2025–26/5771/ ದಿನಾಂಕ : 20–03–2026
ಇ–ಟೆಂಡರ್ ಪ್ರಕಟಣೆ
ದಿನಾಂಕ : 20–03–2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 34533, 30108–2ನೇ ಕರೆ, 33916–2ನೇ ಕರೆ, 34956, 34957, 34960, 34958, 34071–2ನೇ ಕರೆ, 34961 ಮತ್ತು 34959ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **30–03–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹೀರಾತು ಹೊರಡಿಸಲಾಗುವುದಿಲ್ಲ.
ಸಹಿ/– (ಎನ್.ಎನ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/833/2025–26

ವಾಣಿಜ್ಯ ಬಳಕೆದಾರರಿಗೆ ಗೇಲ್ ನೋಂದಣಿ ಕಡ್ಡಾಯ: ಸಚಿವ ಕೆ.ಎಚ್.ಮುನಿಯಪ್ಪ

← ಮೊದಲಪುಟದಿಂದ

ರಾಜ್ಯದಲ್ಲಿ ಪ್ರತಿದಿನ ಸುಮಾರು 7000 ಕಮರ್ಷಿಯಲ್ ಸಿಲಿಂಡರ್‌ಗಳನ್ನು ಹಂಚಿಕೆ ಮಾಡಲಾಗುತ್ತಿತ್ತು. ಇದೀಗ 15,000-16,000 ಸಿಲಿಂಡರ್‌ಗಳ ವಿತರಣೆ ಮಾಡಲು ನಿರ್ಧರಿಸಲಾಗಿದೆ. ಇದರಲ್ಲಿ ಹೋಟೆಲ್, ರೆಸ್ಟೋರೆಂಟ್, ಡಾಬಾ, ಕ್ಯಾಂಟೀನ್, ಫುಡ್ ಪ್ರೊಸೆಸಿಂಗ್ ಘಟಕಗಳು ಸೇರಿದಂತೆ ವಿವಿಧ ಸೇವಾ ವಲಯಗಳಿಗೆ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಶೇ.20ರಷ್ಟು ಸಿಲಿಂಡರ್ ಪೂರೈಕೆಗೆ ಕೇಂದ್ರ ಸರಕಾರ ಅಸ್ತು: ಇನ್ನು ಇದೇ ವಿಷಯವಾಗಿ ವಿಧಾನಪರಿಷತ್‌ನಲ್ಲಿ ಉತ್ತರಿಸಿದ ಸಚಿವರು, ವಾಣಿಜ್ಯ ಉದ್ದೇಶದ ಸಿಲಿಂಡರ್ ಪೂರೈಕೆ ಪ್ರಮಾಣ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದಿರುವ ಪತ್ರಕ್ಕೆ ಕೇಂದ್ರ ಸರಕಾರ ಸ್ಪಂದಿಸಿರುವುದು ಸಂತೋಷ. ಪ್ರಾಥಮಿಕ ಹಂತದಲ್ಲಿ ಶೇ.20 ರಷ್ಟು ಸಿಲಿಂಡರ್ ಪೂರೈಕೆಗೆ ಅಸ್ತು ಎಂದಿದೆ. ಹೋಟೆಲ್,ಆಸ್ಪತ್ರೆ ಕ್ಯಾಂಟೀನ್‌ಗಳಿಗೆ ಸಂಬಂಧಿಸಿದಂತೆ ಶೇ.20 ರಷ್ಟು ಸಿಲಿಂಡರ್ ಪೂರೈಕೆಗೆ ಒಪ್ಪಿದೆ. ಅದರ ಮೂಲಕ ಶಾಲೆಗಳಿಗೆ ಪ್ರತಿ ದಿನದ ಲೆಕ್ಕದಂತೆ 4200, ವಿಮಾನ ನಿಲ್ದಾಣ, ಇಂದಿರಾ ಕ್ಯಾಂಟೀನ್, ಪಿಎಚ್‌ಸಿ ಕ್ಯಾಂಟೀನ್ ಮೊದಲಾದವುಗಳಿಗೆ 1200, ಹೋಟೆಲ್ ಮೊದಲಾದ ವಾಣಿಜ್ಯ ಉದ್ದೇಶಗಳಿಗೆ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆ ಸಾಧ್ಯ ಎಂದರು.

ಆಗ ಮೇಲ್ಮನೆ ಸದಸ್ಯ ಐವಾನ್ ಡಿಸೋಜಾ ಅಸಮಾಧಾನ ಹೊರಹಾಕಿ, ಶೇ.20 ರಷ್ಟು ಮಾತ್ರ ವಾಣಿಜ್ಯ ಸಿಲಿಂಡರ್ ಪೂರೈಕೆ ಮಾತ್ರ ಕೇಂದ್ರ ಸರಕಾರ ಅಸ್ತು ಎಂದಿದೆ.

ಇನ್ನೂ ಶೇ.80ರಷ್ಟು ಹೋಟೆಲ್‌ಗಳು ಮುಚ್ಚಬೇಕೆ? ಸಿಲಿಂಡರ್ ಇಲ್ಲದ ಪಕ್ಷದಲ್ಲಿ ಕಟ್ಟಿಗೆಯಾದರೂ ಹೋಟೆಲ್‌ನವರಿಗೆ ಪೂರೈಸಿ ಸೌದೆ ಹಚ್ಚಿಯಾದರೂ ಅವರು ಹೋಟೆಲ್ ನಡೆಸುತ್ತಾರೆ ಎಂದು ಅಸಮಾಧಾನ ಹೊರಹಾಕಿದರು. ಆಗ ಸಚಿವ ಈಶ್ವರ ಖಂಡ್ರೆ, ಗಿಡ-ಮರಗಳನ್ನು ಕಡಿಯುವ ಹಾಗಿಲ್ಲ, ಈಗಾಗಲೇ ಸ್ಪಷ್ಟವಾದ ಆದೇಶವನ್ನು ಹೊರಡಿಸಲಾಗಿದೆ ಎಂದರು.

14767.89 ಕೋಟಿ ರು. ಪೂರಕ ಅಂದಾಜು ಮಂಡನೆ

ವಿಧಾನಸಭೆ: ಸಿಎಂ ಸಿದ್ದರಾಮಯ್ಯ ಅವರ ಪರ ವಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು 14767.89 ಕೋಟಿ ರು. ಮೊತ್ತದ ಪೂರಕ ಅಂದಾಜುಗಳನ್ನು (3ನೇ ಮತ್ತು ಅಂತಿಮ ಕಂತು) ವಿಧಾನಸಭೆಯಲ್ಲಿ ಮಂಡಿಸಿದರು.

ಅಂತಿಮ ಕಂತಿನ ಪೂರಕ ಅಂದಾಜಿನಲ್ಲಿ ಒದಗಿಸಿರುವ ಒಟ್ಟು ಮೊತ್ತದಲ್ಲಿ 7.41 ಕೋಟಿ ರು. ಪ್ರಸ್ತುತ ವೆಚ್ಚ ಮತ್ತು 14760.49 ಕೋಟಿ ರೂ. ಪುರಸ್ಕೃತ ವೆಚ್ಚ ಸೇರಿವೆ. ಮೀಸಲು ನಿಧಿಯಿಂದ ರಿಸಲಾಗುವ 911.11 ಕೋಟಿ ರು. ಸಹ ಪುರಸ್ಕೃತವಾಗಬೇಕಾಗಿದೆ. ಸಂಚಿತ ನಿಧಿಯಿಂದ ಹೊರ ಹೋಗುವ ನಿವ್ವಳ ಮೊತ್ತ 13856.79 ಕೋಟಿ ರು., ಇದರಲ್ಲಿ 5735.80 ಕೋಟಿ ರು. ಕೇಂದ್ರ ಸಹಾಯಕ್ಕೆ ಸಂಬಂಧಿಸಿದ್ದು. ಹೊರ ಹೋಗುವ ನಿವ್ವಳ ಮೊತ್ತ 8120.99 ಕೋಟಿ ರೂ.ಗಳಾಗಿರುತ್ತವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜಸ್ವ ಲೆಕ್ಕದಲ್ಲಿ 40,169.96 ಲಕ್ಷ ರು.ಗಳು ಹಾಗೂ ಬಂಡವಾಳ ಲೆಕ್ಕದಲ್ಲಿ 6,617.14 ಲಕ್ಷ ರು. ಒದಗಿಸಲಾಗಿದೆ. ಹೀಗೆ 22 ಇಲಾಖೆಗಳಿಗೂ ಅಗತ್ಯವಿರುವ ವೆಚ್ಚದ ಅಂದಾಜುಗಳನ್ನು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಮುಖಾಂಶ

- ಉಪಚುನಾವಣೆಗಳಿಗೆ 5.55 ಕೋಟಿ ರು. ಹೆಚ್ಚುವರಿ ಅನುದಾನ.
- ರಾಜ್ಯಪಾಲರು, ಮುಖ್ಯಮಂತ್ರಿಗಳ ಹೆಲಿಕಾಪ್ಟರ್, ಏರ್ ಕ್ರಾಫ್ಟ್‌ಗೆ 15 ಕೋಟಿ ಪೂರಕ ಅಂದಾಜು.
- ದೇವೇಗೌಡರಿಗೆ ಹೊಸ ವಾಹನ ಖರೀದಿಗೆ 1.25 ಕೋಟಿ ರು.
- ವಯನಾಡು ಭೂಕುಸಿತ ಸಂತ್ರಸ್ತರ ಪುನರ್ವಸತಿಗೆ 10 ಕೋಟಿ ರು. ವೆಚ್ಚ.
- ದಾವೋಸ್ ಶೃಂಗಸಭೆಗೆ ರಾಜ್ಯದ ನಿಯೋಗದ ಪ್ರವಾಸ ವೆಚ್ಚ 10 ಕೋಟಿ ರು.
- ಬೆಂಗಳೂರಿನಲ್ಲಿ ನಡೆದ ಹೂಡಿಕೆದಾರರ ಸಮಾವೇಶಕ್ಕೆ 25 ಕೋಟಿ ರೂ. ಹೆಚ್ಚುವರಿ ಅಂದಾಜು.
- ಕೈಗಾರಿಕಾ ಘಟಕಗಳಿಗೆ ಸಹಾಯಧನ 335 ಕೋಟಿ ರು.
- ಗೃಹಜ್ಯೋತಿ ಗ್ಯಾರಂಟಿ ಬಾಕಿ ಪಾವತಿಗೆ 159 ಕೋಟಿ ರು.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ವಿಭಾಗ, ಚಿಕ್ಕಬಳ್ಳಾಪುರ
ಟೆಂಡರ್‌ಗಳಿಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ:23/2025–26 ದಿನಾಂಕ:18.03.2026
ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ರಸ್ತೆ/ಕಟ್ಟಡ/ಸೇತುವೆ ಸುಧಾರಣೆ/ ನಿರ್ಮಾಣ ಕಾಮಗಾರಿಗಳಿಗೆ ಕೆ.ಡಬ್ಲ್ಯು–1, 2 & 4ರಂತೆ ಕಾ.ಇಂ, ಲೋ.ಇ ಚಿಕ್ಕಬಳ್ಳಾಪುರರವರು ರಾಜ್ಯಪಾಲರ ಪರವಾಗಿ ಏಕ/ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in ದಿನಾಂಕ: 18.03.2026 ರಿಂದ 25.03.2026, ದಿನಾಂಕ: 02.04.2026 & ದಿನಾಂಕ: 17.04.2026 ರವರೆಗೆ ಪಡೆದು ಸಂಜೆ 4.00 ಗಂಟೆಗಳ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.** ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾ.ಇಂ, ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:503/ಕೆಎಸ್‌ಎಂಸಿಎ/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 9448994705
ಇ–ಮೇಲ್ ಐಡಿ: gmpurc@cescmysore.org , ವೆಬ್‌ಸೈಟ್: www.cescmysore.org
ಚಾವಿಸನಿನಿ/ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–1/2025–26/43748–51 ದಿನಾಂಕ: 23.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಮಂಡ್ಯ ಉಪವಿಭಾಗದ, ಮಂಡ್ಯ ಸಿಟಿ ವ್ಯಾಪ್ತಿಯಲ್ಲಿ ಬರುವ 11ಕೆವಿ ಡಿ.ಸಿ ಓವರ್‌ಹೆಡ್ ಮಾರ್ಗವನ್ನು 11ಕೆವಿ ಭೂಗತ ಕೇಬಲ್ ನಿಂದಿ ಪರಿವರ್ತಿಸುವ ಕಾಮಗಾರಿ	ಸಿ2–6481/20.03.2026
2	ಚಾ.ವಿ.ಸ.ನಿ.ನಿ., ಗೆ 11kV Horizontal X arms (MS)ಗಳನ್ನು ಸರಬರಾಜು ಮಾಡುವುದು.	ಸಿ2–6482/20.03.2026
3	ಚಾ.ವಿ.ಸ.ನಿ.ನಿ., ಗೆ LT 4 Pin X arms (MS) ಗಳನ್ನು ಸರಬರಾಜು ಮಾಡುವುದು.	ಸಿ2–6483/20.03.2026

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ **23.03.2026** ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912
ವಾಸಾಸಂಇ/ಮೈಸೂರು/1873/ಶಿರಡಿಸಾಯಿ/2025–26 ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ)ಚಾ.ವಿ.ಸ.ನಿ.ನಿ., ಮೈಸೂರು.

ಆನೆ ಮರಿಗೆ ಪಶುವೈದ್ಯೆ ಸಮೀಕ್ಷಾ ರೆಡ್ಡಿ ಹೆಸರು

ಶಿವಮೊಗ್ಗ: ಇಲ್ಲಿನ ಮೃಗಾಲಯದಲ್ಲಿ ನೀರಾನೆ ದಾಳಿಯಿಂದ ಮೃತಪಟ್ಟ ಟ್ರೈನಿ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಅವರ ಹೆಸರನ್ನು ಬನ್ನೇರುಘಟ್ಟದಲ್ಲಿ ಈಚೆಗೆ ಜನಿಸಿದ ಆನೆ ಮರಿಗೆ ನಾಮಕರಣ ಮಾಡುವುದಾಗಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ತಿಳಿಸಿದರು. ಶಿವಮೊಗ್ಗ ಮೃಗಾಲಯಕ್ಕೆ ಭೇಟಿ ನೀಡಿದ್ದ ಅವರು ಅಧಿಕಾರಿಗಳ ಬಳಿ ಮಾಹಿತಿ ಪಡೆದು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಇದರ ಜೊತೆಗೆ ಡಾ. ಸಮೀಕ್ಷಾ ರೆಡ್ಡಿ ಅವರಿಗೆ ಹುತಾತ್ಮ ಪಟ್ಟ ನೀಡುವ ಬಗ್ಗೆಯೂ ಸರಕಾರದ ಹಂತದಲ್ಲಿ ಚರ್ಚಿಸಲಾಗುವುದು. ಡಾ.ಸಮೀಕ್ಷಾ ರೆಡ್ಡಿ ಸಾವು ತೀವ್ರ ಆಘಾತ ತಂದಿದೆ. ಇಂತಹ ಘಟನೆ ನಡೆಯಬಾರದಿತ್ತು, ನಡೆದಿದೆ. ಪೊಲೀಸ್ ಹಾಗೂ ಅರಣ್ಯ ಇಲಾಖೆ ವತಿಯಿಂದ ಘಟನೆ ಕುರಿತು ತನಿಖೆ ನಡೆಯುತ್ತಿದೆ. ವರದಿ ಬಂದ ಮೇಲೆ ಯಾರೇ ತಪ್ಪಿತಸ್ಥರಿದ್ದರೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ನೀರಾನೆ ಎರಡು ಬಾರಿ ಮರಿ ಕಳೆದುಕೊಂಡಿದೆ. ಮೂರನೇ ಸಲ ಗರ್ಭ ಧರಿಸಿದ್ದು ಈ ಬಾರಿಯಾದರೂ ಮರಿ ಉಳಿಸಿಕೊಳ್ಳಬೇಕೆಂಬ ವಿಶೇಷ ಕಾಳಜಿಯಿಂದ ಸಮೀಕ್ಷಾ ಅವರ ಮೇಲೆ ದಾಳಿ ಮಾಡಿರಬಹುದು ಎಂದು ಶಂಕಿಸಲಾಗಿದೆ.

ಅಕ್ರಮ ಸಂಬಂಧ ಶಂಕೆ: ವ್ಯಕ್ತಿ ಕೊಲೆ

ಯಾದಗಿರಿ: ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ವಿಚಾರವನ್ನು ಪ್ರಶ್ನಿಸಿದ ಪತಿಯನ್ನು ಪ್ರಿಯಕರನೇ ಹತ್ಯೆ ಮಾಡಿದ ಘಟನೆ ತಾಲೂಕಿನ ಹೊಸಹಳ್ಳಿ ಸಮೀಪ ಬೆಳಕಿಗೆ ಬಂದಿದೆ.

ತಾಲೂಕಿನ ಚಾಮನಹಳ್ಳಿ ತಾಂಡದ ನಿವಾಸಿ ಸಾಗರ್ ರಾಠೋಡ್ (30) ಹತ್ಯೆಗೆ ಒಳಗಾದ ವ್ಯಕ್ತಿ. ಅದೇ ತಾಂಡದ ರೆಡ್ಡಿ ರಾಠೋಡ್ ಆರೋಪಿಯಾಗಿದ್ದು, ಪೊಲೀಸರು ಆತನನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ. ಕಳೆದ ಒಂದು ವರ್ಷದಿಂದ ಸಾಗರ್ ಪತ್ನಿಯೊಂದಿಗೆ ರೆಡ್ಡಿ ಅಕ್ರಮ ಸಂಬಂಧ ಹೊಂದಿದ್ದನು ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಇಬ್ಬರ ನಡುವೆ ಆಗಾಗ ಗಲಾಟೆಗಳು ನಡೆಯುತ್ತಿದ್ದವು. ಸೋಮವಾರ ರಾತ್ರಿ ವೈಷಮ್ಯ ತೀವ್ರಗೊಂಡು, ರೆಡ್ಡಿ ರಾಠೋಡ್ ಸಾಗರ್ ಮೇಲೆ ದಾಳಿ ನಡೆಸಿ ಹತ್ಯೆ ಮಾಡಿದ್ದಾನೆ. ನಂತರ ಈ ಕೃತ್ಯವನ್ನು ಅಪಘಾತದಂತೆ ಬಿಂಬಿಸಲು ಆಟೋಗೆ ಹಾನಿ ಮಾಡಿ, ಮೃತದೇಹವನ್ನು ಸ್ವಲ್ಪ ದೂರದಲ್ಲಿ ಹಾಕಿ ಪರಾರಿಯಾಗಿದ್ದಾನೆ ಎಂದು ತಿಳಿದು ಬಂದಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2025-26/5991 Date:20-03-2026
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ–1,2&3)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಅಥಣಿ ಉಪ ವಿಭಾಗಗಳಡಿಯ ಒಟ್ಟು 7 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.80.50 ಲಕ್ಷಗಳು ಹಾಗೂ ಕನಿಷ್ಠ ರೂ.3.40 ಲಕ್ಷಗಳು. 1.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:30–03–2026 ಸಾಯಂಕಾಲ 4.00 ಗಂಟೆಯವರೆಗೆ 2.ಟೆಂಡರ ತೆರೆಯುವ ದಿನಾಂಕ:01–04–2026 ಮುಂಜಾನೆ 11.00 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 3.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ &
www.kppp.gov.in
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-2134/KSMCA/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಬದಂಕಾ ವಿಭಾಗ–05,
ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು.
email:kbjnleenrbc5@gmail.com
ಸಂ.ಕೃಭಾಜನಿನಿ/ನಾಬದಂಕಾ/ವಿ–5/ಯೋಶಾ/2025–26/885 ದಿನಾಂಕ:–18.03.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ದ್ವಿ–ಲಕೋಟೆ ಪದ್ದತಿಯಲ್ಲಿ ಈ ಕೆಳಗೆಂಡ ತಿಳಿಸಿರುವಂತೆ ಸಮಾಲೋಚಕರ ಸೇವೆಗಳು (Consultancy services) ಕಾಮಗಾರಿಗೆ ಇ–ಪ್ರೋಕ್ಯೂರ್ಮೆಂಟ್ ಮೂಲಕ ಅಹ್ವಾನಿಸಲಾಗಿದೆ.
1) **ಲಕೋಟೆ ಪದ್ದತಿ:** ದ್ವಿ–ಲಕೋಟೆ 2) **ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/OW/WORK_INDENT 2779 3) **ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 20.03.2026 ರಿಂದ 01.04.2026 ಸಂಜೆ 5.00 ಗಂಟೆಯವರೆಗೆ 4) **ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 25.03.2026 ರಂದು ಬೆಳಿಗ್ಗೆ 10.30 ಗಂಟೆಯವರೆಗೆ 5) **ಪ್ರೀ–ಬಿಡ್‌ಸಭೆ ಜರುಗುವ ದಿನಾಂಕ:** 25.03.2026 ರಂದು ಮಧ್ಯಾಹ್ನ 3.00 ಗಂಟೆಗೆ 6) **ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 01.04.2026 ರಂದು ಸಂಜೆ5.00 ಗಂಟೆ ಯವರೆಗೆ 7) **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 02.04.2026 ರಂದು ಸಂಜೆ 5.15 ಗಂಟೆಗೆ 7) **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 04.04.2026 ರಂದುಬೆಳಿಗ್ಗೆ 11.30ಗಂಟೆಗೆ (ತಾತ್ಕಾಲಿಕ)
ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಕೃಭಾಜನಿನಿ, ನಾಎದಂಕಾ ವಿಭಾಗ, ರೋಡಲಬಂಡಾ.
DIP/RCR/778/KSMC&A/781/2025-26

ಮೀಸಲು ಪ್ರಕ್ರಿಯೆ ಪೂರ್ಣಗೊಳಿಸಲು 3 ತಿಂಗಳು ಕೇಳಿದ ಸರಕಾರ

ಸದ್ಯಕ್ಕಿಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳ ಚುನಾವಣಾ ಮೀಸಲು ಪ್ರಕ್ರಿಯೆ ಅಂತಿಮಗೊಳಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಪಟ್ಟಿ ಸಲ್ಲಿಸಲು ಕನಿಷ್ಠ ಮೂರು ತಿಂಗಳ ಕಾಲಾವಕಾಶ ಬೇಕಾಗುತ್ತದೆ ಎಂದು ರಾಜ್ಯ ಸರಕಾರವು ಹೈಕೋರ್ಟ್‌ಗೆ ಮೌಖಿಕವಾಗಿ ತಿಳಿಸಿದೆ. ಹೊಸದಾಗಿ ಜನಸಂಖ್ಯೆಗೆ ಅನುಗುಣವಾಗಿ ಒಟ್ಟು ಸದಸ್ಯರ ಸಂಖ್ಯೆಯನ್ನು ಗುರುತಿಸಲು ಕನಿಷ್ಠ ನಾಲ್ಕು ವಾರ ಗಳ ಕಾಲಾವಕಾಶ ಅಗತ್ಯವಿದೆ ಎಂದು ಲಿಖಿತ ರೂಪ ದಲ್ಲಿಯೂ ಮನವಿ ಮಾಡಿದ್ದು, ಇದರಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಮತ್ತಷ್ಟು ವಿಳಂಬವಾಗುವುದು ಖಚಿತವಾಗಿದೆ.

ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸಕಾಲದಲ್ಲಿ ನಡೆಸಲು ಅನುಕೂಲವಾಗುವಂತೆ, ಶೀಘ್ರವೇ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲು ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ರಾಜ್ಯ ಚುನಾವಣಾ ಆಯೋಗವು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠವು ಸೋಮವಾರ ವಿಚಾರಣೆ ನಡೆಸಿತು.

ಚುನಾವಣಾ ಆಯೋಗ ಪ್ರತಿನಿಧಿಸಿದ್ದ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು 92 ಗ್ರಾಮ ಪಂಚಾಯಿತಿಗಳಿಗೆ ಗಡಿ ಗುರುತಿಸುವುದು ಸಮಸ್ಯೆಯಾಗಿದೆ. ಸರಕಾರವು ಎಷ್ಟು ಸದಸ್ಯರು ಎಂದು ನಿರ್ಧರಿಸಬೇಕಿದೆ. ಜನಸಂಖ್ಯೆ ಆಧಾರದಲ್ಲಿ ಸದಸ್ಯರ ಸಂಖ್ಯೆ ಬದಲಾಗುವುದಿಲ್ಲ. ನಗರ ಸ್ಥಳೀಯ ಸಂಸ್ಥೆಗಳ ಅವಧಿಯೂ ಮುಕ್ತಾಯವಾಗಿದೆ. ನಗರ ಸಭೆ, ಪಟ್ಟಣ ಪಂಚಾಯಿತಿ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಿದೆ ಎಂದರು.

ವಿಚಾರಣೆಯ ವೇಳೆ ರಾಜ್ಯ ಸರಕಾರದ ಪರ ಹೆಚ್ಚುವರಿ ಅಡ್ವೋಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ಚುನಾಯಿತ ಸದಸ್ಯರ ಸಂಖ್ಯೆ ಅಂತಿಮಗೊಂಡ ಬಳಿಕ ಮೀಸಲು ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಮೂರು ತಿಂಗಳು ಬೇಕಾಗಬಹುದು ಎಂದು ವಿವರಿಸಿ ವಸ್ತುಸ್ಥಿತಿ ವರದಿ ಸಲ್ಲಿಸಿದರು. ಸರಕಾರದ ಈ ಹೇಳಿಕೆಗಳನ್ನು ದಾಖಲಿಸಿಕೊಂಡ ನ್ಯಾಯಪೀಠವು, ಮುಂದಿನ ವಿಚಾರಣೆಯನ್ನು ಏಪ್ರಿಲ್ 29ಕ್ಕೆ ಮುಂದೂಡಿದೆ.

ವಿಶ್ವವಾಣಿ ಬೆಂಗಳೂರು 24-03-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಮಿನುಗು.. ಮಿನುಗೆಲೆ ನಕ್ಷತ್ರ!

ತಾರೆಗಳ ತೋಟದಿಂದ ಬರುತ್ತಿಲ್ಲ ಚಂದಿರ...

• ಡಾ. ಮೈತ್ರಿ ಭಟ್, ವಿಟ್ಲ

ಬಾಲ್ಯದಲ್ಲಿ ರಾತ್ರಿ ಅಂಗಳದಲ್ಲಿ ನಿಂತು ಆಗಸವ ದಿಟ್ಟಿಸಿದರೆ ಸಾಕು, ಆಗಸದ ತುಂಬಾ ಹೊಳೆ ಹೊಳೆಯುವ ಚುಕ್ಕಿಗಳು. ಮಿನುಗುವ ಆ ತಾರೆಗಳನ್ನು ನೋಡುವುದೇ ಚಂದ. ಅದು ಮನಸಿಗೆ ನೀಡುವ ಆನಂದದ ಹೊಳಪಿಗೆ ಬೇರಾವುದೂ ಸಾಟಿಯಾಗದು. ಅಂಥ ಸಂಭ್ರಮದ ದಿನಗಳವು. ಅದೇಕೋ ಇತ್ತೀಚೆಗೆ ಅದೆಷ್ಟೇ ಸಲ ನೀಲ ಆಗಸವ ದಿಟ್ಟಿಸಿದರೂ ಕೆಲವೊಮ್ಮೆ ಬಹಳ ಕಡಿಮೆ ಅಥವಾ ಇನ್ನೂ ಕೆಲವೊಮ್ಮೆ ಇಲ್ಲವೇ ಇಲ್ಲ ಎಂಬಂತೆ ಹೊಳೆವ ಚುಕ್ಕಿಗಳು, ಎಲ್ಲೋ ಮರೆಯಾಗಿ ಅವಿತು ಕುಳಿತಿವೆಯೇನೋ ಎಂಬಂತೆ ಭಾಸವಾಗುತ್ತಿತ್ತು. 'ಏಕೆ ಹೀಗೆ? ಈ ಚುಕ್ಕಿಗಳೆಲ್ಲಿ ಮರೆಯಾದವು? ಆಕಾಶ ಬಿಟ್ಟು ಹೋದವೇ? ಆಗಸದಿಂದ ಉರುಳಿ ಧರೆ ಸೇರಿದವೇ?' ಎಂಬೆಲ್ಲಾ ಯೋಚನೆಗಳು ಹಾಗೆ ಮನವ ಸುತ್ತಿ ಸುಳಿದು ಮರೆಯಾಗುತ್ತಿದ್ದವು. ಅಂತೂ ಒಂದು ದಿನ ಪಟ್ಟು ಬಿಡದೇ ಉತ್ತರ ಹುಡುಕಲು ಹೊರಟಾಗ ಸಿಕ್ಕ ಕಾರಣಗಳು ಚಿಂತನೆಗೆ ಹಚ್ಚಿದವು. 'ಇನ್ನು ನಮ್ಮ ಮಕ್ಕಳು, ಮೊಮ್ಮಕ್ಕಳು ಈ ಚುಕ್ಕಿಗಳನ್ನು ನಲಿವ ನಮ್ಮಂತೆ ಕಾಣಲು ಸಾಧ್ಯವೇ? ನಲಿದು ಕುಣಿಯಲು ಅವಕಾಶ ಇದೆಯೇ?' ಹೀಗೇ ಸಾಲು ಸಾಲು ಪ್ರಶ್ನೆಗಳು ಮನದಂಗಳದಿ ಸಾಗಿದವು.

ಹೌದು, ನಾವೆಷ್ಟು ಜನ ಈ ಬದಲಾದ ವಿದ್ಯಮಾನವನ್ನು ಕೌತುಕದಿಂದ ಗಮನಿಸಿದ್ದೇವೆ ಅಥವಾ ಅದೆಷ್ಟು ಜನರ ಅರಿವಿಗೆ ಇದು ಬಂದಿದೆ? ಬಹುಶಃ ಬಹಳಷ್ಟು ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನಬಹುದೇನೋ. ಅಂದು ನಾವೆಲ್ಲ ಬಾಲ್ಯದಲ್ಲಿ ಚುಕ್ಕಿಗಳ ಎಣಿಸಲಾರದೆ ಸೋತಿದ್ದೇವೆ. ಆದರಿಂದು ಎಣಿಸುವುದು ಸುಲಭ. ಕಾಣುವ ಚುಕ್ಕಿಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಏಕೆ ಹೀಗೆ ಎಂದು ಹುಡುಕಿದಾಗ ಸಿಕ್ಕ ಉತ್ತರಗಳಿವು:

ಪ್ರಕೃಯಿಂದ ದೂರಾಗುತ್ತಿದ್ದೇವೆ

ಹೀಗೆ ಈ ನಕ್ಷತ್ರಗಳು ಕಾಣಿಸದಿರುವುದು ಪ್ರಕೃತಿಯಿಂದ ನಾವು ದೂರವಾಗುತ್ತಿರುವ ಸಂಕೇತವೂ ಹೌದು. ಅದರಲ್ಲೂ ನಕ್ಷತ್ರಗಳು ಕಾಣಿಸದಿರುವುದಕ್ಕೆ ಮುಖ್ಯ ಕಾರಣ ಬೆಳಕಿನ ಮಾಲಿನ್ಯ. ನಗರೀಕರಣದ ಪರಿಣಾಮವಾಗಿ ಬೀದಿದೀಪಗಳು, ಜಾಹೀರಾತು ಫಲಕಗಳು, ಎತ್ತರದ ಕಟ್ಟಡಗಳ ಆಲಂಕಾರಿಕ ದೀಪಗಳು, ವಾಹನಗಳ ಹೆಡ್‌ಲೈಟ್‌ಗಳು ನಿರಂತರವಾಗಿ ಆಕಾಶದತ್ತ ಬೆಳಕನ್ನು ಹರಡುತ್ತಿವೆ. ಪರಿಣಾಮ ಈ ಕೃತಕ ಬೆಳಕು ರಾತ್ರಿ ವೇಳೆ ಆಕಾಶದ ಸಹಜ ಕತ್ತಲೆಯನ್ನು ನಾಶಮಾಡಿದ ಪರಿಣಾಮ ಆಕಾಶದಲ್ಲಿ ಉಂಟಾಗುವ 'ಸ್ಕೈಗ್ಲೋ' ಎಂಬ ಪ್ರಕಾಶದ ಪರಿಣಾಮವಾಗಿ ಕಡಿಮೆ ಪ್ರಕಾಶದ ನಕ್ಷತ್ರಗಳು ನಮ್ಮ ಕಣ್ಣಿಗೆ ಗೋಚರವಾಗುವುದಿಲ್ಲ. ಹೀಗಾಗಿ ನಕ್ಷತ್ರಗಳು ವಾಸ್ತವದಲ್ಲಿ ಅಲ್ಲಿಯೇ ಇದ್ದರೂ ಇಲ್ಲದಂತೆಯೇ ಭಾಸವಾಗುತ್ತವೆ.

ವಾಯುಮಾಲಿನ್ಯದ ಅಡಚಣೆ

ವಾಯುಮಾಲಿನ್ಯವೂ ನಕ್ಷತ್ರ ವೀಕ್ಷಣೆಗೆ ಅಡ್ಡಿಯಾಗುವ ಮತ್ತೊಂದು ಪ್ರಮುಖ ಕಾರಣ. ವಾಹನಗಳಿಂದ ಹೊರಬರುವ ಹೊಗೆ, ಕೈಗಾರಿಕೆಗಳ ಹೊಗೆ, ಕಟ್ಟಡ ನಿರ್ಮಾಣದಿಂದ ಉಂಟಾಗುವ ಧೂಳ ಕಣಗಳು ವಾತಾವರಣದಲ್ಲಿ ತೇಲಾಡುತ್ತವೆ. ಈ ಸೂಕ್ಷ್ಮ ಕಣಗಳು ಬೆಳಕನ್ನು ಚದರಿಸುವ ಪರಿಣಾಮ ನಕ್ಷತ್ರ ಗಳಿಂದ ಬರುವ ಕ್ಷೀಣ ಬೆಳಕು ಭೂಮಿಗೆ ತಲುಪುವಷ್ಟರಲ್ಲಿ ಮಂಕಾಗುತ್ತದೆ. ವಿಶೇಷವಾಗಿ ಮಹಾನಗರಗಳಲ್ಲಿ ವಾಯುಮಾಲಿನ್ಯ ಹೆಚ್ಚಿರುವುದರಿಂದ ಆಕಾಶವು ಮಸುಕಾಗಿ ಕಾಣಿಸುತ್ತದೆ.

ಹಿಂದೆ ಜನರು ರಾತ್ರಿಯಾದಾಗ ಹೊರಾಂಗಣದಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದರು. ಹೊಲ, ಅಂಗಳ ಹೀಗೆ ತೆರೆದ ಸ್ಥಳಗಳಲ್ಲಿ ಮಲಗಿ ಆಕಾಶ ವೀಕ್ಷಿಸುವ ಸಂಸ್ಕೃತಿ ಇತ್ತು. ಆದರೆ ಇತ್ತೀಚೆಗೆ ಆಕಾಶ ವೀಕ್ಷಣೆಯ ಸಂಸ್ಕೃತಿಯೇ ನಾಶವಾಗಿದೆ. ಒಂದು ಕಾಲದಲ್ಲಿ ನಕ್ಷತ್ರ ಕಥೆಗಳು, ಗ್ರಹಣ ವೀಕ್ಷಣೆ, ಪಂಚಾಂಗದ ಅಧ್ಯಯನ ಸಾಮಾನ್ಯವಾಗಿತ್ತು. ಇಂದಿನ ಪೀಳಿಗೆಗೆ ನಕ್ಷತ್ರಗಳ ಹೆಸರುಗಳೇ ತಿಳಿದಿಲ್ಲ. ಈ ಆಸಕ್ತಿ ಮತ್ತು ಸಂಸ್ಕೃತಿಯ ಕೊರತೆಯೂ ನಕ್ಷತ್ರಗಳು ಕಾಣಿಸದಂತೆ ಮಾಡುತ್ತಿದೆ.

ಬದಲಾದ ಜೀವನಶೈಲಿ

ಇಂದಿನ ನಮ್ಮ ಜೀವನಶೈಲಿ ಸಂಪೂರ್ಣ ಬದಲಾಗಿದೆ. ಅಪಾರ್ಟ್ಮೆಂಟ್ ಸಂಸ್ಕೃತಿ, ಮುಚ್ಚಿದ ಮನೆಗಳು, ಗಗನಚುಂಬಿ ಕಟ್ಟಡಗಳು ಆಕಾಶ ವೀಕ್ಷಣೆಗೆ ಅಡ್ಡಿಯಾಗಿವೆ. ಬಾಲ್ಕನಿ, ಟೆರೇಸ್‌ಗಳೂ ದೀಪಗಳಿಂದ ತುಂಬಿರುತ್ತವೆ. ಇದರಿಂದ ನಕ್ಷತ್ರ ವೀಕ್ಷಣೆಗೆ ಬೇಕಾದ ವಿಶಾಲ ದೃಷ್ಟಿಪಥವೇ ಇಲ್ಲದಾಗಿದೆ. ಮಾತ್ರವಲ್ಲ, ಟಿವಿ, ಮೊಬೈಲ್, ಕಂಪ್ಯೂಟರ್‌ಗಳಂಥ ಪರದೆಗಳ ಬೆಳಕಿನಲ್ಲಿ ನಾವು ಮುಳುಗಿದ್ದೇವೆ. ಇದರ ಪರಿಣಾಮವಾಗಿ ಆಕಾಶದತ್ತ ಗಮನ ಹರಿಸುವ ಅಭ್ಯಾಸವೇ ಕಡಿಮೆಯಾಗಿದೆ. ಹೀಗೆ ನಕ್ಷತ್ರಗಳು ಕಾಣಿಸದಿರುವುದಕ್ಕೆ ಈ ಮಾನಸಿಕ ದೂರವೂ ಒಂದು ಕಾರಣವಾಗಿದೆ. ನಮ್ಮ ಕಣ್ಣುಗಳು ಕತ್ತಲೆಗೆ ಹೊಂದಿಕೊಳ್ಳಲು ಸಮಯ ಬೇಕಾಗುತ್ತದೆ. ಪ್ರಕಾಶಮಾನ ದೀಪಗಳ ನಡುವೆ ಇದ್ದು ತಕ್ಷಣ ಆಕಾಶ ನೋಡಿದರೆ ನಕ್ಷತ್ರಗಳು ಕಾಣಿಸುವುದಿಲ್ಲ. ಹಿಂದೆ ರಾತ್ರಿ ದೀಪಗಳ ಬಳಕೆ ಕಡಿಮೆ ಇದ್ದುದರಿಂದ ಕಣ್ಣುಗಳು ಸಹಜವಾಗಿ, ಸುಲಭವಾಗಿ ಕತ್ತಲೆಗೆ ಹೊಂದಿಕೊಳ್ಳುತ್ತಿದ್ದವು. ಇಂದು ನಿರಂತರ ಕೃತಕ ಬೆಳಕಿನ ಮಧ್ಯೆ ಇರುವುದರಿಂದ ಕಣ್ಣುಗಳ 'ಡಾರ್ಕ್ ಅಡಾಪ್ಟೇಶನ್' ಸಾಮರ್ಥ್ಯ ಕುಗ್ಗುತ್ತಿದೆ. ಇದರಿಂದಲೂ ನಕ್ಷತ್ರ ಕಾಣಿಸುವುದು ಕಡಿಮೆಯಾಗಿದೆ.

ತಾಪಮಾನದ ಏರಿಕೆ

ಭೂಮಿಯ ತಾಪಮಾನ ಏರಿಕೆಯಿಂದ ವಾತಾವರಣದ ಪದರಗಳಲ್ಲಿ ಬದಲಾವಣೆಯಾಗುತ್ತಿದ್ದು, ಇದರಿಂದ ಬೆಳಕಿನ ವಕ್ರೀಭವನ ಬದಲಾಗುತ್ತದೆ. ನಕ್ಷತ್ರಗಳ ಬೆಳಕು ಭೂಮಿಗೆ ತಲುಪುವ ರೀತಿ ವ್ಯತ್ಯಾಸಗೊಳ್ಳುವುದರಿಂದ ಅವು ಸ್ಪಷ್ಟವಾಗಿ ಕಾಣುವುದಿಲ್ಲ. ಜತೆಗೆ ಹವಾಮಾನ ಬದಲಾವಣೆಯ ಪರಿಣಾಮವಾಗಿ ಮೋಡಗಳು ಆವರಿಸಿರುವ ಪ್ರಮಾಣವೂ ಹೆಚ್ಚಾಗಿದೆ. ತೇವಾಂಶ ಅಧಿಕವಾದ ವಾತಾವರಣದಲ್ಲಿ ಮೋಡಗಳು ಹಾಗೂ ಮಂಜು ಹೆಚ್ಚು ಕಾಲ ಉಳಿಯುತ್ತವೆ. ಇವುಗಳು ನಕ್ಷತ್ರಗಳಿಂದ ಬರುವ ಬೆಳಕನ್ನು ತಡೆಯುತ್ತವೆ. ಅನಿಯಮಿತ ಮಳೆ, ವಾತಾವರಣದ ಅಸ್ಥಿರತೆ ಕೂಡ ಆಕಾಶವು ಸ್ಪಷ್ಟವಾಗಿ ಕಾಣಿಸದಂತೆ ಮಾಡುತ್ತದೆ. ಹೀಗಾಗಿ ಅನೇಕ ರಾತ್ರಿಗಳಲ್ಲಿ ನಕ್ಷತ್ರ ವೀಕ್ಷಣೆ ಸಾಧ್ಯವಾಗುತ್ತಿಲ್ಲ.

ಆದರೆ ನಕ್ಷತ್ರಗಳು ಕಾಣಿಸದಿರುವುದನ್ನು ನಾವು ಸಹಜವಾಗಿ ಸ್ವೀಕರಿಸುತ್ತಿದ್ದೇವೆ. ಇದರ ಹಿಂದಿನ ಕಾರಣಗಳ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಇದಕ್ಕೆ ಕಾರಣ ಬೆಳಕಿನ ಮಾಲಿನ್ಯ, ಪರಿಸರ ಸಮಸ್ಯೆ ಎಂಬ ಅರಿವು ನಮಗಿನ್ನೂ ಮೂಡಿಲ್ಲ. 'ಅಭಿವೃದ್ಧಿ ಎಂದರೆ ಸದಾ ಬೆಳಗುವ ಬೆಳಕು' ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆ. ಇದರ ಪರಿಣಾಮವಾಗಿ ಅನಗತ್ಯ ದೀಪಾಲಂಕಾರವನ್ನು ಬಯಸುವ ನಾವು ಅದರ ದುಷ್ಪರಿಣಾಮಗಳತ್ತ ಗಮನ ಹರಿಸುವುದಿಲ್ಲ.

ನಗರಗಳು ನಿದ್ರಿಸುವುದಿಲ್ಲ

ಇತ್ತೀಚಿನ ವರ್ಷಗಳಲ್ಲಿ ಎಲ್‌ಇಡಿ ದೀಪಗಳ ಬಳಕೆ ಹೆಚ್ಚಾಗಿದೆ. ಇವು ಶಕ್ತಿ ಉಳಿತಾಯಕ್ಕೆ ಒಳ್ಳೆಯದಾದರೂ, ಇವು ಹೊರಸೂಸುವ ಹೆಚ್ಚಿನ ನೀಲಿ ಬೆಳಕು ಆಕಾಶದಲ್ಲಿ ಹೆಚ್ಚು ಚದುರುವುದರಿಂದ ನಕ್ಷತ್ರಗಳ ಪ್ರಕಾಶ ಮಸುಕಾಗುತ್ತದೆ. ಹಿಂದೆ ರಾತ್ರಿ ಎಂಬುದು ವಿಶ್ರಾಂತಿಯ ಸಮಯವಾಗಿತ್ತು. ಆದರೆ ಈಗ ನಗರ

ಗಳು ಎಂದಿಗೂ ನಿದ್ರಿಸುವುದಿಲ್ಲ. ಶಾಪಿಂಗ್ ಮಾಲ್‌ಗಳು, ಐಟಿ ಕಂಪನಿಗಳು, ಆಸ್ಪತ್ರೆಗಳು, ರಸ್ತೆ ಸಂಚಾರ ಎಲ್ಲವೂ ರಾತ್ರಿ ತುಂಬು ಬೆಳಕಿನಲ್ಲೇ ನಡೆಯುತ್ತಿವೆ. ಈ ನಿರಂತರ ಚಟುವಟಿಕೆಯು ಆಕಾಶದ ಸಹಜ ಕತ್ತಲೆಯನ್ನು ಸಂಪೂರ್ಣವಾಗಿ ಅಳಿಸಿಹಾಕಿದೆ.

ಒಟ್ಟಿನಲ್ಲಿ ನಕ್ಷತ್ರಗಳು ಕಾಣಿಸದಿರುವುದು ಕೇವಲ ಆಕಾಶದ ಸಮಸ್ಯೆಯಲ್ಲ; ಅದು ನಮ್ಮ ಅಭಿವೃದ್ಧಿ ಸ್ವರೂಪದ ಪ್ರತಿಬಿಂಬವಾಗಿದ್ದು, ನಗರೀಕರಣ, ಜೀವನಶೈಲಿಯ ಬದಲಾವಣೆಗಳು ಈ ಸ್ಥಿತಿಗೆ ಕಾರಣವಾಗಿವೆ. ಇದಕ್ಕೆ ಪರಿಹಾರವೂ ನಮ್ಮ ಕೈಯಲ್ಲೇ ಇದೆ. ಅನಗತ್ಯ ದೀಪಗಳ ನಿಯಂತ್ರಣ, ಪರಿಸರ ಸ್ನೇಹಿ ಬೆಳಕಿನ ವ್ಯವಸ್ಥೆ, ಬೆಳಕಿನ ಮಾಲಿನ್ಯದ ಕುರಿತು ಜನಜಾಗೃತಿ ಹಾಗೂ ಮಕ್ಕಳಲ್ಲಿ ಆಕಾಶ ವೀಕ್ಷಣೆಯ ಆಸಕ್ತಿ ಬೆಳೆಸುವ ಮೂಲಕ ನಾವು ಮತ್ತೆ ನಕ್ಷತ್ರಗಳನ್ನು ವೀಕ್ಷಿಸಬಹುದು. ಏಕೆಂದರೆ, ನಕ್ಷತ್ರಗಳು ಆಕಾಶದಿಂದ ಅಳಿದುಹೋಗಿಲ್ಲ; ಅವುಗಳನ್ನು ಕಾಣುವ ನಮ್ಮ ದೃಷ್ಟಿ ಮಾತ್ರ ಮಸುಕಾಗಿದೆ. ಆ ದೃಷ್ಟಿಯನ್ನು ಮತ್ತೆ ಸ್ಪಷ್ಟಗೊಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಚಿತ್ತವಿಹಾರ

ಮುಗಿಯದ ಈ ಯುದ್ಧ...

ಅಮೆರಿಕದ ಶಾಂತಿ ಕರೆಗೆ
ಇರಾನ್ ಓಗೊಟ್ಟಿಲ್ಲ
ಇನ್ನೆಷ್ಟು ಹೋರಾಡುವುದೋ,
ಜಗತ್ತಿಗೆ ಸ್ಪಷ್ಟ ಗೊತ್ತಿಲ್ಲ...
ಇರಾನನ್ನು ಸಹಿಸದ ಟ್ರಂಪು
ಮಾಡಿಕೊಂಡ ಕಣ್ಣುಗಳ ಕೆಂಪು
ಇರಾನಿಗೇ ಬೇಡದ ಶಾಂತಿ
ನಮಗೂ ಬೇಡ ಎನ್ನುತ್ತಾ
ಮುಂದುವರಿಸಿದ ಇರಾನಿಗೆ ಕೇಡ!...
ಅಮೆರಿಕದ ಭುಜದ ಮೇಲೆ
ಇಸ್ರೇಲ್ ಮುಂದುವರಿಸಿದೆ ಶತ್ರುನಾಶ
ಊರುಗಳನ್ನೇ ಉರುಳಿಸುತ್ತ
ಮೇಲಿಂದ ಮೇಲೆ...
ಈ ಮೂವರ ಮಧ್ಯ ಸಿಲುಕಿ
ನಲುಗುತಿವೆ ಕೊಲ್ಲಿ ದೇಶಗಳು
ದೂರದ ಉಳಿದ ದೇಶಗಳು
ಚಿಂತಿಸುತ್ತ ಮುಂದಿನ ಬಾಳು
ತೈಲದ ಬಿಕ್ಕಟ್ಟಿನ ಗೋಳು...

• ಎಚ್.ಪ್ರಹ್ಲಾದ ರಾವ್, ಬೆಂಗಳೂರು

ಹಾಸ್ಯ-ಲಾಸ್ಯ...

ವ್ಯಾಪಾರಧರ್ಮ!

ಜಿಪುಣ ವ್ಯಾಪಾರಿಯೊಬ್ಬ ಮರಣಶಯ್ಯೆಯಲ್ಲಿದ್ದ. ಅವನನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ತನ್ನನ್ನು ನೋಡಲಿಕ್ಕೆ ಬಂದ ಮಗನನ್ನು ಉದ್ದೇಶಿಸಿ, ''ನನ್ನನ್ನು ನೋಡೋಕೆ ಯಾರೆಲ್ಲಾ ಬಂದಿದ್ದಾರೆ ಆಸ್ಪತ್ರೆಗೆ?'' ಎಂದು ಕೇಳಿದ ವ್ಯಾಪಾರಿ.

ಅದಕ್ಕೆ ಅವನ ಮಗ, ''ನಾನು ಮಾತ್ರವಲ್ಲದೆ, ಅಣ್ಣ, ಅಕ್ಕ, ತಂಗಿ, ಅಮ್ಮ ಹೀಗೆ ಎಲ್ಲರೂ ಬಂದಿದ್ದೀವಿ ಅಪ್ಪಾ'' ಎಂದುಬಿಟ್ಟ, ಅದೇನೋ ಉತ್ಸಾಹದಲ್ಲಿ.

ಅವನ ಉತ್ಸಾಹದ ಬಲೂನಿಗೆ ಸೂಜಿ ಚುಚ್ಚಿದ ಜಿಪುಣ ವ್ಯಾಪಾರಿ, ''ಅಯ್ಯೋ ಮುಟ್ಠಾಳಾ, ಎಲ್ಲರೂ ಹೀಗೆ ಆಸ್ಪತ್ರೆಗೆ ಬಂದ್ರೆ ಅಲ್ಲಿ ಅಂಗಡಿಯಲ್ಲಿ ಯಾರಿರ್ತಾರೆ? ವ್ಯಾಪಾರ ಮಾಡೋಕ್ಕೆ ನಿಮ್ ತಾತ ಬರ್ತಾರಾ?'' ಎಂದು ನೋವಿನಲ್ಲೇ ಕಿರುಚಿಕೊಂಡ!!

★★★

ಹೀಗೂ ಉಂಟು..!

ರೋಗಿ: ಡಾಕ್ಟರೇ, ನಾನು ಇದೇ ಮೊದಲ ಬಾರಿಗೆ ಆಪರೇಷನ್ ಮಾಡಿಸಿಕೊಳ್ತಾ ಇರೋದು. ತುಂಬಾ ಭಯವಾಗ್ತಾ ಇದೆ ಡಾಕ್ಟರೇ...

ವೈದ್ಯ: ಅಯ್ಯೋ ಪೆದ್ದಾ, ಭಯ ಯಾಕಯ್ಯಾ? ನನಗೂ ಇದು ಮೊದಲ ಆಪರೇಷನ್ನೇ. ಎಲ್ಲಿ ಕಟ್ ಮಾಡಬೇಕು, ಕತ್ತರಿ ಹ್ಯಾಗೆ ಹಿಡ್ಕೋಬೇಕು ಅಂತ ನಂಗೂ ಗೊತ್ತಿಲ್ಲ. ಹಾಗಂತ ನಾನು ಭಯ ಪಡ್ತಾ ಇದ್ದೀನಾ? ಧೈರ್ಯದಿಂದ ಇಲ್ವಾ..!!

ಈ ಮಾತು ಕೇಳುತ್ತಿದ್ದಂತೆ ರೋಗಿಯು ಅನಸ್ತೇಷಿಯಾದ ಹಂಗಿಲ್ಲದೆಯೇ ಪ್ರಜ್ಞೆ ತಪ್ಪಿದ..!!

• ರಾಘವೇಂದ್ರ ಜೋಯಿಸ್, ಮೈಸೂರು

ಮನುಷ್ಯನ ಆಸೆಗಳಿಗೆ ಮಿತಿಯೇ ಇಲ್ಲ; ಒಂದು ಆಸೆಯನ್ನು ಪೂರೈಸಿಕೊಳ್ಳುವುದರ ಒಳಗೆ ಇನ್ನೊಂದು ಆಸೆ ಚಿಗುರೊಡೆದಿರುತ್ತದೆ. 'ಇದರಲ್ಲಿ ತಪ್ಪೇನಿದೆ? ಇದು ಮನುಷ್ಯನ ಸಹಜಗುಣವಲ್ಲವೇ?' ಎನಿಸಿದರೂ, ಆಸೆಗಳಿಗೆ ಕೊಂಚ ಕಡಿವಾಣ ಹಾಕಿಕೊಳ್ಳಬೇಕಾದ ಅಗತ್ಯವಿದೆ. ಇಲ್ಲದಿದ್ದಲ್ಲಿ, ಅದು ಬದುಕಿನ ನೆಮ್ಮದಿಯನ್ನೇ ಕಸಿದು ಬಿಡುವ ಸಾಧ್ಯತೆ ಇರುತ್ತದೆ. 'ಆಸೆಯೇ ದುಃಖಕ್ಕೆ ಮೂಲ' ಎಂಬ ಮಾತನ್ನು ಬುದ್ಧ ಹೇಳಿರುವುದು ಈ ಕಾರಣಕ್ಕೇ ಇರಬೇಕು. ಮೂಲಭೂತ ಅವಶ್ಯಕತೆಗಳಿಗೆ ಹೊರತಾದ ಆಸೆಗಳು ಮನಸ್ಸಿನಲ್ಲಿ ಚಿಗುರೊಡೆದಾಗ, ಈ ಆಸೆಯನ್ನು ಪೂರೈಸಿಕೊಳ್ಳುವ ಸಾಮರ್ಥ್ಯ ನಮಗಿದೆಯಾ? ಅದರ ಅಗತ್ಯ ನಮಗೆ ಈಗಲೇ ಇದೆಯಾ? ಅಂತ ಪ್ರಶ್ನಿಸಿಕೊಳ್ಳಬೇಕು. ಮತ್ತಾರೋ ಮಾಡಿದರು ಎನ್ನುವ ಕಾರಣಕ್ಕೆ ಹುಸಿಪ್ರತಿಷ್ಠೆಯನ್ನು ಬೆನ್ನಟ್ಟಿಕೊಂಡು ಹೋಗಬಾರದು. 'ಹಾಸಿಗೆ ಇದ್ದಷ್ಟು ಕಾಲುಚಾಚು' ಎಂಬ ಹಿರಿಯರ ಹಿತನುಡಿಯನ್ನು ಅನುಸರಿಸಬೇಕು.

ನಮ್ಮ ಸಂಬಂಧಿಕರಾಗಲಿ, ಪಕ್ಕದ ಮನೆಯವರಾಗಲಿ ಕಾರನ್ನೋ, ಬಂಗಾರವನ್ನೋ, ನಿವೇಶನವನ್ನೋ ಖರೀದಿಸಿದರೆ, ಅವರೊಂದಿಗೆ ನಮ್ಮನ್ನೂ ತುಲನೆ ಮಾಡಿಕೊಳ್ಳಲು ಶುರುಮಾಡಿಬಿಡುತ್ತೇವೆ. ಯಾರೋ ಆಪ್ತರು ತಮ್ಮ ವ್ಯಾಪಾರ-ವ್ಯವಹಾರವನ್ನು ಚೆನ್ನಾಗಿ ನಿರ್ವಹಿಸಿ, ಹಣ ಮಾಡಿಕೊಂಡು, ಒಳ್ಳೆಯ ಜೀವನಶೈಲಿಯನ್ನು ಅನುಸರಿಸಿದರೆ, ನಮ್ಮ ಮನಸ್ಸು ಅವರ ಕಡೆಗೇ ವಾಲುತ್ತದೆ. ಮತ್ತೊಬ್ಬರು ಉದ್ಯೋಗದಲ್ಲಿ ಉನ್ನತ ಸ್ಥಾನಕ್ಕೇರಿದರೆ, ನಮ್ಮ ಮನಸ್ಸು ಅವರ ಕಡೆಗೇ ಪುಟಿದೇಳುತ್ತದೆ. ಇದು ಒಂದು ಮಿತಿಯವರೆಗಿದ್ದರೆ ತಪ್ಪೇನಲ್ಲ. ನಾವೂ ಬದುಕಿನಲ್ಲಿ ಮುಂದೆ ಬರಬೇಕು ಎಂಬ ಆಸೆ ಸಹಜವೇ. ಆದರೆ, ನಿರ್ದಿಷ್ಟ ಜೀವನಶೈಲಿ, ಆದಾಯ, ಸಂಪತ್ತು ಸಂಗ್ರಹಣೆ, ಸ್ವತ್ತಿನ ಸ್ವಾಮ್ಯ ಮುಂತಾದವು ಒಬ್ಬೊಬ್ಬರಿಗೂ ವಿಭಿನ್ನವಾಗಿರುತ್ತವೆ; ಇವುಗಳ ಹಿಂದೆ ಅಡಗಿರುವ ಪ್ರಯತ್ನ, ಪರಿಶ್ರಮಗಳು ಕೂಡ ವಿಭಿನ್ನವಾಗಿರುತ್ತವೆ. ಅದೃಷ್ಟದಾಟವೂ ಇಲ್ಲಿ ಕೆಲಸ ಮಾಡುತ್ತದೆ. ಹೀಗಾಗಿ, ಮತ್ತೊಬ್ಬರ ಬದುಕನ್ನು ಅನುಕರಿಸುವುದು ಸಲ್ಲ. ಯಾರೋ ಏನನ್ನೋ ಖರೀದಿಸಿದರು ಅಂತ ನಾವೂ ಅವರ ಹಾದಿ ಹಿಡಿಯುವುದರಲ್ಲಿ ಅರ್ಥವಿಲ್ಲ. ನಮ್ಮ ಹತ್ತಿರ ಏನಿದೆಯೋ ಅದರ ಬಗ್ಗೆ ಸಂತೋಷ ಪಡಬೇಕು, ದೇವರು ನಮಗೆ ಇಷ್ಟಾದರೂ ನೀಡಿದ್ದಾನಲ್ಲಾ ಎಂಬ ಕೃತಜ್ಞತಾ ಭಾವವನ್ನು ತಳೆಯಬೇಕು. ಆದರೆ ಹೆಚ್ಚಿನವರು ತಮ್ಮ ಬಳಿ ಇಲ್ಲದಿರುವುದು ಇನ್ನೊಬ್ಬರ ಹತ್ತಿರ ಇರುವುದನ್ನು ಕಂಡು ಅಸೂಯೆಪಡುತ್ತಾ, ಇರುವ ನೆಮ್ಮದಿಯನ್ನೂ ಹಾಳುಮಾಡಿಕೊಳ್ಳುತ್ತಾರೆ. 'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ' ಎನ್ನುತ್ತದೆ ಗೋಪಾಲಕೃಷ್ಣ ಅಡಿಗರ ಕಾವ್ಯದ ಸಾಲು. ಮನುಷ್ಯನ ಸಹಜ ಆಸೆ, ತವಕ, ಅತೃಪ್ತಿ, ನಿರಂತರ ಹುಡುಕಾಟವನ್ನು ಈ ಸಾಲುಗಳು ಪ್ರತಿಬಿಂಬಿಸುತ್ತವೆ. ಡಿವಿಜಿ ಅವರು ಕೂಡ ತಮ್ಮ ಪದ್ಯವೊಂದರಲ್ಲಿ ನಮ್ಮಲ್ಲಿ ಈಗಾಗಲೇ ಇರುವ ಭಾಗ್ಯವನ್ನು ನೆನೆದು ಸಂತಸದ ಜೀವನವನ್ನು ನಡೆಸಬೇಕು. ಬಾರದ ಭಾಗ್ಯಕ್ಕಾಗಿ ಮನಸ್ಸನ್ನು ಹೈರಾಣಾಗಿಸಿಕೊಂಡು ಇರುವ ಸಂತಸವನ್ನೂ ಕಳೆದುಕೊಳ್ಳುವುದರಲ್ಲಿ ಏನು ಅರ್ಥವಿದೆ? ಎಂದು ಸೊಗಸಾಗಿ ಹೇಳಿದ್ದಾರೆ.

ಆಸೆ ಪಡುವುದರಲ್ಲಿ ತಪ್ಪೇನಿಲ್ಲ; ಆದರೆ ಇನ್ನೊಬ್ಬರು ದಕ್ಕಿಸಿಕೊಂಡಿರುವುದು ಶತಾಯಗತಾಯ ನಮಗೂ ಸಿಗಬೇಕು ಎಂದು ಬಯಸುವುದು ಅಷ್ಟೊಂದು ಸೂಕ್ತವಾಗಲಾರದು. ಬದಲಿಗೆ, ಅಂಥ ಆಸೆಯನ್ನು ಪೂರೈಸಿಕೊಳ್ಳಲು ಅಗತ್ಯವಾಗಿರುವ ಪ್ರಾಮಾಣಿಕ ಪ್ರಯತ್ನ ಮತ್ತು ಪರಿಶ್ರಮದಲ್ಲಿ ಪರಿಶುದ್ಧ ಮನಸ್ಸಿನಿಂದ ತೊಡಗಿಸಿಕೊಂಡು ಕೆಲಸ ಮಾಡುತ್ತಾ ಹೋದರೆ, ಒಂದಲ್ಲಾ ಒಂದು ದಿನ ಅದು ನೆರವೇರೀತು. ಅಲ್ಲಿಯವರೆಗೆ ನಮ್ಮ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದನ್ನು, ತಾಳ್ಮೆಯಿಂದ ಇರುವುದನ್ನು ಕಲಿಯಬೇಕು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮರದ/ಲೋಹದ ದೊಡ್ಡದಾಗಿರುವ ಪಾತ್ರೆ (3)
3. ಅಧಿಕವಾಗಿಯೇ ಮಾತನಾಡಿದ ಒಡೆಯ (3)
5. ಕಪಟಕ್ಕೆ ಹೆಸರಾದ ಕೊಕ್ಕರೆ ಜಾತಿಗೆ ಸೇರಿದ ಪಕ್ಷಿ (2)
6. ಬಾವಿಯಿಂದ ನೀರೆತ್ತಲು ಅಳವಡಿಸಿರುವ ಗಾಲಿ (2)
7. ವಸ್ತುವೊಂದನ್ನು ಕೊಂಡಾಗ ಸಿಗುವ ಪಾವತಿ ಪತ್ರ (3)
9. ಏನೋ ಕೆಲಸ ಮಾಡಲು ಹೊರಟಾಗ ಎದುರಾದ ವಿಪತ್ತು (3)
11. ಕೊನೆಗಾಲ ಹತ್ತಿರವಾದಾಗ ಕಂಡ ಯಮ (3)
13. ನೇರವಾದ್ದಲ್ಲ, ಡೊಂಕು (2)
14. ತಾತ ಒತ್ತು ಕಳೆದುಕೊಂಡರೆ ಸಿಗುವ ಆಡು (2)
15. ವಿರಳವಾಗಿ ಬಂದಿರುವ ಇನ್ನೊಂದು ಹೋಮ (3)
18. ಏಲಂ ಅಥವಾ ಹರಾಜು (3)
20. ಹಳೆಯ ವಸ್ತುಗಳನ್ನು ಮಾರುವ ಸ್ಥಳವು ಗುರಿಯ ನಡುವೆ ಇದೆ (3)
22. ಚಿತ್ರ ಬಿಡಿಸಲು, ಬಣ್ಣ ತುಂಬಲು ಬಳಸುವ ಕೂದಲಿನ ಕುಚ್ಚು (2)
23. ಹೊರದೇಶಕ್ಕೆ ವಸ್ತುಗಳನ್ನು ಕಳಿಸುವುದು (2)
24. ಚೆಲುವೆಯಾದ ಹೆಂಡತಿ (3)
25. ಪ್ರೀತಿಯಿಂದ ಕೂಡಿದ ಅಥವಾ ವಿನೋದ (3)

ಮೇಲಿಂದ ಕೆಳಕ್ಕೆ

1. ತೊಂದರೆ ಅಥವಾ ಕಷ್ಟ (4)
2. ತಲೆಕೆಳಗಾಗಿರುವ ಮೇಲು ಹೊದಿಕೆ (3)
3. ಆದಿಯಿಲ್ಲದ, ಹಿಂದಿನ ಕಾಲದಿಂದ ಬಂದ (3)
4. ಸೋತುಹೋದ ಎನ್ನುವುದರ ನಡುವೆ ಮತ್ತೊಂದು ಒಪ್ಪಂದವಿದೆ (4)
8. ಶ್ರೀರಾಮನ ಪತ್ನಿ (2)
9. ಒಂದು ಬಗೆಯ ಕರಿದ ತಿಂಡಿಯ ಆರಂಭವು ಅನುಸ್ವಾರದೊಂದಿಗೆ ಬಂದಿದೆ (3)
10. ಈ ಪದ್ಯದಲ್ಲಿ ಕಾಡು ಕೂಡಾ ಇದೆ (3)
11. ಬೊಗಸೆಯನ್ನು ಕಂಡು ನಾನೇಕೆ ಹೆದರಲಿ? (3)
12. ತುಂಡು ಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡವಿಲ್ಲಿ ಅಸ್ತವ್ಯಸ್ತವಾಗಿ ಬಂದಿದೆ (3)
16. ನೀರಿನಲ್ಲಿ ಬದುಕುವ ಮೊಸಳೆ, ಮೀನು ಇತ್ಯಾದಿಗಳನ್ನು ಒಟ್ಟಾಗಿ ಹೀಗೆನ್ನಬಹುದು (4)
17. ಜಂಭದಿಂದ ಬಂದ ಗಂಡುಕೋಳಿ (2)
19. ಬಾಯಿಯಲ್ಲಿ ಉತ್ಪತ್ತಿಯಾಗುವ ಜೊಲ್ಲು (4)
20. ಯುದ್ಧದಲ್ಲಿ ಕತ್ತಿಯ ಏಟಿನಿಂದ ತಪ್ಪಿಸಿಕೊಳ್ಳಲು ಬಳಸುವ ಸಾಧನ (3)
21. ಪ್ರಾಣಿ ಅಥವಾ ವಾಹನಗಳ ಮೇಲೆ ಕುಳಿತು ಸಂಚರಿಸುವುದು ಇಲ್ಲಿ ತಲೆಕೆಳಗಾಗಿದೆ (3)

ಸರಿಯುತ್ತರಗಳು

ಪರಿವರ್ತನೆಯಲ್ಲಿ ಗುರುಗಳ ಪಾತ್ರ

• ಸತ್ ಶ್ರೀ ಸುಬ್ರಹ್ಮಣ್ಯ ಶಿವಬಾಲನ್

ಜೀವನ್ಮುಕ್ತ ಸ್ಥಿತಿಯ ಕಡೆಗಿನ ಪ್ರಯಾಣವು ಗುರುಗಳ ನಿರಂತರ ಸ್ಮರಣೆಯಿಂದ ಪ್ರಾರಂಭವಾಗುತ್ತದೆ. ಈ ಸ್ಮರಣೆಯು ಗುರುಗಳ ಊರ್ಜೆಯನ್ನು ಸಾಧಕನೊಳಗೆ ತರುತ್ತದೆ. ಈ ಊರ್ಜೆಯು ಕ್ರಮೇಣ ಆಲೋಚನೆಗಳು, ಅಹಂಕಾರ ಮತ್ತು ನಕಾರಾತ್ಮಕತೆಯನ್ನು ನಾಶ ಮಾಡುತ್ತದೆ.

ಗುರುಗಳ ಸ್ಮರಣೆಯು ಗಾಢವಾದಾಗ, ಸಾಧಕನು ತಾನಾಗಿಯೇ ಮೌನಕ್ಕೆ ಜಾರುತ್ತಾನೆ. ಮುಂದುವರಿದ ಹಂತದಲ್ಲಿ, ಸಾಧಕನು ಗುರುಗಳನ್ನು ಸ್ಮರಿಸಿಕೊಳ್ಳಲು ಮರೆಯುತ್ತಾನೆ. ಏಕೆಂದರೆ ಸ್ಮರಣೆ ಸ್ವತಃ ನಿಶ್ಚಲತೆಯಾಗಿ ಪರಿವರ್ತನೆಯಾಗುತ್ತದೆ. ಈ ಸ್ಥಿತಿಯನ್ನು ತಲುಪುವವರೆಗೆ ಗುರುಗಳ ಅವಶ್ಯಕತೆ ಇದೆ. ನಿರೀಕ್ಷೆಗಳಿಲ್ಲದ ಪ್ರೀತಿಯೊಂದಿಗೆ ನಿರಂತರ ಸ್ಮರಣೆಯ ಮೂಲಕ ಆಂತರಿಕ ಗುರುಗಳು (ನನ್ನ ಗುರು) ಸಂಪೂರ್ಣವಾಗಿ ಪ್ರತಿಷ್ಠಾಪನೆಯಾದಾಗ, ಉಳಿಯುವುದು ಶುದ್ಧ ನಿಶ್ಚಲತೆ (ನಿಶ್ಚಲ ತತ್ತ್ವಂ). ಈ ನಿಶ್ಚಲತೆಯು ಜೀವನ್ಮುಕ್ತ ಸ್ಥಿತಿಗೆ ದಾರಿ ಮಾಡುತ್ತದೆ (ನಿಶ್ಚಲ ತತ್ತ್ವೇ ಜೀವನ್ಮುಕ್ತಿ). ಈ ಸ್ಥಿತಿಯು 'ಚಿವಂ' ಆಗುವುದರ ಪ್ರಾರಂಭ. ಇಲ್ಲಿ ನಾನು ಇಲ್ಲದಾಗಿರುತ್ತದೆ, ಆದರೆ ಶರೀರವು ಜೀವಂತವಾಗಿ ಉಳಿಯುತ್ತದೆ. ಈ ಸ್ಥಿತಿಯನ್ನು ತಲುಪಿದಾಗ, ಅವನು ತಾನೇ ಮಾಸ್ಟರ್ ಆಗುತ್ತಾನೆ. ಒಳಗೆ ಸ್ಥಾಪಿತವಾದ ನಿಶ್ಚಲತೆಯು ತಾನಾಗಿಯೇ 'ಚಿವಂ' ಆಗಲು ದಾರಿ ಮಾಡುತ್ತದೆ.

ಗುರುಗಳ ಉಪಸ್ಥಿತಿ ಏಕೆ ಅಗತ್ಯವಿದೆ?

ಸಾಧಕನಲ್ಲಿ ನಿಶ್ಚಲ ಸ್ಥಿತಿಯನ್ನು ಸ್ಥಿರಗೊಳಿಸಲು ಗುರುಗಳೇ ಆಧಾರವಾಗಿರುತ್ತಾರೆ. ಗುರುಗಳ ಕೃಪೆ ಇಲ್ಲದೆ, ಸಾಧಕನು ಆಂತರಿಕ ಪರಿವರ್ತನೆ ಇಲ್ಲದೆ ಮಂದಗತಿಗೆ ಜಾರಬಹುದು.

ಗುರುಗಳ ಊರ್ಜೆಯೊಂದಿಗೆ, ಸಾಧಕನು ಕ್ರಿಯೆ ಯಲ್ಲಿ ತೊಡಗಿದರೂ, ಆಂತರಿಕವಾಗಿ ನಿಶ್ಚಲನಾಗಿ ಬದುಕುತ್ತಾನೆ, ಪ್ರಯತ್ನವಿಲ್ಲದೆ ಶಾಂತಿಯನ್ನು ಹರಡುತ್ತಾನೆ. ಗುರುಗಳ ಭೌತಿಕ ಉಪಸ್ಥಿತಿಯು ನಿಶ್ಚಲತೆಯನ್ನು ಬಲಪಡಿಸುತ್ತದೆ ಮತ್ತು 'ನಾನು' ಎಂಬುದು ಸಂಪೂರ್ಣವಾಗಿ ಕರಗುವವರೆಗೆ ಸೂಕ್ಷ್ಮ ಅಹಂಕಾರ ಅಥವಾ ಆಲೋಚನೆಗಳು ಮತ್ತೆ ಬರದಂತೆ ತಡೆಯುತ್ತದೆ.

'ಚಿವಾಲಿಟಿ' ಪದ್ಧತಿಯಲ್ಲಿ, ಕೇವಲ ಗುರುಗಳ ಸ್ಮರಣೆ ಮತ್ತು ಮೌನೀಕರಣದ ಅಭ್ಯಾಸ ಸಾಲದು. ನಾವು ಶಾರೀರಿಕವಾಗಿ ಗುರುಗಳಿಂದ ದೂರವಿದ್ದಾಗ ನಿರಂತರ ಸ್ಮರಣೆ ಮತ್ತು ಮೌನೀಕರಣದ ಅಭ್ಯಾಸವು ಮಾನಸಿಕವಾಗಿ ಗುರುಗಳೊಂದಿಗೆ ಸಂಪರ್ಕದಲ್ಲಿರಲು ಸಹಾಯ ಮಾಡುತ್ತದೆ. 'ಚಿವಸಂಗ'ದಲ್ಲಿ ಭಾಗವಹಿಸಿ ಈ ಸಂಪರ್ಕವನ್ನು ಬಲಪಡಿಸುವುದು ಉತ್ತಮ. ಹಾಗಾಗಿ ಮೌನ ಮಂಟಪದ ಚಿವಸಂಗದಲ್ಲಿ ಭಾಗವಹಿಸಿ ವಾರಕ್ಕೊಮ್ಮೆಯಾದರೂ ಗುರುಗಳ ಉಪಸ್ಥಿತಿಯಲ್ಲಿದ್ದು ಗುರುಗಳ ಊರ್ಜೆಯನ್ನು ನೇರವಾಗಿ ಸಂಗ್ರಹಿಸುವುದು ಅಗತ್ಯ.

ಚಿವಸಂಗದಲ್ಲಿ ಮನಸ್ಸಿನ ಶುದ್ಧೀಕರಣವು ವೇಗವಾಗಿ ಮತ್ತು ಸಹಜವಾಗಿಯೇ ನಡೆಯುತ್ತದೆ. ಇದು ನದಿಯಲ್ಲಿ ಸ್ನಾನ ಮಾಡುವಂತೆ; ಹರಿಯುವ ನೀರು ನಮ್ಮ ಪ್ರಯತ್ನವಿಲ್ಲದೆ ತಾನಾಗಿಯೇ ಶುದ್ಧಗೊಳಿಸುತ್ತದೆ, ಅದೇ ರೀತಿ ಗುರುಗಳ ಊರ್ಜೆಯು ನದಿಯಂತೆ ಹರಿದು ಸಹಜವಾಗಿ ನಮ್ಮ ಮನಸ್ಸನ್ನು ಶುದ್ಧಗೊಳಿಸುತ್ತದೆ. ನಾವು ಅವರಿಂದ ದೂರವಿದ್ದಾಗ, ಮೊದಲು ಪಾತ್ರೆಯಲ್ಲಿ ನೀರು ತುಂಬಿಕೊಂಡು ನಂತರ ಸ್ನಾನ ಮಾಡುವಂತೆ, ಅವರ ಊರ್ಜೆಯನ್ನು ಸೆಳೆದುಕೊಂಡು ನಂತರ ಶುದ್ಧಗೊಳಿಸಬೇಕು; ಇದಕ್ಕೆ ನಮ್ಮ ಪ್ರಯತ್ನ ಬೇಕಾಗುತ್ತದೆ. ಚಿವಸಂಗದ ಸಮಯದಲ್ಲಿ, ಊರ್ಜೆಯ ಪ್ರಸಾರವು ತಾನಾಗಿಯೇ ಸಂಭವಿಸುತ್ತದೆ, ನಿಶ್ಚಲತೆಯನ್ನು ಉಳಿಸಿ ಮತ್ತು ಗಾಢವಾಗಿಸುತ್ತದೆ.

ಜೀವನ್ಮುಕ್ತ ಸ್ಥಿತಿಯನ್ನು ಪಡೆದ ವ್ಯಕ್ತಿಯು ಹೊರಗೆ ಸಾಮಾನ್ಯ ಜನರಂತೆ ಬದುಕುತ್ತಾನೆ, ಆದರೆ ಒಳಗೆ ಅವನು ಮುಕ್ತ, ಮೌನ, ಆಸಕ್ತಿರಹಿತ ಮತ್ತು ನಿಶ್ಚಲತೆಯಲ್ಲಿ ಇರುತ್ತಾನೆ. ಅವನು ಅಹಂಕಾರವನ್ನು ಮೀರಿ ಜಗತ್ತಿನಲ್ಲಿ ಬದುಕುತ್ತಿರುತ್ತಾನೆ. ಜೀವನ್ಮುಕ್ತ ಸ್ಥಿತಿಯು ಮನುಷ್ಯ ಜೀವನದ ಪರಮ ಸಾಮರ್ಥ್ಯವನ್ನು ಪ್ರತಿನಿಧಿಸುತ್ತದೆ, ಇದು ಜಗತ್ತಿನೊಂದಿಗೆ ಪೂರ್ಣವಾಗಿ ಸಂಬಂಧ ಹೊಂದಿದ್ದರೂ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಬದುಕುವ ಸ್ಥಿತಿ. ಈ ವ್ಯಕ್ತಿಗಳು ದೀಪ ಸ್ತಂಭಗಳಾಗುತ್ತಾರೆ. ಅತ್ಯುನ್ನತ ಆಧ್ಯಾತ್ಮಿಕ ಸಾಕ್ಷಾತ್ಕಾರ ಎಂದರೆ ಜೀವನದಿಂದ ಪಲಾಯನ ಮಾಡುವುದಲ್ಲ, ಜೀವನವನ್ನು ಬದುಕುವ ಅತ್ಯಂತ ಸಹಜವಾದ ರೀತಿ ಎಂದು ತೋರಿಸುತ್ತಾರೆ. ಗುರುಗಳ ಕೃಪೆ ಮತ್ತು ಭಕ್ತಿಯಿಂದ ಕೂಡಿದ ಸ್ಮರಣೆಯ ಮೂಲಕ, ಅಸಾಧ್ಯವೆನಿಸುವುದು ತಾನಾಗಿಯೇ ಆಗುತ್ತದೆ.

ಬಿದಿರು ಕೃಷ್ಣನ ಕೈಯಲ್ಲಿ ಪವಿತ್ರ ವೇಣುವಾದ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಂದು ದಿನ ಶ್ರೀಕೃಷ್ಣನು ಬೃಂದಾವನದ ನಂದನವನದಲ್ಲಿ ಸಂಚರಿಸುತ್ತಿದ್ದಾಗ, ಅಲ್ಲಿನ ಅತ್ಯಂತ ಸುಂದರವಾದ ಬಿದಿರಿನ ಮೆಳೆಯ ಬಳಿ ಬಂದನು. ಅಲ್ಲಿ ಒಂದು ಬಿದಿರಿನ ಗಿಡ ಬಹಳ ವರ್ಷಗಳಿಂದ ಕೃಷ್ಣನನ್ನು ಕಾಣುವ ಆಸೆಯಿಂದ ಅವನಿಗಾಗಿ ಪರಿತಪಿಸುತ್ತಾ ಇತ್ತು, ಅವನನ್ನು ಜಪಿಸುತ್ತಾ ಇತ್ತು. ಸುಕೃತದಿಂದ ಕೃಷ್ಣ ತನ್ನ ಬಳಿ ಬಂದಾಗ ಬಿದಿರು ಆನಂದಬಾಷ್ಪ ಸುರಿಸುತ್ತಾ, ''ಭಗವಂತಾ, ಸೃಷ್ಟಿಯಲ್ಲಿರುವ ಎಲ್ಲಾ ಗಿಡಗಳಿಗೂ ಹೂವು-ಹಣ್ಣು ನೀಡುವ ಶಕ್ತಿ ಇದೆ. ಹೂವುಗಳು ನಿನಗೆ ಅಲಂಕಾರವಾದರೆ, ಹಣ್ಣುಗಳು ನಿನಗೆ ನೈವೇದ್ಯವಾಗಿ ಪ್ರಸಾದವಾಗುತ್ತವೆ. ಮಾವು, ಬೇವಿನಂಥ ಎಲೆಗಳು ಬಾಗಿಲಿಗೆ ತೋರಣವಾಗುತ್ತವೆ. ಪ್ರಕೃತಿಯಲ್ಲಿರುವ ಎಲ್ಲ ಹಸಿರಿನ ಸೃಷ್ಟಿಗೂ ಉದ್ದೇಶವಿದೆ. ಆದರೆ ನಾನು ಯಾವ ಕೆಲಸಕ್ಕೂ ಬಾರದೆ ನಿಷ್ಪ್ರಯೋಜಕನಾಗಿದ್ದೇನೆ'' ಎಂದು ದುಃಖಿಸಿತು. ಕೃಷ್ಣನು ಆ ಬಿದಿರನ್ನು ನೋಡಿ ನಸುನಗುತ್ತಾ, ''ಏಕೆ ದುಃಖಿಸುವೆ, ನೀನು ಕೂಡ ಅನೇಕರಿಗೆ ಉಪಯೋಗವಾಗುತ್ತಿದ್ದೀ; ಆದರೂ ನಿನಗೆ ನನ್ನ ಜತೆ ಸದಾ ಇರಬೇಕೆಂಬ ಆಸೆಯಿದೆಯೇ?'' ಎಂದು ಕೇಳಿದನು. ಬಿದಿರು ಅತ್ಯಂತ ವಿನಯದಿಂದ, ''ಕೃಷ್ಣಾ, ನಿನ್ನ ಸಾನ್ನಿಧ್ಯಕ್ಕಿಂತ ಹೆಚ್ಚಿನ ಭಾಗ್ಯ ಬೇರೇನಿದೆ? ನೀನು ಬಯಸಿದರೆ ನಾನು ನಿನ್ನವನಾಗಲು ಸಿದ್ಧ'' ಎಂದಿತು.

ಆದರೆ ಕೃಷ್ಣ ಒಂದು ಷರತ್ತನ್ನು ಹಾಕುತ್ತಾ, ''ನಾನು ನಿನ್ನನ್ನು ನನ್ನ ಕೊಳಲನ್ನಾಗಿ ಮಾಡಿಕೊಳ್ಳಬೇಕಾದರೆ, ನೀನು ಬಹಳಷ್ಟು ನೋವನ್ನು ಸಹಿಸಬೇಕಾಗುತ್ತದೆ. ನಾನು ನಿನ್ನನ್ನು ಕತ್ತರಿಸಬೇಕು, ನಿನ್ನ ಒಳಗಿರುವ ಎಲ್ಲವನ್ನೂ ಅಗೆದು ತೆಗೆಯಬೇಕು (ಟೊಳ್ಳು ಮಾಡಬೇಕು), ಮತ್ತು ನಿನ್ನ ಮೈಮೇಲೆ ಎಂಟು ರಂಧ್ರಗಳನ್ನು ಕೊರೆಯಬೇಕು. ಈ ನೋವನ್ನು ಸಹಿಸಲು ನೀನು ಸಿದ್ಧವಿದ್ದೀಯಾ?'' ಎಂದು ಕೇಳಿದನು.

ಬಿದಿರು ಕ್ಷಣವೂ ಯೋಚಿಸದೆ ಸಮ್ಮತಿಸಿತು. ಕೃಷ್ಣನು ಬಿದಿರನ್ನು ಕತ್ತರಿಸಿದನು, ಅದರ ಒಳಗಿದ್ದ ತಿರುಳನ್ನೆಲ್ಲ ತೆಗೆದು ಅದನ್ನು ಸಂಪೂರ್ಣವಾಗಿ 'ಖಾಲಿ' ಮಾಡಿದನು. ನಂತರ ಅದರ ಮೇಲೆ ರಂಧ್ರಗಳನ್ನು ಕೊರೆದನು. ಬಿದಿರು ಒಂದು ಹನಿ ಕಣ್ಣೀರು ಸಹ ಹಾಕದೆ ಆ ನೋವನ್ನು ನಗುನಗುತ್ತಾ ಸ್ವೀಕರಿಸಿತು. ಯಾವಾಗ ಬಿದಿರು ಸಂಪೂರ್ಣವಾಗಿ ತನ್ನನ್ನು ತಾನು ಕೃಷ್ಣನಿಗೆ ಅರ್ಪಿಸಿಕೊಂಡಿತೋ, ಆಗ ಕೃಷ್ಣನು ತನ್ನ ಉಸಿರನ್ನು ಆ ಬಿದಿರಿನ ಮೂಲಕ ಹರಿಸಿದನು. ಆಗ ಹುಟ್ಟಿದ್ದೇ ದಿವ್ಯವಾದ ವೇಣುನಾದ.

'ಅಧರಂ ಮಧುರಂ ವದನಂ ಮಧುರಂ ನಯನಂ ಮಧುರಂ ಹಸಿತಂ ಮಧುರಮ್, ಹೃದಯಂ ಮಧುರಂ ಗಮನಂ ಮಧುರಂ ಮಧುರಾಧಿಪತೇರಖಿಲಂ ಮಧುರಮ್'- ಅವನ

ಅಧರಗಳು ಮಧುರ, ಮುಖ ಮಧುರ, ಕಣ್ಣುಗಳು ಮಧುರ, ನಗು ಮಧುರ. ಅವನ ಹೃದಯ ಮತ್ತು ನಡಿಗೆಯೂ ಮಧುರ. ಆ ಮಧುರಾಧಿಪತಿಯಾದ ಶ್ರೀಕೃಷ್ಣನ ಎಲ್ಲವೂ ಮಧುರವೇ ಆಗಿದೆ. ಆ ಮಧುರವಾದ ಅಧರಗಳ ಮೇಲೆ ಶೋಭಿಸುವ ಬಿದಿರಿನ ಕೊಳಲು ಕೂಡ ಮಧುರವೇ.

ಆ ಬಿದಿರಿನಂತೆ ನಮಗೂ ನಮ್ಮ ಸಾಮರ್ಥ್ಯದ ಬಗ್ಗೆ, ನಮ್ಮ ಜೀವನದ ಗುರಿಯ ಬಗ್ಗೆ ಕೆಲವೊಮ್ಮೆ ಅನುಮಾನಗಳು ಹುಟ್ಟುತ್ತವೆ. 'ಎಲ್ಲರೂ ಏನೇನೋ ಸಾಧನೆಯನ್ನು ಮಾಡುತ್ತಿದ್ದಾರೆ, ಆದರೆ ನಾವು ಎಲ್ಲಿಗೂ ತಲುಪಲಾಗುತ್ತಿಲ್ಲ, ಏನನ್ನೂ ಸಾಧಿಸಲಾಗುತ್ತಿಲ್ಲ' ಎಂಬ ಖಿನ್ನತೆ ಕಾಡುತ್ತದೆ. ಆದರೆ ಭಗವಂತನಲ್ಲಿ ಅಪರಿಮಿತ ವಿಶ್ವಾಸವಿದ್ದಾಗ, ಅವನಿಗೆ ನಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಾಗ ಮಾತ್ರ, ನಾವು ಅವನ ಕೈಯಲ್ಲಿನ ಬಿದಿರಾಗುತ್ತೇವೆ. ಇದು ಸುಲಭದ ಪಯಣವಲ್ಲ. ಇಲ್ಲಿ ಅನೇಕ ತ್ಯಾಗಗಳನ್ನು ಮಾಡಬೇಕಾಗುತ್ತದೆ, ನೋವುಗಳನ್ನು ಸಹಿಸಬೇಕಾಗುತ್ತದೆ. ಆದರೆ ಅದೆಲ್ಲಕ್ಕೂ ಕೂಡ ಸಾರ್ಥಕತೆ ದೊರೆಯುವ ಸಮಯ ಬಂದೇ ಬರುತ್ತದೆ. ಸಾಮಾನ್ಯರಿಂದ ಅಸಾಮಾನ್ಯರಾಗುವುದಕ್ಕೆ ನಾವೆಲ್ಲರೂ ಉಳಿಪೆಟ್ಟಿನ ನೋವನ್ನು ಸಹಿಸಲೇಬೇಕು. ಆಗ ಮಾತ್ರವೇ ಕಚ್ಚಾಶಿಲೆಯೊಂದು ಸುಂದರ ಮೂರ್ತಿಯಾಗಿ ರೂಪುಗೊಳ್ಳಲು ಸಾಧ್ಯ.

ನಾವು ದೈವತ್ವವನ್ನು ಸಾಧಿಸಬೇಕಾದರೆ ಅಥವಾ ಜೀವನದಲ್ಲಿ ಸಾರ್ಥಕತೆಯನ್ನು ಪಡೆಯಬೇಕಾದರೆ, ನಮ್ಮ ಒಳಗಿರುವ 'ಅಹಂಕಾರ' ಮತ್ತು 'ಮಮಕಾರ'ಗಳನ್ನು ಸಂಪೂರ್ಣವಾಗಿ ತೊರೆದು 'ಖಾಲಿ'ಯಾಗಬೇಕು. ನಾವು ಯಾವಾಗ ಶೂನ್ಯವಾಗುತ್ತೇವೆಯೋ, ಆಗ ಭಗವಂತ ನಮ್ಮ ಮೂಲಕ ಸುಂದರವಾದ ಸಂಗೀತವನ್ನು ನುಡಿಸುತ್ತಾನೆ.

ಕೃಷ್ಣಂ ವಂದೇ ಜಗದ್ಗುರುಂ....

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕೆಕೆಆರ್ ಸೇರಿದ ಸೌರಭ್ ದುಬೆ

ಕೋಲ್ಕತ್ತಾ: ಈ ಬಾರಿಯ ಐಪಿಎಲ್ ಆವೃತ್ತಿಯಿಂದ ಹೊರಬಿದ್ದ ಭಾರತದ ವೇಗಿ ಆಕಾಶ್‌ದೀಪ್ ಸಿಂಗ್ ಬದಲಿಗೆ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ವಿದರ್ಭದ ಎಡಗೈ ವೇಗಿ ಸೌರಭ್ ದುಬೆ ಅವರನ್ನು ಹೆಸರಿಸಿದೆ. ಆಕಾಶ್ ದೀಪ್ ಬೆಂಗಳೂರಿನಲ್ಲಿರುವ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಪುನರ್ವಸತಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದುಬೆ ಇನ್ನೂ ಐಪಿಎಲ್‌ಗೆ ಪದಾರ್ಪಣೆ ಮಾಡಿಲ್ಲ ಮತ್ತು ಈ ಸಲದ ಮಿನಿ ಹರಾಜಿನಲ್ಲಿ ದುಬೆ ಮಾರಾಟವಾಗಿರಲಿಲ್ಲ. ಅವರನ್ನು 2022ರಲ್ಲಿ ಹೈದರಾಬಾದ್ ಆಯ್ಕೆ ಮಾಡಿತ್ತು. ಆದರೆ ಗಾಯದಿಂದಾಗಿ ಅವರ ಟೂರ್ನಿಯಲ್ಲಿ ಆಡಲು ಸಾಧ್ಯವಾಗಿರಲಿಲ್ಲ. 'ಈ ಬಾರಿ ಚೊಚ್ಚಲ ಐಪಿಎಲ್ ಆಡುವ ನಿರೀಕ್ಷೆಯಲ್ಲಿರುವ ಸೌರಭ್ ಪ್ರತಿಭಾನ್ವಿತ ಎಡಗೈ ವೇಗದ ಬೌಲರ್. 2019ರ ಎಸಿಸಿ ಎಮರ್ಜಿಂಗ್ ತಂಡಗಳ ಏಷ್ಯಾ ಕಪ್ ತಂಡದ ಭಾಗವಾಗಿ ರಾಹುಲ್ ದ್ರಾವಿಡ್ ನೇತೃತ್ವದಲ್ಲಿ ಅವರು ಬಾಂಗ್ಲಾದೇಶ ಪ್ರವಾಸ ಮಾಡಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅವರು ವಿಕೆಟ್‌ನಿಂದ ಹೆಚ್ಚುವರಿ ಬೌನ್ಸ್ ಪಡೆಯುತ್ತಾರೆ ಮತ್ತು ಚೆಂಡನ್ನು ಎರಡೂ ಕಡೆ ಸ್ವಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ನೈಟ್ ರೈಡರ್ಸ್ ಮ್ಯಾನೇಜ್‌ಮೆಂಟ್‌ನ ಉತ್ತಮ ಆಯ್ಕೆಯಾಗಿದೆ' ಎಂದು ದುಬೆ ಅವರೊಂದಿಗೆ ಕೆಲಸ ಮಾಡಿದ ಸುಬ್ರೋಟೊ ಬ್ಯಾನರ್ಜಿ ಹೇಳಿದ್ದಾರೆ.

ಟೂರ್ನಿಯಿಂದ ಹಿಂದೆ ಸರಿದ ಕೊನೆರು ಹಂಪಿ

ದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಸಂಘಟಕರ ಭರವಸೆಗಳ ಹೊರತಾಗಿಯೂ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿ ಅವರು ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ. ಸೈಪ್ರಸ್‌ನಲ್ಲಿ ಇದೇ 28ರಿಂದ ಟೂರ್ನಿ ನಡೆಯಲಿದೆ. ಮಹಿಳೆಯರ ವಿಭಾಗದ ವಿಜೇತರು ಈ ವರ್ಷದ ಕೊನೆಯಲ್ಲಿ ಹಾಲಿ ವಿಶ್ವ ಚಾಂಪಿಯನ್ ಜು ವೆಂಜುನ್ (ಚೀನಾ) ಅವರಿಗೆ ಚಾಲೆಂಜರ್ ಆಗಲಿದ್ದಾರೆ. ಓಪನ್ ವಿಭಾಗದ ವಿಜೇತರು ವಿಶ್ವ ಚಾಂಪಿಯನ್ ಡಿ. ಗುಕೇಶ್ (ಭಾರತ) ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಬೆಂಗಳೂರಿನ ಐಪಿಎಲ್ ಪಂದ್ಯದ ಟಿಕೆಟ್ ಹಿಂದೆಂದಿಗಿಂತ ದುಬಾರಿ | ಕನಿಷ್ಟ ಮತ್ತು ಗರಿಷ್ಠ ಟಿಕೆಟ್ ದರ ಇನ್ನಷ್ಟು ಏರಿಕೆ ಸಾಧ್ಯತೆ

ಆರ್‌ಸಿಬಿ ಪಂದ್ಯಗಳ ಟಿಕೆಟ್ ದುಬಾರಿ

ಬೆಂಗಳೂರು: ಆರ್‌ಸಿಬಿ ತಂಡವು ಕಳೆದ ವರ್ಷ ಚಾಂಪಿಯನ್ ಪಟ್ಟ ಅಲಂಕರಿಸಿರುವುದರಿಂದ ಹಾಲಿ ಚಾಂಪಿಯನ್ ತಂಡದ ಆಟವನ್ನು ತವರಿನ ಮೈದಾನದಲ್ಲಿ ಕಣ್ತುಂಬಿಕೊಳ್ಳಲು ಆರ್‌ಸಿಬಿ ಅಭಿಮಾನಿಗಳು ತುದಿಗಾಲಿನಲ್ಲಿ ನಿಂತಿದ್ದಾರೆ. ಈ ಬಾರಿಯ ಉದ್ಘಾಟನಾ ಪಂದ್ಯ ಇದೇ ಶನಿವಾರ ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲೇ ನಡೆಯಲಿದೆ.

ಆರ್‌ಸಿಬಿ ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ತಿಳಿಸಿರುವಂತೆ, ಟಿಕೆಟ್‌ಗಳು ಕೇವಲ ಆರ್‌ಸಿಬಿಯ ಅಧಿಕೃತ ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್‌ನಲ್ಲಿ ಮಾತ್ರ ಲಭ್ಯವಿರುತ್ತವೆ. ಹೀಗಾಗಿ ಆರ್‌ಸಿಬಿ ಪಂದ್ಯದ ಎಲ್ಲಾ ಟಿಕೆಟ್‌ಗಳು ಬುಕ್ಕಿಂಗ್ ಆರಂಭವಾದ ಕೆಲ ಗಂಟೆಗಳಲ್ಲೇ ಬಿರುಸಿನಿಂದ ಮಾರಾಟವಾಗುವ ನಿರೀಕ್ಷೆಯಿದೆ. ಅಭಿಮಾನಿಗಳು ಟಿಕೆಟ್ ಖರೀದಿಯ ಪ್ರಕಟಣೆಗೆ ಚಾತಕಪಕ್ಷಿಯಂತೆ ಕಾದು ಕುಳಿತಿದ್ದಾರೆ. ಇದೇ ಕಾರಣಕ್ಕೆ ಅಭಿಮಾನಿಗಳ ಅಭಿಮಾನವನ್ನೇ ಬಂಡವಾಳ ಮಾಡಿಕೊಳ್ಳಲು ಫ್ರಾಂಚೈಸಿ ಮತ್ತೊಂದೆಡೆ ಸಜ್ಜಾಗಿದೆ.

ಆರ್‌ಸಿಬಿ ತಂಡದ ತವರಿನ ಪಂದ್ಯಗಳನ್ನು ವೀಕ್ಷಿಸಲು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಹೋಗಬೇಕು ಅಂದುಕೊಂಡಿರುವವರು ಈ ಹಿಂದಿನ ಆವೃತ್ತಿಗಳಿಗಿಂತ ಹೆಚ್ಚಿನ ಮೊತ್ತವನ್ನು ಖರ್ಚು ಮಾಡಲು ಸಿದ್ಧರಾಗಬೇಕು. ಟಿಕೆಟ್ ದರ ಈ ಹಿಂದಿನ ಎಲ್ಲ ಆವೃತ್ತಿಗಳಿಗಿಂತಲೂ ದುಬಾರಿಯಾಗಿರಲಿದೆ ಎಂದು ವರದಿಯಾಗಿದೆ.

ಆರ್‌ಸಿಬಿ ತವರಿನ ಪಂದ್ಯದ ಟಿಕೆಟ್‌ಗಳ ಕನಿಷ್ಠ ಮೊತ್ತದ ಪ್ರವೇಶದ ಬಜೆಟ್/ಸ್ಟ್ಯಾಂಡರ್ಡ್ ಸೀಟ್ ಪ್ರವೇಶ ದರ ಶೇ.40 ಜಿಎಸ್‌ಟಿ ಸಹಿತ ಒಟ್ಟು ಮೊತ್ತ ರು.3220ರಿಂದ ಆರಂಭವಾಗಿ ರು.5250ರ ವರೆಗೂ ಪಾವತಿಸಬೇಕಾಗಿ ಬರಬಹುದೆಂದು ಅಂದಾಜಿಸಲಾಗುತ್ತಿದೆ. ಹಾಗೆಯೇ ಮಿಡ್ ರೇಂಜ್ ಸ್ಟ್ಯಾಂಡ್ ದರವು ಜಿಎಸ್‌ಟಿ ಸಹಿತ ರು.4620ರಿಂದ ಆರಂಭವಾಗಿ 8,400 ವರೆಗೂ ತಲುಪುವ ಸಾರ್ಧಯತೆ ಇದೆ. ಹಾಗೆಯೇ ಪ್ರೀಮಿಯಂ/ಹಾಸ್ಪಿಟ್ಯಾಲಿಟಿ ಪ್ರವೇಶ ದರವು 14,000ದಿಂದ ಆರಂಭವಾಗಿ ಗರಿಷ್ಠ ಮೊತ್ತ 65,800 ಆಗಿರಲಿದೆ ಎಂದು ಹೇಳಲಾಗುತ್ತಿದೆ.

ಆರ್‌ಸಿಬಿ ಟಿಕೆಟ್‌ಗಳ ಖರೀದಿ ವೇಳೆಯೂ ಡೈನಮಿಕ್ ಪ್ರೈಸಿಂಗ್ ಬಳಕೆಯಾಗಲಿದೆ, ಅಂದರೆ ಈಗ ನಿಗದಿಪಡಿಸಿರುವ ಟಿಕೆಟ್‌ನ ಬೇಡಿಕೆ ಹೆಚ್ಚಾದರೆ ಅದೇ ಮೊತ್ತಕ್ಕೆ ಸಿಗಲಿದೆ ಎನ್ನುವುದೂ ಖಚಿತವಿಲ್ಲ. ಟಿಕೆಟ್ ಕನಿಷ್ಟ ದರ 4875ರ ವರೆಗೂ ಏರಿಕೆ ಆಗಬಹುದು, ಉಳಿದ ಟಿಕೆಟ್‌ಗಳಲ್ಲೂ ಅದೇ ರೀತಿ ಏರಿಕೆ ಕಾಣುವ ಸಾಧ್ಯತೆಯೂ ಇದೆ.

ಅಭ್ಯಾಸ ಪಂದ್ಯದಲ್ಲಿ ಅಬ್ಬರಿಸಿದ ಕೊಹ್ಲಿ, ಜಿತೇಶ್, ಟಿಮ್ ಡೇವಿಡ್

ಆರ್‌ಸಿಬಿ ತಂಡವು ಕಳೆದ ಮೂರ್ನಾಲ್ಕು ದಿನಗಳಿಂದ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸತತವಾಗಿ ಅಭ್ಯಾಸ ನಡೆಸುತ್ತಿದ್ದು, ಸೋಮವಾರ ಬೆಳಿಗ್ಗೆ ಆರ್‌ಸಿಬಿ ತಂಡವು ಅಭ್ಯಾಸ ಪಂದ್ಯಗಳ ವೀಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದೆ.
ತಂಡದ ಮೊದಲ ಅಭ್ಯಾಸ ಪಂದ್ಯದಲ್ಲಿ ವಿರಾಟ್ ಕೊಹ್ಲಿ, ಜಿತೇಶ್ ಶರ್ಮಾ, ಟಿಮ್ ಡೇವಿಡ್ ಮತ್ತು ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್ ನಡೆಸಿದ್ದಾರೆ. ಜಿತೇಶ್ ಶರ್ಮಾ ಕೇವಲ 37 ಎಸೆತಗಳಲ್ಲಿ 81 ರನ್ ಗಳಿಸಿದ್ದಾರೆ. ಜಿತೇಶ್ ಜತೆಗೆ, ಆಸ್ಟ್ರೇಲಿಯಾದ ಟಿಮ್ ಡೇವಿಡ್ 14 ಎಸೆತಗಳಲ್ಲಿ 36 ರನ್ ಮತ್ತು ವೆಂಕಟೇಶ್ ಅಯ್ಯರ್ 16 ಎಸೆತಗಳಲ್ಲಿ 30 ರನ್ ಗಳಿಸಿ ಬ್ಯಾಟಿಂಗ್‌ನಲ್ಲಿ ಮಿಂಚಿದ್ದರೆ, ವಿರಾಟ್ ಕೊಹ್ಲಿ 12 ಎಸೆತಗಳಲ್ಲಿ 29 ರನ್ ಗಳಿಸಿದ್ದಾರೆ.

ದೇಶದ 15 ನಗರಗಳಲ್ಲಿ ಐಪಿಎಲ್ ಅಭಿಮಾನಿಗಳ ಕಲರವ

ತುಮಕೂರು, ಮೈಸೂರಲ್ಲಿ ಐಪಿಎಲ್ ಫ್ಯಾನ್ ಪಾರ್ಕ್

ದೆಹಲಿ: ಐಪಿಎಲ್ ಹೊಸ ಆವೃತ್ತಿ ಆರಂಭದಿಂದ ಮೊದಲ ಮೂರು ವಾರಾಂತ್ಯಗಳಲ್ಲಿ ನಡೆಯುವ ಫ್ಯಾನ್ ಪಾರ್ಕ್ ಈವೆಂಟ್‌ನ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ರಾಜ್ಯದ ತುಮಕೂರು, ಮೈಸೂರು ಸೇರಿ ದೇಶದ 15 ನಗರಗಳಲ್ಲಿ ಫ್ಯಾನ್ ಪಾರ್ಕ್ ನಡೆಯಲಿದೆ.

ಕ್ರೀಡಾಂಗಣದ ಹೊರತಾಗಿ ಐಪಿಎಲ್ ಆಟದ ಅನುಭವ ನೀಡುವ ಉದ್ದೇಶದೊಂದಿಗೆ ಈ ಫ್ಯಾನ್ ಪಾರ್ಕ್ ನಡೆಯಲಿದ್ದು, ಲೈವ್ ಗೇಮಿಂಗ್, ಆಹಾರ ಮಳಿಗೆ, ಮಕ್ಕಳ ಆಟೋಟದ ಕೇಂದ್ರಗಳು ಇರಲಿದೆ. ಮಾ.28ರಿಂದ ಮೂರು ವಾರಾಂತ್ಯಗಳಲ್ಲಿ 11 ರಾಜ್ಯಗಳ 15 ನಗರಗಳಲ್ಲಿ ಈ ಫ್ಯಾನ್ ಪಾರ್ಕ್ ಈವೆಂಟ್ ಅನ್ನು ಬಿಸಿಸಿಐ ಆಯೋಜಿಸುತ್ತಿದೆ.

ಏನೆಲ್ಲಾ ಇರಲಿದೆ?: ಫ್ಯಾನ್ ಪಾರ್ಕ್‌ನಲ್ಲಿ ವರ್ಚುವಲ್ ಕ್ರಿಕೆಟ್ ಪಂದ್ಯಗಳು, ಬೌಲಿಂಗ್ ನೆಟ್, ಸಂಗೀತ, ಮನರಂಜನೆ, ಆಹಾರ ಮಳಿಗೆ, ಮಕ್ಕಳಿಗೆ ಆಟೋಟದ ಕೇಂದ್ರಗಳು, ಫೇಸ್ ಪೇಂಟಿಂಗ್, 360 ಡಿಗ್ರಿ ಫೋಟೋ ಬೂತ್ ಸೇರಿದಂತೆ ವಿವಿಧ ಚಟುವಟಿಕೆಗಳು ಇರಲಿವೆ.

ರಾಜ್ಯದಲ್ಲಿ ಎಲ್ಲೆಲ್ಲಿ?

ನಮ್ಮ ರಾಜ್ಯದ ಮೈಸೂರಿನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮತ್ತು ತುಮಕೂರಿನಲ್ಲಿರುವ ಸರಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಈ ಸಲ ಫ್ಯಾನ್ ಪಾರ್ಕ್ ಇರಲಿದೆ.

2015ರಿಂದ ಐಪಿಎಲ್ ಫ್ಯಾನ್ ಪಾರ್ಕ್ ನಡೆಯುತ್ತಿದ್ದು, ವಿವಿಧ ನಗರಗಳಲ್ಲಿನ ಅಭಿಮಾನಿಗಳು ಒಟ್ಟಿಗೆ ಸೇರಲು ಅನುವು ಮಾಡಿಕೊಡುತ್ತದೆ.

ಮೊದಲ ಮೂರು ವಾರಾಂತ್ಯಗಳೆಂದರೆ ಇದೇ ಮಾರ್ಚ್ 28 ಮತ್ತು 29, ಏಪ್ರಿಲ್ 4 ಮತ್ತು 5, ಏಪ್ರಿಲ್ 11 ಮತ್ತು 12 ರಂದು ಫ್ಯಾನ್ ಪಾರ್ಕ್ ನಡೆಯಲಿದೆ. ಮೂರು ವಾರಾಂತ್ಯಗಳಲ್ಲಿ ಐಪಿಎಲ್ ಪಂದ್ಯ ನಡೆಯಲಿದ್ದು, ಮಾ.28ರಂದು ಆರ್‌ಸಿಬಿ ಹಾಗೂ ಹೈದರಾಬಾದ್ ಮುಖಾಮುಖಿಯಾಗಲಿವೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡದ 'ಹಾಲ್ ಆಫ್ ಫೇಮ್'

ರೈನಾ, ಹೇಡನ್‌ಗೆ ಸಿಎಸ್‌ಕೆ ಗೌರವ

ದೆಹಲಿ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ತನ್ನ ಮೊದಲ 'ಹಾಲ್ ಆಫ್ ಫೇಮ್' ಗೌರವಕ್ಕೆ ದಿಗ್ಗಜ ಕ್ರಿಕೆಟಿಗರಾದ ಸುರೇಶ್ ರೈನಾ ಮತ್ತು ಮ್ಯಾಥ್ಯೂ ಹೇಡನ್ ಭಾಜನರಾಗಿದ್ದಾರೆ.

ಚೆನ್ನೈ ಚೆಪಾಕ್‌ನ ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ 'ರೋರ್-26' ಸಿಎಸ್‌ಕೆ ಅಭಿಮಾನಿ ಸಮಾರಂಭದಲ್ಲಿ ಚೆನ್ನೈ ಫ್ರಾಂಚೈಸಿ ಇದನ್ನು ಪ್ರಕಟಿಸಿತು. ಸಿಎಸ್‌ಕೆ ತನ್ನ ದಿಗ್ಗಜರು ಮತ್ತು ಮಾಜಿ ಆಟಗಾರರನ್ನು ಅಧಿಕೃತವಾಗಿ ಗೌರವಿಸಿದ ಮೊದಲ ಐತಿಹಾಸಿಕ ಕ್ಷಣ ಇದಾಗಿದೆ. ಮುತ್ತಯ್ಯ ಮುರಳೀಧರನ್, ಅಂಬಾಟಿ ರಾಯುಡು, ಶದಾಬ್ ಜಕಾತಿ, ಡ್ವೇನ್ ಬ್ರಾವೋ, ಹರ್ಭಜನ್ ಸಿಂಗ್ ಮತ್ತು ಎಸ್.ಬದ್ರಿನಾಥ್ ಸೇರಿದಂತೆ ಹಲವು ಮಾಜಿ ಆಟಗಾರರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಇತಿಹಾಸದಲ್ಲೇ ಅತ್ಯಂತ ಯಶಸ್ವಿ ಆಟಗಾರರಲ್ಲಿ ಒಬ್ಬರಾದ ಸುರೇಶ್ ರೈನಾ ಅಭಿಮಾನಿಗಳಿಗೆ ಪ್ರೀತಿಪಾತ್ರರಾದ್ದರು. 2010, 2011, 2018 ಮತ್ತು 2021ರಲ್ಲಿ ಸಿಎಸ್‌ಕೆ ಗೆದ್ದ ಐಪಿಎಲ್ ಪ್ರಶಸ್ತಿಗಳಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದರು. ಐಪಿಎಲ್‌ನಲ್ಲಿ ಒಟ್ಟು 200 ಪಂದ್ಯಗಳಲ್ಲಿ 5,529 ರನ್ ಗಳಿಸಿರುವ ರೈನಾ, ಸಿಎಸ್‌ಕೆ ಪರ ಅತ್ಯಧಿಕ ರನ್ ಗಳಿಸಿದ ಆಟಗಾರರಾಗಿದ್ದಾರೆ. ಅವರು ಐಪಿಎಲ್‌ನಲ್ಲಿ 38 ಅರ್ಧಶತಕ ಮತ್ತು ಎರಡು ಶತಕಗಳನ್ನು ಬಾರಿಸಿದ್ದಾರೆ.

ಆಸ್ಟ್ರೇಲಿಯಾದ ದಿಗ್ಗಜ, ಆರಂಭಿಕ ಬ್ಯಾಟ್ಸ್‌ಮ್ಯಾನ್ ಮ್ಯಾಥ್ಯೂ ಹೇಡನ್ ಕೂಡ ಸಿಎಸ್‌ಕೆ ತಂಡದ ಆರಂಭಿಕ ವರ್ಷಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. 2008ರ ಮೊದಲ ಐಪಿಎಲ್ ಆವೃತ್ತಿಯಲ್ಲಿ ತಂಡಕ್ಕೆ ಸೇರಿಕೊಂಡ ಅವರು, 2009ರಲ್ಲಿ 527 ರನ್ ಗಳಿಸಿ ಆರೆಂಜ್ ಕ್ಯಾಪ್ ಗೆದ್ದ ಮೊದಲ ಸಿಎಸ್‌ಕೆ ಬ್ಯಾಟ್ಸ್‌ಮನ್ ಆಗಿದ್ದರು. ಮೂರು ವರ್ಷಗಳ ಅವಧಿಯಲ್ಲಿ (2008, 2009 ಮತ್ತು 2010) ಹೇಡನ್ 32 ಪಂದ್ಯಗಳಲ್ಲಿ ಒಟ್ಟು 1107 ರನ್ ಗಳಿಸಿ ಸಿಎಸ್‌ಕೆ ತಂಡದ ಪರ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ.

2026-2027ನೇ ಸಾಲಿನ ವೇಳಾಪಟ್ಟಿ ಪ್ರಕಟಿಸಿದ ಕ್ರಿಕೆಟ್ ಆಸ್ಟ್ರೇಲಿಯಾ

ಜನವರಿಯಲ್ಲಿ ಬಾರ್ಡರ್-ಗಾವಸ್ಕರ್ ಸರಣಿ

ಸಿಡ್ನಿ: ಆಸ್ಟ್ರೇಲಿಯಾ ಪುರುಷರ ಕ್ರಿಕೆಟ್ ತಂಡದ 2026-27ನೇ ಸಾಲಿನ ವೇಳಾಪಟ್ಟಿಯನ್ನು ಕ್ರಿಕೆಟ್ ಆಸ್ಟ್ರೇಲಿಯಾ ಬಿಡುಗಡೆಗೊಳಿಸಿದ್ದು, ಮುಂದಿನ ಜನವರಿಯಲ್ಲಿ ಬಾರ್ಡರ್-ಗಾವಸ್ಕರ್ ಟ್ರೋಫಿ ಸರಣಿ ಆರಂಭವಾಗಲಿದೆ. ಆಸ್ಟ್ರೇಲಿಯಾ ತಂಡವು ಭಾರತ ಪ್ರವಾಸದಲ್ಲಿ ಐದು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಜನವರಿಯಿಂದ ಮಾರ್ಚ್‌ವರೆಗೆ ಈ ಸರಣಿಯ ಆಯೋಜನೆಗೊಳ್ಳಲಿದೆ.

ಆಸೀಸ್ ತಂಡವು 2026ರ ಡಿಸೆಂಬರ್‌ನಿಂದ 2027ರ ಮಾರ್ಚ್‌ವರೆಗೆ 14 ವಾರಗಳಲ್ಲಿ 10 ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಆಗಸ್ಟ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಎರಡು ಟೆಸ್ಟ್ ಪಂದ್ಯಗಳೊಂದಿಗೆ ತವರಿನ ಋತು ಪ್ರಾರಂಭವಾಗಲಿದೆ.

ಆಸ್ಟ್ರೇಲಿಯಾ ತಂಡದ ದಕ್ಷಿಣ ಆಫ್ರಿಕಾ ಪ್ರವಾಸವು ಸೆಪ್ಟೆಂಬರ್ ಕೊನೆಯ ವಾರದಿಂದ ಅಕ್ಟೋಬರ್ ಅಂತ್ಯದವರೆಗೆ ನಡೆಯಲಿದೆ. ಈ ಪ್ರವಾಸದಲ್ಲಿ ಮೂರು ಏಕದಿನ ಮತ್ತು ಮೂರು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ನವೆಂಬರ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಸೀಮಿತ ಓವರ್‌ಗಳ (ಮೂರು ಏಕದಿನ ಮತ್ತು ಐದು ಟಿ20 ಪಂದ್ಯ) ಸರಣಿ ನಡೆಯಲಿದೆ. ಇದಾದ ಬಳಿಕ ನ್ಯೂಜಿಲೆಂಡ್ ವಿರುದ್ಧದ ತವರು ಸರಣಿ ನಡೆಯಲಿದೆ. ನಾಲ್ಕು ವಾರಗಳ ಸರಣಿಯಲ್ಲಿ ನಾಲ್ಕು ಟೆಸ್ಟ್ ಆಡಲಿದೆ. ಇತ್ತಂಡಗಳ ನಾಲ್ಕು ಪಂದ್ಯಗಳ ಸರಣಿ ನಡೆಯುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

ಪ್ಯಾಟ್ ಕಮಿನ್ಸ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಜೋಶ್ ಹೇಜಲ್‌ವುಡ್ ಮತ್ತು ನೇಥನ್ ಲಯನ್ ಮುಂತಾದ ಅನುಭವಿ ಆಟಗಾರರಿಗೆ ಬಾರ್ಡರ್-ಗಾವಸ್ಕರ್ ಟ್ರೋಫಿ ಸರಣಿಯು ಕೊನೆಯ ಪ್ರವಾಸವಾಗುವ ಸಾಧ್ಯತೆಯಿದೆ. ಈ ಆಟಗಾರರಿಗೆ ಭಾರತ ನೆಲದಲ್ಲಿ ಒಮ್ಮೆಯೂ ಸರಣಿ ಗೆಲ್ಲಲು ಸಾಧ್ಯವಾಗಿಲ್ಲ, ಹೀಗಾಗಿ ಈ ಬಾರಿಯ ಸರಣಿಯು ಮಹತ್ವ ಪಡೆದುಕೊಳ್ಳಲಿದೆ.

ಪಾಕಿಸ್ತಾನ್ ಲೀಗ್‌ನಲ್ಲಿ ಭಾಗವಹಿಸುವ ವಿದೇಶಿ ಆಟಗಾರರಿಗೆ ಎಚ್ಚರಿಕೆ

ವಾರ್ನರ್, ಸ್ಮಿತ್‌ಗೆ ಪಾಕ್ ಉಗ್ರರಿಂದ ಬೆದರಿಕೆ

ಕರಾಚಿ: ಮಾರ್ಚ್ 26ರಂದು ಆರಂಭವಾಗಲಿರುವ 11ನೇ ಆವೃತ್ತಿಯ ಪಾಕಿಸ್ತಾನ ಸೂಪರ್ ಲೀಗ್ ಟೂರ್ನಿಗೆ ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಎಚ್ಚರಿಕೆ ನೀಡಿದ್ದು, ವಿದೇಶಿ ಆಟಗಾರರು ಪಂದ್ಯಾವಳಿಯಿಂದ ತಕ್ಷಣವೇ ಹಿಂದೆ ಸರಿಯುವಂತೆ ಸೂಚಿಸಿದೆ.

'ಸಂಬಂಧಿತ ಕ್ರಿಕೆಟ್ ಮಂಡಳಿಗಳು ತಮ್ಮ ಆಟಗಾರರನ್ನು ಪಾಕಿಸ್ತಾನಕ್ಕೆ ಕಳುಹಿಸದಂತೆ ನಾವು ಸಲಹೆ ನೀಡಲು ಬಯಸುತ್ತೇವೆ. ಅವರಿಗೆ ಏನಾದರೂ ಸಂಭವಿಸಿದರೆ, ಅದು ನಮ್ಮ ಜವಾಬ್ದಾರಿಯಲ್ಲ. ನಾವು ಈಗಾಗಲೇ ಅವರಿಗೆ ಎಚ್ಚರಿಕೆ ನೀಡಿದ್ದೇವೆ' ಎಂದು ತೆಹ್ರಿಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಬಣದ ಜಮಾತ್-ಉಲ್-ಅಹ್ರಾರ್‌ನ ಹಿರಿಯ ಕಮಾಂಡರ್ ಹೇಳಿದ್ದಾರೆ.

ವಿದೇಶಿ ಕ್ರೀಡಾಪಟುಗಳನ್ನು ನೇರವಾಗಿ ಉದ್ದೇಶಿಸಿ ಮಾತನಾಡಿದ ಮನ್ಸೂರ್, ಪಿಎಸ್‌ಎಲ್‌ನಲ್ಲಿ ಭಾಗವಹಿಸುವವರಿಗೆ, ವಿಶೇಷವಾಗಿ ವಿದೇಶಿ ಆಟಗಾರರಿಗೆ ನಾವು ಸ್ಪಷ್ಟ ಮತ್ತು ತುರ್ತು ಸಂದೇಶವನ್ನು ನೀಡಲು ಬಯಸುತ್ತೇವೆ, ಅದೇನೆಂದರೆ ದೇಶದ ಪ್ರಸ್ತುತ ಆಂತರಿಕ ಭದ್ರತೆ ಮತ್ತು ರಾಜಕೀಯ ಭೂದೃಶ್ಯವು ಅಸ್ಥಿರ ಮತ್ತು ಅನಿಶ್ಚಿತವಾಗಿದೆ.

ಮಿಲಿಟರಿ ಕಾರ್ಯಾಚರಣೆಗಳು ಮತ್ತು ನಾಗರಿಕ ಅಶಾಂತಿಯು ಪ್ರದೇಶದ ಗಮನಾರ್ಹ ಭಾಗಗಳಲ್ಲಿ ಪ್ರಾಬಲ್ಯ ಹೊಂದಿರುವ ವಾತಾವರಣದಲ್ಲಿ, ಅಂತಾರಾಷ್ಟ್ರೀಯ ಕ್ರೀಡಾಪಟುಗಳ ಸುರಕ್ಷತೆಯನ್ನು ಖಾತರಿಪಡಿಸಲಾಗುವುದಿಲ್ಲ.

ಈ ಭೀಕರ ಸಂದರ್ಭಗಳನ್ನು ಗಮನಿಸಿದರೆ, ನಿಮ್ಮ ವೈಯಕ್ತಿಕ ಭದ್ರತೆಗೆ ಆದ್ಯತೆ ನೀಡಿ ಮತ್ತು ತಕ್ಷಣವೇ ಪಂದ್ಯಾವಳಿಯಿಂದ ಹಿಂದೆ ಸರಿಯುವಂತೆ ನಾವು ಬಲವಾಗಿ ಸಲಹೆ ನೀಡುತ್ತೇವೆ. ಪ್ರಸ್ತುತ ಯಾವುದೇ ಶಾಂತಿಯುತ ಕ್ರೀಡಾ ಚಟುವಟಿಕೆಗೆ ಪಾಕ್ ಯೋಗ್ಯವಾಗಿಲ್ಲ ಎಂದರು.

ಆಸ್ಟ್ರೇಲಿಯಾದ ಆಟಗಾರರಾದ ಡೇವಿಡ್ ವಾರ್ನರ್ ಪಿಎಸ್‌ಎಲ್ ಫ್ರಾಂಚೈಸಿಯಾದ ಕರಾಚಿ ಕಿಂಗ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಸ್ಟೀವ್ ಸ್ಮಿತ್ ಅವರು ಮುಲ್ತಾನ್ ಸುಲ್ತಾನ್ಸ್ ತಂಡವನ್ನು ಪ್ರತಿನಿಧಿಸುವ ಮೂಲಕ ಟೂರ್ನಮೆಂಟ್‌ಗೆ ಪದಾರ್ಪಣೆ ಮಾಡಲಿದ್ದಾರೆ.

ಪಾಕಿಸ್ತಾನ್ ಸೂಪರ್ ಲೀಗ್ ಟೂರ್ನಿ ಪಂದ್ಯಾವಳಿ ಮಾರ್ಚ್ 26ರಿಂದ ಪ್ರಾರಂಭವಾಗಲಿದ್ದು, 44 ಪಂದ್ಯಗಳು ಲಾಹೋರ್ ಮತ್ತು ಕರಾಚಿಯಲ್ಲಿ ನಡೆಯಲಿವೆ. ಉದ್ಘಾಟನಾ ಸಮಾರಂಭವನ್ನೂ ರದ್ದುಪಡಿಸಲಾಗಿದ್ದು, ಭದ್ರತಾ ಕಾರಣದಿಂದ ಪಂದ್ಯಗಳನ್ನು ಖಾಲಿ ಕ್ರೀಡಾಂಗಣದಲ್ಲಿ ನಡೆಸಲು ಪಾಕ್ ಕ್ರಿಕೆಟ್ ಮಂಡಳಿ ನಿರ್ಧರಿಸಿದೆ.

ಆದಿತ್ಯ ಧಾರ್ ನಿರ್ದೇಶನದಲ್ಲಿ ಅಕ್ಷರಧಾಮ

ಧುರಂಧರ್ ಭರ್ಜರಿ ಯಶಸ್ಸು ಕಂಡಿದೆ. ಕಳೆದ ವರ್ಷ ಬಿಡುಗಡೆಯಾಗಿದ್ದ ಧುರಂಧರ್ ಮೊದಲ ಭಾಗ ಬರೋಬ್ಬರಿ ಸಾವಿರದ ಇನ್ನೂರ ಐವತ್ತು ಕೋಟಿಗೂ ಹೆಚ್ಚು ಗಳಿಸಿತ್ತು. ಇನ್ನು ಧುರಂಧರ್ 2 ಬಿಡುಗಡೆಯಾದ ನಾಲ್ಕೇ ದಿನಗಳಲ್ಲಿ ಐನೂರು ಕೋಟಿ ಕ್ಲಬ್ ಸೇರಿದೆ. ದೇಶ ವಿದೇಶಗಳಲ್ಲಿಯೂ ಸಖತ್ ಸದ್ದು ಮಾಡುತ್ತಿದೆ. ಹೀಗಿರುವಾಗಲೇ ಧುರಂಧರ್ ನಿರ್ದೇಶಕ ಆದಿತ್ಯ ಧಾರ್ ನಿರ್ದೇಶನದ ಮುಂದಿನ ಸಿನಿಮಾ ಯಾವುದು, ಆ ಚಿತ್ರದಲ್ಲಿ ಯಾರು ನಾಯಕನಾಗಿ ನಟಿಸಬಹುದು ಎಂಬ ಚರ್ಚೆ ಶುರುವಾಗಿದೆ. ಸದ್ಯ ಧುರಂಧರ್ ಗೆಲುವಿನ ಖುಷಿಯಲ್ಲಿರುವ ಆದತ್ಯ ಧಾರ್, ಮುಂದಿನ ಚಿತ್ರವನ್ನು ಇನ್ನೂ ಘೋಷಿಸಲಿಲ್ಲ. ಆದರೆ ಮುಂದಿನ ಚಿತ್ರಕ್ಕಾಗಿ ಕಥೆ ಸಿದ್ಧ ಮಾಡಿಟ್ಟುಕೊಂಡಿದ್ದಾರೆ.

ನಿರ್ದೇಶಕ ಆದಿತ್ಯ ಈ ಹಿಂದೆ ಉರಿ ಚಿತ್ರವನ್ನು ತೆರೆಗೆ ತಂದಿದ್ದರು. ಆ ಬಳಿಕ ಅಕ್ಷರಧಾಮ ಚಿತ್ರದ ಕಥೆ ಹೆಣೆದು ಆ್ಯಕ್ಷನ್ ಕಟ್ ಹೇಳಲು ತಯಾರಿ ನಡೆಸಿದ್ದರು. ಈ ಚಿತ್ರದಲ್ಲಿ ಟಾಲಿವುಡ್ ನಟ ಅಲ್ಲು ಅರ್ಜುನ್ ನಟಿಸುವುದು ಬಹುತೇಕ ಖಚಿತವಾಗಿತ್ತು. ಆದರೆ ಅಲ್ಲು, ಪುಷ್ಪ ಚಿತ್ರದಲ್ಲಿ ಬ್ಯುಸಿಯಾಗಿದ್ದರಿಂದ ಅಕ್ಷರಧಾಮ ಸಿನಿಮಾ ಸೆಟ್ಟೇರಲಿಲ್ಲ. ಅದೇ ಹೊತ್ತಿಗೆ ಆದಿತ್ಯ, ಧುರಂಧರ್ ಚಿತ್ರವನ್ನು ಕೈಗೆತ್ತಿಕೊಂಡರು. ಧುರಂಧರ್‌ಗಾಗಿ ಹಗಲಿರುಳು ಶ್ರಮಿಸಿದರು. ಅವರ ಶ್ರಮಕ್ಕೆ ಈಗ ಪ್ರತಿಫಲ ಸಿಕ್ಕಿದೆ.

ಧುರಂಧರ್ ಸೂಪರ್ ಹಿಟ್ ಆಗಿದೆ. ಆದಿತ್ಯ ಧಾರ್ ಭಾರತೀಯ ಚಿತ್ರರಂಗದ ಸ್ಟಾರ್ ನಿರ್ದೇಶಕರ ಸಾಲಿನಲ್ಲಿ ಗುರುತಿಸಿಕೊಂಡಿದ್ದಾರೆ. ಆದಿತ್ಯ ನಿರ್ದೇಶನದ ಸಿನಿಮಾದಲ್ಲಿ ನಟಿಸಬೇಕು ಎಂದು ಹಲವು ನಟರು ತುದಿಗಾಲಲ್ಲಿ ನಿಂತಿದ್ದಾರೆ. ಇನ್ನೇನು ಅಕ್ಷರಧಾಮ ಚಿತ್ರ ಸೆಟ್ಟೇರಲಿದ್ದು, ಈ ಚಿತ್ರದಲ್ಲಿ ಅಲ್ಲು ಅರ್ಜುನ್ ನಟಿಸಲಿದ್ದಾರೆ ಎನ್ನುವ ಮಾಹಿತಿಯೂ ಇದೆ. ಅಲ್ಲು ಅರ್ಜುನ್ ಸದ್ಯ ಅಟ್ಲಿ ನಿರ್ದೇಶನ ಮಾಡುತ್ತಿರುವ ಸಿನಿಮಾದಲ್ಲಿ ಅಭಿನಯಿಸುತ್ತಿದ್ದು, ಆ ಬಳಿಕ ಆದಿತ್ಯ ಧಾರ್ ತಂಡ ಸೇರಲಿದ್ದಾರಂತೆ. ಅಕ್ಷರಧಾಮ ಕೂಡ ನೈಜ ಘಟನೆಯನ್ನು ಆಧರಿಸಿದ ಕಥೆ ಹೆಣೆಯಾಗಿದ್ದು, ಅದ್ದೂರಿಯಾಗಿ ಮೂಡಿಬರಲಿದೆ.

ಪೆದ್ದಿಯಲ್ಲಿ ಮೃಣಾಲ್

ಈಗೆಲ್ಲಾ ಪ್ಯಾನ್ ಇಂಡಿಯಾ ಸಿನಿಮಾಗಳ ಜಮಾನ. ಅಂತೆಯೇ ಈ ಸಿನಿಮಾಗಳಲ್ಲಿ ಐಟಂ ಸಾಂಗ್‌ಗಳು ಕೂಡ ಪ್ರಮುಖವಾಗಿರುತ್ತವೆ. ಈ ಐಟಂ ಸಾಂಗ್‌ಗಳಲ್ಲಿ ಸ್ಟಾರ್ ನಟಿಯರೇ ಹೆಜ್ಜೆ ಹಾಕುತ್ತಿದ್ದಾರೆ. ತಮನ್ನಾ, ನೂರಾ ಫತೇಹಿ, ಆಯೇಷಾ ಖಾನ್, ಸಮಂತಾ .. ಹೀಗೆ ಹಲವರು ಹಾಡಿನಲ್ಲಿ ಕುಣಿದು ಚಿತ್ರಕ್ಕೆ ಮತ್ತಷ್ಟು ಮೆರುಗು ತುಂಬಿದ್ದಾರೆ. ಈಗ ರಾಮ್ ಚರಣ್ ಅಭಿನಯದ ಪೆದ್ದಿ ಚಿತ್ರದಲ್ಲಿಯೂ ಒಂದು ಅದ್ಭುತ ಐಟಂ ಸಾಂಗ್ ಇದೆ. ಈ ಹಾಡಿನಲ್ಲಿ ಯಾರು ಕಾಣಿಸಿಕೊಳ್ಳಬಹುದು ಎಂಬ ಕುತೂಹಲ ಸಿನಿಪ್ರಿಯರಲ್ಲಿದೆ.

ರಾಮ್ ಚರಣ್ ಅಭಿನಯದ ಪೆದ್ದಿ ಚಿತ್ರದ ಹಾಡುಗಳು ಈಗಾಗಲೇ ಬಿಡುಗಡೆಯಾಗಿದ್ದು ಗಮನಸೆಳೆದಿವೆ. ಎಲ್ಲಾ ಹಾಡುಗಳು ಸಂಗೀತ ಪ್ರಿಯರ ಮನಗೆದಿವೆ. ಹಾಗಾಗಿ ನಿರ್ದೇಶಕ ಬುಚ್ಚಿಬಾಬು ಸನ ಚಿತ್ರದಲ್ಲಿ ಐಟಂ ಸಾಂಗ್ ಸೇರಿಸಲು ಸಿದ್ಧತೆ ನಡೆಸಿದ್ದಾರೆ. ಮೊದಲು ಈ ಹಾಡಿಗಾಗಿ ರಶ್ಮಿಕಾರನ್ನು ಕರೆತರುವ ಪ್ಲಾನ್ ಇತ್ತು. ಆದರೆ ರಶ್ಮಿಕಾ ಮದುವೆಯ ಬ್ಯುಸಿಯಲ್ಲಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಈಗ ಮೃಣಾಲ್ ಠಾಕೂರ್ ಅವರಿಗೆ ಚಿತ್ರತಂಡ ಮಣೆ ಹಾಕಿದೆ. ಸೀತಾರಾಮಂ ಚಿತ್ರದ ಮೂಲಕ ಜನಪ್ರಿಯತೆ ಪಡೆದಿರುವ ಮೃಣಾಲ್‌ಗೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಹಾಗಾಗಿಯೇ ಪೆದ್ದಿ ಚಿತ್ರದ ಹಾಡಿಗೆ ಹೆಜ್ಜೆ ಹಾಕಲು ಮೃಣಾಲ್ ಅವರನ್ನು ಕರೆತರಲಾಗುತ್ತಿದೆ. ಹಾಗಾಗಿ ಸಿನಿಮಾದ ಬಗ್ಗೆ ಮತ್ತಷ್ಟು ನಿರೀಕ್ಷೆ ಹೆಚ್ಚಾಗಿದೆ. ಪೆದ್ದಿ ಚಿತ್ರದ ಹಾಡುಗಳಿಗೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಸಂಗೀತ ಸಂಯೋಜಿಸಿದ್ದಾರೆ. ಇದು ಚಿತ್ರದ ಪ್ಲಸ್ ಪಾಯಿಂಟ್ ಆಗಿದೆ. ರೆಹಮಾನ್ ಹಾಡಿನ ಮೂಲಕವೇ ಮೋಡಿ ಮಾಡುತ್ತಿದ್ದಾರೆ.

ಪೆದ್ದಿ ಗ್ರಾಮೀಣ ಸೊಗಡಿನ ಕಥೆಯನ್ನು ಒಳಗೊಂಡಿದ್ದು, ಹಳ್ಳಿಯಲ್ಲಿ ನಡೆಯುವ ಕ್ರಿಕೆಟ್ ಆಟದ ಸುತ್ತ ಸ್ಟೋರಿ ಸಾಗಲಿದೆ. ಜಾನ್ವಿ ಕಪೂರ್ ನಾಯಕಿಯಾಗಿ ನಟಿಸಿದ್ದು, ಅಪ್ಪಟ ಹಳ್ಳಿ ಹುಡುಗಿಯಾಗಿ ಕಂಗೊಳಿಸಿದ್ದಾರೆ. ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ಅವರ ಲುಕ್ ಕುತೂಹಲ ಮೂಡಿಸಿದೆ. ಇನ್ನು ಜಗಪತಿ ಬಾಬು ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಕುಂದಾಪುರದಲ್ಲಿ ದೇವಿ ಮಹಾತ್ಮೆ

ಉಡುಪಿ ಜಿಲ್ಲೆಯ ಕಮಲಶಿಲೆಯ ಬ್ರಹ್ಮಿ ದೇಗುಲದಲ್ಲಿ ಮುಹೂರ್ತ ನೆರವೇರಿಸಿದ್ದ ದೇವಿ ಮಹಾತ್ಮೆ ಸಿನಿಮಾ ತಂಡ ಇದೀಗ ಮೊದಲ ಹಂತದ ಶೂಟಿಂಗ್ ಮುಕ್ತಾಯಗೊಳಿಸಿದೆ. ಕುಂದಾಪುರ ಸುತ್ತಮುತ್ತ ಸುಂದರ ತಾಣದಲ್ಲಿ ಚಿತ್ರೀಕರಣ ನಡೆಸಲಾಗಿದೆ. ಹಿರಿಯ ನಟ ರಂಗಾಯಣ ರಘು ಸೇರಿದಂತೆ ಹಲವು ಕಲಾವಿದರು ಚಿತ್ರೀಕರಣ ಪಾಲ್ಗೊಂಡಿದ್ದರು. ಮೊದಲ ಹಂತದ ಮುಗಿಸಿರುವ ಸಿನಿಮಾ ತಂಡ, ಶೀಘ್ರದಲ್ಲಿಯೇ ದ್ವಿತೀಯ ಹಂತದ ಚಿತ್ರೀಕರಣ ಆರಂಭಿಸಲಿದೆ. ಈ ಹಿಂದೆ ಮರ್ಯಾದೆ ಪ್ರಶ್ನೆ ಚಿತ್ರವನ್ನು ನಿರ್ದೇಶಿಸಿದ್ದ ನಾಗರಾಜ್ ಸೋಮಯಾಜಿ ಈ ಚಿತ್ರಕ್ಕೂ ಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ದೇವಿ ಮಹಾತ್ಮೆ ಚಿತ್ರದ ಮೂಲಕ ಕಾಮಿಡಿ ಥ್ರಿಲ್ಲರ್ ಕಥೆಯನ್ನು ಪ್ರೇಕ್ಷಕರ ಮುಂದಿಡಲಿದ್ದಾರೆ. ಬಿಸಿಲಲ್ಲಿ ಕೆಲಸ ಮಾಡುವುದು ನಿಜವಾಗಿಯೂ ಸಾಹಸ. ಅದರಲ್ಲಿಯೂ ಕುಂದಾಪುರ ಬಿಸಿಲು ಝಳದಲ್ಲಿ ಇಡೀ ತಂಡ ಉತ್ಸಹದಿಂದ ಕೆಲಸ ಮಾಡಿದೆ. ಕಡಿಮೆ ತಾಂತ್ರಿಕ ವರ್ಗದೊಂದಿಗೆ ನಿರ್ಮಾಪಕರಿಗೆ ಹೊರೆಯಾಗದಂತೆ ಚಿತ್ರೀಕರಣ ನಡೆಸಲಾಗಿದೆ ಎಂದು ನಿರ್ದೇಶಕ ನಾಗರಾಜ್ ಸೋಮಯಾಜಿ ಹೇಳುತ್ತಾರೆ. ಯುವಿಜಿ ಸ್ಟುಡಿಯೊ ಬ್ಯಾನರ್‌ನಲ್ಲಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡಲಿದ್ದಾರೆ. ಗಾಂಧಿರಾಜನ್ ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. ಎಸ್ ಕೆ ರಾವ್ ಛಾಯಾಗ್ರಹಣ ಹಾಗೂ ಲಿಖಿತ್ ಪ್ರಸಾದ್.ಕೆ.ಶೆಟ್ಟಿ ಸಂಗೀತ ನಿರ್ದೇಶನ ದೇವಿ ಮಹಾತ್ಮೆ ಚಿತ್ರಕ್ಕಿದೆ.

ಕೆಡಿ-ಪೆದ್ದಿ ಜಿದ್ದಾ ಜಿದ್ದಿ

ಟಾಕ್ಸಿಕ್ ಚಿತ್ರದ ಬಿಡುಗಡೆಯ ದಿನಾಂಕ ಮುಂದೂಡಿಕೆಯಾದ್ದರಿಂದ ಧುರಂಧರ್ ಜತೆಗೆ ಸ್ಟಾರ್ ವಾರ್ ತಪ್ಪಿದೆ. ಆದರೆ ಏಪ್ರಿಲ್ ನಲ್ಲಿ ಮತ್ತೊಮ್ಮೆ ಸ್ಟಾರ್ ವಾರ್ ಗೆ ವೇದಿಕೆ ಸಿದ್ಧವಾಗಿದೆ. ಬೇಸಿಗೆಯ ರಜೆಯ ಸಂದರ್ಭದಲ್ಲಿ ಹಲವು ಹೈಬಜೆಟ್ ಸಿನಿಮಾಗಳು ತೆರೆಗೆ ಬರುತ್ತಿದ್ದು, ಬಾಕ್ಸ್ ಆಫೀನಲ್ಲಿಯೂ ಪೈಪೋಟಿ ನಡೆಸಲಿವೆ. ಅದರಲ್ಲಿ ಕೆಡಿ ಹಾಗೂ ಪೆದ್ದಿಯ ನಡುವೆ ಜಿದ್ದಾಜಿದ್ದಿ ಶುರುವಾಗಲಿದೆ.

ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಆರಂಭದಿಂದಲೂ ನಿರೀಕ್ಷೆ ಹೆಚ್ಚಿಸಿದೆ. ಧ್ರುವ ಸರ್ಜಾ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಬಾಲಿವುಡ್ ನಟ ಸಂಜಯ್ ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ರೀಷ್ಮಾ ಹೀಗೆ ದೊಡ್ಡ ತಾರಾಬಳಗವೇ ಇದೆ. ಹಾಡಿನಲ್ಲಿಯೇ ಮನಗೆದ್ದ ಕೆಡಿಯ ಸರ್ಸೆ.. ಹಾಡು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ. ಹಾಗಾಗಿ ಕೆಡಿ ಜನಪ್ರಿಯತೆಯ ಜತೆಗೆ ವಿವಾದಕ್ಕೂ ಕಾರಣವಾಗಿದೆ.

ಬದಲಾಗಲಿದೆ ಸಾಹಿತ್ಯ

ಸರ್ಸೆ.... ಹಾಡಿನ ಸಾಹಿತ್ಯ ಅಶ್ಲೀಲವಾಗಿದೆ ಎಂಬ ಆರೋಪ ಚಿತ್ರತಂಡದ ಮೇಲಿದೆ. ಹಾಗಾಗಿ ಹಿಂದಿಯಲ್ಲಿ ಈ ಹಾಡನ್ನು ತೆಗೆದು ಹಾಕಲಾಗಿದೆ. ಇದು ಚಿತ್ರತಂಡಕ್ಕೆ ಹಿನ್ನಡೆಯಾಗಿದೆ. ಆದರೆ ಈ ಹಾಡಿನ ಸಾಹಿತ್ಯ ಬದಲಾಯಿಸಲಾಗುವುದು ಎಂದು ಪ್ರೇಮ್ ಹೇಳಿದ್ದಾರೆ. ಯಾಕೆಂದರೆ ಈ ಹಾಡು ಚಿತ್ರದಲ್ಲಿ ಪ್ರಮುಖವಾಗಿದ್ದು, ಬಾಲಿವುಡ್ ಬೆಡಗಿ ನೂರಾ ಫತೇಹಿ ಹಾಡಿನಲ್ಲಿ ಹೆಜ್ಜೆ ಹಾಕಿದ್ದರಾರೆ.

ಬರಲಿದೆ ಕೆಡಿ 2: ಕೆಡಿ ಭೂಗತ ಲೋಕದ ಕಥೆಯನ್ನು ಒಳಗೊಂಡಿದೆ. ಅಂಡರ್ ವರ್ಲ್ಡ್ ಡಾನ್ ಕಾಳಿದಾಸನ ಕಥೆ ತೆರೆಯಲ್ಲಿ ಸಾಗಲಿದೆ. ಎಪ್ಪತ್ತು ಎಂಬತ್ತರ ಕಾಲ ಘಟ್ಟದ ಕಥೆ ಇದಾಗಿದ್ದು, ರೆಟ್ರೋ ಶೈಲಿಯಲ್ಲಿ ಮೂಡಿಬಂದಿದೆ. ಕೆಡಿ ಅದಾಗಲೇ ಚಿತ್ರರಂಗದಲ್ಲಿ ಸದ್ದು ಮಾಡುತ್ತಿದ್ದು, ಮುಂದೆ ಕೆಡಿ ಭಾಗ 2 ಕೂಡ ಬರಲಿದೆ. ನಿರ್ದೇಶಕ ಪ್ರೇಮ್ ಅದಾಗಲೇ ದ್ವಿತೀಯ ಭಾಗದ ಕಥೆ ಹೆಣೆದಿದ್ದಾರೆ.

ಈ ನಡುವೆ ಪೆದ್ದಿ ಕೆಡಿಗೆ ಪೈಪೋಟಿ ಕೊಡಲು ಸಿದ್ಧವಾ ಗಿದೆ. ಏಪ್ರಿಲ್30 ರಂದೇ ಎರಡೂ ಸಿನಿಮಾಗಳು ತೆರೆಗೆ ಬರಲಿವೆ. ಇದರಲ್ಲಿ ಕೆಡಿಯೇ ಎಲ್ಲರ ಅಚ್ಚುಮೆಚ್ಚಿನ ಸಿನಿಮಾವಾಗಲಿದೆ ಎಂಬ ಅಭಿಪ್ರಾಯ ಸಿನಿಪ್ರಿಯರಿಂದ ವ್ಯಕ್ತವಾಗುತ್ತಿದೆ.